₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 05.08.2025 **ಸಂಪುಟ:** 10 **ಸಂಚಿಕೆ:** 203 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮಂತ್ರಾಲಯ ವಿಶೇಷ

ಜಗದ್ಗುರು ಶ್ರೀಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನದ ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಗಳು ಮಂತ್ರಾಲಯ ಸುಕ್ಷೇತ್ರದಲ್ಲಿ ಸೋಮವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆದ ಶ್ರೀ ಲಕ್ಷ್ಮೀ ಶೋಭಾನೆ ಪಾರಾಯಣ, ಸಾಮೂಹಿಕ ಕುಂಕುಮಾರ್ಚನೆ ಸಮಾರಂಭದಲ್ಲಿ ಪ್ರವಾಸಿ ಪ್ರಪಂಚ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಈ ಬಾರಿಯ ಸಂಚಿಕೆಯಲ್ಲಿ ಮಂತ್ರಾಲಯಕ್ಕೆ ಹೋಗೋಣ ಗುರುರಾಯರ ದರ್ಶನ ಮಾಡೋಣ ಶೀರ್ಷಿಕೆಯಲ್ಲಿ ಶ್ರೀಕ್ಷೇತ್ರದ ವಿಶೇಷತೆಗಳನ್ನು ಪರಿಚಯಿಸಲಾಗಿದೆ.

ಪುಟ ತೆರೆದಂತೆ...

ಮತಗಳ್ಳತನವನ್ನು ಸಾಕ್ಷ್ಯ ಸಮೇತ ಕಟ್ಟಿಹಾಕಲಿ!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ಸಂ.ಪುಟ | 6

ಸಿನಿಮಾ ವೀಕ್ಷಣೆಯ ಹಲವು ಮುಖಗಳು!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ದಾರಿದೀಪೋಕ್ತಿ

ಕೋಪ ಬಂದಾಗ ಕಣ್ಣಿಂದ ನೀರು ಹರಿದು ಬರಬೇಕು. ಆದರೆ ಬಾಯಿಯನ್ನು ಹರಿದುಕೊಳ್ಳಬಾರದು. ಅಂದರೆ ಬಾಯಿಯಿಂದ ಕೆಟ್ಟ ಮಾತು ಬರಬಾರದು. ಕಣ್ಣೀರು ಬಹಳ ಬೇಗ ಆರಿ ಹೋಗುತ್ತದೆ. ಆದರೆ ಕೋಪದಲ್ಲಿ ಆಡಿದ ಮಾತು ಎಂದೆಂದೂ ಮರೆಯುವುದಿಲ್ಲ.

ವಕ್ರತುಂಡೋಕ್ತಿ

ಏನೇ ಮಾಡಿದರೂ ನಮ್ಮ ಪಾಲ್ಗೊಳ್ಳುವಿಕೆ ನೂರಕ್ಕೆ ನೂರು ಇರಬೇಕು. ಆದರೆ ಈ ಮಾತು ರಕ್ತದಾನಕ್ಕೆ ಅನ್ವಯಿಸುವುದಿಲ್ಲ

ಶಿವಾನಂದ ಪಾಟೀಲ್ ಅಪೀಲು ವಜಾ

ದೆಹಲಿ: ಬಿಜೆಪಿ ಶಾಸಕ ಬಸನಗೌಡ ಆರ್ ಪಾಟೀಲ್ ಯತ್ನಾಳ್ ವಿರುದ್ಧದ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್ ಪಾಟೀಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ಪೀಠ ಸೋಮವಾರ ವಜಾಗೊಳಿಸಿದೆ.

ಕೆಎಎಸ್ ನೇಮಕಕ್ಕೆ ಹೈಕೋರ್ಟ್ ಸಮ್ಮತಿ

ಬೆಂಗಳೂರು: ಸರಕಾರಿ ಹುದ್ದೆಗಳ ನೇಮಕದಲ್ಲಿ ಮೀಸಲು ಜಾರಿ ಸಂಬಂಧ ನಿಯಮ ಉಲ್ಲಂಘನೆ ಆಗಿದೆ ಎಂದು 384 ಕೆಎಎಸ್ ಅಧಿಕಾರಿಗಳ ನೇಮಕ ಕುರಿತ ಅಧಿಸೂಚನೆ ರದ್ದುಗೊಳಿಸಿದ್ದ ಕೆಎಟಿ ಆದೇಶ ಪ್ರಶ್ನಿಸಿದ್ದ ಮೇಲ್ಮನವಿ ಸಂಬಂಧ, ನೇಮಕ ಪ್ರಕ್ರಿಯೆಯನ್ನು ಮುಂದುವರಿಸುವುದಕ್ಕೆ ಹೈಕೋರ್ಟ್ ಸಮ್ಮತಿ ನೀಡಿದೆ. ಆದರೆ, ನ್ಯಾಯಪೀಠದ ಗಮನಕ್ಕೆ ತಾರದೆ ಅಂತಿಮ ಫಲಿತಾಂಶ ಪ್ರಕಟಿಸಬಾರದು ಎಂದು ಷರತ್ತು ವಿಧಿಸಿದೆ.

ಸಾರಿಗೆ ನೌಕರರ ಗೈರು

ಸಂಧಾನ ಸಭೆ ವಿಫಲ, ಹೈಕೋರ್ಟ್ ಸೂಚನೆ ಬಳಿಕ ಮುಷ್ಕರ ಬದಲು ಗೈರಿಗೆ ನಿರ್ಧಾರ

ಪ್ರಮುಖ ಬೇಡಿಕೆಗಳು

- 38 ತಿಂಗಳ ಹಿಂಬಾಕಿ ವೇತನ.
- ಸಂಘಟನೆ ಮುಖಂಡರ ಮೇಲಿನ ಕೇಸು ವಾಪಸ್
- ಸಮಾನ ವೇತನ ಪರಿಷ್ಕರಣೆ
- ವಜಾಗೊಂಡ ನೌಕರರ ಮರು ನೇಮಕ

ನಾಗರಿಕರು ಗಮನಿಸಬೇಕಾದ ಸಂಗತಿ

- ಮುಷ್ಕರದ ಗೊಂದಲವಿರುವುದರಿಂದ, ಅನಿವಾರ್ಯವಲ್ಲದ ಹೊರತು ಪ್ರಯಾಣ ತಯಾರಿ ಮಾಡಿಕೊಳ್ಳಬೇಡಿ
- ಖಾಸಗಿ ಬಸ್‌ಗಳಿದ್ದರೂ ಶಕ್ತಿ ಯೋಜನೆಯಲ್ಲಿ ಉಚಿತ ಟಿಕೆಟ್ ಪಡೆಯಲು ಅವಕಾಶವಿಲ್ಲ
- ಶಾಲಾ-ಕಾಲೇಜುಗಳಿಗೆ ರಜೆಯಿಲ್ಲ; ಆದ್ದರಿಂದ ಮಕ್ಕಳಿಗೆ ಪರ್ಯಾಯ ವ್ಯವಸ್ಥೆ ಅಗತ್ಯ

ಬೆಂಗಳೂರು: ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಆಗಸ್ಟ್ 5 ರಿಂದ ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರ ಕರೆ ಗೊಂದಲದಲ್ಲಿ ಮುಳುಗಿದೆ. ಸಿಎಂ ಸಿದ್ದರಾಮಯ್ಯ ಅವರ ಮಧ್ಯಸ್ಥಿಕೆಯಲ್ಲಿ ನಡೆದ ಸಂಧಾನ ಸಭೆ ವಿಫಲವಾದ ಬಳಿಕ ನಿಗದಿಯಂತೆ ಮುಷ್ಕರ ನಡೆಸಲು ಕಾರ್ಮಿಕರ ಸಂಘಟನೆ ಮುಂದಾಗಿತ್ತು. ಈ ಮಧ್ಯೆ ಒಂದು ದಿನದ ಮಟ್ಟಿಗೆ ಮುಷ್ಕರ ಕೈಬಿಡುವಂತೆ ರಾಜ್ಯ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ. ಇದೀಗ ಪ್ರತಿಭಟನೆ ಕೈಬಿಟ್ಟು ಕೆಲಸಕ್ಕೆ ಗೈರು ಹಾಜರಾಗಲು ಮುಂದಾಗಿದೆ.

ನಾಲ್ಕು ಸಾರಿಗೆ ನಿಗಮಗಳ ನೌಕರರ ಸಂಘಟನೆಗಳು ಕರೆ ನೀಡಿರುವ ಮುಷ್ಕರದ ಹಿನ್ನೆಲೆಯಲ್ಲಿ ಸರಕಾರ ವಿವಿಧ ಹಂತದಲ್ಲಿ ಸಂಧಾನ ಸಭೆಗಳನ್ನು ಕಳೆದೊಂದು ವಾರದಿಂದ ಮಾತುಕತೆ ನಡೆಸುತ್ತಿದೆ. ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿಯೂ ಎರಡು ಸಭೆ ನಡೆದಿದ್ದು, ನೌಕರರ ಸಂಘಟನೆ ಹಾಗೂ ಸರಕಾರದ ನಡುವೆ ಒಮ್ಮತ ಮೂಡದ ಹಿನ್ನಲೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನೌಕರರ ಸಂಘ ಕರೆ ನೀಡಿತ್ತು.

→ 4

❝ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಮುಷ್ಕರಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ, ನ್ಯಾಯಾಲಯದ ಆದೇಶವನ್ನು ಗೌರವಿಸಬೇಕು. ಇದರೊಂದಿಗೆ ಸಿಎಂ ಸಹ ನಿಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವುದರಿಂದ, ಸಾರ್ವಜನಿಕ ಅಗತ್ಯ ಸೇವಾ ಸಂಸ್ಥೆಯಾಗಿರುವ ಸಾರಿಗೆ ಸಂಸ್ಥೆಯ ನೌಕರರು ನಾಳಿನ ಮುಷ್ಕರದಲ್ಲಿ ಪಾಲ್ಗೊಳ್ಳಬಾರದೆಂದು ಮನವಿ ಮಾಡಲಾಗಿದೆ.

– ಅಕ್ರಂ ಪಾಷ

ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ

ಈಡೇರದ ಬೇಡಿಕೆ: ಸಂಧಾನ ವಿಫಲ

ಸೋಮವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಾರಿಗೆ ನೌಕರರ ವಿವಿಧ ಸಂಘಟನೆಗಳೊಂದಿಗೆ ಸರಣಿ ಸಭೆ ನಡೆಸಲಾಯಿತು. ಈ ವೇಳೆ ಸಾರಿಗೆ ನೌಕರರು ಕೇಳಿರುವ ಕೆಲ ಬೇಡಿಕೆ 'ಆರ್ಥಿಕ'ವಾಗಿ ಭಾರಿ ಹೊರೆಯಾಗುವ ಕಾರಣದಿಂದ ಈಡೇರಿಸಲು ಸಾಧ್ಯವಿಲ್ಲ ಎನ್ನುವ ಸ್ಪಷ್ಟ ಉತ್ತರವನ್ನು ಮುಖ್ಯಮಂತ್ರಿ ಹಾಗೂ ಸರಕಾರ ನೀಡಿದೆ. ಇದರ ಬೆನ್ನಲ್ಲೇ, ನಾಲ್ಕು ಸಾರಿಗೆ ನಿಗಮದ ನೌಕರರು ಮುಷ್ಕರ ನಡೆಸುವುದಾಗಿ ಘೋಷಿಸಿದರು. ಮುಷ್ಕರ ಕೈಬಿಡುವಂತೆ ಸಿಎಂ ಸಿದ್ದರಾಮಯ್ಯ ಸೋಮವಾರ ಸಾರಿಗೆ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಅನಂತಸುಬ್ಬರಾವ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪದಾಧಿಕಾರಿಗಳು, ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಸತತ ಎರಡು ಗಂಟೆಗಳ ಕಾಲ ಸಂಧಾನ ಸಭೆ ನಡೆಸಿದರು. ನೌಕರರು ಮುಂದಿಟ್ಟಿರುವ ಬೇಡಿಕೆಗಳನ್ನು ಈಡೇರಿಸಬೇಕಾದರೆ ಕನಿಷ್ಟ ಪಕ್ಷ 2200 ಕೋಟಿ ಹಣ ಬೇಕು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತದೆ. 2027ರಲ್ಲಿ ಪೂರ್ಣ ಪ್ರಮಾಣದ ಬೇಡಿಕೆಗಳನ್ನು ಈಡೇರಿಸುತ್ತೇವೆ. ಈಗ ಎಷ್ಟು ಸಾಧ್ಯವೋ ಅಷ್ಟನ್ನು ಮಾತ್ರ ಅನುಷ್ಠಾನ ಮಾಡುತ್ತೇವೆ ಎಂದು ಸಿಎಂ ಆಶ್ವಾಸನೆ ನೀಡಿದರು. ಆದರೆ 30 ತಿಂಗಳ ಬಾಕಿ ವೇತನ, ಸರಕಾರಿ ನೌಕರರಿಗೆ ನೀಡುವ ಸರಿಸಮಾನವಾದ ವೇತನ, ಖಾಸಗಿ ಗುತ್ತಿಗೆದಾರರಿಗೆ ಈ ಬಸ್‌ಗಳ ನಿರ್ವಹಣೆ ಪದ್ಧತಿ ಕೈಬಿಡುವುದು, ಈ ಹಿಂದೆ 2020 ಮತ್ತು 2021ರ ಸಾರಿಗೆ ಮುಷ್ಕರ ಸಂದರ್ಭದಲ್ಲಿ ನೌಕರರ ಮೇಲೆ ದಾಖಲಾಗಿದ್ದ ಮೊಕದ್ದಮೆ ವಾಪಸ್, ವಿದ್ಯುತ್‌ಚಾಲಿತ ಬಸ್‌ಗಳಲ್ಲಿ ಸಂಸ್ಥೆಯ ಚಾಲಕರನ್ನೇ ಚಾಲನೆ ಕೆಲಸಕ್ಕೆ ನಿಯೋಜನೆ ಸೇರಿದಂತೆ ಮತ್ತಿತರ ಬೇಡಿಕೆಗಳ ಪಟ್ಟಿಯನ್ನು ಕ್ರಿಯಾ ಸಮಿತಿಯವರು ಮುಂದಿಟ್ಟರು.

> ರಾಜ್ಯಾದ್ಯಂತ ಮಂಗಳವಾರ (ಜು.5) ಬೆಳಗ್ಗೆ 6 ಗಂಟೆಯಿಂದಲೇ ಸಾರಿಗೆ ಮುಷ್ಕರ ನಡೆಸುತ್ತೇವೆ. ಸಾರಿಗೆ ಬಸ್‌ಗಳು ರಸ್ತೆಗಿಳಿಯುವುದಿಲ್ಲ. ಯಾವುದೇ ನೌಕರರು ಬಸ್‌ಗಳನ್ನು ಓಡಿಸುವುದಿಲ್ಲ. ಸರಕಾರದ ಬೆದರಿಕೆಗೆ ಹೆದರಬೇಡಿ, ಶಾಂತಿಯುತವಾಗಿ ಪ್ರತಿಭಟನೆ ನಡೆಸಿ
>
> –ಅನಂತ ಸುಬ್ಬರಾವ್ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ

ಒಳಮೀಸಲು ಅಂತಿಮ ವರದಿ ಸರಕಾರಕ್ಕೆ ಸಲ್ಲಿಕೆ

1,766 ಪುಟಗಳ ವರದಿ ಮುಂದಿನ ಸಂಪುಟದಲ್ಲಿ ಚರ್ಚೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಆಯೋಗ ಅಂತಿಮ ವರದಿಯನ್ನು ಸಿಎಂ ಸಿದ್ದರಾಮಯ್ಯಗೆ ಸಲ್ಲಿಕೆ ಮಾಡಿದ್ದು, ಸಮೀಕ್ಷೆಯ ದತ್ತಾಂಶ ಮತ್ತು ಅನುಬಂಧಗಳು ಸೇರಿದಂತೆ ಒಟ್ಟು 1,766 ಪುಟ ಮತ್ತು ಆರು ಶಿಫಾರಸು ಒಳಗೊಂಡಿದೆ ಎನ್ನಲಾಗಿದೆ.

ಪ್ರಸಕ್ತ ವರ್ಷದ ಮೇ 5 ರಿಂದ ಜುಲೈ 6 ರ ವರೆಗೆ ಸಮಗ್ರ ಸಮೀಕ್ಷೆ ನಡೆಸಲಾಗಿದೆ. ರಾಜ್ಯದ ಪರಿಶಿಷ್ಟ ಜಾತಿಯ 27,24,768 ಕುಟುಂಬಗಳು ಮತ್ತು 1,07,01,982 ಜನರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದಾರೆ.

ಒಳಮೀಸಲಾತಿಗೆ ಅವಕಾಶವಿದೆ: ಜನವರಿ 2025 ರಂದು ಕರ್ನಾಟಕ ಸರಕಾರ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿತ್ತು. ರಾಜ್ಯದಲ್ಲಿ ನಿಖರವಾದ ದತ್ತಾಂಶ ಇಲ್ಲದ ಕಾರಣ ಹೊಸದಾದ ಸಮೀಕ್ಷೆ ನಡೆಸಬೇಕೆಂದು 27-3-2025 ರಂದು ಆಯೋಗ ಮಧ್ಯಂತರ ವರದಿ ಸಲ್ಲಿಸಿತ್ತು. ಅದೇ ದಿನವೇ ಸಚಿವ ಸಂಪುಟ ಮಧ್ಯಂತರ ವರದಿಯನ್ನು ಒಪ್ಪಿ, ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲು ನಿರ್ಣಯಿಸಿತ್ತು.

ಉಪವರ್ಗೀಕರಣ ಮಾಡುವುದಕ್ಕೆ ಸಂವಿಧಾನದ ಅನುಚ್ಛೇದ 14 ರಲ್ಲಿ ಅವಕಾಶವಿದ್ದು, ಉಪವರ್ಗೀಕರಣ ಮಾಡಿದರೆ ಮೀಸಲಾತಿ ಅನುಭವಿಸುತ್ತಿರುವ ಯಾರನ್ನೂ ಹೊರಗಿಡುವುದಿಲ್ಲ. ಅಗತ್ಯ ದತ್ತಾಂಶ ಸಂಗ್ರಹಿಸಿ ಒಳಜಾತಿಗಳ ವರ್ಗೀಕರಣ ಮಾಡಬೇಕು ಎಂದು ಸುಪ್ರೀಂಕೋರ್ಟ್ ಆದೇಶಿಸಿತ್ತು. ಅದರಂತೆ, ಒಳಜಾತಿಗಳ ವರ್ಗೀಕರಣಕ್ಕಾಗಿ ಶೈಕ್ಷಣಿಕ ಹಿಂದುಳಿದಿರುವಿಕೆ, ಸರಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯದ ಕೊರತೆ, ಸಾಮಾಜಿಕ ಹಿಂದುಳಿದಿರುವಿಕೆ, ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮತ್ತು ಸರಕಾರದ ಸಂಸ್ಥೆಗಳಿಂದ ಸಂಗ್ರಹಿಸಿದ ದತ್ತಾಂಶ ವಿಶ್ಲೇಷಿಸಿ, ಸುಪ್ರೀಂಕೋರ್ಟ್ ಸೂಚನೆಯಂತೆ ಪರಿಶಿಷ್ಟ ಜಾತಿಯ ಒಳಜಾತಿಗಳನ್ನು ವರ್ಗೀಕರಿಸಿ ಲಭ್ಯವಿರುವ ಮೀಸಲಾತಿ ಹಂಚಲಾಗಿದೆ. → 4

ಸಂಪುಟ ಸಭೆಯಲ್ಲಿ ಚರ್ಚೆ: ಸಿಎಂ

ವಿಧಾನಸೌಧದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಒಳ ಮೀಸಲಾತಿ ವರದಿ ಕೊಟ್ಟಿದ್ದಾರೆ. ಆ.7ರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ನ್ಯಾ. ನಾಗಮೋಹನ್ ದಾಸ್ ಮತ್ತು ತಂಡ ವರದಿ ಸಲ್ಲಿಕೆ ಮಾಡಿದೆ. ಅದರಲ್ಲಿ ಏನಿದೆ ಅಂತ ಇನ್ನೂ ನೋಡಿಲ್ಲ. ಆ.7ರಂದು ಕ್ಯಾಬಿನೆಟ್ ಮೀಟಿಂಗ್ ಇದೆ. ಅದರಲ್ಲಿ ಇಟ್ಟು ಚರ್ಚೆ ಮಾಡುತ್ತೇವೆ. ಬಳಿಕ ಹೇಳುತ್ತೇವೆ ಎಂದರು. ಸಚಿವ ಜಿ.ಪರಮೇಶ್ವರ್ ಮಾತನಾಡಿ, ಐತಿಹಾಸಿಕ ಒಳಮೀಸಲಾತಿ ವರದಿಯನ್ನು ನಾಗಮೋಹನ್ ದಾಸ್ ಸಿಎಂಗೆ ಒಪ್ಪಿಸಿದ್ದಾರೆ. ಅದರಲ್ಲಿ ಏನಿದೆ ಎಂದು ಗೊತ್ತಿಲ್ಲ. ಮುಂದಿನ ಸಂಪುಟ ಸಭೆಯಲ್ಲಿ ಇಡಲಾಗುತ್ತದೆ. ಅದನ್ನು ಅನುಷ್ಠಾನ ಮಾಡುವುದಕ್ಕೆ ಸಂಪುಟದಲ್ಲಿ ಚರ್ಚೆ ಮಾಡಲಾಗುತ್ತದೆ ಎಂದರು.

ಯೆಮೆನ್ ಬಳಿ ದೋಣಿ ಮುಳುಗಿ 76 ಜನ ಸಾವು

ಸನಾ: ಇಥಿಯೋಪಿಯಾದ ವಲಸಿಗರಿದ್ದ ದೋಣಿ ಮುಳುಗಡೆಯಾದ ಪರಿಣಾಮ 76 ಮಂದಿ ವಲಸಿಗರು ಸಾವನ್ನಪ್ಪಿದ್ದು, ಅನೇಕರು ನಾಪತ್ತೆಯಾಗಿರುವ ಘಟನೆ ಯೆಮೆನ್ ಕರಾವಳಿಯಲ್ಲಿ ನಡೆದಿದೆ. ಯೆಮೆನ್‌ನ ದಕ್ಷಿಣ ಅಬ್ಯಾನ್ ಪ್ರಾಂತ್ಯದ ಕರಾವಳಿಯಲ್ಲಿ ದೋಣಿ ಮುಳುಗಡೆಯಾಗಿದ್ದು, 32 ಮಂದಿಯನ್ನು ರಕ್ಷಿಸಲಾಗಿದೆ. ಘಟನೆಯಲ್ಲಿ 76 ಮಂದಿ ವಲಸಿಗರ ಮೃತದೇಹ ಪತ್ತೆಯಾಗಿದೆ ಎಂದು ಯೆಮೆನ್ ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ. ಒಟ್ಟು 157 ಜನರು ಹಡಗಿನಲ್ಲಿದ್ದರು ಎಂದು ವರದಿಗಳು ತಿಳಿಸಿವೆ. ಕಡುಬಡತನದಿಂದ ಆಫ್ರಿಕಾದಿಂದ ನೂರಾರು ವಲಸಿಗರು ಗಲ್ಫ್ ಅರಬ್ ರಾಷ್ಟ್ರಕ್ಕೆ ತೆರಳುತ್ತಿದ್ದರು. ಯೆಮೆನ್‌ಗೆ ಅನಧಿಕೃತ ವಲಸಿಗರ ಹರಿವು ಹೆಚ್ಚಾಗುತ್ತಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಘಟನೆ ತಿಳಿಸಿದೆ.

ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ನಿಧನ

ರಾಂಚಿ: ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾ ಸ್ಥಾಪಕ ಶಿಬು ಸೊರೇನ್ ನಿಧನರಾಗಿದ್ದಾರೆ. ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ದೆಹಲಿಯ ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ಕೊನೆಯುಸಿರೆಳೆದರು.

ಜಾರ್ಖಂಡ್‌ನ ಹಾಲಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ತಂದೆ ಶಿಬು ಸೊರೇನ್, 1944ರ ಜನವರಿ 11ರಂದು ರಾಮಗಢ ಜಿಲ್ಲೆಯಲ್ಲಿ (ಆಗಿನ ಬಿಹಾರ) ಜನಿಸಿದರು. ಸಂತಾಲ್ ಸಮುದಾಯದ ಪ್ರಮುಖ ನಾಯಕರಾಗಿದ್ದ ಸೊರೇನ್ ಜಾರ್ಖಂಡ್ ರಾಜ್ಯ ರಚನೆಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1972ರಲ್ಲಿ ಜೆಎಂಎಂ ಸ್ಥಾಪಿಸಿದ ಅವರು, ಮೂರು ಬಾರಿ ಜಾರ್ಖಂಡ್‌ನ ಸಿಎಂ ಆಗಿ (2005, 2008-09, 2009-10) ಸೇವೆ ಸಲ್ಲಿಸಿದ್ದರು. ಇದರ ಜೊತೆಗೆ, 2004-06ರ ಅವಧಿಯಲ್ಲಿ ಮೂರು ಬಾರಿ ಕೇಂದ್ರ ಕಲ್ಲಿದ್ದಲು ಸಚಿವರಾಗಿ, 1980-2019ರವರೆಗೆ ದುಮ್ಕಾದಿಂದ ಲೋಕಸಭಾ ಸಂಸದರಾಗಿ ಮತ್ತು ಪ್ರಸ್ತುತ ರಾಜ್ಯಸಭಾ ಸಂಸದರಾಗಿ ಕಾರ್ಯನಿರ್ವಹಿಸಿದ್ದರು.

ಕೈ ಪ್ರತಿಭಟನೆ ಮುಂದಕ್ಕೆ

ಮತಗಳ್ಳತನ ವಿರುದ್ಧ ರಾಹುಲ್ ಗಾಂಧಿ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ವನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ. ಆದರೆ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಅವರ ನಿಧನಕ್ಕೆ ಮೂರು ದಿನಗಳ ಶೋಕಾಚರಣೆ ಹಿನ್ನೆಲೆಯಲ್ಲಿ ಪ್ರತಿಭಟನಾ ಸಭೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಗಿದೆ. ಕಾಂಗ್ರೆಸ್ ತನ್ನ ಪ್ರತಿಭಟನೆಯನ್ನು ಮುಂದೂಡುತ್ತಿದ್ದಂತೆ, ಬಿಜೆಪಿ ನಾಯಕರೂ ಪ್ರತಿಭಟನೆಯನ್ನು 8ಕ್ಕೆ ಮುಂದೂಡಿದ್ದಾರೆ.

ಮತ್ತಷ್ಟು ಸುಂಕ: ಟ್ರಂಪ್

ವಾಷಿಂಗ್ಟನ್: ಭಾರತದ ಸರಕುಗಳ ಮೇಲೆ ಶೇ.25ರಷ್ಟು ಸುಂಕ ಮತ್ತು ದಂಡವನ್ನು ವಿಧಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ಸುಂಕ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆ ಟ್ರುತ್ ಸೋಶಿಯಲ್‌ನಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅವರು, ಭಾರತ ರಷ್ಯಾದಿಂದ ಬೃಹತ್ ಪ್ರಮಾಣದಲ್ಲಿ ತೈಲ ಖರೀದಿಸಿ ಓಪನ್ ಮಾರ್ಕೆಟ್‌ನಲ್ಲಿ ಅಧಿಕ ಲಾಭಕ್ಕೆ ಮಾರುತ್ತಿದೆ ಎಂದು ಹೇಳಿದ್ದಾರೆ. "ಭಾರತವು ಬೃಹತ್ ಪ್ರಮಾಣದಲ್ಲಿ ರಷ್ಯಾದ ತೈಲವನ್ನು ಖರೀದಿಸುತ್ತಿದೆ. ಅಲ್ಲದೆ ಖರೀದಿಸಿದ ಹೆಚ್ಚಿನ ತೈಲವನ್ನು ಮುಕ್ತ ಮಾರುಕಟ್ಟೆಯಲ್ಲಿ ದೊಡ್ಡ ಲಾಭಕ್ಕಾಗಿ ಮಾರಾಟ ಮಾಡುತ್ತಿದೆ. ಉಕ್ರೇನ್‌ನಲ್ಲಿ ಎಷ್ಟು ಜನರು ಸಾವಿಗೀಡಾಗುತ್ತಿದ್ದಾರೆ ಎಂಬುದು ಭಾರತಕ್ಕೆ ಮುಖ್ಯವಲ್ಲ. ಈ ಕಾರಣದಿಂದಾಗಿ ಭಾರತದ ಮೇಲೆ ವಿಧಿಸುವ ಸುಂಕವನ್ನು ನಾನು ಗಣನೀಯವಾಗಿ ಹೆಚ್ಚಿಸುತ್ತೇನೆ" ಎಂದು ಅವರು ಬರೆದುಕೊಂಡಿದ್ದಾರೆ.

ಭಾರತಕ್ಕೆ ರೋಚಕ ಜಯ

ಲಂಡನ್: ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ಮುಕ್ತಾಯವಾದ 5ನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ 6 ರನ್‌ಗಳ ರೋಚಕ ಗೆಲುವು ಸಾಧಿಸಿದೆ. ಗೆಲ್ಲಲು ಇಂಗ್ಲೆಂಡ್‌ಗೆ 35 ರನ್, ಭಾರತಕ್ಕೆ 4 ವಿಕೆಟ್ ಅಗತ್ಯವಿತ್ತು. ಮಾರಕ ದಾಳಿ ಸಂಘಟಿಸಿದ ಮೊಹಮ್ಮದ್ ಸಿರಾಜ್ 5 ವಿಕೆಟ್, ಕನ್ನಡಿಗ ಪ್ರಸಿದ್ಧ್ ಕೃಷ್ಣ 4 ವಿಕೆಟ್, ಆಕಾಶ್ ದೀಪ್ ಜೋ ರೂಟ್ ಅವರ ಮಹತ್ವದ ವಿಕೆಟ್ ಪಡೆದು 2-2ರಿಂದ ಸರಣಿ ಸಮಬಲ ಗೊಳಿಸುವಲ್ಲಿ ಯಶಸ್ವಿಯಾದರು. ಈ ಜಯದೊಂದಿಗೆ ಐಸಿಸಿ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಮೂರನೇ ಸ್ಥಾನಕ್ಕೇರಿದೆ. ಈ ಐತಿಹಾಸಿಕ ಗೆಲುವಿನೊಂದಿಗೆ ಭಾರತ ಐಸಿಸಿ ಟೆಸ್ಟ್ ಚಾಂಪಿಯನ್ ಷಿಪ್ ಅಂಕಪಟ್ಟಿಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, 28 ಅಂಕ ಮತ್ತು ಶೇ.46.66 ವಿನ್ನಿಂಗ್ ಪರ್ಸೆಂಟೇಜ್‌ನೊಂದಿಗೆ ಭಾರತ 3ನೇ ಸ್ಥಾನಕ್ಕೇರಿದೆ.

ರಾಹುಲ್‌ಗೆ ಸುಪ್ರೀಂ ತರಾಟೆ

ದೆಹಲಿ: ಚೀನಾದ ವಿಷಯದಲ್ಲಿ ಭಾರತೀಯ ಸೇನೆಯ ವಿರುದ್ಧ ಟೀಕೆ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

2020 ರ ಗಾಲ್ವಾನ್ ಕಣಿವೆಯಲ್ಲಿ ಚೀನಾದೊಂದಿಗೆ ನಡೆದ ಘರ್ಷಣೆಯ ಸಂದರ್ಭದಲ್ಲಿ ರಾಹುಲ್, ಅರುಣಾಚಲ ಪ್ರದೇಶದಲ್ಲಿ ಚೀನಾ ಸೇನೆಯು ಭಾರತೀಯ ಸೈನಿಕರನ್ನು ಥಳಿಸುತ್ತಿದೆ. ಆದರೆ ಮಾಧ್ಯಮಗಳು ಅದನ್ನು ಪ್ರಶ್ನಿಸುವುದಿಲ್ಲ ಎಂದು ಹೇಳಿದ್ದರು. ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ, ಚೀನಾ 2,000 ಚದರ ಕಿಲೋಮೀಟರ್ ಭಾರತೀಯ ಭೂಮಿಯನ್ನು ವಶಪಡಿಸಿಕೊಂಡು, 20 ಭಾರತೀಯ ಸೈನಿಕರನ್ನು ಕೊಂದು ಹಾಕಿದೆ ಎಂದಿದ್ದರು.

ಪಕ್ಷ ನಾಯಕನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂಕೋರ್ಟ್, "ನೀವು ನಿಜವಾದ ಭಾರತೀಯರೇ ಆಗಿದ್ದರೆ ಈ ಮಾತುಗಳನ್ನು ಹೇಳುತ್ತಿರಲಿಲ್ಲ. ಯಾವುದೇ ದಾಖಲೆಗಳು ಇಲ್ಲದೇ ಈ ರೀತಿಯ ಹೇಳಿಕೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ನೀಡುವುದು ಎಷ್ಟು ಸರಿ? ನಿಮ್ಮ ಬಳಿ ಏನು ದಾಖಲೆ ಇವೆ? ಓರ್ವ ಭಾರತೀಯನಾಗಿ ಹೀಗೆ ಹೇಳುತ್ತಿರುವುದು ಅಚ್ಚರಿಯ ವಿಷಯವಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ವಿಚಾರಣೆಯನ್ನು ಮುಂದೂಡಿತು.

ಧರ್ಮಸ್ಥಳ: ನರೇಟಿವ್‌ಗಳಿಗೆ ಸರಣಿ ಸೋಲಿನ ಭೀತಿ

ಜಿತೇಂದ್ರ ಕುಂದೇಶ್ವರ

ಸೌಜನ್ಯ ಪ್ರಕರಣ ಮತ್ತು ಮುಂದುವರಿದ ಹೋರಾಟವಾಗಿ ಧರ್ಮಸ್ಥಳ ತಲೆ ಬುರುಡೆ ಪ್ರಕರಣ ಮುಖ್ಯವಾಹಿನಿ ಮಾಧ್ಯಮ ಮತ್ತು ಆಡಳಿತ ನಡೆಸುವವರಿಗೆ ಇದೊಂದು ಪಾಠವಾಗಿ, ಕೇಸ್ ಸ್ಟಡಿಯಾಗಿ ಮುಂದೊಂದು ದಿನ ಪತ್ರಿಕೋದ್ಯಮದವರಿಗೆ ಪಠ್ಯವೂ ಆಗಬಹುದು !

12 ವರ್ಷಗಳ ಹಿಂದೆ ಸೌಜನ್ಯ ಹತ್ಯಾಚಾರ ಪ್ರಕರಣ ಹೋರಾಟ ಮುಂದುವರಿದು ಇದೀಗ ಎಸ್‌ಐಟಿ ತನಿಖೆ ವರೆಗೆ ಬಂದು ತಲುಪಿಸಿದೆ. ಈ ಮಧ್ಯೆ ಯೂಟ್ಯೂಬರ್‌ಗಳು ರೀಲ್ಸ್- ವೀವ್ಸ್ ಜತೆ ಕಾಸು ಮಾಡಿಕೊಂಡರು. ಇವರೆಲ್ಲ ಮುಖ್ಯ ವಾಹಿನಿಯ ಮಾಧ್ಯಮದ ಗಮನ ಸೆಳೆಯಲು ಹೋಗಿ ಬಳಿಕ ಅವರನ್ನೇ ಟೀಕಿಸಿ ತಾವು ಬೃಹಸ್ಪತಿಗಳಂತೆ ವರ್ತಿಸಿ ನ್ಯಾಯಾಧೀಶರಾಗಿ ಕೊನೆಗೆ ಧರ್ಮಸ್ಥಳವನ್ನೇ ಟಾರ್ಗೆಟ್ ಮಾಡಿದರು.

ಧರ್ಮಸ್ಥಳದಲ್ಲಿ ಹತ್ಯೆ, ಅತ್ಯಾಚಾರ ಮಾಡಿ ಸಾವಿರಾರು ಮಂದಿಯನ್ನು ಹೂಳಲಾಗಿದೆ ಎಂಬ ಸುದ್ದಿ ಹಬ್ಬಿತು. ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ಯಥಾವತ್ ಪ್ರಸಾರವಾಯಿತು. ಇದನ್ನು ಆಸ್ತಿಕರು/ ಹಿಂದುಗಳು ಪ್ರತಿಕ್ರಿಯಿಸಿದ ರೀತಿ ಮಾತ್ರ ಅಚ್ಚರಿ ತಂದಿದೆ.

ನಾನು 10-15 ವರ್ಷದ ಹಿಂದೆ ಸಾವಿರಾರು ಹೆಣ ಹೂತಿದ್ದೇನೆ ಎಂದು ಅಜ್ಞಾತ ವ್ಯಕ್ತಿಯೊಬ್ಬ ಹೇಳಿದ ತಕ್ಷಣ ಎಲ್ಲರಲ್ಲೂ ಮೂಡಿದ ಮೊತ್ತ ಮೊದಲ ವಿಚಾರ ತನಿಖೆ ನಡೆಯಲಿ. ಇನ್ನೊಂದು ಪಕ್ಷದಲ್ಲಿಯೂ ಇದೇ ಮಾತು. ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿ ಅರುಣ್ ಕುಮಾರ್ ಪಕ್ಕಾ ಕಾನೂನು ಪಾಲಿಸುವ ಖಡಕ್ ಅಧಿಕಾರಿ. ಅವರಿಗೆ ಆರಂಭದಲ್ಲಿಯೇ ದೂರುದಾರನ ಚಲನವಲನ ಆತನ ಚರ್ಯೆಗಳನ್ನು ನೋಡಿದಾಗ ಅರ್ಥವಾಗಿತ್ತು. ಪಕ್ಕಾ ಪೊಲೀಸಿಂಗ್ ಮನಸ್ಸು ಈ ಪ್ರಕರಣದೊಳಗೆ ಏನಿದೆ ಎನ್ನುವುದನ್ನು ಅರಿತುಕೊಂಡು ಸತ್ಯ ಹೊರಗೆಳೆಯಲು ತಮ್ಮದೇ ಪೊಲೀಸಿಂಗ್ ವಿಧಾನ ಅನುಸರಿಸಿದ್ದರು.

ದೂರುದಾರನ ಕಡೆಯವರಿಗೆ ಇಲ್ಲಿ ಬೇಳೆ ಬೇಯುವುದಿಲ್ಲ ಎಂದು ಗೊತ್ತಾಗಿ ತಾವೇ ಸೂಚಿಸಿರುವ ಅಧಿಕಾರಿಯಿಂದ ತನಿಖೆ ನಡೆಸಲು ಒತ್ತಾಯಿಸಿದರು. ಬೆಳಗ್ಗೆ ಆಗುವುದಿಲ್ಲ ಎಂದಿದ್ದ ಗೃಹಸಚಿವ ಪರಮೇಶ್ವರ್, ಸಿಎಂ ಸಿದ್ದರಾಮಯ್ಯ ಸಂಜೆ ಎಸ್ಐಟಿಗೆ ಆದೇಶಿಸಿದ್ದು ಮಾತ್ರವಲ್ಲದೆ ಅವರು ಹೇಳಿದ ಅಧಿಕಾರಿಗಳನ್ನೇ ನೇಮಕ ಮಾಡಿದ್ದರು.

ಇತ್ತ ಜನರು ಇದ್ಯಾವುದಕ್ಕೂ ತಲೆ ಕೆಡಿಸಿಕೊಂಡಿರಲಿಲ್ಲ. ಸಾರ್ವತ್ರಿಕವಾಗಿ ಧರ್ಮಕ್ಷೇತ್ರದ ಮೇಲೆ, ಧರ್ಮಾಧಿಕಾರಿ ಕುಟುಂಬದ ಮೇಲೆ ಇಷ್ಟೆಲ್ಲಾ ಆರೋಪ ನೋಡಿ, ಹಲವರು ಇದರಲ್ಲೇನೊ ರಹಸ್ಯ ಅಡಗಿದ, ನಿಗೂಢ ರಹಸ್ಯ ಹೊರ ಬರಲೇಬೇಕು ಎಂಬ ಭಾವದಲ್ಲಿದ್ದರು. ಹೀಗಾಗಿ ಎಸ್‌ಐಟಿ ತನಿಖೆ ನಡೆಯಲಿ, ಎಷ್ಟೇ ಖರ್ಚಾಗಲಿ ಪರವಾಗಿಲ್ಲ, ನಮ್ಮ ಹಣ, ನಾವೇ ತೆರಿಗೆ ಕಟ್ಟಿದ ಹಣ ಎಂದು ವ್ಯಾಖ್ಯಾನಿಸಿದರು. ಇನ್ನು ಕೆಲವರು ಅಮಾಯಕರ ಜೀವಕ್ಕೆ ಬೆಲೆ ಕಟ್ಟಬೇಡಿ ಎಂದರು. ಕೋಟಿ ಖರ್ಚಾಗಲಿ ಧರ್ಮ ಕ್ಷೇತ್ರಕ್ಕೆ ಬಂದ ಕಳಂಕ ತಪ್ಪಿ ಹೋದರೆ ಸಾಕು ಎಂದು ಇನ್ನೊಂದು ವರ್ಗದವರು ಬಯಸಿದರು.

ಕುತೂಹಲಿಗರು ಹೆಣ ಹುಡುಕಾಟದ ಸುತ್ತಮುತ್ತ ಇದ್ದರು. ಅಗೆದರೆ ಒಂದೇ ಒಂದು ಬುರುಡೆ ಸಿಕ್ಕರೆ ಸಾಕು ಸೋಶಿಯಲ್ ಮೀಡಿಯಾದಲ್ಲಿ ಹಲ್‌ಚಲ್ ಎಬ್ಬಿಸಬಹುದು ಎನ್ನುವುದು ಯೂಟ್ಯೂಬರ್, ಇನ್‌ಫ್ಲುಯೆನ್ಸರ್‌ಗಳ ಆಸೆ. ಇದರಿಂದ ತಮ್ಮ ಕಾರ್ಯಸಾಧನೆ ಆಗಬಹುದು ಎಂಬುದು ಹೋರಾಟಗಾರರ ಲೆಕ್ಕಾಚಾರ. ಆದರೆ ಅವರು ಎಣಿಸಿದ್ದು ಒಂದು, ಆದದ್ದೇ ಇನ್ನೊಂದು!

ಆರಂಭದಲ್ಲಿ ಏನೂ ಸಿಗಲೇ ಇಲ್ಲ. ಬ್ಯಾಡ್ ಲಕ್ 5-0 ಅಂತರದಲ್ಲಿ ಸೋಲಾಯಿತು. ಮತ್ತೆ ಮೇಲೆದ್ದು ಗೆಲ್ಲುವುದು ಬಹಳ ಕಷ್ಟವಾಗಿತ್ತು. ಇದಕ್ಕಿಂತ ಮುನ್ನ ಸಾಮಾಜಿಕ (ಜಾಲತಾಣದಲ್ಲಿ) 90:10 ಅನುಪಾತ ಬೆಂಬಲ ಹೋರಾಟಗಾರರ ಪರ ಇತ್ತು.

→ 4

11ರಲ್ಲಿ ಸಿಕ್ಕ ಶವ ಇತ್ತೀಚಿನದ್ದು

11 ಕಡೆಗಳಲ್ಲಿ ಉತ್ಖನನ ಆಗಿದ್ದರೂ ಒಂದೇ ಕಡೆ ಸಮಾಧಿ ಸ್ಥಳದಲ್ಲಿ ಅಸ್ಥಿ ಪಂಜರ ಸಿಕ್ಕಿದೆ. ಇದೀಗ ಅನಾಮಿಕ ವ್ಯಕ್ತಿ ಸಮಾಧಿ ಸ್ಥಳ ಬಿಟ್ಟು ಕಾಡಿನ ಮಧ್ಯೆ ಹೋಗಿ ಭೂಮಿ ಮೇಲೆಯೇ ಇದ್ದ ಕಳೇಬರ ತೋರಿಸಿದ್ದಾನೆ. ಇದು ಪ್ರಕರಣಕ್ಕೆ ಜೀವ ತುಂಬುವ ಬದಲು ಮತ್ತಷ್ಟು ಸಂಶಯಗಳನ್ನೇ ಹುಟ್ಟು ಹಾಕಿದೆ. ದೂರುದಾರ ಹೇಳಿದ್ದು 10- 15 ವರ್ಷಗಳ ಹಿಂದೆ ಹೂತಿರುವ ವಿಚಾರ. ಆದರೆ ಇದು ಒಂದೂವರೆ ವರ್ಷದ ಹಿಂದೆ ಆತ್ಮಹತ್ಯೆ ಮಾಡಿಕೊಂಡಿರಬಹುದಾದ ಪ್ರಕರಣ ಎಂದು ವಿಶ್ಲೇಷಿಸಲಾಗುತ್ತಿದೆ. ಅದೂ ಗಂಡಸಿನ ಕಳೇಬರ!

ಸಮಾಚಾರ ಸಣ್ಣದಲ್ಲ

ಪರೀಕ್ಷೆ ಮುಂದೂಡಲು ಪ್ರಿಯಾಂಕ್ ಮನವಿ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕ ಪರೀಕ್ಷೆಯನ್ನು ಸೆ.6 ಮತ್ತು 7ರಂದು ನಡೆಸಲು ಕೆಪಿಎಸ್‌ಸಿ ಪರೀಕ್ಷಾ ವೇಳಾಪಟ್ಟಿ ನಿಗದಿ ಪಡಿಸಿದ್ದು, ಪರೀಕ್ಷಾ ತಯಾರಿ ಸಮಯವು ತುಂಬಾ ಕಡಿಮೆ ಇರುವುದರಿಂದ ಪರೀಕ್ಷೆಗಳನ್ನು

ಮುಂದೂಡಿ ಮರು ನಿಗದಿ ಪಡಿಸಬೇಕೆಂದು ಕೋರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಈ ವೃತ್ತಿಪರ ಕೋರ್ಸ್‌ನ ಪಠ್ಯಕ್ರಮವು ವಿಶಾಲ ಮತ್ತು ಸಮಗ್ರವಾಗಿದ್ದು, ಸಿದ್ಧತೆಗಾಗಿ ಸಾಕಷ್ಟು ಸಮಯ ಬೇಕಾಗುತ್ತದೆ. ಕೆಲವರು ಆಗಸ್ಟ್ 30 ರಂದು ನಡೆಯಲಿರುವ ಬ್ಯಾಂಕಿಂಗ್ ಹಾಗೂ ಕೃಷಿ ಅಧಿಕಾರಿಗಳ ಪೂರ್ವಭಾವಿ ಪರೀಕ್ಷೆಗಳ ತಯಾರಿ ನಡೆಸುತ್ತಿದ್ದಾರೆ. ಅಲ್ಲದೇ ಸೆಪ್ಟೆಂಬರ್ 2 ಹಾಗೂ 4 ರಂದು ಕೃಷಿ ಸಂಶೋಧನ ಸೇವೆಗಾಗಿ ಮತ್ತು ಸೆಪ್ಟೆಂಬರ್ 2 ಮತ್ತು 3 ರಂದು ಕೈಗಾರಿಕಾ ವಿಸ್ತರಣಾಧಿಕಾರಿ ಪರೀಕ್ಷೆಗಳೂ ನಿಗದಿಗೊಂಡಿವೆ ಸಚಿವ ಪ್ರಿಯಾಂಕ್ ಖರ್ಗೆ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಏರ್ ಇಂಡಿಯಾ ವಿಮಾನ ವಾಪಸ್

ಬೆಂಗಳೂರು: ಬೆಂಗಳೂರಿನಿಂದ ಕೊಲ್ಕತ್ತಾಗೆ ಹೊರಟಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದ ಮಾರ್ಗಮಧ್ಯದಿಂದಲೇ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಪಾಸಾಗಿದೆ ಎಂದು ವಿಮಾನಯಾನ ಸಂಸ್ಥೆ ಸೋಮವಾರ ಮಾಹಿತಿ ನೀಡಿದೆ. ಭಾನುವಾರ ರಾತ್ರಿ ಕೊಲ್ಕತ್ತಾಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಐಎಕ್ಸ್ 2718, ತಾಂತ್ರಿಕ ದೋಷದಿಂದಾಗಿ ಮರಳಿ ಬೆಂಗಳೂರಿಗೆ ಆಗಮಿಸಿ, ಸುರಕ್ಷಿತವಾಗಿ ಲ್ಯಾಂಡ್ ಆಗಿದೆ. ಭಾನುವಾರ ರಾತ್ರಿ 7.05ಕ್ಕೆ ಏರ್ ಇಂಡಿಯಾ ವಿಮಾನವು ಕೆಂಪೇಗೌಡ ವಿಮಾನ ನಿಲ್ದಾಣದಿಂದ ಹೊರಡಬೇಕಿತ್ತು. ಆದರೆ 11 ನಿಮಿಷಗಳ ವಿಳಂಬದೊಂದಿಗೆ 7:16ಕ್ಕೆ ಟೇಕ್-ಆಫ್ ಆಗಿತ್ತು. ಟೇಕ್-ಆಫ್ ಆದ ಕೆಲವೇ ನಿಮಿಷಗಳಲ್ಲಿ ವಿಮಾನದಲ್ಲಿ ಹೈಡ್ರಾಲಿಕ್ ಸಮಸ್ಯೆಯ ತಾಂತ್ರಿಕ ದೋಷ ಕಂಡುಬಂದಿತು. ಈ ಕಾರಣದಿಂದಾಗಿ ಪೈಲಟ್‌ಗಳು ತಕ್ಷಣವೇ ವಿಮಾನವನ್ನು ಮರಳಿ ಬೆಂಗಳೂರಿಗೆ ತರಲು ನಿರ್ಧರಿಸಿದರು. ನಮ್ಮ ವಿಮಾನವೊಂದು ತಾಂತ್ರಿಕ ಸಮಸ್ಯೆಯ ನಂತರ ರಾತ್ರಿ 9:19ಕ್ಕೆ ಸುರಕ್ಷಿತವಾಗಿ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಿದೆ. ತೊಂದರೆಗೊಳಗಾದ ಪ್ರಯಾಣಿಕರ ಮುಂದಿನ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಪರ್ಯಾಯ ವಿಮಾನವನ್ನು ನಿಯೋಜಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ರಂಪಾಟ: ಚಾಲಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ರಸ್ತೆಯಲ್ಲಿನ ರಂಪಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಕಾರು ಚಾಲಕರ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. ಇಬ್ಬರು ವ್ಯಕ್ತಿಗಳು ಸಾರ್ವಜನಿಕವಾಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಆ. 2ರಂದು ರಾತ್ರಿ ಈ ಘಟನೆ ನಡೆದಿದೆ. ಕಾರೊಂದು ಮತ್ತೊಂದು ಕಾರಿಗೆ ಗುದ್ದಿದ ನಂತರ ಜಗಳವಾಗಿದೆ. ಮದ್ಯದ ಅಮಲಿನಲ್ಲಿದ್ದ ಕಾರಿನ ಚಾಲಕ ಇಳಿದು ಮತ್ತೊಂದು ಕಾರಿನ ಚಾಲಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಆಗ ಇಬ್ಬರಿಗೂ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು. ಮದ್ಯ ಸೇವಿಸಿ ವಾಹನ ಚಲಾಯಿಸಿದ್ದಕ್ಕಾಗಿ ಸಂಚಾರ ಪೊಲೀಸರೂ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ರಾಹುಲ್ ಗಾಂಧಿ ಪ್ರತಿಭಟನೆ ಮುಂದಕ್ಕೆ

ಶಿಬು ಸೋರೇನ್ ನಿಧನ ಹಿನ್ನೆಲೆಯಲ್ಲಿ ಮಂಗಳವಾರ ನಡೆಯಬೇಕಿದ್ದ ಪ್ರತಿಭಟನೆ 8ಕ್ಕೆ ಮುಂದೂಡಿಕೆ

ಬೆಂಗಳೂರು: ಜೆಎಂಎಂ ನಾಯಕ ಶಿಬು ಸೋರೇನ್ ನಿಧನದ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ.

ಮತಗಳ್ಳತನ ಆರೋಪವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪ್ರತಿಭಟನೆಗೆ ಸಜ್ಜಾಗಿತ್ತು. ಆದರೆ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೋರೇನ್ ಅವರ ನಿಧನದ ಹಿನ್ನೆಲೆಯಲ್ಲಿ ಮೂರು ದಿನಗಳ ಶೋಕಾಚರಣೆ ಹಿನ್ನೆಲೆಯಲ್ಲಿ ಮತಗಳ್ಳತನ ವಿರುದ್ಧ ಪ್ರತಿಭಟನಾ ಸಭೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಗಿದೆ. ಕಾಂಗ್ರೆಸ್ ತನ್ನ ಪ್ರತಿಭಟನೆಯನ್ನು ಮುಂದೂಡುತ್ತಿದ್ದಂತೆ, ಬಿಜೆಪಿ ನಾಯಕರೂ ತಮ್ಮ ಪ್ರತಿಭಟನೆಯನ್ನು 8ಕ್ಕೆ ಮುಂದೂಡಿದ್ದಾರೆ.

ಮಂಗಳವಾರದ ಪ್ರತಿಭಟನೆಗೆ ಫ್ರೀಡಂ ಪಾರ್ಕ್‌ನಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಈ ಬಗ್ಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಿಬು ಸೋರೇನ್ ಬುಡಕಟ್ಟು ಸಮುದಾಯದ ಹಿರಿಯ ನಾಯಕರು. ಕಾಂಗ್ರೆಸ್ ಪಕ್ಷದ ಬಹುಕಾಲದ ಮೈತ್ರಿ ನಾಯಕರು. ಅವರಿಗೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಶಿಬು ಸೋರೇನ್ ಅವರಿಗೆ ಗೌರವ ಸಲ್ಲಿಸಬೇಕು. ಅವರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಆತುರದಲ್ಲಿ ಮಾಡುವುದು ಬೇಡ ಎಂಬ ಕಾರಣಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಬಿಜೆಪಿ ಏನು ಹೇಳಬೇಕೋ ಹೇಳಲಿ: ಕಾಂಗ್ರೆಸ್ ಪ್ರತಿಭಟನೆಗೆ ಪ್ರತಿಯಾಗಿ ಬಿಜೆಪಿಯವರು ಚುನಾವಣಾ ಆಯೋಗದ ಪರವಾಗಿ ಹೋರಾಟ ಮಾಡುತ್ತಿದ್ದಾರೆ ಎಂದು ಕೇಳಿದಾಗ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸುವವರು, ಟೀಕಿಸುವವರನ್ನು ಸ್ವಾಗತಿಸುತ್ತೇವೆ. ಅವರು ಏನು ಹೇಳಬೇಕೋ ಹೇಳಲಿ. ನೀವುಗಳು ಹೇಳಿದಂತೆ ಅವರು ಚುನಾವಣಾ ಆಯೋಗವನ್ನು ಸಮರ್ಥಿಸಿಕೊಂಡು ಪ್ರತಿಭಟಿಸುತ್ತಿದ್ದಾರೆ. ಚುನಾವಣಾ ಆಯೋಗ ಸರಕಾರದ ಭಾಗವಾಗಿದೆ. ಹೀಗಾಗಿ ಇದನ್ನು ಮಾಡುತ್ತಿದ್ದಾರೆ. ಚುನಾವಣಾ ಆಯೋಗ ನಿಷ್ಪಕ್ಷಪಾತ ಹಾಗೂ ನ್ಯಾಯಪೀಠ ಸ್ಥಾನದಲ್ಲಿ ಇರಬೇಕು. ನ್ಯಾಯಪೀಠದಿಂದ ಅನ್ಯಾಯ ಆಗಬಾರದು. ಎಲ್ಲರಿಗೂ ನ್ಯಾಯ ಸಿಗಬೇಕು ಎಂಬುದು ನಮ್ಮ ಆಶಯ. ವಿಧಾನಸಭೆ ಚುನಾವಣೆ ಸಮಯದಲ್ಲೇ ಮಹದೇವಪುರ ಕ್ಷೇತ್ರದ ನಮ್ಮ ಅಭ್ಯರ್ಥಿ ಸೂಕ್ತ ದಾಖಲೆಯೊಂದಿಗೆ ದೂರು ನೀಡಿದ್ದರು. ಅವರ ದೂರಿಗೆ ಸರಿಯಾದ ಸ್ಪಂದನೆ ಸಿಕ್ಕಿಲ್ಲ. ಈ ವಿಚಾರವಾಗಿ ಅಧ್ಯಯನ ನಡೆಸಿದ ನಂತರ ಮತ್ತಷ್ಟು ಅಂಶಗಳು ಬೆಳಕಿಗೆ ಬಂದಿವೆ. ಈ ವಿಚಾರ ತಡವಾಗಿ ಬಹಿರಂಗವಾಗುತ್ತಿರಬಹುದು, ಹಾಗೆಂದು ನಾವು ಕಣ್ಣುಮುಚ್ಚಿಕೊಂಡು ಕೂರಲು ಸಾಧ್ಯವಿಲ್ಲ. ನಮ್ಮ ಅಧ್ಯಯನದ ಅಂಶಗಳನ್ನು ಸಾರ್ವಜನಿಕರ ಮುಂದೆ ಇಡುತ್ತೇವೆ. ನಂತರ ಯಾರು ಸರಿ, ಯಾರು ತಪ್ಪು ಎಂಬುದನ್ನು ಜನ ತೀರ್ಮಾನ ಮಾಡಲಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಫ್ರೀಡಂ ಪಾರ್ಕ್‌ನಲ್ಲಿ ನಡೆಯಬೇಕಿದ್ದ ಪ್ರತಿಭಟನೆಯ ಸಕಲ ಸಿದ್ಧತೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರಿಶೀಲಿಸಿದರು.

> ಮಂಗಳವಾರದ ಕಾರ್ಯಕ್ರಮಕ್ಕೆ ಮಾಡಿಕೊಂಡಿರುವ ಸಿದ್ಧತೆ ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕು ಎಂದು ಪಕ್ಷದ ನಾಯಕರು, ಶಾಸಕರು, ಕಾರ್ಯಕರ್ತರಿಗೆ ಮನವಿ ಮಾಡುತ್ತೇನೆ. 8ರಂದು ಅದೇ ಸ್ಥಳದಲ್ಲಿ, ಅದೇ ಸಮಯಕ್ಕೆ ನಡೆಯಲಿದೆ. ನಮ್ಮ ಕಾರ್ಯಕರ್ತರು, ಮುಖಂಡರು ಹಾಗೂ ಮತದಾರರು ಈ ಹೋರಾಟದಲ್ಲಿ ಭಾಗವಹಿಸಲು ಬಹಳ ಉತ್ಸುಕರಾಗಿದ್ದಾರೆ.
>
> **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ನಟಿ ರಮ್ಯಾಗೆ ಬೆದರಿಕೆ: ಮತ್ತಿಬ್ಬರು ಬಂಧನ

ಬೆಂಗಳೂರು: ನಟಿ ಮತ್ತು ಮಾಜಿ ಸಂಸದೆ ರಮ್ಯಾ (ದಿವ್ಯಾ ಸ್ಪಂದನ) ಅವರಿಗೆ ಆನ್‌ಲೈನ್‌ನಲ್ಲಿ ಜೀವ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿ, ಬೆಂಗಳೂರು ನಗರ ಪೊಲೀಸರು ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಮೂಲಕ ಈ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ.

ನಟಿ ರಮ್ಯಾ ಅವರು, ರೇಣುಕಾಸ್ವಾಮಿ ಕೊಲೆ ಪ್ರಕರಣದ ಬಗ್ಗೆ ಸುಪ್ರೀಂಕೋರ್ಟ್ ನೀಡಿದ 'ಅಭಿಪ್ರಾಯಗಳ' ಕುರಿತು ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು. ಈ ಪೋಸ್ಟ್‌ಗಳಿಗೆ ಪ್ರತಿಯಾಗಿ, ಅವರಿಗೆ ಅತ್ಯಾಚಾರ ಮತ್ತು ಕೊಲೆ ಬೆದರಿಕೆಗಳು ಹಾಗೂ ನಿಂದನಾತ್ಮಕ ಕಾಮೆಂಟ್‌ಗಳು ಬಂದಿದ್ದವು. ಈ ಕುರಿತು ರಮ್ಯಾ ಅವರು ದೂರು ನೀಡಿದ ನಂತರ, ಪೊಲೀಸರು ತನಿಖೆ ಆರಂಭಿಸಿ, ಆಗಸ್ಟ್ 1 ರಂದು ಇಬ್ಬರನ್ನು ಬಂಧಿಸಿದ್ದರು. ಆಗಸ್ಟ್ 3ರಂದು ಪೊಲೀಸರು ಮತ್ತಿಬ್ಬರನ್ನು ಬಂಧಿಸಿದ್ದಾರೆ. ಬಂಧಿತರನ್ನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ರಾಜೇಶ್ ಸಿ.ವೈ. (23) ಮತ್ತು ಹೊಸಕೋಟೆಯ ಸೂಲಿಬೆಲೆ ನಿವಾಸಿ ಭುವನ್ ಗೌಡ (24) ಎಂದು ಗುರುತಿಸಲಾಗಿದೆ. ರಾಜೇಶ್ ಕೃಷಿಕನಾಗಿದ್ದರೆ, ಭುವನ್ ನಟನಾ ವೃತ್ತಿಯಲ್ಲಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಇಬ್ಬರ ಮೇಲೆಯೂ ಯಾವುದೇ ಕ್ರಿಮಿನಲ್ ಹಿನ್ನೆಲೆ ಇಲ್ಲ. ಈ ಬೆದರಿಕೆ ಜಾಲದಲ್ಲಿ ಭಾಗಿಯಾಗಿರುವ ಇತರ ವ್ಯಕ್ತಿಗಳ ಪತ್ತೆಗಾಗಿ ತನಿಖೆ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಡೆತ್‌ನೋಟ್ ಬರೆದಿಟ್ಟು ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಡೆತ್‌ನೋಟ್ ಬರೆದಿಟ್ಟು 7ನೇ ತರಗತಿ ವಿದ್ಯಾರ್ಥಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವಂತಹ ಘಟನೆ ನಗರದ ಸಿಕೆ ಅಚ್ಚುಕಟ್ಟುವಿನಲ್ಲಿ ನಡೆದಿದೆ. ಗಾಂಧಾರ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಬೆಳಗ್ಗೆ ತಂದೆ ಬಾಲಕನ ರೂಮ್‌ಗೆ ಹೋಗಿ ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸದ್ಯ ಸಿಕೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ಗಾಂಧಾರ್‌ನ ತಂದೆ ಮ್ಯೂಸಿಕ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಾರೆ. ತಾಯಿ ಸವಿತಾ ಖ್ಯಾತ ಜಾನಪದ ಗಾಯಕಿ. ಸವಿತಾ ಅವರು ಕಳೆದ ಶುಕ್ರವಾರ ಕಾರ್ಯಕ್ರಮದ ಹಿನ್ನಲೆ ಆಸ್ಟ್ರೇಲಿಯಾಗೆ ತೆರಳಿದ್ದರು. ಸದ್ಯ ತಾಯಿ ವಾಪಸ್ ಬರುವವರೆಗೆ ಮರಣೋತ್ತರ ಪರೀಕ್ಷೆ ನಡೆಸದೇ ಇರಲು ತೀರ್ಮಾನಿಸಲಾಗಿದೆ.

ಭಾವುಕ ಡೆತ್‌ನೋಟ್ ಬರೆದ ಬಾಲಕ: ಪ್ರೀತಿಯ ಕುಟುಂಬ ಸದಸ್ಯರೇ, ಈ ಪತ್ರ ಯಾರೆಲ್ಲ ಓದುತ್ತಿದ್ದೀರಾ ಅಳಬೇಡಿ. ಈಗಾಗಲೇ ಸ್ವರ್ಗದಲ್ಲಿದ್ದೇನೆ. ಮತ್ತೆ ನನ್ನನ್ನು ತಪ್ಪಾಗಿ ಅರ್ಥೈಸಿಕೊಳ್ಳಬೇಡಿ. ನಿಮ್ಮ ಈಗಿನ ಸ್ಥಿತಿ ಹೇಗಿದೆ ಅನ್ನೋದು ನನಗೆ ತಿಳಿದಿದೆ. ನಿಮಗೆ ನೋವಾಗುತ್ತೆ ಅನ್ನೋದು ನನಗೆ ತಿಳಿದಿದೆ. ಈ ಮನೆ ಚೆನ್ನಾಗಿರಬೇಕೆಂದು ಈ ನಿರ್ಧಾರ ತೆಗೆದುಕೊಂಡಿದ್ದೇನೆ. ನನ್ನ ಮೇಲೆ ನಿಮಗೆ ಕೋಪ ಬರುವಂತೆ ನಡೆದುಕೊಂಡಿದ್ದೇನೆ. ನನ್ನಿಂದ ನೊಂದಿದ್ದೀರಾ, ನಿಮಗೆ ತೊಂದರೆ ಕೂಡ ನೀಡಿದ್ದೇನೆ. ಆದರೆ ನನ್ನ ಉದ್ದೇಶ ನಿಮ್ಮನ್ನು ನೋಯಿಸುವುದಾಗಿರಲಿಲ್ಲ. ನನ್ನ ಮೇಲೆ ನಿಮಗೆ ಕೋಪ ಇದ್ದರೆ ನಿಮ್ಮಲ್ಲಿ ಕ್ಷಮೆ ಕೇಳುತ್ತೇನೆ. ನನ್ನ ತಪ್ಪುಗಳನ್ನು ದಯವಿಟ್ಟು ಕ್ಷಮಿಸಿ. 14 ವರ್ಷಗಳ ಕಾಲ ನಾನು ಬದುಕಿದ್ದು ಅದರಲ್ಲೇ ತೃಪ್ತನಾಗಿದ್ದೇನೆ. 14 ವರ್ಷಗಳಲ್ಲಿ ನಾನು ಖುಷಿಯ ಕ್ಷಣ ಕಳೆದಿದ್ದೇನೆ ಅದೇ ಸಾಕು. ಸ್ವರ್ಗದಲ್ಲಿ ನಾನು ಖುಷಿಯಾಗಿದ್ದೇನೆ. ನಾನು ನನ್ನ ಸ್ನೇಹಿತರನ್ನು ಪ್ರೀತಿಸುತ್ತಿದ್ದೆ ಎಂದು ಅವರಿಗೆ ತಿಳಿಸಿ. ನನ್ನ ಶಾಲಾ ಸ್ನೇಹಿತರಿಗೂ ಈ ಮಾತನ್ನ ಹೇಳಿ. ಐ ಮಿಸ್ ಯೂ ಆಲ್- ಗುಡ್ ಬೈ ಅಮ್ಮ ಎಂದು ಡೆತ್‌ನೋಟ್ ಬರೆಯಲಾಗಿದೆ.

ಅಂಗನವಾಡಿ ಕಾರ್ಯಕರ್ತೆ ಹುದ್ದೆ ನಾಗರಿಕ ಹುದ್ದೆಗಳಲ್ಲ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ನಾಗರಿಕ ಸೇವಾ ಹುದ್ದೆಗಳಂತೆ ಮೀಸಲು ನಿಯಮಗಳಿಗೆ ಒಳಪಡುವುದಿಲ್ಲ ಎಂಬ ರಾಜ್ಯ ಸರಕಾರದ ನಿಲುವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿದಿದೆ.

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಪರಿಶಿಷ್ಟ ಪಂಗಡದ (ಎಸ್‌ಟಿ) ಅರ್ಜಿದಾರರಾದ ವಿಜಯಲಕ್ಷ್ಮಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ. ಅರುಣ್ ಅವರು ಈ ಆದೇಶ ನೀಡಿದ್ದು, ಅರ್ಜಿ ವಜಾ ಮಾಡಿದ್ದಾರೆ.

ಮೀಸಲು ಆದೇಶವಿಲ್ಲ, ಒಳಪಡುವುದಿಲ್ಲ ಸರಕಾರದ ನಿಲುವು ಎತ್ತಿಹಿಡಿದ ಹೈಕೋರ್ಟ್

ಇಂಡಿ ತಾಲೂಕಿನ ಅಗರಖೇಡ್-5 ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವಿಜಯಲಕ್ಷ್ಮಿ ಅರ್ಜಿ ಸಲ್ಲಿಸಿದ್ದರು. 2024 ಅ.9 ರಂದು ಪ್ರಕಟವಾದ ನೇಮಕಾತಿ ಅಧಿಸೂಚನೆಯಲ್ಲಿ ಎಸ್‌ಟಿ ಮೀಸಲಾತಿ ಇಲ್ಲದಿರುವುದನ್ನು ಪ್ರಶ್ನಿಸಿದ್ದರು. ರಾಜ್ಯದ ಈ ನೀತಿಯು ಅಂಚಿನಲ್ಲಿರುವ ಸಮುದಾಯಗಳಿಗೆ ಸಮಾನ ಅವಕಾಶ ನಿರಾಕರಿಸುತ್ತದೆ. ನಾಗರಿಕ ಸೇವೆಗಳಲ್ಲಿ ಅನುಸರಿಸಲಾಗುವ ಮೀಸಲಾತಿ ಮಾನದಂಡಗಳಿಗೆ ಹೊಂದಿಕೆ ಆಗುವುದಿಲ್ಲ ಎಂದು ವಾದಿಸಿದ್ದರು.

ಹಿಂದಿನ ನೇಮಕಾತಿ ಸುತ್ತುಗಳಲ್ಲಿ ತಮ್ಮ ಪ್ರದೇಶದಿಂದ ಕೆಲವೇ ಎಸ್‌ಟಿ ಅಭ್ಯರ್ಥಿಗಳನ್ನು ನೇಮಿಸಲಾಗಿದೆ. ಗ್ರಾಮ ಮಟ್ಟದ ಶಿಶುಪಾಲನಾ ಕೇಂದ್ರಗಳಲ್ಲಿ ಸಮುದಾಯ-ನಿರ್ದಿಷ್ಟ ಕೋಟಾ ನಿರಾಕರಿಸುವುದು ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ತತ್ವಗಳಿಗೆ ವಿರುದ್ಧವಾಗಿದೆ ಎಂದು ವಾದಿಸಿದ್ದರು. ಅಧಿಸೂಚನೆ ರದ್ದುಗೊಳಿಸಿ, ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಮೀಸಲಾತಿ ನೀತಿ ಪರಿಶೀಲಿಸುವಂತೆ ನ್ಯಾಯಾಲಯ ಕೋರಿದ್ದರು. ಈ ಮಧ್ಯೆ, ರಾಜ್ಯ ಸರಕಾರ ತನ್ನ ನೀತಿ ಸಮರ್ಥಿಸಿಕೊಂಡಿತ್ತು. ಅಂಗನವಾಡಿ ಕಾರ್ಯಕರ್ತೆಯರನ್ನು ಸರಕಾರಿ ನೌಕರರಾಗಿ ನೇಮಕ ಮಾಡುವುದಿಲ್ಲ. ಬದಲಿಗೆ ಗೌರವ ಕಾರ್ಯಕರ್ತೆಯರನ್ನಾಗಿ ನೇಮಕ ಮಾಡಲಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಆರಂಭಿಕ ಶಿಕ್ಷಣ ಒದಗಿಸುವ ಜವಾಬ್ದಾರಿ ಹೊಂದಿರುತ್ತಾರೆ. ಈ ಹುದ್ದೆಗಳಿಗೆ ಸ್ಥಳೀಯ ಸಮುದಾಯದಲ್ಲಿ ವಿಶ್ವಾಸ ಗಳಿಸಬಲ್ಲ ವ್ಯಕ್ತಿಗಳನ್ನು ನೇಮಿಸಲಾಗುತ್ತದೆ ಎಂದು ಸರಕಾರ ವಾದಿಸಿತ್ತು.

ಅಂಗನವಾಡಿ ನೇಮಕ ಗೌರವಾನ್ವಿತ ಸೇವೆ

ನ್ಯಾಯಮೂರ್ತಿ ಎಂ.ಐ.ಅರುಣ್ ಅವರು ರಾಜ್ಯ ಸರಕಾರದ ವಾದ ಒಪ್ಪಿಕೊಂಡರು. ಅಂಗನವಾಡಿ ಕಾರ್ಯಕರ್ತರು ನಾಗರಿಕ ಹುದ್ದೆಗಳಲ್ಲ, ಸರಕಾರಿ ಸೇವೆಗಳಿಗೆ ಸಮಾನವಾದ ನೇಮಕಾತಿ ಪ್ರಕ್ರಿಯೆ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಅರ್ಜಿ ವಜಾಗೊಳಿಸಿದ ನ್ಯಾಯಾಲಯವು, ಅಂಗನವಾಡಿ ನೇಮಕಾತಿಗಳು ಗೌರವಾನ್ವಿತ ಸೇವೆಯಾಗಿರುವುದರಿಂದ, ಅವು ವಿಭಿನ್ನ ನಿಯಮಗಳು ಮತ್ತು ಆದ್ಯತೆಗಳನ್ನು ಅನುಸರಿಸುತ್ತವೆ. ಸಾಮಾಜಿಕ ಸೇರ್ಪಡೆ ಮುಖ್ಯವಾದರೂ, ಅಂತಹ ಹುದ್ದೆಗಳ ಸ್ವರೂಪವು ಔಪಚಾರಿಕ ಸರಕಾರಿ ಉದ್ಯೋಗಗಳಿಗಿಂತ ಭಿನ್ನವಾದ ವಿಧಾನ ಸಮರ್ಥಿಸುತ್ತವೆ ಎಂದು ತೀರ್ಪು ನೀಡಿದರು.

ರಾಜಕೀಯ ಹೋರಾಟ ಕೋರ್ಟ್ ಹೊರಗಿರಲಿ

ಸಚಿವ ಶಿವಾನಂದ ಪಾಟೀಲ್‌ಗೆ ಸುಪ್ರೀಂ ಚಾಟಿ

ನವದೆಹಲಿ/ಬೆಂಗಳೂರು: ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದ ಸಚಿವ ಶಿವನಾಂದ ಪಾಟೀಲ್ ಅವರ ನಡೆಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದೆ.

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಸಚಿವ ಶಿವಾನಂದ ಪಾಟೀಲ್ ಅವರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ಮೇಲ್ಮನವಿ ಅರ್ಜಿಯನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡು ವಜಾಗೊಳಿಸಿದೆ. ವಿಚಾರಣೆ ವೇಳೆ, ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು, ನಿಮ್ಮ ರಾಜಕೀಯ ಹೋರಾಟಗಳನ್ನು ನ್ಯಾಯಾಲಯದ ಹೊರಗೆ ಮಾಡಿ, ಇಲ್ಲಿಗೆ ತರಬೇಡಿ, ಎಂದು ಖಾರವಾಗಿ ಹೇಳುವ ಮೂಲಕ ರಾಜಕೀಯ ಪ್ರಕರಣಗಳನ್ನು ನ್ಯಾಯಾಲಯಕ್ಕೆ ತರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಪ್ರಕರಣ ಸಂಬಂಧ ಸಚಿವ ಶಿವನಾಂದ ಪಾಟೀಲ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಅರ್ಜಿಯನ್ನು ವಜಾಗೊಳಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ್ದರು. ಈ ಅರ್ಜಿಯನ್ನು ಸೋಮವಾರ ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ಪೀಠ ವಿಚಾರಣೆ ನಡೆಸಿತು. ಈ ವೇಳೆ ನಿಮ್ಮ ರಾಜಕೀಯ ಹೋರಾಟ ಕೋರ್ಟ್ ಹೊರಗೆ ಇಟ್ಟುಕೊಳ್ಳಿ. ಕೋರ್ಟ್‌ಗೆ ರಾಜಕೀಯ ವಿಚಾರ ಯಾಕೆ ತರುತ್ತೀರಿ? ಎಂದು ತರಾಟೆಗೆ ತೆಗೆದುಕೊಂಡಿದೆ. ಅಲ್ಲದೇ ದಂಡ ಸಹಿತ ಯಾಕೆ ಈ ಅರ್ಜಿಯನ್ನು ವಜಾ ಮಾಡಬಾರದು? ಅರ್ಜಿದಾರರು ಸಚಿವರಲ್ಲವೇ 1 ಲಕ್ಷ ರು. ದಂಡ ಯಾಕೆ ವಿಧಿಸಬಾರದು ಎಂದು ಆಕ್ಷೇಪ ವ್ಯಕ್ತಪಡಿ ಸಿತು. ಸಿಜೆಐ ಆಕ್ಷೇಪದ ಬೆನ್ನಲ್ಲೇ ಸಚಿವ ಶಿವಾನಂದ ಪಾಟೀಲ್ ಪರ ವಕೀಲರು ಅರ್ಜಿ ವಾಪಸ್ ಪಡೆದಿದ್ದಾರೆ.

ಏನಿದು ಪ್ರಕರಣ?: ಇತ್ತೀಚಿನ ಲೋಕಸಭೆ ಚುನಾವಣಾ ರ‍್ಯಾಲಿ ಸಂದರ್ಭದಲ್ಲಿ ಯತ್ನಾಳ್ ನನ್ನ ವಿರುದ್ಧ ಮಾನಹಾನಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಶಿವಾನಂದ ಪಾಟೀಲ್ ಅವರು, ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ತಮ್ಮ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಸಚಿವ ಶಿವಾನಂದ ಪಾಟೀಲ್ ಅವರು ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಆದರೆ, ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಅಡಿಯಲ್ಲಿ ಸರಿಯಾದ ಕಾರ್ಯವಿಧಾನವನ್ನು ಅನುಸರಿಸಿಲ್ಲ ಎಂದು ಹೈಕೋರ್ಟ್ ಈ ಮೊಕದ್ದಮೆಯನ್ನು ರದ್ದುಗೊಳಿಸಿತ್ತು.

ಅಸಭ್ಯ ವರ್ತನೆ: ಸೆಕ್ಯೂರಿಟಿ ವಿರುದ್ಧ ದೂರು

ಬೆಂಗಳೂರು: ಮಹಿಳೆ ಮುಂದೆ ಪ್ಯಾಂಟ್ ಬಿಚ್ಚಿ ಸೆಕ್ಯೂರಿಟಿ ಅಸಭ್ಯ ವರ್ತನೆ ತೋರಿದ ಆರೋಪದಲ್ಲಿ ಕೆಂಗೇರಿ ಉಪನಗರದ ಮಾರ್ಟ್‌ವೊಂದರಲ್ಲಿ ಕೆಲಸ ಮಾಡುವ ಚಂದ್ರಹಾಸ ಎಂಬಾತನ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸೆಕ್ಯೂರಿಟಿ ಚಂದ್ರಹಾಸ ಪಕ್ಕದ ಅಂಗಡಿಯ ಮಹಿಳೆಯ ನಡುವೆ ಜಾಗದ ವಿಚಾರವಾಗಿ ಜಗಳ ತೆಗೆದಿದ್ದಾನೆ. ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದಾನೆ ಎಂದು ದೂರಲಾಗಿದೆ.

ಮಹಿಳೆ ದೂರಿನಲ್ಲೇನಿದೆ?: ಮಹಿಳೆ ದೂರಿನ ಪ್ರಕಾರ ಆಗಸ್ಟ್ 02ರಂದು ಸುಮಾರು ರಾತ್ರಿ 09 ಗಂಟೆಗೆ ಮೀನು ಅಂಗಡಿ ಜಾಗದ ವಿಚಾರಕ್ಕೆ ಮೆಗಾ ಮಾರ್ಟ್‌ನ ಸೆಕ್ಯೂರಿಟಿ ಚಂದ್ರಹಾಸ ಜಗಳ ಮಾಡಿದ್ದು, ಈ ವಿಷಯವಾಗಿ ಮಾರ್ಟ್‌ನ ಮ್ಯಾನೇಜರ್‌ಗೆ ದೂರು ಹೇಳಲು ಹೋದ ಸಂದರ್ಭದಲ್ಲಿ ಚಂದ್ರಹಾಸ ಏಕಾಏಕಿ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಸಾರ್ವಜನಿಕರ ಸಮ್ಮುಖದಲ್ಲಿಯೇ ಆತನು ತನ್ನ ಪ್ಯಾಂಟ್ ಜಿಪ್ ಅನ್ನು ತೆಗೆದು ಮಾರ್ಮಾಂಗ ತೋರಿಸಲು ಮುಂದಾಗಿದ್ದು ಹಾಗೂ ನನ್ನ ಮೇಲೆ ಚೂಪಾದ ವಸ್ತುವಿನಿಂದ ಕಿವಿ ಹಾಗೂ ಕುತ್ತಿಗೆ ಭಾಗಕ್ಕೆ ಬಲವಾಗಿ ಹೊಡೆದು ಗಾಯ ಮಾಡಿದ್ದು, ಅದೇ ಸಮಯದಲ್ಲಿ ಸಾರ್ವಜನಿಕರು 112 ಗೆ ಕರೆ ಮಾಡಿದಾಗ ಪೊಲೀಸರು ಬಂದು ಮುಂದಿನ ಅನಾಹುತವನ್ನು ತಪ್ಪಿಸಿರುತ್ತಾರೆ. ನಂತರ ನನಗೆ ನೋವು ತಳಲಾರದೇ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ಆ.3 ರಂದು ಠಾಣೆಗೆ ಬಂದು ದೂರು ನೀಡಿರುತ್ತೇನೆ. ನನ್ನ ಮೇಲೆ ಹಲ್ಲೆ ಮಾಡಿರುವ ಚಂದ್ರಹಾಸನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

PUBLIC NOTICE

It is brought to the notice of the general public that our client **Sri. MARUTHISH G, and Smt. RADHA L** intends to purchase the schedule property from **Mr. C.N. Bharath Simhan and S. Vishwaj Kumar,** who represents that they are the absolute owners in peaceful possession and enjoyment of the schedule property and which is free from all kinds of encumbrances whatsoever and that there are no third party claims or rights on the schedule property.

Any persons having any claim/s over the schedule property or having any objection/s about the above mentioned transactions may write to the undersigned **within 07 (seven) days** from the date of publication of this Notice along with documentary evidence, on which they are basing their claim, failing which my clients will proceed on the basis that there are no claim/s, objection/s of whatsoever nature.

SCHEDULE PROPERTY

ITEM No.1

ALL THE PIECE AND PARCEL of the immovable property bearing **Site No.5, Old Katha No.66/2A, bearing BBMP PID No.1-85-5, situated at Srimatha Layout, Jalahalli Village, Yeshwanthpura Hobli, Bangalore North Taluk, Bangalore,** measuring **East to West 30 feet and North to South 40ft in all measuring 1200 Sq.ft,** and bounded on the :

East by : Site No.6,
West by : Site No.04,
North by : Portion of Property bearing No.66/1,
South by : Road.

ITEM No.2

ALL THE PIECE AND PARCEL of the immovable property bearing **Site No.6 & Western portion of Site No.7, old Katha No.66/2, New Katha No.66/2A & 66/2D, bearing BBMP PID No.1-85-6, situated at Srimatha Layout, Jalahalli Village, Yeshwanthpura Hobli, Bangalore North Taluk, Bangalore,** measuring **East to West 40 feet and North to South 40ft in all measuring 1600 Sq.ft,** and bounded on the :

East by : Remaining Eastern portion of Site No.7,
West by : Site No.05,
North by : Private Property,
South by : Road.

Sri. R. HARSHA, Advocate
Office At. #665/3, 1st Main, 1st Cross
K.Narayanapura, Dr. SRK Nagar Post,
K.R. Puram Hobli, Bangalore East Tq
Bangalore -560 077 Ph-9513377337

ಸರಕಾರಿ ಪೋರ್ಟಲ್ ಹ್ಯಾಕ್: ವಂಚನೆ

ಬೆಂಗಳೂರು: ದೇಶದಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಇರುವ ಸರಕಾರಿ ಪೋರ್ಟಲ್ ಹ್ಯಾಕ್ ಮಾಡಿರುವ ಸೈಬರ್ ಕಳ್ಳರು, 6 ಅಭ್ಯರ್ಥಿಗಳ ಬ್ಯಾಂಕ್ ಖಾತೆಗಳನ್ನು ಬದಲಿಸಿ, ಹಣ ವಂಚಿಸಿದ್ದಾರೆ. ಜನವರಿ 3 ಮತ್ತು ಜುಲೈ 4ರ ನಡುವೆ ಹ್ಯಾಕ್ ಆಗಿದ್ದು, ಅಭ್ಯರ್ಥಿಗಳಿಗೆ ಸೇರಿದ 1.46 ಲಕ್ಷ ವಂಚಿಸಲಾಗಿದೆ. ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಅಡಿಯಲ್ಲಿರುವ ಪೋರ್ಟಲ್, ಅಭ್ಯರ್ಥಿಗಳಿಗೆ ಅಪ್ರೆಂಟಿಸ್‌ಶಿಪ್‌ಗೆ ನೋಂದಾಯಿಸಲು, ಅರ್ಜಿ ಸಲ್ಲಿಸಲು ಮತ್ತು ಸ್ಟೈಫಂಡ್ ಪಡೆಯಲು ಅನುವು ಮಾಡಿಕೊಡುತ್ತದೆ.

ಮಾನ್ಯ ಎರಡನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 528/2025

ಅರ್ಜಿದಾರರು: 1. ಶ್ರೀ ಶಿವಕುಮಾರ್ ಬಿನ್ ಲೇಟ್ ಸಿದ್ದಲಿಂಗಯ್ಯ, ವಯಸ್ಸು 58 ವರ್ಷ ವಾಸ: ಗಡಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ಸಿದ್ದಲಿಂಗಯ್ಯ ಬಿನ್ ಲೇಟ್ ಸಿದ್ದಲಿಂಗೇಗೌಡ ರವರು ದಿನಾಂಕ: 06/07/2015 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಗಡಸಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 09/09/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 02/08/2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಎರಡನೇ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 423/2025

ಅರ್ಜಿದಾರರು: ಶ್ರೀ. ಕೆಂಚಯ್ಯ ಬಿನ್ ಲೇಟ್ ದಾಸಯ್ಯ ಉರುಫ್ ದಾಸಪ್ಪ ವಯಸ್ಸು 73 ವರ್ಷ ವಾಸ ಎನ್. ಆರ್. ಪುರ ರಸ್ತೆ, ಜ್ಯೋತಿ ನಗರ ಡಬಲ್ ಟ್ಯಾಂಕ್ ಹತ್ತಿರ, ವಿದ್ಯಾ ನಗರ, ಶಿವಮೊಗ್ಗ ಟೌನ್, ಶಿವಮೊಗ ಜಿಲ್ಲೆ. ಮತ್ತು ಇನ್ನೊಬ್ಬರು.

ವಿರುದ್ಧ

ಪ್ರತಿ ಅರ್ಜಿದಾರರು: ತಹಶೀಲ್ದಾರ್ ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಂದೆ ಮತ್ತು 2ನೇ ಅರ್ಜಿದಾರರ ತಾತನಾದ ಮೃತ ದಾಸಯ್ಯ ಉರುಫ್ ದಾಸಪ್ಪ ಬಿನ್ ಈರ ಇವರು ದಿನಾಂಕ 08-07-1975 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಅಜ್ಜೇಗೌಡನ ವಲಸೆ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಸರಿಯಷ್ಟೆ, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 20/09/2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 04/08/2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ರಾಮಚಂದ್ರ, ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 24-07-2025

ಯಕ್ಷಗಾನ ಹೆಮ್ಮರವಾಗಿ ಬೆಳೆದ ಕಲಾ ಪ್ರಕಾರ

ಮಹಿಳಾ ಉತ್ಸವ ನಿಮಿತ್ತ ನಡೆದ ಯಕ್ಷಗಾನದಲ್ಲಿ ಮಹಿಳಾ ಕಲಾವಿದರು ಯಕ್ಷಗಾನ ಪ್ರದರ್ಶಿಸಿದರು.

ಬೆಂಗಳೂರು: ಯಕ್ಷಗಾನ ಕಲೆಯನ್ನು ಜಾನಪದ ಕಲೆ ಎಂದು ಹೇಳುತ್ತಿದ್ದೇವೆ. ಆದರೆ, ಅದು ಜನರಿಂದ ಹರಡಿ ಹೆಮ್ಮರವಾದ ಒಂದು ಕಲಾ ಪ್ರಕಾರ ಎಂದು ನೃತ್ಯ ಇತಿಹಾಸ ತಜ್ಞೆ ಡಾ. ಕರುಣಾ ವಿಜಯೇಂದ್ರ ಹೇಳಿದರು. ಇಲ್ಲಿನ ಕನ್ನಡ ಭವನದ ನಯನಾ ಸಭಾಂಗಣದಲ್ಲಿ ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆಯಿಂದ ಮಹಿಳಾ ಉತ್ಸವ-2025 ನಡೆಯಿದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಶಿಪ್ರಭಾ ಪರಿಣಯ ಯಕ್ಷಗಾನ ವೈಭವವನ್ನು ಕಾರ್ಯಕ್ರಮದಲ್ಲಿ ಮಹಿಳಾ ಕಲಾವಿದರು ಪ್ರದರ್ಶಿಸಿದರು. ಕೃಷ್ಣಾರ್ಜುನ ಕಾಳಗ ಪ್ರಸಂಗ ಪ್ರದರ್ಶಿಸಲಾಯಿತು. ಈ ಎರಡೂ ಪ್ರಸಂಗಗಳನ್ನು ಯಕ್ಷ ಗುರು ಶ್ರೀನಿವಾಸ ಸಾಸ್ತಾನ ಸಂಯೋಜಿಸಿದ್ದು, ರಾಜ್ಯ ಮಹಿಳಾ ಯಕ್ಷಗಾನ ತಂಡದ ಮುಖ್ಯಸ್ಥೆ ಗೌರಿ ಕೆ. ನಿರ್ದೇಶಿಸಿದ್ದರು.

ಮುಮ್ಮೇಳದಲ್ಲಿ ಮಹಿಳಾ ಯಕ್ಷಗಾನ ತಂಡದ ಮುಖ್ಯಸ್ಥೆ ಗೌರಿ ಕೆ., ಆಶಾ ಆರ್. ಅನ್ನಪೂರ್ಣೇಶ್ವರಿ, ಸುಮಾ ಅನಿಲ್ ಕುಮಾರ್, ಶಶಿಕಲಾ, ಲಕ್ಷ್ಮೀರಾವ್, ಶ್ವೇತಾ, ಅಮಿತ, ಅಂಬಿಕಾ, ಚೈತ್ರಾ ಆರ್. ಆಚಾರ್, ಚೈತ್ರಾ ಭಟ್, ದೀಕ್ಷಾ ಭಟ್, ಸಹನಾ ಜಿ, ಧೃತಿ ಅಮ್ಮೆಂಬಳ, ಅಭಿಶ್ರೀ ಶ್ರೀಹರ್ಷ, ರಕ್ಷಾ ಎ, ಮಾನ್ಯ, ಯಾದ್ವಿ, ಸಹನಾ ಅನಿಲ್ ಕುಮಾರ್, ಗಗನ ಅನಿಲ್ ಕುಮಾರ್, ಕೃತಿ ಅಮ್ಮೆಂಬಳ ಭಾಗವಹಿಸಿದ್ದರು. ಪುಟಾಣಿ ಕಲಾವಿದರಿಂದ ಧೀರವೈಯ್ಯಾರ ಯಕ್ಷಗಾನ ಪೂರ್ವರಂಗ ಪ್ರಯೋಗವೂ ನಡೆಯಿತು. ಹಿಮ್ಮೇಳದಲ್ಲಿ ಸುಬ್ರಹ್ಮಣ್ಯ ನಾವುಡ, ವಿಶ್ವನಾಥ ಶೆಟ್ಟಿ ಭಾಗವತರಾಗಿ, ಗೌತಮ ಸಾಸ್ತಾನ ಮೃದಂಗದಲ್ಲಿ, ಸುಬ್ರಹ್ಮಣ್ಯ ಎಂ ಅವರು ಚೆಂಡೆ ವಾದಕರಾಗಿದ್ದರು. ಕಾರ್ಯಕ್ರಮವನ್ನು ಚೈತ್ರಾ ರಾಜೇಶ್ ಆಚಾರ್ ಮತ್ತು ಡಾ. ಸುಪ್ರೀತಾ ಗೌತಮ್ ನಡೆಸಿಕೊಟ್ಟರು.

ಕೆಎಎಸ್ ನೇಮಕ ಪ್ರಕ್ರಿಯೆಗೆ ಹೈ ಸಮ್ಮತಿ

384 ಕೆಎಎಸ್ ಅಧಿಕಾರಿಗಳ ನೇಮಕ ಅಧಿಸೂಚನೆ ರದ್ದುಗೊಳಿಸಿದ್ದ ಕೆಎಟಿ

ಬೆಂಗಳೂರು: ಸರಕಾರಿ ಹುದ್ದೆಗಳ ನೇಮಕದಲ್ಲಿ ಮೀಸಲು ಜಾರಿ ಸಂಬಂಧ ನಿಯಮ ಉಲ್ಲಂಘನೆ ಆಗಿದೆ ಎಂದು 384 ಕೆಎಎಸ್ ಅಧಿಕಾರಿಗಳ ನೇಮಕ ಕುರಿತ ಅಧಿಸೂಚನೆ ರದ್ದುಗೊಳಿಸಿದ್ದ ಕೆಎಟಿ ಆದೇಶ ಪ್ರಶ್ನಿಸಿದ್ದ ಮೇಲ್ಮನವಿ ಸಂಬಂಧ, ನೇಮಕ ಪ್ರಕ್ರಿಯೆಯನ್ನು ಮುಂದುವರಿಸುವುದಕ್ಕೆ ಹೈಕೋರ್ಟ್ ಸಮ್ಮತಿ ನೀಡಿದೆ. ಆದರೆ, ನ್ಯಾಯಪೀಠದ ಗಮನಕ್ಕೆ ತಾರದೆ ಅಂತಿಮ ಫಲಿತಾಂಶ ಪ್ರಕಟಿಸಬಾರದು ಎಂಬುದಾಗಿ ಷರತ್ತು ವಿಧಿಸಿದೆ.

ಕೆಎಟಿ ಕಳೆದ ಮೇ 28ರಂದು ನೀಡಿದ್ದ ಆದೇಶ ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ. ಸಿಂಗ್ ಮತ್ತು ನ್ಯಾಯಮೂರ್ತಿ ವೆಂಕಟೇಶ್ ಟಿ. ನಾಯಕ್ ಅವರಿದ್ದ ವಿಭಾಗೀಯಪೀಠ ಈ ಮಧ್ಯಂತರ ಆದೇಶ ನೀಡಿದೆ. ಪ್ರಕರಣದಲ್ಲಿ ಮೂಲ ಅರ್ಜಿದಾರರಾದ ಬಿ.ಎನ್. ಮಧು, ಕರ್ನಾಟಕ ಲೋಕಸೇವಾ ಆಯೋಗ ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ಮೂರು ವಾರಗಳಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ಸೂಚನೆ ನೀಡಿದೆ.

ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರ 2022ರಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೈಕ್ಷಣಿಕ ಸಂಸ್ಥೆಗಳಲ್ಲಿ ಸೀಟು ಹಂಚಿಕೆ ಮೀಸಲು ಮತ್ತು ರಾಜ್ಯ ಸೇವೆಯಲ್ಲಿ ನೇಮಕ ಹುದ್ದೆಗಳಿಗೆ ಮೀಸಲು) ಸುಗ್ರೀವಾಜ್ಞೆ ಜಾರಿಗೊಳಿಸಿತ್ತು. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲು ಪ್ರಮಾಣ ಶೇ 18ರಿಂದ ಶೇ 24ಕ್ಕೆ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಿತ್ತು. ಅದನ್ನು ಆಧರಿಸಿ ಕರ್ನಾಟಕ ಸರಕಾರಿ ಸೇವೆಯಲ್ಲಿ ರೋಸ್ಟರ್ ಮೀಸಲು ನಿಗದಿಪಡಿಸಿತ್ತು. ಆನಂತರ ಅದನ್ನು ಆಧರಿಸಿ ಕೆಪಿಎಸ್‌ಸಿ 384 ಗ್ರೂಪ್ ಎ ಮತ್ತು ಬಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿ ಆದೇಶಿಸಿತ್ತು.

ಕೆಪಿಎಸ್‌ಸಿಗೆ ಕೋರ್ಟ್ ಅನುಮತಿ

ಪ್ರತಿವಾದಿಗಳು ಸಲ್ಲಿಸಿದ ಆಕ್ಷೇಪಣೆಗೆ ಸರಕಾರದ ಪ್ರತಿ ಆಕ್ಷೇಪಣೆಗಳಿದ್ದರೆ ಅದನ್ನು ಒಂದು ವಾರದಲ್ಲಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿರುವ ನ್ಯಾಯಾಲಯ ವಿಚಾರಣೆಯನ್ನು ಮುಂದೂಡಿದೆ. ಅಲ್ಲದೆ, ಕೆಎಎಸ್ ನೇಮಕ ಪ್ರಕ್ರಿಯೆ ಮುಂದುವರಿಸಲು ಕೆಪಿಎಸ್‌ಸಿಗೆ ನ್ಯಾಯಾಲಯ ಅನುಮತಿ ನೀಡಿದೆ. ಅಲ್ಲದೆ, ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದೆ.

ಮಕ್ಕಳಿಗೆ ಭಾಷಣ ಸ್ಪರ್ಧೆ ಆಯೋಜನೆ

ಬೆಂಗಳೂರು: ಪರಂಪರಾ ಕಲ್ಚರಲ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಶಾಲಾ ಮಕ್ಕಳಿಗೆ ನನ್ನ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರ/ಹೋರಾಟಗಾರ್ತಿ ವಿಷಯದ ಮೇಲೆ ಭಾಷಣ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮಕ್ಕಳು ಒಬ್ಬ ಸ್ವಾತಂತ್ರ್ಯ ಹೋರಾಟಗಾರರ ಕುರಿತಾಗಿ ಭಾಷಣ ಇರಬೇಕು. ಭಾಷಣವನ್ನು ಚಿತ್ರೀಕರಿಸಿ ವಿಡಿಯೊ ರೂಪದಲ್ಲಿ https://forms.gle/4AUa4zwdo8vbsSEr5 ಮೂಲಕ ಕಳಿಸಬೇಕು. ವಿಡಿಯೊ ಕಳಿಸುವಾಗ ಲಿಂಕ್‌ನಲ್ಲಿ ಕೇಳಿರುವ ಅರ್ಜಿಯಲ್ಲಿ ಸ್ಥಳ, ಹೆಸರು, ತರಗತಿ, ಶಾಲಾ ವಿವರಗಳ ವಿವರಗಳನ್ನು ತುಂಬಿ ನಂತರ ವಿಡಿಯೋವನ್ನು ಅಪ್‌ಲೋಡ್ ಮಾಡಬೇಕು. ವಿಡಿಯೊಗಳನ್ನು ಸ್ವೀಕರಿಸಲು ಆ.12 ಕಡೆ ದಿನಾಂಕ ಇದ್ದು, ಆ.25ಕ್ಕೆ ಫಲಿತಾಂಶ ಪ್ರಕಟಣೆ ಮಾಡಲಾಗುವುದು. ಪ್ರಥಮ ಬಹುಮಾನ 5,000 ರು, ದ್ವಿತೀಯ 3,000 ರು. ತೃತೀಯ 1,000 ರು. ನಿಗದಿ ಮಾಡಲಾ ಗಿದೆ. 5ನೇ ತರಗತಿಯಿಂದ 7ನೇ ತರಗತಿಯವರೆಗೆ ಮತ್ತು 8ನೇ ತರಗತಿಯಿಂದ 10ನೇ ತರಗತಿಯವರೆಗೆ 2 ವಿಭಾಗಗಳಲ್ಲಿ ಸ್ಪರ್ಧೆ ಇದೆ.

ಸಮಾಚಾರ ಸಣ್ಣದಲ್ಲ

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ವಿವಿಯ ಎಲ್ಲಾ ಸ್ನಾತಕ, ಸ್ನಾತಕೋತ್ತರ ವಿಭಾಗಗಳು, ಕೇಂದ್ರಗಳು, ಘಟಕ ಮಹಾವಿದ್ಯಾಲಯಗಳಿಗೆ 2025-26ನೇ ಸಾಲಿಗೆ ಕೋರ್ಸ್‌ಗಳಿಗೆ ಕಾರ್ಯಭಾರದ ಅಗತ್ಯತೆಗೆ ಅನುಗುಣವಾಗಿ ಬೋಧನೆ ಮಾಡಲು ಖಾಲಿ ಇರುವ ಪೂರ್ಣಾವಧಿ / ಅಲ್ಪಾವಧಿ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆಗಸ್ಟ್ 9 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಹತೆ, ಅರ್ಜಿ ನಮೂನೆ, ಶುಲ್ಕ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು / ಆಡಳಿತಾಧಿಕಾರಿಗಳು ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರುಗಳನ್ನು ಸಂಪರ್ಕಿಸಬಹುದು ಅಥವಾ ಕರ್ನಾಟಕ ವಿವಿಯ ಅಂತರ್ಜಾಲ ಡಿಡಿಡಿ.ಡಿಥಿ.ಚ್ಚ.ಜ್ನಿ ಮುಂಖಾತರ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಣ ಗುಣಮಟ್ಟ ಸುಧಾರಿಸಿ : ಖರ್ಗೆ

ಬೆಂಗಳೂರು: ಶೈಕ್ಷಣಿಕವಾಗಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿನ ಮೆಟ್ರಿಕ್ ಫಲಿತಾಂಶದಲ್ಲಿ ಅತಿ ಕಡಿಮೆ ಶ್ರೇಣಿ

ದೊರೆತ್ತಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಕಾರ್ಯಕ್ರಮ ಗಳನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ 14 ಹೊಸ ಶಿಕ್ಷಣ ಕ್ಷೇತ್ರಗಳನ್ನು ಸೃಜಿಸಲು ಕ್ರಮ ಕೈಗೊಳ್ಳಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ಕೋರಿದ್ದಾರೆ. ಬೀದರ್ (ಚಿಟಗುಪ್ಪ ಮತ್ತು ಕಮಲ ನಗರ), ಕಲಬುರಗಿ (ಕಾಳಗಿ, ಕಮಲಪುರ ಮತ್ತು ಯಡ್ರಾಮಿ), ಯಾದಗಿರಿ (ಗುರಮಿಠಕಲ್), ಯಾದ ಗಿರಿ (ಹುಣಸಗಿ), ರಾಯಚೂರು (ಅರಕೇರಾ, ಸಿರವಾರ ಮತ್ತು ಮಸ್ಕಿ), ಕೊಪ್ಪಳ (ಕಾರಟಗಿ ಮತ್ತು ಕುಕನೂರು), ಬಳ್ಳಾರಿ (ಕುರುಗೋಡು), ವಿಜಯನಗರ (ಕೊಟ್ಟೂರು) ಕೇಂದ್ರಗಳಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ ಹಾಗೂ ಫಲಿತಾಂಶವನ್ನು ಹೆಚ್ಚಿಸುವ ದೃಷ್ಟಿಯಿಂದ ಹೊಸ ಶಿಕ್ಷಣ ಕ್ಷೇತ್ರಗಳನ್ನು ಜರೂರಾಗಿ ಸೃಜಿಸುವಂತೆ ಸಚಿವ ಪ್ರಿಯಾಂಕ್ ಖರ್ಗೆ ಕೋರಿದ್ದಾರೆ.

ವಿಶೇಷ ರಿಯಾಯಿತಿ ಮಾರಾಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಆಗಸ್ಟ್‌ನಲ್ಲಿ ವಿಶೇಷ ರಿಯಾಯಿತಿ ಮಾರಾಟವನ್ನು ಪುಸ್ತಕ ಪ್ರೇಮಿ ಗಳಗನಾಥರ ಹೆಸರಿನ ತನ್ನ ಪುಸ್ತಕ ಮಳಿಗೆಯಲ್ಲಿ ಆಯೋಜಿಸಿದೆ ಎಂದು ಪ್ರಕಟಣೆ ತಿಳಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಇದುವರೆಗೂ 1800ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿದ್ದು, ಕನ್ನಡಿಗರಿಗೆ ಈಮ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ನಾಲ್ಕು ತಿಂಗಳುಗಳ ಕಾಲ ವಿಶೇಷ ರಿಯಾಯಿತಿ ಮಾರಾಟವನ್ನು ಆಯೋಜಿಸಿದೆ. ಈ ಹಿನ್ನೆಲೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳ ಮೇಲೆ ಶೇ.10ರಿಂದ 75ರವರೆಗೆ ವಿಶೇಷ ರಿಯಾಯಿತಿಯನ್ನು ನೀಡಲಿದ್ದು, ಪರಿಷತ್ತಿನ ಕಾರ್ಯ ನಿರ್ವಹಣೆಯ ದಿನಗಳಲ್ಲಿ ಈ ವಿಶೇಷ ರಿಯಾಯಿತಿಯನ್ನು ಪಡೆಯಬಹುದು ಎಂದು ತಿಳಿಸಿರುವ ಅವರು ಕನ್ನಡಿಗರು ಇದರ ಸದುಪಯೋಗವನ್ನು ಪಡೆಯ ಬೇಕು ಎಂದು ವಿನಂತಿಸಿಕೊಂಡಿದ್ದಾರೆ.

ಯುವಕನ ಕೊಲೆ: ಮೂವರ ಬಂಧನ

ಬೆಂಗಳೂರು: ಮದ್ಯದ ಅಮಲಿನಲ್ಲಿದ್ದಾಗ, ಬೈಕ್‌ನಲ್ಲಿ ತೆರಳುತ್ತಿದ್ದ ಯುವಕನನ್ನು ಅಡ್ಡಗಟ್ಟಿ ಕೊಲೆ ಮಾಡಿರುವ ಘಟನೆ ಬ್ಯಾಡರಹಳ್ಳಿಯ ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿ ಭಾನುವಾರ ತಡರಾತ್ರಿ, ನಡೆದಿದೆ. ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶಾಲ್, ಹೇಮಂತ್ ಹಾಗೂ ಪುನೀತ್ ಅವರನ್ನು ಬಂಧಿಸಲಾಗಿದೆ ಎಂದು ಬ್ಯಾಡರಹಳ್ಳಿ ಠಾಣೆಯ ಪೊಲೀಸರು ತಿಳಿಸಿದರು. ಪ್ರೇಮ್ ಅವರ ಪೋಷಕರು ನೀಡಿದ ದೂರು ಆಧರಿಸಿ ಕೊಲೆ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಬಂಧಿತರ ಪೈಕಿ ವಿಶಾಲ್ ಎಂಬಾತ ಬ್ಯಾಡರಹಳ್ಳಿ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಮತ್ತೊಬ್ಬ ರೌಡಿಶೀಟರ್ ನವೀನ್ ಎಂಬಾತ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

8 ತಿಂಗಳಲ್ಲಿ 1,09,000 ಜಮೀನುಗಳಿಗೆ ದರ್ಖಾಸ್ತು ಪೋಡಿ | ಕಂದಾಯ ಗ್ರಾಮಗಳ 1.62ಲಕ್ಷ ಕುಟುಂಬಗಳಿಗೆ ಶೀಘ್ರ ಹಕ್ಕುಪತ್ರ

ಇನ್ನೈದು ತಿಂಗಳಲ್ಲಿ ಎರಡು ಲಕ್ಷ ಜಮೀನಿಗೆ ದರ್ಖಾಸ್ತು ಪೋಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರಕಾರ ರೈತರಿಗೆ ನೀಡಿದ ಸರಳೀಕೃತ ದರ್ಖಾಸ್ತು ಪೋಡಿ 'ನನ್ನ ಭೂಮಿ ಗ್ಯಾರಂಟಿ ಅಭಿಯಾನ' ವೇಗ ಪಡೆದುಕೊಂಡಿದ್ದು, ಈವರೆಗೆ ಕೇವಲ 8 ತಿಂಗಳಲ್ಲಿ 1,09,000 ಜಮೀನುಗಳನ್ನು ಅಳತೆಗೆ ತೆಗೆದುಕೊಳ್ಳಲಾಗಿದೆ. ಮುಂದಿನ ಡಿಸೆಂಬರ್‌ನೊಳಗೆ ಎರಡು ಲಕ್ಷ ಜಮೀನುಗಳಿಗೆ ಪೋಡಿ ಮಾಡಿಕೊಡುವ ಗುರಿ ಹೊಂದಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪ್ರಗತಿ ಪರಿಶೀಲನಾ ಸಭೆ ಬಳಿಕ ಮಾತನಾಡಿದ ಅವರು, ಹಿಂದಿನ ಸರಕಾರದ ಅವಧಿಯಲ್ಲಿ ಮೂರು ವರ್ಷಕ್ಕೆ ಕೇವಲ 5,801 ಪ್ರಕರಣಗಳಲ್ಲಿ ಮಾತ್ರ ರೈತರಿಗೆ ಪೋಡಿ ದುರಸ್ಥಿ ಮಾಡಿಕೊಡಲಾಗಿತ್ತು. ಆದರೆ ಪ್ರಸ್ತುತ ಕಳೆದ ಡಿಸೆಂಬರ್ ತಿಂಗಳಿನಲ್ಲಿ ನನ್ನ ಭೂಮಿ ಹೆಸರಿನಲ್ಲಿ ಪೋಡಿ ಅಭಿಯಾನ ಕೈಗೊಂಡು ಕೇವಲ 9 ತಿಂಗಳಲ್ಲಿ 1,09,000 ಜಮೀನುಗಳನ್ನು ಅಳತೆಗೆ ತೆಗೆದುಕೊಳ್ಳಲಾಗಿದೆ. ಮೂರು-ನಾಲ್ಕು ದಶಕಗಳ ಹಿಂದೆ ರೈತರಿಗೆ ದರ್ಖಾಸ್ತಿನಲ್ಲಿ ಮಂಜೂರಾಗಿದ್ದ ಜಮೀನಿಗೆ ಈವರೆಗೆ ಪೋಡಿ ಆಗಿಲ್ಲ. ಇದರಿಂದ ರೈತರು ಸಾಕಷ್ಟು ಸಮಸ್ಯೆ ಎದುರಿಸಿದ್ದರು. ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಸಲುವಾಗಿಯೇ ನನ್ನ ಭೂಮಿ ಹೆಸರಿನಲ್ಲಿ ಪೋಡಿ ಅಭಿಯಾನ ಆರಂಭಿಸಲಾಯಿತು. ಈ ಅಭಿಯಾನದ ಅಡಿ ಜನರ ಅರ್ಜಿಗೆ ಕಾಯದೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ಸರ್ಕಾರವೇ ರೈತರ ಮನೆ ಬಾಗಿಲಿಗೆ ತೆರಳಿ ಪೋಡಿ ಮಾಡಿಕೊಡುತ್ತಿದೆ ಎಂದರು.

ಹಾಡಿ, ಹಟ್ಟಿ, ತಾಂಡಾ, ಇಂತಹ ದಾಖಲೆ ರಹಿತ ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕೆಲಸವನ್ನು ಸರಕಾರ ಕಳೆದ ಎರಡು ವರ್ಷಗಳಿಂದ ಅಭಿಯಾನ ಮಾದರಿಯಲ್ಲಿ ಮುನ್ನಡೆಸುತ್ತಿದೆ. ಸಾಂಪ್ರದಾಯಿಕ ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ 2017ರಲ್ಲೇ ಅಂದಿನ ಕಾಂಗ್ರೆಸ್ ಸರಕಾರ ಸೂಕ್ತ ಕಾನೂನು ರಚಿಸಿತ್ತು. ಆದರೆ, ಹಿಂದಿನ ಸರಕಾರ ಈ ಕಾನೂನನ್ನು 2023ರವರೆಗೆ ಸಮರ್ಪಕವಾಗಿ ಅನುಷ್ಠಾನಗೊಳಿಸಿರಲ್ಲ, ಈ ಅವಧಿಯಲ್ಲಿ ಕೇವಲ 2,626 ಗ್ರಾಮಗಳನ್ನು ಮಾತ್ರ ಗುರುತಿಸಲಾಗಿತ್ತು. 1500 ಗ್ರಾಮಗಳನ್ನು ಮಾತ್ರ ಕಂದಾಯ ಗ್ರಾಮ ಎಂದು ಘೋಷಿಸಲಾಗಿತ್ತು. 2023ರಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಹಿಂದಿನ ಸರಕಾರದ ಅವಧಿಯಲ್ಲಿ ಅರ್ಹತೆ ಇದ್ದಾಗ್ಯೂ ಬಿಟ್ಟುಹೋಗಿದ್ದ 4,250 ಅರ್ಹ ದಾಖಲೆ ರಹಿತ ಜನ ವಸತಿ ಪ್ರದೇಶಗಳನ್ನು ಗುರುತಿಸಲಾಗಿದೆ. ಡಿಸೆಂಬರ್ ತಿಂಗಳ ಒಳಗೆ ಇಷ್ಟೂ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಸೂಚಿಸಲಾಗಿದೆ ಎಂದರು.

ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ವಿಪತ್ತು ನಿರ್ವಹಣಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಮುನೀಶ್ ಮೌದ್ಗಿಲ್, ಬೆಂಗಳೂರು ಕಂದಾಯ ವಿಭಾಗ ಆಯುಕ್ತರಾದ ಆದಿತ್ಯ ಆಮ್ಲನ್ ಬಿಶ್ವಾಸ್ ಹಾಗೂ ಕಂದಾಯ ಆಯುಕ್ತರಾದ ಸುನೀಲ್ ಕುಮಾರ್ ಉಪಸ್ಥಿತರಿದ್ದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿದರು.

ಜಲಾಶಯಗಳ ನೀರಿನ ನಿರ್ವಹಣೆ ಬಗ್ಗೆ ಎಚ್ಚರವಿರಲಿ ಈ ವರ್ಷ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗಿದೆ. ಒಂದೆರಡು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿದ್ದರೆ, 6-7 ಜಿಲ್ಲೆಗಳಲ್ಲಿ ವಾಡಿಕೆಗಿಂತ ತುಸು ಕಡಿಮೆ ಮಳೆಯಾಗಿದೆ. ಕಡಿಮೆ ಮಳೆಯಾಗಿರುವ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಮುಂದಿನ ದಿನಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗುವ ಸೂಚನೆ ಇದೆ.ಪ್ರಸ್ತುತ ಜಲಾಶಯಗಳಿಗೆ ಒಳಹರಿವು ಉತ್ತಮವಾಗಿದೆ.ಜಿಲ್ಲಾಧಿಕಾರಿಗಳು ಜಲಾಶಯಗಳಲ್ಲಿನ ನೀರಿನ ಬಳಕೆಯ ಮೇಲೆ ಹೆಚ್ಚು ನಿಗಾವಹಿಸುವುದು ಉತ್ತಮ.

- ಕೃಷ್ಣಬೈರೇಗೌಡ, ಕಂದಾಯ ಸಚಿವ

ಪೌತಿ ಖಾತೆ ಆಂದೋಲನಕ್ಕೆ ವೇಗ ತುಂಬಲು ಸೂಚನೆ

ರಾಜ್ಯದಲ್ಲಿ 52 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿ ಮುಂದುವರೆಯುತ್ತಿದೆ.ಮೃತರ ಹೆಸರಿನಲ್ಲಿರುವ ಜಮೀನುಗಳಿಗೆ ಪಿಎಂ ಕಿಸಾನ್, ಹನಿ ನೀರಾವರಿ ಹಾಗೂ ಯಂತ್ರೋಪಕರಣ ಖರೀದಿ ಸಬ್ಸಿಡಿ ನೀಡದಂತೆ ಕೇಂದ್ರ ಸರಕಾರ ಆದೇಶ ಹೊರಡಿಸಿದೆ. ನಾವೇ ರೈತರ ಮನೆ ಬಾಗಿಲಿಗೆ ತೆರಳಿ ಅಭಿಯಾನ ಮಾದರಿಯಲ್ಲಿ ಪೌತಿ ಖಾತೆ ಮಾಡಿಕೊಡುತ್ತಿದ್ದೇವೆ. ಈವರೆಗೆ 2.30 ಲಕ್ಷ ಜಮೀನುಗಳನ್ನು ಪೌತಿ ಖಾತೆ ಮಾಡಿಕೊಡಲಾಗಿದೆ. ಇ-ಪೌತಿ ಆಂದೋಲನದಲ್ಲಿ ಪ್ರಗತಿ ಸಾಧಿಸುವ ವಿಎ ಗಳಿಗೆ ಪ್ರತಿ ಪೌತಿ ಪ್ರಕರಣಕ್ಕೆ ಆರು ರು. ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಶ್ರೀಚರಣ್ ಕೋ ಆಪರೇಟಿವ್ ಬ್ಯಾಂಕ್‌ಗೆ 2.92 ಕೋಟಿ ಲಾಭ

ನಗರದ ಶಂಕರಪುರ ಪಂಪ ಮಹಾಕವಿ ರಸ್ತೆಯಲ್ಲಿರುವ ವಿದ್ಯಾಶ್ರೀವಿದ್ಯಾವಿಹಾರ ಸಭಾಂಗಣದಲ್ಲಿ ಭಾನುವಾರ ನಡೆದ 29ನೇ ಸರ್ವ ಸದಸ್ಯರ ಸಭೆಯನ್ನು ಬ್ಯಾಂಕ್‌ನ ಸಂಸ್ಥಾಪಕ, ಅಧ್ಯಕ್ಷ ಬಿ.ವಿ. ದ್ವಾರಕಾನಾಥ್ , ನಿಮ್ಹಾನ್ಸ್ ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕ ಪದ್ಮಶ್ರೀ ಡಾ.ಸಿ.ಆರ್.ಚಂದ್ರಶೇಖರ್ ಉದ್ಘಾಟಿಸಿದರು.

ಬೆಂಗಳೂರು: ನಗರದ ಬಸವನಗುಡಿಯ ಶ್ರೀ ಚರಣ್ ಕೋ- ಆಪರೇಟಿವ್ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಜುಲೈ 31ರ ತ್ರೈಮಾಸಿಕದಲ್ಲಿ 2.92 ಕೋಟಿ ಲಾಭ ಗಳಿಸಿದೆ.

ನಗರದ ಶಂಕರಪುರ ಪಂಪ ಮಹಾಕವಿ ರಸ್ತೆಯಲ್ಲಿರುವ ವಿದ್ಯಾಶ್ರೀವಿದ್ಯಾವಿಹಾರ ಸಭಾಂಗಣದಲ್ಲಿ ಭಾನುವಾರ ನಡೆದ 29ನೇ ಸರ್ವ ಸದಸ್ಯರ ಸಭೆಯಲ್ಲಿ ಬ್ಯಾಂಕ್‌ನ ಸಂಸ್ಥಾಪಕ, ಅಧ್ಯಕ್ಷ ಬಿ.ವಿ. ದ್ವಾರಕಾನಾಥ್ ಮಾತನಾಡಿ, ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ 2.89 ಕೋಟಿ ರು. ಲಾಭ ಗಳಿಸಿತ್ತು. 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 95ಕ್ಕಿತ ಹೆಚ್ಚ ಅಂಕ ಪಡೆದ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಇದೇ ವೇಳೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ನಿಮ್ಹಾನ್ಸ್ ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕ ಪದ್ಮಶ್ರೀ ಡಾ.ಸಿ.ಆರ್. ಚಂದ್ರಶೇಖರ್ ಮಾತನಾಡಿ, ಅಂಕ,ಹಣ ಮತ್ತು ವಸ್ತುಗಳ ಹಿಂದೆ ಓಡುವುದು ಬಿಡಬೇಕು. ಹತ್ತು ನಿಮಿಷ ಕೂತಿದ್ದರೆ ಹತ್ತು ನಿಮಿಷ ಓಡಾಡಿ. ಸದಾ ಕ್ರಿಯಾಶೀಲವಾಗಿರಿ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಬೆಂಗಳೂರಿನ ಶ್ರೀನಿವಾಸ್ ನಗರದಲ್ಲಿ ಅರವಿಂದ್ ಯುನಿವರ್ಸ್ ಕರಾಟೆ ಟ್ರೈನಿಂಗ್ ಸ್ಕೂಲ್ ನಲ್ಲಿ ತರಬೇತಿ ಪಡೆದ ಮಕ್ಕಳಿಗೆ ಬೆಲ್ಟ್ ಮತ್ತು ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ರಿಪಬ್ಲಿಕ್ ಚಾನೆಲ್ ಹಿರಿಯ ನಿರೂಪಕಿ ಸ್ಮಿತಾ ರಂಗನಾಥ್, ಕೆಪಿಟಿಸಿಎಲ್ ಎಂಜಿನಿಯರ್ ಶಿಲ್ಪ, ಕರಾಟೆ ಮಾಸ್ಟರ್ ದೊಡ್ಡಯ್ಯ ದಡದಪುರ ಇದ್ದರು.

2 ಕಿ.ಮೀ.ಗಿಂತ ಕಡಿಮೆ ದೂರ ಪ್ರಯಾಣಿಸಲು 100ಕ್ಕೂ ಅಧಿಕ ದರ ಪಾವತಿ

ಆಟೋ ದರ ಏರಿಕೆಯಾದರೂ ದುಪ್ಪಟ್ಟು ವಸೂಲಿ ಮಾಡುತ್ತಿರುವ ಚಾಲಕರು

ಬೆಂಗಳೂರು: ನಗರದಲ್ಲಿ ಆಟೋ ಪ್ರಯಾಣ ದರದಲ್ಲಿ ಏರಿಕೆಯಾಗಿದ್ದರೂ ಹೊಸ ದರಗಳನ್ನು ಅಳವಡಿಸಿಕೊಳ್ಳಲು ಆಟೋ ಚಾಲಕರು ನಿರಾಕರಿಸುತ್ತಿದ್ದು, ಪ್ರಯಾಣಿಕರಿಂದ ದುಪ್ಪಟ್ಟು ಹಣ ವಸೂಲಿ ಮಾಡುವುದನ್ನು ಮುಂದುವರಿಸಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿದೆ.

ನಗರದ ಸಾರ್ವಜನಿಕ ಸಾರಿಗೆಗಳ ದರ ಹೆಚ್ಚಾಗಿದ್ದು,ಆಟೋ ಪ್ರಯಾಣದರವನ್ನು ಹೆಚ್ಚಿಸಬೇಕು ಎನ್ನುವ ತ್ತಡದ ಬೆನ್ನಲ್ಲೇ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರು ಕಳೆದ ಜು.14 ರಂದು ಆಟೋ ಪ್ರಯಾಣ ದರ ಹೆಚ್ಚಿಸಿ ಆದೇಶಿಸಿದ್ದರು. ಆದೇಶದ ಪ್ರಕಾರ ಮೊದಲ 2 ಕಿಮೀ ಪ್ರಯಾಣದ ಮೊತ್ತವು 30 ರು.ನಿಂದ 36 ರು.ಗೆ ಹೆಚ್ಚಳವಾಗಿದ್ದು, ಉಳಿದಂತೆ ನಂತರದ ಪ್ರತಿ ಕಿಮೀ ದರವನ್ನು 15 ರು.ನಿಂದ 18ರು.ಗೆ ಹೆಚ್ಚಿಸಲಾಗಿದೆ. ಕಾಯುವಿಕೆ ದರವನ್ನು ಮೊದಲ 5 ನಿಮಿಷಕ್ಕೆ ಉಚಿತ ಮತ್ತು 5 ನಿಮಿಷದ ನಂತರದ ಪ್ರತಿ 15 ನಿಮಿಷದ ದರವನ್ನು 5 ರು.ನಿಂದ 10 ರು.ಗೆ, ಪ್ರಯಾಣಿಕರು 20 ಕೆಜಿ ಲಗೇಜನ್ನು ಯಾವುದೇ ಶುಲ್ಕವಿಲ್ಲದೆ ಆಟೋದಲ್ಲಿ ತೆಗೆದುಕೊಂಡು ಹೋಗಬಹುದಾಗಿದ್ದು, 20ರಿಂದ 50 ಕೆಜಿ ಲಗೇಜಿಗೆ ಪ್ರತಿ 20 ಕೆಜಿ ಲಗೇಜಿಗೆ 10 ರು.ನಂತೆ ಪಾವತಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಆದರೆ, ದರ ಏರಿಕೆಯಾಗಿದ್ದರೂ ಚಾಲಕರು ಮಾತ್ರ ಹೊಸ ದರವನ್ನು ಅಳವಡಿಸಿಕೊಳ್ಳಲು ಸಿದ್ಧರಿಲ್ಲ. ಮೀಟರ್ ದರ ಅನುಸರಿಸುತ್ತಿಲ್ಲ. ಈಗಲೂ ಹೆಚ್ಚಿನ ಹಣವನ್ನು ಪಾವತಿಸುತ್ತಿದ್ದೇವೆ. ಅಪ್ಲಿಕೇಶನ್‌ಗಳು ಪ್ರತಿ ಪ್ರಯಾಣಕ್ಕೆ ಕನಿಷ್ಠ 40 ರು. ದರವನ್ನು ಹೆಚ್ಚಿಸಿವೆ. ಕಡಿಮೆ ದೂರಕ್ಕೆ ಆಟೋಗಳನ್ನು ಹುಡುಕುವುದು ಇನ್ನೂ ಕಷ್ಟ . ಸಣ್ಣ ಟ್ರಿಪ್ ಗಳನ್ನು ಆಟೋ ಚಾಲಕರು ನಿರಾಕರಿಸುತ್ತಾರೆ. ಈ ವೇಳೆ ಆ್ಯಪ್ ಗಳಲ್ಲಿ ಚಾಲಕರಿಗೆ ಕನಿಷ್ಠ 30 ರು. ಟಿಪ್ ನೀಡಬೇಕಾಗುತ್ತದೆ. ಟಿಪ್ ನೀಡಿದ ಕೆಲವೇ ನಿಮಿಷಗಳಲ್ಲಿ ಆಟೋ ಬುಕ್ ಆಗುತ್ತದೆ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಎಲ್ಲಾ ಅಪ್ಲಿಕೇಶನ್‌ಗಳಲ್ಲಿಯೂ ಪ್ರಯಾಣದರವು ದುಪ್ಪಟ್ಟಾಗಿದ್ದು, 2 ಕಿ.ಮೀ.ಗಿಂತ ಕಡಿಮೆ ದೂರ ಪ್ರಯಾಣಿಸಲು 100ಕ್ಕೂ ಅಧಿಕ ದರವನ್ನು ಪಾವತಿಸಬೇಕಾಗಿದೆ. ಮೊದಲು 50-60ರು.ಗಳಲ್ಲಿ ಆಟೋಗಳು ದೊರೆಯುತ್ತಿದ್ದವು. ಆದರೆ ಈಗ 3ಕಿ.ಮೀನಿಂದ 4 ಕಿ.ಮೀ ಪ್ರಯಾಣಿಸಲೂ 130 ರು. ನೀಡಬೇಕಾಗಿದೆ. ಹೊಸ ದರ ಕೇವಲ 72 ರು.ಗಳಾಗಿರಬೇಕು. ಆದರೆ ಆಟೋದವರು ದುಪ್ಪಟ್ಟು ಹಣ ಪೀಕುತ್ತಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿದೆ.

ಚಾಲಕರು ಆ್ಯಪ್‌ಗಳ ಬಳಕೆ

ಆಟೋ ರಿಕ್ಷಾ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ರುದ್ರಮೂರ್ತಿ ಮಾತನಾಡಿ, ನಮ್ಮನ್ನು ಸಂಪರ್ಕಿಸದೆ ದರ ಪರಿಷ್ಕರಣೆ ಮಾಡಲಾಗಿದೆ. ಹೀಗಾಗಿ ಶೇ.90ರಷ್ಟು ಆಟೋ ಚಾಲಕರು ಆ್ಯಪ್ ಗಳನ್ನು ಅನುಸರಿಸುತ್ತಿದ್ದಾರೆ. ಇದರಿಂದ ಅವರಿಗೆ ಆದಾಯ ನೀಡುತ್ತಿದ್ದಾರೆ ಎಂದರು.

ಸ್ವಾತಂತ್ರ್ಯೋತ್ಸವ ಪುಷ್ಪಪ್ರದರ್ಶನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಕೋಟೆ ಪ್ರತಿಕೃತಿ

ಬೆಂಗಳೂರು: ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಈ ಬಾರಿಯ ಸ್ವಾತಂತ್ರ್ಯೋತ್ಸವದ 218ನೇ ಪುಷ್ಪಪ್ರದರ್ಶನಕ್ಕೆ ಭರ್ಜರಿ ಸಿದ್ಧತೆಗಳು ನಡೆದಿದ್ದು, ಕಿತ್ತೂರು ಕೋಟೆ ಮತ್ತು ರಾಣಿ ಚೆನ್ನಮ್ಮನವರ ಐಕ್ಯ ಮಂಟಪದ ಪ್ರತಿ ಕೃತಿಗಳನ್ನು ನಿರ್ಮಿಸಲಾಗುತ್ತಿದೆ.

ಆಗಸ್ಟ್ 7ರಿಂದ 15ರವರೆಗೆ ನಡೆಯಲಿರುವ ಸ್ವಾತಂತ್ರ್ಯೋತ್ಸವದ ಪುಷ್ಪಪ್ರದರ್ಶನಕ್ಕೆ ಭರದಿಂದ ಸಿದ್ಧತೆ ಸಾಗಿದ್ದು, ಲಾಲ್ ಬಾಗ್ ಗಾಜಿನ ಮನೆಯಲ್ಲಿ ಕಿತ್ತೂರು ಕೋಟೆ, ಕಿತ್ತೂರು ರಾಣಿ ಚೆನ್ನಮ್ಮನವರ ಐಕ್ಯ ಮಂಟಪಗಳನ್ನು ರಚಿಸಲಾಗುತ್ತಿದೆ. ಈ ಬಾರಿಯ ಪ್ರದರ್ಶನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣನ ಹೋರಾಟ ನೆನಪಿಸುವ 18 ಅಡಿ ಎತ್ತರ ಮತ್ತು 32 ಅಡಿ ಅಗಲದ ಕಿತ್ತೂರಿನ ಕೋಟೆ ನಿರ್ಮಾಣಗೊಳ್ಳುತ್ತಿದೆ.

ಕೋಟೆಯ ಜತೆಗೆ, ಐಕ್ಯ ಮಂಟಪ ಮತ್ತಿತರ ಪ್ರತಿಕೃತಿಗಳನ್ನು ನಿರ್ಮಿಸಲು ರಾಜ್ಯದ ನಾನಾ ಭಾಗಗಳಿಂದ ಹೂಗಳನ್ನು ತರಿಸಲಾಗುತ್ತಿದ್ದು, ಉದ್ಯಾನದ ಪ್ರವೇಶ ದ್ವಾರಗಳು, ಕೆರೆಯ ಸುತ್ತಮುತ್ತಲಿನ ಪ್ರದೇಶಗಳು ಆಕರ್ಷಿಸಲಿವೆ.

ಅಲ್ಲಲ್ಲಿ ಗುಚ್ಛ ಮಾದರಿಯಲ್ಲಿ ಬಣ್ಣ ಬಣ್ಣದ ಅಲಂಕಾರಿಕ ಹೂವಿನ ಸಸಿಗಳನ್ನು ಬೆಳೆಸಲಾಗಿದೆ. ಸ್ವಚ್ಛತೆ, ಸಸಿಗಳನ್ನು ಬೆಳೆಸುವುದು, ಒಣಗಿದ, ಬೀಳುವ ಹಂತದಲ್ಲಿರುವ ಮರದ ರೆಂಬೆ, ಕೊಂಬೆಗಳನ್ನು ತೆರವುಗೊಳಿಸುವುದು, ಜೇನುಗೂಡುಗಳನ್ನು ಪತ್ತೆ ಮಾಡಿ ರಕ್ಷಣೆ ನೀಡುವುದೂ ಸೇರಿದಂತೆ ಕೆಲಸ ಸಾಗಿದೆ.

ಪ್ರದರ್ಶನಕ್ಕೆ ಬರುವವರಿಗೆ ಕುಡಿಯುವ ನೀರು, ಮೊಬೈಲ್ ಶೌಚಾಲಯಗಳೂ ಸೇರಿದಂತೆ ನಾನಾ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಕಳೆದ ಬಾರಿಯಂತೆ ಈ ಬಾರಿಯೂ ವಯಸ್ಕರಿಗೆ ಸಾಮಾನ್ಯ ದಿನಗಳಲ್ಲಿ 80 ರು. ಹಾಗೂ ರಜಾ ದಿನಗಳಲ್ಲಿ100 ರು. ದರ ನಿಗದಿಪಡಿಸಲಾಗಿದೆ.

ಬೋನ್ಸಾಯ್ ಸೊಬಗು

ಈ ಬಾರಿಯ ಪುಷ್ಪ ಪ್ರದರ್ಶನದಲ್ಲಿ ಬೋನ್ಸಾಯ್ ವನ ಕಣ್ಮನ ಸೆಳೆಯಲಿದ್ದು, ಬೋನ್ಸಾಯ್ ವನವನ್ನು ವಿಶೇಷವಾಗಿ ನವೀಕರಿಸಿ ವಿನ್ಯಾಸಗೊಳಿಸಲಾಗಿದೆ. ನಾನಾ ರೀತಿಯ ಬೋನ್ಸಾಯ್ ಸಸಿಗಳನ್ನು ಬೆಳೆಸಲಾಗಿದೆ. ಪ್ರದರ್ಶನದಲ್ಲಿಎಂದಿನಂತೆ ಆಂಥೋರಿಯಂ ಹೂಗಳು, ಗುಲಾಬಿ, ಜರ್ಬೇರಾ, ಆರ್ಕಿಡ್, ರೆಡ್ಹಾಟ್ ಪೋಕರ್, ಲಿಲ್ಲಿ, ಪೂಷಿಯಾ, ಅಗಪಾಂಥಸ್, ಸೈಕ್ಲೊಮನ್, ಕ್ಯಾಲಾಲಿಲ್ಲಿ, ಸುಗಂಧ ರಾಜ ಸೇರಿದಂತೆ ಶೀತ ವಲಯದ ಹೂಗಳು ಆಕರ್ಷಿಸಲಿದೆ. ಕುಂಡಗಳಲ್ಲಿಅರಳಿದ ದೇಶ-ವಿದೇಶಗಳ ಹತ್ತಾರು ಬಗೆಯ ಹೂಗಳು, ಬೋಗನ್ವಿಲ್ಲಾದ ಹೂ ಗಿಡಗಳು ಪ್ರದರ್ಶನಗೊಳ್ಳಲಿವೆ. ಇಕೆಬಾನ ಹಾಗೂ ತರಕಾರಿ ಕೆತ್ತನೆ ಪ್ರದರ್ಶನ, ತೋಟಗಳ ಸ್ಪರ್ಧೆ ಮತ್ತು ನಾನಾ ಹೂವಿನ ಜೋಡಣೆ ಕಲೆಗಳ ಪ್ರದರ್ಶನವೂ ಇಲ್ಲಿರಲಿದೆ.

ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿ

ರಸ್ತೆಗಳು ಜಲಾವೃತವಾಗುವುದು ತಪ್ಪಿಸಿ

ಬೆಂಗಳೂರು: ನಗರದಲ್ಲಿ ಮಳೆಗಾಲದ ವೇಳೆ ರಸ್ತೆಗಳಲ್ಲಿ ಜಲಾವೃತ ಆಗುವುದನ್ನು ತಪ್ಪಿಸ ಬೇಕು ಎಂದು ಅಧಿಕಾರಿಗಳಿಗೆ ಮುಖ್ಯ ಆಯು ಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ನಗರದಲ್ಲಿ ವಿವಿಧ ವಿಷಯಗಳ ಸಮಸ್ಯೆ ಗಳಿಗೆ ಸಂಬಂಧಿಸಿದಂತೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿ, ಮಳೆಗಾಲದ ವೇಳೆ ಹೊರ ವರ್ತುಲ ರಸ್ತೆಗಳಲ್ಲಿ ಎಲ್ಲೆಲ್ಲಿ ಜಲಾವೃತವಾಗುತ್ತದೆಯೋ ಆ ಸ್ಥಳಗಳಲ್ಲಿ ಕೂಡಲೆ ಜಲಾವೃತವಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ನಗರದಲ್ಲಿ ಪ್ರಮುಖವಾಗಿ ಹೆಬ್ಬಾಳ ಜಂಕ್ಷನ್, ನಾಗವಾರ ಜಂಕ್ಷನ್, ವಿದ್ಯಾಶಿಲ್ಪ ಜಂಕ್ಷನ್, ರೂಪೇನ ಅಗ್ರಹಾರ, ಮಾರತಹಳ್ಳಿ ಪೊಲೀಸ್ ಠಾಣೆ, ಕಾರ್ತಿಕ್ ನಗರ, ಕಸ್ತೂರಿ ನಗರ ಮೇಲ್ಸೇತುವೆ, ಪ್ಯಾಲೆಸ್ ಗುಟ್ಟಹಳ್ಳಿ, ಪಣತ್ತೂರು ರೈಲ್ವೆ ಕೆಳಸೇತುವೆ, ನಾಯಂಡಹಳ್ಳಿ ಜಂಕ್ಷನ್, ಆರ್.ಆರ್ ನಗರ ಆರ್ಚ್, ಸುಮ್ಮನಹಳ್ಳಿ ಜಂಕ್ಷನ್ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ಜಲಾವೃತವಾಗಲಿದ್ದು, ಅಲ್ಲಿ ಕೂಡಲೆ ಸಮಸ್ಯೆ ಬಗೆಹರಿಸಲು ಸೂಚಿಸಿದರು.

ಮೆಟ್ರೋ ಕಾಮಗಾರಿ ನಡೆಯುತ್ತಿರುವ ಕಡೆ ಮೆಟ್ರೋ ವಿಭಾಗದ ಜತೆ ಸಮನ್ವಯ ಸಾಧಿಸಿ ಇರುವ ಸಮಸ್ಯೆಗಳನ್ನು ಬಗೆಹರಿಸಬೇಕು. ರಸ್ತೆ ಬದಿಯ ಸೈಡ್ ಡ್ರೈನ್ ಗಳಲ್ಲಿ ಹೂಳನ್ನು ತೆಗೆದು ಸ್ವಚ್ಛಗೊಳಿಸಬೇಕು. ರಸ್ತೆಗಳ ಮೇಲೆ ಬೀಳುವ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲು ಸೂಚಿಸಿದರು.

ಈ ವೇಳೆ ವಿಶೇಷ ಆಯುಕ್ತರಾದ, ಮುನಿಷ್ ಮೌದ್ಗಿಲ್, ಕರೀಗೌಡ, ಸುರಳ್ಕರ್ ವಿಕಾಸ್ ಕಿಶೋರ್, ವಲಯ ಆಯುಕ್ತರಾದ ರಮೇಶ್, ರಮ್ಯಾ, ದಿಗ್ವಿಜಯ್ ಬೋಡ್ಕೆ, ಸ್ನೇಹಲ್, ಮುಖ್ಯ ಅಭಿಯಂತರರು, ಅಧಿಕಾರಿಗಳು ಇದ್ದರು.

ನಗರದಲ್ಲಿ ವಿವಿಧ ವಿಷಯಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿದರು.

ಮಾರುಕಟ್ಟೆಯಲ್ಲಿ ಏಲಕ್ಕಿ ಬಾಳೆಹಣ್ಣು ಕೆ.ಜಿ.120 ರು. | ಪಚ್ಚೆ ಬಾಳೆ ಬೆಲೆ 50 ರು.ಗೆ ಏರಿಕೆ

ಸಾಲು ಸಾಲು ಹಬ್ಬಗಳಿಂದಾಗಿ ಬಾಳೆ ಹಣ್ಣಿನ ಬೆಲೆಯೇರಿಕೆ

ಬೆಂಗಳೂರು: ಶ್ರಾವಣ ಮಾಸದ ಹಿನ್ನೆಲೆ ಸಾಲು ಸಾಲು ಹಬ್ಬಗಳನ್ನು ಆಚರಿಸಲಾಗುತ್ತಿದ್ದು, ನಗರದಲ್ಲಿ ವರಮ ಹಾಲಕ್ಷ್ಮಿ ಹಬ್ಬಕ್ಕೆ ಇನ್ನು ನಾಲ್ಕು ದಿನ ಬಾಕಿಯಿರುವಂತೆಯೇ ಏಲಕ್ಕಿ ಬಾಳೆಹಣ್ಣಿನ ಬೆಲೆ ಗಗನಕ್ಕೇರಿದೆ.

ಶ್ರಾವಣದಲ್ಲಿ ಹಬ್ಬಗಳು, ಮದುವೆ, ನಾಮಕರಣ, ಗೃಹಪ್ರವೇಶ, ದೇವಾಲಯಗಳಲ್ಲಿ ಪೂಜೆ ಸೇರಿದಂತೆ ಶುಭಕಾರ್ಯಗಳು ಹೆಚ್ಚಾಗಿ ನಡೆಯಲಿರುವುದರಿಂದ ಪೂಜೆಯಲ್ಲಿ ಪ್ರಮುಖ ಆಕರ್ಷಣೆಯಾದ ಬಾಳೆಹಣ್ಣಿನ ಬೆಲೆ ಏರಿಕೆಯಾಗಿದೆ. ಆಷಾಢಮಾಸದಲ್ಲಿ ಕೆಜಿಗೆ 60ರು.ನಿಂದ 70 ರು.ಗೆ ಮಾರಾಟವಾಗುತ್ತಿದ್ದ ಬಾಳೆಹಣ್ಣು ಪ್ರಸ್ತುತ 100 ರು. ತಲುಪಿದ್ದು, ಹಬ್ಬಕ್ಕೆ ಮತ್ತಷ್ಟು ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ.

ರಾಜ್ಯದಲ್ಲಿ ಹೆಚ್ಚಾಗಿ ಬಾಳೆ ಬೆಳೆಯುವ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಷಾಢದಲ್ಲಿ ಬೀಸಿದ ಭಾರೀ ಗಾಳಿಗೆ ಬಾಳೆಗಿಡಗಳು ಮುರಿದುಬಿದ್ದಿದ್ದು, ಇಳುವರಿ ಕುಂಠಿತವಾಗಿದೆ. ಜತೆಗೆ ರೋಗಬಾಧೆಯಿಂದಲೂ ಸಹ ಈ ಬಾರಿ ರೈತರಿಗೆ ಇಳುವರಿಯಲ್ಲಿ ಭಾರೀ ನಷ್ಟವಾಗಿದೆ. ಇರುವ ತೋಟಗಳಿಗೆ ಭಾರೀ ಬೇಡಿಕೆ ಬಂದಿದ್ದು, ಹಾಪ್ ಕಾಮ್ಸ್‌ನಲ್ಲಿ ಏಲಕ್ಕಿ ಬಾಳೆಗೆ 85 ರು.ಗಳಿಂದ 90 ರು. ಬೆಲೆ ನಿಗದಿ ಮಾಡಲಾಗಿದೆ. ಮಾರುಕಟ್ಟೆಯಲ್ಲಿ 120 ರು.ಗಳಿಗೆ ಮಾರಾಟವಾಗುತ್ತಿದೆ.

ಬಾಳೆಕಾಯಿ ಮಂಡಿಯವರು ಹಾಗೂ ವರ್ತಕರು ರೈತರ ತೋಟಗಳಿಗೆ ಭೇಟಿ ನೀಡಿ ಖರೀದಿಗೆ ಮುಂದಾಗಿದ್ದಾರೆ. ಆದರೂ ಸಹ ಅಪರೂಪಕ್ಕೊಮೆ ಬೆಲೆ ಬಂದಿದೆ. ನಾವು ತೋಟ ಕೊಡುವುದಿಲ್ಲ, ನಾವೇ ಮಾರಾಟ ಮಾಡುತ್ತೇವೆ ಎಂದು ಕೆಲ ರೈತರು ಮಾರುಕಟ್ಟೆಗೆ ಬಾಳೆಕಾಯಿಯನ್ನು ತಂದು ಉತ್ತಮ ಬೆಲೆಗೆ ಮಾರಾಟ ಮಾಡಿದ್ದಾರೆ.

ಪಚ್ಚೆ ಬಾಳೆ ಬೆಲೆಯೂ ದುಪ್ಪಟ್ಟು

ಸಾಮಾನ್ಯವಾಗಿ ಪಚ್ಬಾಳೆ ಕೆಜಿಗೆ 30 ರು. ದಾಟಿದರೆ ಹೆಚ್ಚು. ಆದರೆ ಕೆಲವು ತಿಂಗಳುಗಳಿಂದ 45 ರು.ಗೆ ಮಾರಾಟವಾಗುತ್ತಿದ್ದು, ಪ್ರಸ್ತುತ ಈ ಹಣ್ಣು ಕೂಡ 50 ರು. ತಲುಪಿದೆ. ಬಡವರು ಹಬ್ಬ ಮಾಡುವುದೇ ದುಸ್ತರವಾಗಿದೆ. ಆದರೂ ಸಹ ಸಂಪ್ರದಾಯವನ್ನು ಬಿಡಬಾರದು ಎಂದು ದುಬಾರಿ ಬೆಲೆ ತೆತ್ತು ಹಬ್ಬಕ್ಕೆ ಅಗತ್ಯವಸ್ತುಗಳ ಖರೀದಿಯಲ್ಲಿ ಗ್ರಾಹಕರು ತೊಡಗಿದ್ದಾರೆ.

40 ಲಕ್ಷಕ್ಕೂ ಅಧಿಕ ಮೌಲ್ಯದ ಗುಣಮಟ್ಟವಲ್ಲದ ಔಷಧಿ ಜಪ್ತಿ

ಬೆಂಗಳೂರು: ಜುಲೈನಲ್ಲಿ ರಾಜ್ಯಾದ್ಯಂತ 3489 ಆಹಾರ ಮಾದರಿಗಳನ್ನು ಸಂಗ್ರಹಿಸಿ ಪರಿಶೀಲನೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ 17 ಮಾದರಿಗಳು ಅಸುರಕ್ಷಿತ, 18 ಮಾದರಿಗಳು ಕಳೆಗುಣಮಟ್ಟದಿಂದ ಕೂಡಿವೆ ಎಂದು ವರದಿ ಬಂದಿದೆ. ಆಹಾರದ ಸುರಕ್ಷತೆ, ಗುಣಮಟ್ಟ, ನೈರ್ಮಲ್ಯತೆಯ ಕುರಿತಂತೆ ರಾಜ್ಯಾದ್ಯಂತ 1557 ಬೀದಿ ಬದಿ ವ್ಯಾಪಾರ ಘಟಕ ಪರಿವೀಕ್ಷಿಸಲಾಗಿದೆ. ಲೋಪಗಳು ಕಂಡು ಬಂದಿರುವ 406 ಘಟಕಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ 44,500 ರು. ದಂಡ ವಿಧಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ 1240 ಬಿದಿ ಬದಿ ಆಹಾರ ವ್ಯಾಪಾರಿಗಳಿಗೆ ನೈರ್ಮಲ್ಯತೆ ಮತ್ತು ಗುಣಮಟ್ಟ ಕುರಿತ ತರಬೇತಿ ನೀಡಲಾಗಿದೆ. 866 ಬೀದಿಬದಿಯ ವ್ಯಾಪಾರ ಘಟಕಗಳಿಗೆ ಉಚಿತ ನೋಂದಣಿ ಮಾಡಲಾಗಿದೆ. ರಾಜ್ಯಾದ್ಯಂತ 186 ಬಸ್ ನಿಲ್ದಾಣಗಳಲ್ಲಿನ 889 ಆಹಾರ ಮಳಿಗೆಗಳಿಗೆ ಪರಿಶೀಲನೆ ಮಾಡಲಾಗಿದೆ. ಲೋಪಗಳು ಕಂಡು ಬಂದಿರುವ 206 ಘಟಕಗಳಿಗೆ ನೋಟಿಸ್‌ಗ ಜಾರಿ ಮಾಡಿ 55 ಸಾವಿರ ರು. ದಂಡ ಹಾಕಲಾಗಿದೆ. 99 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಸಲ್ಲಿಸಲಾಗಿದೆ. ರಾಜ್ಯಾದ್ಯಂತ 603 ಅಂಗನವಾಡಿ ಕೇಂದ್ರಗಳಿಗೆ ಪರಿಶೀಲನಾ ಭೇಟಿ ನೀಡಲಾಗಿದೆ. 545 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ರಾಜ್ಯಾದ್ಯಂತ 736 ಹೋಟೆಲ್/ರೆಸ್ಟೋರೆಂಟ್‌ಗಳಿಗೆ ಪರಿಶೀಲಿಸಲಾಗಿದೆ. 190 ಘಟಕಗಳಿಗೆ ನೋಟಿಸ್ ಜಾರಿ ಮಾಡಿ 21500 ರು. ದಂಡ ಹಾಕಲಾಗಿದೆ ಎಂದರು.

ಮಾದಕ ವಸ್ತುಗಳ ದುರ್ಬಳಕೆ: 231 ಶೋಕಾಸ್ ನೋಟಿಸ್

ಔಷಧ ಪರೀಕ್ಷಾ ಪ್ರಯೋಗಾಲಯವು ಜುಲೈನಲ್ಲಿ ಬೆಂಗಳೂರು, ಹುಬ್ಬಳ್ಳಿ ಮತ್ತು ಬಳ್ಳಾರಿಗಳಲ್ಲಿನ ಔಷಧಿ ಅಂಗಡಿಗಳಲ್ಲಿನ ಒಟ್ಟು 1,433 ಔಷಧ ಮಾದರಿಗಳನ್ನು ವಿಶ್ಲೇಷಿಸಿದೆ. ಅವುಗಳಲ್ಲಿ 1,366 ಉತ್ತಮ ಗುಣಮಟ್ಟ ಮತ್ತು 59 ಔಷಧ ಮಾದರಿಗಳು ಅನುತ್ತಮ ಗುಣಮಟ್ಟ ಅಂತ ವರದಿ ಬಂದಿದೆ. ಪ್ರಮಾಣಿತ ಗುಣಮಟ್ಟದ್ದಲ್ಲದ ಪ್ರಕರಣಗಳಲ್ಲಿ ರಾಜ್ಯಾದ್ಯಂತ ಜುಲೈನಲ್ಲಿ 40,48,436 ಲಕ್ಷ ರು. ಮೌಲ್ಯದ ಅನುತ್ತಮ ಗುಣಮಟ್ಟದ ಔಷಧ ಜಪ್ತಿ ಮಾಡಲಾಗಿದೆ. ಸಕಾಲದ ಅಡಿ 26 ಔಷಧ ಆಡಳಿತ ಸೇವೆಗಳನ್ನು ಒದಗಿಸಲಾಗುತ್ತಿದೆ. ಜುಲೈನಲ್ಲಿ ಒಟ್ಟು 1686 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಒಟ್ಟು 905 ಅರ್ಜಿಗಳು ವಿಲೇವಾರಿಯಾಗಿವೆ. ಔಷಧ ಆಡಳಿತದ ಅಮಲು ಜಾರಿ ಅಧಿಕಾರಿಗಳು ಜೂನ್ ತಿಂಗಳಲ್ಲಿ ಮಾದಕ ವಸ್ತುಗಳ ದುರ್ಬಳಕೆಯನ್ನು ತಡೆಗಟ್ಟಲು 279 ವಿಶೇಷ ಪರಿವೀಕ್ಷಣೆಯನ್ನು ಕೈಗೊಂಡರು. ಉಲ್ಲಂಘನೆ ಕಂಡು ಬಂದ ಪ್ರಕರಣಗಳಲ್ಲಿ ಒಟ್ಟು 231 ಶೋಕಾಸ್ ನೋಟಿಸ್ ನೀಡಲಾಗಿದೆ. 15 ಔಷಧ ಮಳಿಗೆಗಳಿಗೆ ಅನುಷ್ಠಾನ ಪತ್ರ ನೀಡಲಾಗಿದೆ ಎಂದು ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದಾರೆ.

ಆರೋಗ್ಯ ಇಲಾಖೆಯಿಂದ ನೀಡುತ್ತಿರುವ ಆನ್‌ಲೈನ್ ಸೇವೆ ಒಎನ್‌ಡಿಎಲ್‌ಎಸ್ ಪೋರ್ಟಲ್‌ಗೆ ಮೈಗ್ರೇಟ್ ಆಗಿರುವುದರಿಂದ ರಕ್ತ ನಿಧಿ ಕೇಂದ್ರಗಳಿಗೆ ಆನ್‌ಲೈನ್ ಮೂಲಕವೇ ಪರವಾನಗಿಗಳನ್ನು ನೀಡಲಾಗುತ್ತಿದೆ. ಮಾನ್ಯತೆ ಪಡೆದ ವೈದ್ಯಕೀಯ ಸಂಸ್ಥೆಗಳಲ್ಲಿ ಅಗತ್ಯ ಮಾದಕ ಔಷಧಗಳನ್ನು ಬಳಸಲು ಇಲಾಖೆಯಿಂದ ಆರ್‌ಎಂಐ ಸರ್ಟಿಫಿಕೇಟ್ ನೀಡಲಾಗುತ್ತಿದೆ. ಅದನ್ನು ಆನ್‌ಲೈನ್ ಮೂಲಕವೇ ಒದಗಿಸಲು ಇಲಾಖೆಯ ಆನ್‌ಲೈನ್ ಸೇಲ್ ವೆಬ್ ಸೈಟ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಟೌನ್‌ಹಾಲ್‌ನಲ್ಲಿ ಕಾರ್ಯಕ್ರಮ ಆಯೋಜನೆ | ಬಿಜೆಪಿ ನಾಯಕರು ಭಾಗಿ

ಅಟಲ್ ಸ್ಮೃತಿ ಸಂಗ್ರಹ ಆ.16ಕ್ಕೆ ಲೋಕಾರ್ಪಣೆ

ಬೆಂಗಳೂರು: ಅಟಲ್ ಬಿಹಾರಿ ವಾಜಪೇಯಿ ದೇಹ ತ್ಯಜಿಸಿದ ದಿನವಾದ ಆಗಸ್ಟ್ 16 ರಂದು ಬೆಂಗಳೂರಿನ ಟೌನ್‌ಹಾಲ್ ನಲ್ಲಿ ಸಂಜೆ 4.30 ಕ್ಕೆ ಅಟಲ್ ಸ್ಮೃತಿ ಸಂಗ್ರಹ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಟಲ್ ಜನ್ಮ ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಪೋಸ್ಟರನ್ನು ಬಿಜೆಪಿ ಕಚೇರಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿಡುಗಡೆಗೊಳಿಸಿ ಮಾತನಾಡಿ, ಕಾರ್ಯಕ್ರಮವನ್ನು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಟಲ್ ಅವರ ಕಾಲದಲ್ಲಿ ಕೇಂದ್ರ ಸಚಿವರಾಗಿದ್ದ ಡಿ.ವಿ.ಸದಾನಂದ ಗೌಡ, ಮುಖಂಡರಾದ ತೇಜಸ್ವಿನಿ ಅನಂತ್ ಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಭಾಗವಹಿಸಲಿದ್ದಾರೆ ಎಂದರು. ಅಟಲ್ ಅವರ ಶತಮಾನೋತ್ಸವ ಸಮಾರಂಭ ಯಶಸ್ವಿಯಾಗಿ ನಡೆಯಲು ಕೇಂದ್ರದಲ್ಲಿ ಅನೇಕ ಕಾರ್ಯಕ್ರಮ ಆಯೋಜಿಸಿದ್ದರು. ಇದಕ್ಕಾಗಿ ತಂಡಗಳನ್ನು ರಚನೆ ಮಾಡಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರ ಮಾರ್ಗದರ್ಶನದಲ್ಲಿ ಅಟಲ್ ಜೀ ಜನ್ಮ ಶತಮಾನೋತ್ಸವದ ತಂಡ ರಚಿಸಿ ಕಳೆದ ಜನವರಿಯಿಂದ ವಿವಿಧ ಕಾರ್ಯಕ್ರಮ ಆಯೋಜಿಸಲಾ ಗಿತ್ತು.ಜನವರಿ 14 ರಿಂದ ಫೆಬ್ರವರಿ 15 ರವರೆಗೆ ಅಟಲ್ ಜೀ ಸ್ಮೃತಿ ಸಂಗ್ರಹಕ್ಕೆ ಎಲ್ಲ ಜಿಲ್ಲೆಗಳಲ್ಲಿ ತಂಡಗಳನ್ನು ರಚಿಸಲಾಗಿತ್ತು. ಅವುಗಳ ಮೂಲಕ ಅಟಲ್ ಜೀ ಕಾಲಘಟ್ಟದಲ್ಲಿ ಕೆಲಸ ಮಾಡಿದ ಅವರ ಒಡನಾಡಿಗಳು, ಅವರ ಕಾಲದಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡಿದ ಹಿರಿಯರ ಮನೆಗಳಿಗೆ ತೆರಳಿ ಅವರಿಗೆ ಗೌರವ ಸಮರ್ಪಣೆ ಮಾಡಲಾಗಿದೆ. ಜತೆಗೆ ಅಟಲ್ ಜೀ ಅವರ ಚಿತ್ರಗಳು, ವಿಶೇಷವಾದ ಲೇಖನಗಳು ಮತ್ತು ಕೃತಿಗಳನ್ನು ಸಂಗ್ರಹ ಮಾಡಲಾಗಿದೆ ಎಂದು ವಿವರಿಸಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -



ಕರ್ನಾಟಕ ಸರ್ಕಾರ GOVERNMENT OF KARNATAKA

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ, ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539.
e-mail-ids:directorbmcrcballari@gmail.com, website : https://vims.karnataka.gov.inprincipalbmcrcballari@gmail.com

No:BMCRC/ SUP/TEND/ENDOSCOPY/09/2025-26/Call/2 205 DATE:02.08.2025

ಇ-ಟೆಂಡರ್ ಅಧಿಸೂಚನೆ

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಳ್ಳಾರಿಯ ಟ್ರಾಮಾ ಕೇರ್ ಆಸ್ಪತ್ರೆಯಲ್ಲಿನ ನರರೋಗ ವಿಭಾಗಕ್ಕೆ **Neuro Endoscopy** ನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ **https://kppp.karnataka.gov.in** ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು **ದಿನಾಂಕ: 18.08.2025 ಸಂಜೆ 5.00** ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ **ರೂ.160.00** ಲಕ್ಷಗಳಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **www.vims.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/332/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–31/2025–26
ದಿ:30.07.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act –1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–1 ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ: 14.08.2025 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.

ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2025-26/RD/WORK_INDENT43016. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 20.00. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 0,000/–. ಗುತ್ತಿಗೆದಾರರ ವರ್ಗ ಮೀಸಲು :** OTHERS.

ಸಹಿ/–ಪೌರಾಯುಕ್ತರು,
ನಗರಸಭೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/342/2025–26

4 ಸೇತುವೆಗಳು ಸಂಚಾರಕ್ಕೆ ಮುಕ್ತ

ಚಿಕ್ಕೋಡಿ: ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಕೃಷ್ಣಾ ಜಲಾಯನ ಪ್ರದೇಶ ವ್ಯಾಪ್ತಿಯಲ್ಲಿ ಮಳೆ ಪ್ರಮಾಣ ಇಳಿಮುಖವಾಗಿದ್ದರಿಂದ ಕಳೆದೊಂದು ವಾರದಿಂದ ಜಲಾವೃತಗೊಂಡಿದ್ದ ದೂಧಗಂಗಾ, ವೇದಗಂಗಾ ನದಿಯ 4 ಸೇತುವೆಗಳು ಭಾನುವಾರ ಸಂಚಾರಕ್ಕೆ ಮುಕ್ತಗೊಂಡಿವೆ. ಕೃಷ್ಣಾ ಹಾಗೂ ದೂಧಗಂಗಾ ನದಿಯ ತಲಾ ಒಂದು ಸೇತುವೆ ಜಲಾವೃತಗೊಂಡ ಸ್ಥಿತಿಯಲ್ಲಿಯೇ ಇವೆ. ಉಪವಿಭಾಗ ವ್ಯಾಪ್ತಿಯಲ್ಲಿ ದೂಧಗಂಗಾ ನದಿಯ ಕಾರದಗಾ–ಭೋಜ, ಭೋಜವಾಡಿ–ಕುನ್ನೂರ, ವೇದಗಂಗಾ ನದಿಯ ಅಕ್ಕೋಳ–ಸಿದ್ನಾಳ, ಜತ್ರಾಟ–ಭಿವಶಿ ಕಿರು ಸೇತುವೆಗಳು ಸಂಚಾರಕ್ಕೆ ಮುಕ್ತವಾಗಿದ್ದು, ದೂಧಗಂಗಾ ನದಿಯ ಮಲಕವಾಡ–ದತ್ತವಾಡ, ಕೃಷ್ಣಾ ನದಿಯ ಕಲ್ಲೋಳ– ಯಡೂರ ಸೇತುವೆಗಳು ಇನ್ನೂ ಜಲಾವೃತಗೊಂಡ ಸ್ಥಿತಿಯಲ್ಲಿವೆ.

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ

ಕ್ರಸಂ.ಪಂ.ರಾ.ಇಂ.ವಿ.ಧಾ/ಸ.ಇಂ.–1/ವಿವಿಧ ಲೆಕ್ಕಶೀರ್ಷಿಕೆ/2025–2026/1543 ದಿನಾಂಕ: 04–08–2025.

ಅಲ್ಪಾವಧಿ ಟೆಂಡರ್ ಪ್ರಕಟಣೆ –14/2025–26
(ಇ-ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, dated: 15–09–2017 ರನ್ವಯ ವಿವಿಧ ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ KW-1 & KW-4 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in/ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent No General : 16427/Call-2, 16304/Call-2, 16100/Call-2, 16403/Call-2, 14001/Call-2, 16431/Call-2, 17729, 17728, 17727, 16772.
SC Category : 16388/Call-2, 15287/Call-2, 17720.
ST Category : 17648.
No Reservation : 14593/Call-2.

ಕ್ಯಾಲೆಂಡರ್ ಆಫ್ ಇವೆಂಟ್ಸ್: (1) ಟೆಂಡರ್ ದಾಖಲೆಗಳನ್ನು ದಿನಾಂಕ: **06–08–2025** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **14–08–2025 ರ ಸಂಜೆ 4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. **(2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15–08–2025 ರ ಸಾಯಂಕಾಲ 4.30** ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. **(3)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **18–08–2025 ರ ಬೆಳಿಗ್ಗೆ 11.00** ಗಂಟೆಗೆ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಆರ್.ಎಂ.ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.
ವಾ.ಸಾ.ಇ/ಧಾರವಾಡ/503/ದೇಶಪಾಂಡೆಪಬ್ಲಿಸಿಟಿ/2025–26

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **09.09.2025** ರಂದು ಬೆಳಿಗ್ಗೆ 10.30ಕ್ಕೆ ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	47518740000169	ನಿಜಾಮ್ ಪಾಶಾ	68.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.140, ಎಲ್, ಹೆಚ್‌ಎಸ್‌ಆರ್ ಲೇಔಟ್ 5ನೇ ಮೈನ್ 6ನೇ ಸೆಕ್ಟರ್, ಬೆಂಗಳೂರು–560034,			
2	31838730056077	ನಟರಾಜನ್ ಕೆ	5
3	31838730056038	ಆರ್ ದಿವ್ಯಭಾರತಿ	4.5
4	31838730056002	ಚಂದ್ರಕಲಾ ನಾಗರಾಜು	18.2
5	31838730055966	ಭೂಮಿಕಾ ವೈ ಬಿ	25.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560061.			
6	32568730027340	ಧನುಶ್ ಕುಮಾರ್ ಎನ್	4
7	32568730026363	ಶಿವಕುಮಾರ್ ಜಿ	73.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು–562106			
8	46448730039187	ಚಿನ್ನಸ್ವಾಮಿ	6.1
9	46448730039174	ಕೆಎಂ ಕುಮಾರ	3.9
10	46448730039122	ರಾಜೇಶ್ವರಿ ಗೋಪಾಲ್	6.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.			
11	31878730045729	ಕುಲ್ವಿಂದರ್ ಸಿಂಗ್ ಗೌರವ್	4.6
12	31878730045679	ಶಶಿಕಲ ಕೆ	27.3
13	31878730045666	ಶಶಿಕಲ ಕೆ	6.1
14	31878730045614	ಕೆ ಒ ರೇಖಾ	4.2
15	31878730044802	ಆಂಟೋನಿ ಸ್ಯಾಮ್ಸನ್	2.85
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಆಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು–560078.			
16	31138730062010	ಅಮೀನ್ ನಿಂಬಾಳ್	16
17	31138730062007	ಅರವಿಂದ್ ರಾಥೋಡ್	9.4
18	31138730061603	ಭೀಮಬಾಯಿ ಕದಮ್	14.8
19	31138730061425	ಶ್ರೀದೇವಿ ಕಂಬಳೆ	13.6
20	31138730059358	ಲಕ್ಷ್ಮಿ ಬಾಶಿ	2.6
21	31138730059345	ಗುರುಆಜ್ ವಸಂತ್ ಲಂಬು	8.2
22	31138730059026	ಅಮೀನ್ ನಿಂಬಾಳ್	27.2
23	31138730058355	ಗೋವಿಂದ್ ಲಮಾಣಿ	3.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ–586101			
24	31128730037642	ರೇಣುಕ ಪರಮೇಶ್ವರ	5.2
25	31128730037613	ಜಲಿಂಗಯ್ಯ ಸಿ	6.3
26	31128730037600	ರೇಣುಕ	3.1
27	31128730037550	ಮಮತ	29.7
28	31128730036231	ಮಂಜುನಾಥ	21.35
29	31128730036228	ಮಧು ಎಂ ಕೆ ಹೆಚ್ ನಾರಾಯಣಾಚಾರ್	9.9
30	31128160004699	ಶ್ರೀಧರ್ ನಾಯ್ಕ್	46.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.			
31	34018730025786	ಜೆನಿಫರ್ ಅಸಿರ್	2.9
32	34018730025708	ಫೌಸಿಯ ಯು ಉಮರ್	3.2
33	34018730025684	ಶಬಾನ	11.8
34	34018730025632	ತಬ್ಸುಮ್ ಸೈಯ್ಯದ್ ನದೀಂ	3.1
35	34018730024579	ಭಾಗ್ಯ ಎಂ	18.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092			
36	33878730044309	ರಂಜಿತ್ ಕುಮಾರ್ ಎ	7.9
37	33878730043091	ಕಾರ್ತಿಕ್ ಎಂ	6.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–560086.			
38	32508730045786	ಕಾವ್ಯ ವಿ	3.2
39	32508730044451	ಶಿವ ಶಕ್ತಿ	41
40	32508730044273	ಕಲಾವತಿ ರಾಜ ರಾಜು	8.4
41	32508160000964	ಶಿವ ಶಕ್ತಿ	40
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್–560068			
42	30138730036024	ಕೆ ಎನ್ ನಾಗವೇಣಿ	46.4
43	30138730035801	ರಾಧಾ ಪ್ರಭಾಕರ್ ಜೆ	23.7
44	30138730035774	ಶಾಲಿನಿ	5.8
45	30138730035748	ಮಣಿಗಂಡನ್ ಜಿ	27.9
46	30138730035659	ಚಂದ್ರಮ್ಮ ಸಿ ಸಿ	11.5
47	30138730035607	ಆನಂದ್ ಕುಮಾರ್ ವಿ	24.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ–408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು–560016.			
48	33638730059874	ಜಗನ್ನಾಥ್ ಬಿ ಅವಟಗಿ	3.1
49	33638730059657	ಆಂತೋನಿಯಮ್ಮ ಅಲ್ಫಾನ್ಸೋ	4.1
50	33638730059173	ನೂರ್ ಜಬಿಬಿ ನಾಸಿರ್ ಅಹಮದ್	3.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 2/1, ಹೊಸ ನಂ. 4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.			
51	33648730033255	ಶರಣಪ್ಪ ವಿ ಗೌಡರ್	15.3
52	33648730033041	ದಿವ್ಯ ಎಂ ಪಿ	3.2
53	33648730033025	ಅಕ್ಬರ್ ಷರೀಫ್	2.7
54	33648730033002	ರತ್ನಮ್ಮ ಅಂದಾನಿ ಗೌಡ	3.1
55	33648730032647	ವಿಜಯಮ್ಮ ವೇಲು	3
56	33648730032584	ವಿನೋದ್ ಕುಮಾರ್ ಡಿ	3.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 12, 1ನೇ ಮಹಡಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಿ ಆರ್ ಪಾಳ್ಯ, ಬೆಂಗಳೂರು–560072.			
57	33458730026857	ಅಭಿಷೇಕ್ ಎಸ್	13
58	33458730026805	ಅಭಿಷೇಕ್ ಎಸ್	6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ, ಮೈಸೂರು–570017.			
59	30948730021658	ಸುನಿಲ್ ಕುಮಾರ್ ಹೆಚ್ ಎಸ್	17.6
60	30948730021556	ಕೃಷ್ಣ ಎಲ್	2.5
61	30948730021520	ಲಕ್ಷ್ಮಿ	2.8
62	30948160003032	ಅರ್ಪಿತ ಎಂ ಸಿ	42.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009, ಭಾರತ			
63	30488730032515	ಗಣೇಶ್ ಬಸಪ್ಪ ಶಿವಳ್ಳಿ	4.09
64	30488730032491	ಹುಸೇನ್‌ಸಾಬ್ ಅತ್ತರ್	11.97
65	30488730032363	ನಿಂಗಪ್ಪ ಮನ್ನೂರು	4.86
66	30488730032350	ನವೀನ್ ಮಸ್ಕಿ	3.51
67	30488730032340	ನವೀನ್ ಮಸ್ಕಿ	4
68	30488730032274	ಮಲ್ಲಪ್ಪ ಸುಭಾಷ್ ಬೆಳಗಾವಿ	3.14
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕಟ್ಟಡ ಸಂ. 14089/ಎ/3,, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ–580002			
69	46988730036175	ಮಾನಸ ಎಂ	5.1
70	46988730035287	ಶಿವಕುಮಾರ್ ಪಿ	20.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಗ್ರಾಮ, ಕಸಬಾ ಹೋಬಳಿ, ನಂದಿನಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು–561203			
71	31788730017741	ಶಯನ್ ಬಿ	3.46
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8–1–501–66, ವಾರ್ಡ್ ನಂ.8–ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ–573201, ಕರ್ನಾಟಕ.			
72	45488730017450	ಹುಸೇನಿ ಡಿ	6
73	45488730017312	ಈರೇಶ್ ಎನ್	5
74	45488730016918	ವೀರಣ್ಣ ಗೌಡ ಕೆ	9.9
75	45488730015470	ಮಲ್ಲಿಕಾರ್ಜುನ್ ಟಿ	10
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101, ಭಾರತ			
76	45458730027064	ಇಮ್ರಾನ್	10
77	45458730026762	ಕಿರಣ್ ರಾಥೋಡ್	6.6
78	45458730026752	ಸಂಜುಕುಮಾರ್ ಕೆ	13.9
79	45458730025874	ದತ್ತಪ್ಪ ಎಸ್	9.9
80	45458730025045	ಎಂಡಿ ಮಸಾಕ್ ಸಾಬ್	17.2
81	45458160004597	ಖುರ್ಷೀದ್ ಖಾನ್	92.6
82	45458160004506	ತಬ್ಸುಮ್ ಬೇಗಂ	91
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003,			
83	45398730006902	ಕೋಮಲ್ ಸುರೇಶ್	3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಲ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ–590003			
84	45448730006602	ಆರಿಫ್ ಅಹ್,ದ್ ಮೊಮಿನ್	4.9
85	45448160001780	ಮೊಹಮ್ಮದ್ ರಫಿಕ್ ಮುಲ್ಲಾ	38.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ–580021			
86	30198730039571	ಧನ್‌ಪಾಲ್ ಎಸ್	25.7
87	30198730039427	ಯಾಸ್ಮೀನ್ ತಾಜ್	5.6
88	30198730039401	ಅಸ್ಮಾ ಬಾನು ಇಸ್ತಾಖ್ ಖಾನ್	6.8
89	30198730038118	ಪಳನಿಯಮ್ಮ ಬಾಬು	4.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.			
90	31888730029752	ಶಬಾನಾ ಬೇಗಂ	38.2
91	31888730028226	ಮಂಗಳ ನ್ಯಾತಪ್ಪ	6.2
92	31888730028022	ಮೊಹಮ್ಮದ್ ಶೋಯೆಬ್ ಎ ಹೆಚ್	11.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞ ನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.			
93	40618730000040	ಹರಿಶ್ಚಂದ್ರ ದಿಗಂಬರ್ ಜಾಧವ್	4.99
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಸರ್ವೆ ನಂ. 10/1, 11/2 ಮತ್ತು12/2ಬಿ ದೊಮ್ಮೂರು ಹತ್ತಿರ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಎಂಬೆಸಿ ಗಾಲ್ಫ್ ಲಿಂಕ್ಸ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ			

ಸ್ಥಳ: ಕರ್ನಾಟಕ
ದಿನಾಂಕ: 05.08.2025
ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಒಳಮೀಸಲು ಅಂತಿಮ ವರದಿ ಸರಕಾರಕ್ಕೆ ಸಲ್ಲಿಕೆ

← ಮೊದಲಪುಟದಿಂದ

ಪರಿಶಿಷ್ಟ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ, ಪರಿಶಿಷ್ಟ ಜಾತಿ ಸಮೀಕ್ಷೆ ನಡೆಸುವ ಜವಾಬ್ದಾರಿಯನ್ನು ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗಕ್ಕೆ ರಾಜ್ಯ ಸರಕಾರ ನೀಡಿತ್ತು. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯತೆ ಕುರಿತು ವೈಜ್ಞಾನಿಕ ದತ್ತಾಂಶ ಸಂಗ್ರಹಿಸಲು 2025 ಮೇ 5 ರಿಂದ ಮನೆ-ಮನೆ ಭೇಟಿ ಮೂಲಕ ರಾಜ್ಯಾದ್ಯಂತ ಸಮೀಕ್ಷೆ ಪ್ರಾರಂಭಿಸಲಾಗಿತ್ತು. ಎಸ್‌ಸಿ ಸಮುದಾಯದಲ್ಲಿನ ಅತ್ಯಂತ ಹಿಂದುಳಿದ ಉಪಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ದಶಕಗಳಿಂದ ಹೋರಾಟ ನಡೆಯುತ್ತಿದ್ದು, ಇದೀಗ ಈ ಕುರಿತ ಅಂತಿಮ ವರದಿ ಸರಕಾರದ ಕೈ ಸೇರಿದೆ.

ಧರ್ಮಸ್ಥಳ: ನರೇಟಿವ್ ಗಳಿಗೆ ಸರಣಿ ಸೋಲಿನ ಭೀತಿ

← ಮೊದಲಪುಟದಿಂದ

5-0 ಅಂತರದ ಬಳಿಕ ಶೇ.50-50ಕ್ಕೆ ಇಳಿದಿತ್ತು. 6ನೇ ಸಮಾಧಿ ಸ್ಥಳದಲ್ಲಿ ಅಸ್ಥಿ ಪಂಜರ ಸಿಕ್ಕಾಗ ಹೋರಾಟಗಾರರಿಗೆ ಹೋದ ಜೀವ ವಾಪಸ್ ಬಂದಂತಾಗಿತ್ತು. ಆದರೆ ಅದು ಗಂಡಸಿನ ಅಸ್ಥಿ ಪಂಜರ ಎಂದು ಗೊತ್ತಾಯಿತೋ ಹಿನ್ನಡೆಯಾಯಿತು. ಆದರೂ ಅವರು ತಮಗೆ ಸಿಕ್ಕ ಯಶಸ್ಸು ಎಂದೇ ವ್ಯಾಖ್ಯಾನಿಸುತ್ತಿದ್ದರು. ಆದರೆ ಆ ಅಸ್ಥಿ ಪಂಜರ 40-50 ವರ್ಷದ ಹಿಂದಿನದ್ದು, ಗಂಡಸಿನದು ಎಂದು ಖಚಿತ ಮಾಹಿತಿ ಹೊರ ಬೀಳುತ್ತಿದ್ದಂತೆ ಸಿಕ್ಕ ಒಂದು ಆಶಾವಾದ ಕಳೇಬರವೂ ಅವರ ಕೈ ತಪ್ಪಿತು.

ಆದರೂ ಇನ್ನೊಂದೆಡೆ ಅವರ ಸುಳ್ಳಿನ ಅಭಿಯಾನ ಫೇಕ್ ಖಾತೆಗಳಿಂದ, ರೀಲ್ಸ್‌ಗಳಿಂದ ನಡೆಯುತ್ತಿತ್ತು. 25 ಮೂಳೆ ಸಿಕ್ಕಿತು, ಮೂರು ಮೃತದೇಹ ಸಿಕ್ಕಿತು, ಪ್ಯಾನ್ ಕಾರ್ಡ್ ಎಟಿಎಂ ಕಾರ್ಡ್‌ಗಳ ಕುರಿತಾಗಿ ಧರ್ಮಸ್ಥಳದಲ್ಲಿ ಹತ್ಯೆಯಾದ ಮಹಿಳೆ ಎಂದು ಸರಣಿ ಸುಳ್ಳು ಸುದ್ದಿಗಳ ವಿಶ್ಲೇಷಣೆಯೂ ಎಗ್ಗಿಲ್ಲದೆ ಸಾಗಿತ್ತು.

ಈ ನಡುವೆ ವಾಸ್ತವ, ಕಟು ಸತ್ಯ ಹೇಳುತ್ತಿದ್ದ ಪತ್ರಕರ್ತರ ಮತ್ತು ಕ್ಷೇತ್ರದ ಪರ ಇರುವ ಜಾಲತಾಣಿಗರ ವಿರುದ್ಧ ತೇಜೋವಧೆ, ಟ್ರೋಲ್ ಕೂಡಾ ನಡೆಯುತ್ತಿತ್ತು. ಇಡೀ ಪ್ರಕರಣದ ಫಲಾನುಭವಿ (ರೂವಾರಿ) ಎಡಪಂಥೀಯ ಚಿಂತನೆಯ ಬುದ್ಧಿಜೀವಿಗಳು ಸಕ್ರಿಯರೇ ಆಗಿದ್ದರು. ಸಮಾಜದಲ್ಲಿ ತಮ್ಮ ಪರವಾಗಿ ಇರುವ ಬೆಂಬಲಿಗರ ಭರವಸೆ ಕಳೆದುಕೊಳ್ಳದೇ ಇರಲು ಶವಗಳು ಇನ್ನು ಬೇಕಾದಷ್ಟು ಸಿಗಲಿದೆ. 11, 12, 13 ಪಾಯಿಂಟ್ ಗಳಲ್ಲಿ ಹತ್ತು ಹಲವು ಮೃತದೇಹ ಸಿಗಲಿದೆ. ಸತ್ಯಕ್ಕಾಗಿ ಮುನ್ನುಗ್ಗೋಣ ಎಂಬ ಉತ್ತೇಜನಕಾರಿ ಬ್ರೈನ್ ವಾಶಿಂಗ್ ಬರಹಗಳಿದ್ದವು.

ಆದರೆ ಇದೀಗ 11ನೇ ಪಾಯಿಂಟ್ ಬದಲು ಕಾಡಿನ ಒಳಕ್ಕೆ ಹೋದಾಗ ಮೃತದೇಹ ಸಿಕ್ಕಿತು. ಮತ್ತೆ ಹೋರಾಟಗಾರರ ಮತ್ತು ಅವರ ಪರವಾಗಿರುವ ಇನ್‌ಫ್ಲುಯೆನ್ಸರ್‌ಗಳು ಕುಣಿದಾಡಬೇಕು ಎನ್ನುವಷ್ಟರಲ್ಲಿ ಅದು ಒಂದೂವರೆ ವರ್ಷದ ಹಿಂದಿನ ಶವ ಎಂಬುದು ಗೊತ್ತಾಗುತ್ತಿದ್ದಂತೆಯೇ ಜೀವಚ್ಛವದಂತಾಗಿದ್ದಾರೆ. ಪಕ್ಕದಲ್ಲಿಯೇ ಹಗ್ಗ ಪತ್ತೆಯಾಗಿರುವುದರಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ತಜ್ಞರ ವ್ಯಾಖ್ಯಾನ ಅವರ ಆತ್ಮಸ್ಥೈರ್ಯ ಕುಸಿಯುವಂತೆ ಮಾಡಿದೆ.

ಈ ಮೊದಲಾದರೆ ಸೌಜನ್ಯ ಪ್ರಕರಣ ಹಿಡಿದುಕೊಂಡು ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಹಳೆಯ ಪ್ರಕರಣಗಳಿಗೆ ಯಾವುದೇ ದಾಖಲೆ ತೋರಿಸದೆ ಅವರಿಗೆ ಬೇಕಾದವರ ಸಂದರ್ಶನ ಮಾಡಿ, ಧರ್ಮಸ್ಥಳ ಕ್ಷೇತ್ರದ ವಿರುದ್ಧ ನರೇಶನ್ ಸೃಷ್ಟಿಸುತ್ತಿದ್ದರು. ಈಗ ಮುಖ್ಯವಾಹಿನಿ ಮಾಧ್ಯಮಗಳು ಸ್ಥಳದಲ್ಲಿಯೇ ಬೀಡು ಬಿಟ್ಟಿವೆ. ಆರಂಭದಲ್ಲಿ ಧರ್ಮಕ್ಷೇತ್ರ, ಧರ್ಮಾಧಿಕಾರಿ ಕುಟುಂಬದ ಕುರಿತಾಗಿ ಸಂಪೂರ್ಣ ಸಂಶಯ ಇಟ್ಟುಕೊಂಡೇ ಮುಖ್ಯವಾಹಿನಿಗಳು ವರದಿ ಮಾಡಿದರೂ ಬರಬರುತ್ತಾ ಹೋರಾಟಗಾರರ ಆರೋಪದ ಕುರಿತೇ ಸಂಶಯಗಳು ಮೂಡತೊಡಗಿದವು. ಒಂದೆರಡು ವಾಹಿನಿಗಳು ಇನ್ನೂ ಧರ್ಮಾಧಿಕಾರಿ ಕುಟುಂಬದ ಕುರಿತು ಸಂಶಯ ಇಟ್ಟುಕೊಂಡು ವರದಿ ಮಾಡುತ್ತಿದ್ದಾರೆ ಆದರೆ, ಆರಂಭದ ದಿನಗಳ ಕಟುತ್ವ ಈಗ ಕಾಣುತ್ತಿಲ್ಲ. ಹೀಗಾಗಿ ಇನ್‌ಫ್ಲುಯೆನ್ಸರ್‌ಗಳಿಗೆ ಬ್ರೈನ್ ವಾಶ್ ಮಾಡುವ ಕೆಲಸ ಕಷ್ಟವಾಗಿದೆ.

ಖೆಡ್ಡಾಕ್ಕೆ ಬಿದ್ದವರು ಯಾರು ?

ಹೋರಾಟಗಾರರು ಯೂಟ್ಯೂಬ್ ಬಳಸಿಕೊಂಡು, ಇನ್‌ಫ್ಲುಯೆನ್ಸರ್‌ಗಳಿಗೆ ವೀವ್ಸ್ ಆಸೆ ಕೊಟ್ಟು ವಿಡಿಯೋ ಮಾಡಿಸಿ ಮುಖ್ಯವಾಹಿನಿ ಮಾಧ್ಯಮಗಳನ್ನು ತಮ್ಮ ಅಜೆಂಡಾದ ಖೆಡ್ಡಾಗೆ ಕೆಡವಿ ಯಶಸ್ವಿಯಾಗಿದ್ದರು. ಒಂದು ನರೇಟಿವ್, ಸೋಷಿಯಲ್ ಮೀಡಿಯಾ ಮೂಲಕ ಹಬ್ಬಿಸಿದರೆ ಅದು ಮುಖ್ಯವಾಹಿನಿಗಿಂತ ಹೆಚ್ಚು ಜನರ ಗಮನ ಸೆಳೆಯುತ್ತದೆ, ಜನ ನಂಬುತ್ತಾರೆ ಎನ್ನುವುದು ಈ ಪ್ರಕರಣ ತೋರಿಸಿಕೊಟ್ಟಿದೆ. ಮಾಧ್ಯಮಗಳೂ ಕೂಡಾ ತನಿಖಾ ಪತ್ರಿಕೋದ್ಯಮ, ಮಾನವೀಯ ಕಳಕಳಿ, ಪತ್ರಿಕೋದ್ಯಮ ಮೌಲ್ಯ ಬದಿಗೆ ಸರಿಸಿ ವೀವ್ಸ್ ಲೈಕ್‌ಗಳ ಹಿಂದೆ ಬಿದ್ದಿರುವುದು ಈ ಪ್ರಕರಣದಲ್ಲಿ ಢಾಳಾಗಿ ಕಾಣಿಸಿದೆ. ಬೇಸರದ ಸಂಗತಿ ಎಂದರೆ ಸಮಾಜ ಇದಕ್ಕೆ ಪ್ರತಿಕ್ರಿಯಿಸಿದ ರೀತಿ. ಅದಕ್ಕಿಂತಲೂ ಬೇಸರ ಎಂದರೆ ಧರ್ಮಕ್ಷೇತ್ರದ ವಿರುದ್ಧ ನಡೆದ ತೇಜೋವಧೆಯನ್ನು ವಿರೋಧಿಸುವುದು ಬಿಡಿ, ಅಲ್ಲಿನ ಭಕ್ತರೇ ಧರ್ಮ ಕ್ಷೇತ್ರದ ವಿರೋಧಿ ಹೋರಾಟಗಾರರ ಜತೆ ಸೇರಿಕೊಂಡರು. ಆರ್‌ಎಸ್‌ಎಸ್ ಕೂಡಾ ಬಹಿರಂಗವಾಗಿ ಕಾಣಿಸಿಕೊಳ್ಳಲೇ ಇಲ್ಲ. ಬಿಜೆಪಿ ನಾಯಕರು ಎದುರಿಗೆ ಇರುವ ಬೃಹತ್ ಪ್ರವಾಹದ ಎದುರು ಈಜಲು ಮನಸ್ಸು ಮಾಡಲೇ ಇಲ್ಲ. ಆದರೂ ಪ್ರವಾಹ ವಿರುದ್ಧ ಈಜಲು ಧೈರ್ಯವಂತರೂ ಬೆರಳೆಣಿಕೆಯ ಪತ್ರಕರ್ತರಿದ್ದರು. ಹಲವು ಜಾಲತಾಣಿಗರಿದ್ದರು. ಈಗ ಸಂಖ್ಯೆ ನೂರು ಇದ್ದದ್ದು ಸಾವಿರವಾಗಿದೆ, ಶೀಘ್ರದಲ್ಲಿ ಲಕ್ಷ ಲಕ್ಷವಾಗಲಿದೆ, ಕೋಟಿಯಾದಾಗ ಈ ಸುಳ್ಳು ನರೇಶನ್ ಕಾರ್ಮೋಡ ತನ್ನಿಂದ ತಾನಾಗಿಯೇ ಮರೆಯಾಗಲಿದೆ.

ಇಂದು ಸಾರಿಗೆ ನೌಕರರ ಗೈರು

← ಮೊದಲಪುಟದಿಂದ

ಈ ನಡುವೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು, ಒಂದು ದಿನದ ಮಟ್ಟಿಗೆ ಮುಷ್ಕರ ನಡೆಸಬೇಡಿ ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಆದರೆ ಹೈಕೋರ್ಟ್ ಆದೇಶದ 'ತಾಂತ್ರಿಕ' ಅಂಶಗಳನ್ನು ಮುಂದಿಟ್ಟುಕೊಂಡು, ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳು, ನೌಕರರು ಯಾವುದೇ ಪ್ರತಿಭಟನೆ, ರ‍್ಯಾಲಿ ನಡೆಸುವುದಿಲ್ಲ. ಬದಲಿಗೆ ಕೆಲಸಕ್ಕೆ ಗೈರಾಗುವ ಮೂಲಕ ವಿರೋಧ ದಾಖಲಿಸಲು ತೀರ್ಮಾನಿಸಿದ್ದಾರೆ.

ಹೈಕೋರ್ಟ್ ಮಧ್ಯಂತರ ಆದೇಶ ನೀಡಿರುವುದರಿಂದ, ಕ್ರಿಯಾ ಸಮಿತಿಯಲ್ಲಿಯೇ ಗೊಂದಲಗಳಿವೆ. ಆದ್ದರಿಂದ ಮುಷ್ಕರ ಪೂರ್ಣ ಪ್ರಮಾಣದಲ್ಲಿ ನಡೆಯುವುದೋ ಅಥವಾ ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿದರೆ 'ನ್ಯಾಯಾಂಗ ನಿಂದನೆ'ಯಾಗಲಿದೆ ಎನ್ನುವ ಆತಂಕದಿಂದ ನೌಕರರು ಕೆಲಸಕ್ಕೆ ಹಾಜರಾಗುವರೋ ಎನ್ನುವ ಗೊಂದಲಗಳಿವೆ. ಆದರೆ ಈ ಗೊಂದಲದ ಹೊರತಾಗಿಯೂ ರಾಜ್ಯ ಸರಕಾರ ಸಾರ್ವಜನಿಕರಿಗೆ ಸಮಸ್ಯೆಯಾಗದಿರಲಿ ಎಂದು ಶೇ.40ರಷ್ಟು ಖಾಸಗಿ ಬಸ್‌ಗಳನ್ನು ರಸ್ತೆಗೆ ಇಳಿಸುವಂತೆ ಸೂಚನೆ ನೀಡಲಾಗಿದೆ.

ನಮಗೆ ಭರವಸೆ ಸಿಕ್ಕಿಲ್ಲ: ಸಿಎಂ ಸಂಧಾನ ಸಭೆಯ ಬಳಿಕ ಮಾತನಾಡಿದ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ಮಾತನಾಡಿ, 24 ತಿಂಗಳ ಹಿಂಬಾಕಿ ನೀಡಲು ಸಾಧ್ಯವಿಲ್ಲ. 14 ತಿಂಗಳು ಆರಿಯರ್ಸ್ ಕೊಡುತ್ತೇವೆ ಎಂದು ಸಿಎಂ ತಿಳಿಸಿದ್ದು, ಮುಂದಿನ ವೇತನ ಪರಿಷ್ಕರಣೆ ಬಗ್ಗೆಯೂ ನಮಗೆ ಭರವಸೆ ಸಿಕ್ಕಿಲ್ಲ. ಹೀಗಾಗಿ ಮುಷ್ಕರ ನಡೆಯಲಿದೆ ಎಂದು ಸ್ಪಷ್ಟಪಡಿಸಿದರು. ಸಾರಿಗೆ ನೌಕರರ 38 ತಿಂಗಳ ಬಾಕಿ ವೇತನ ಬಿಡುಗಡೆ ಮಾಡಬೇಕು. 2024ರ ಜ.1ರಿಂದ ಅನ್ವಯವಾಗುವಂತೆ ಹೊಸ ವೇತನ ಪರಿಷ್ಕರಣೆ, ಖಾಸಗೀಕರಣ, ಭ್ರಷ್ಟಾಚಾರ, ಕಾರ್ಮಿಕರ ಮೇಲಿನ ಕಿರುಕುಳ ನಿಲ್ಲಬೇಕು. ವಿದ್ಯುತ್‌ಚಾಲಿತ ಬಸ್‌ಗಳಲ್ಲಿ ಸಂಸ್ಥೆಯ ಚಾಲಕರನ್ನೇ ನಿಯೋಜಿಸಬೇಕು. ಬೇಡಿಕೆ ಈಡೇರಿಸುವವರೆಗೂ ರಾಜ್ಯಾದ್ಯಂತ ಸಾರಿಗೆ ಸಿಬ್ಬಂದಿ ಮುಷ್ಕರ ಮಾಡುತ್ತೇವೆ. ರಾಜ್ಯಾದ್ಯಂತ 4 ಸಾರಿಗೆ ನಿಗಮಗಳ ಸಿಬ್ಬಂದಿಯಿಂದ ಧರಣಿ ನಡೆಯುತ್ತೆ. ಸರಕಾರ ಯಾವುದೇ ಬೆದರಿಕೆಗೆ ನಾವು ಜಗ್ಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಾರಿಗೆ ನೌಕರ ಮುಷ್ಕರ ಬೆಳಗ್ಗೆ 6 ಗಂಟೆಯಿಂದ ಆರಂಭಗೊಳ್ಳಲಿದ್ದು, ರಾಜ್ಯಾದ್ಯಂತ ಡಿಪೋಗಳಲ್ಲೇ ಬಸ್ ಸ್ಥಗಿತವಾಗಬೇಕು. ಅಧಿಕಾರಿಗಳು ಒತ್ತಡ ಹಾಕಿ ಬಸ್ ಓಡಿಸುವ ಪ್ರಯತ್ನ ಮಾಡಬೇಡಿ. ಕಾರಣ ಶಾಂತಿಯುತವಾಗಿ ಮುಷ್ಕರ ಮುಂದುವರಿಯಬೇಕು. ಇದರ ನಡುವೆ ಯಾವುದೇ ಒತ್ತಡ ಪ್ರಯತ್ನ ಬೇಡ. ಯಾವ ಬೆದರಿಕೆ ಹಾಕಿದರೂ ಜಗ್ಗದೇ ನೀವು ಮುಷ್ಕರದಲ್ಲಿ ಭಾಗಿಯಾಗಿ ಎಂದು ಅನಂತ್ ಸುಬ್ಬರಾವ್ ಕರೆಕೊಟ್ಟಿದ್ದಾರೆ.

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ ಹೊಸಪೇಟೆ–583201"

ಸಂ: ಜಿ.ನ.ಕೊ.ವಿ/ಟೆಂಡರ್/ಅ.ನ.ಮ(4)/ಟೆಂ.ಪ್ರ/2025–26 ದಿನಾಂಕ :02.08.2025

ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆ ವ್ಯಾಪ್ತಿಯ ನಗರಸಭೆ ಹೊಸಪೇಟೆ ಹಾಗೂ ಪುರಸಭೆ ಹರಪನಹಳ್ಳಿ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ(ಮು)4 ರ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ಟೆಂಡರ್‌ಗಳನ್ನು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಕಾಮಗಾರಿ ವಿವರ: 01.Construction of UGD manhole chambers, providing and laying of ugd lines for missing links, household connection and restoration works at various locations in Hospete CMC Limits (DMA/2024-25/OW/WORK_INDENT35098/Call-3) **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 694.83. **ಇ.ಎಂ.ಡಿ. (ರೂ.ಗಳಲ್ಲಿ):** 1042245.00. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 18.08.2025 Time16.30 Hr. **ಟೆಂಡರ್ ತೆರೆಯುವ ದಿನಾಂಕ:** 19.08.2025 Time 17.00 Hr

02.Construction of town municipal council office building in harpanhalli town under nagarothana phase-4 (DMA/2025-26/BD/WORK_INDENT45203. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 252.97. **ಇ.ಎಂ.ಡಿ. (ರೂ.ಗಳಲ್ಲಿ):** 3,79,500.00. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 03.09.2025 Time16.30 Hr. **ಟೆಂಡರ್ ತೆರೆಯುವ ದಿನಾಂಕ:** 04.09.2025 Time 17.00 Hr

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಗಳಲ್ಲಿ ಬದಲಾವಣೆ ಅಥವಾ ಷರತ್ತುಗಳಲ್ಲಿ ಏನಾದರೂ ಮಾರ್ಪಾಡುಗಳಿದ್ದಲ್ಲಿ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗುವುದು. ಈ ಬಗ್ಗೆ ಪ್ರತ್ಯೇಕವಾಗಿ ಯಾವುದೇ ಪತ್ರಿಕಾ ಪ್ರಕಟಣೆ ನೀಡುವುದಿಲ್ಲ. ಹೆಚ್ಚಿನ ವಿವರಗಳಿಗೆ ಶ್ರೀ ಬಿ.ವೀರೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, (ದೂ ಸಂ: 9731867295) ಇವರನ್ನು ಸಂಪರ್ಕಿಸಿ ಪಡೆಯಬಹುದು.

ವಾ.ಸಾ.ಸಂ.ಇ/ವಿಜಯನಗರ/2025–26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/185
ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾನಗರಾಭಿವೃದ್ದಿ ಕೋಶ, ವಿಜಯನಗರ ಜಿಲ್ಲೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354– 235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2/ಟೆಂಡರ್/2025–26/1743 ದಿನಾಂಕ:31.07.2025

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಏಕ & ದ್ವಿ–ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ–1, 2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2025–26ನೇ ಸಾಲಿನ ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವಿಧ ಲೆಕ್ಕಶೀರ್ಷಿಕೆ ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಹಾಗೂ ಬೀಳಗಿ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ Standard Tender Document KW-1,2&3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Tender Called for 2025–26ನೇ ಸಾಲಿನ ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವಿಧ ಲೆಕ್ಕಶೀರ್ಷಿಕೆ ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಹಾಗೂ ಬೀಳಗಿ ಕಾಮಗಾರಿಗಳಿಗೆ

Scheme Under Work Indent No:
ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ: **RDPR/2025-26/RD/WORK_INDENT15835/CALL-2**
RDPR/2025-26/RD/WORK_INDENT15832 RDPR/2025-26/RD/WORK_INDENT15846/CALL-2
RDPR/2025-26/RD/WORK_INDENT17501 RDPR/2025-26/RD/WORK_INDENT17502
ಪ್ರವರ್ಗ–2(ಎ)ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ಸಂಖ್ಯೆ: **RDPR/2025-26/RD/WORK_INDENT15854**
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ಸಂಖ್ಯೆ:: **RDPR/2025-26/RD/WORK_INDENT15866**

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.25.00 ದಿಂದ 60.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **12.08.2025 ರ ಸಾಯಂಕಾಲ 5.30** ಗಂಟೆವರೆಗೆ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **14.08.2025 ರಂದು ಮುಂಜಾನೆ 11.00** ಗಂಟೆಯ ನಂತರ. (ದ್ವಿ ಲಕೋಟೆ ಟೆಂಡರಗಳಿಗೆ ಮಾತ್ರ ಅನ್ವಯವಾಗುತ್ತದೆ)

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟ/198/ದೇಶಪಾಂಡೆಪಬ್ಲಿಸಿಟಿ/2025–26

ಯುವತಿ ವಿಚಾರಕ್ಕೆ ಯುವಕನ ಬರ್ಬರ ಹತ್ಯೆ

ಕೊಪ್ಪಳ: ನಡುರಸ್ತೆಯಲ್ಲೇ ಮಚ್ಚಿನಿಂದ ಕೊಚ್ಚಿ ಯುವಕನನ್ನು ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಕೊಪ್ಪಳದ ಬಹದ್ದೂರ ಬಂಡಿ ರಸ್ತೆಯಲ್ಲಿ ನಡೆದಿದೆ.

ಕೊಪ್ಪಳ ಬಾನು ಎಂಬ ಯುವತಿಯನ್ನು ಪ್ರೀತಿಸುತ್ತಿದ್ದ ಸಾದಿಕ್, ಈಕೆಯ ಮತ್ತೊಬ್ಬ ಪ್ರೇಮಿ ಗವಿಸಿದ್ದಪ್ಪನನ್ನು ಕೊಚ್ಚಿ ಕೊಲೆ ಮಾಡಿದ್ದಾನೆ. ಘಟನೆ ಹಿನ್ನೆಲೆ ಮೃತನ ತಂದೆ ನಿಂಗಜ್ಜ ಟಣಕನಲ್ ಎಂಬುವರು ಸಾದಿಕ್ ಹಾಗೂ ಇತರೇ ಮೂವರು ಸೇರಿ ಕೊಲೆ ಮಾಡಿದ್ದಾರೆ ಎಂದು ಕೊಪ್ಪಳ ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಸಂಬಂಧ ಕೊಪ್ಪಳ ನಗರ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಕಳೆದ ಕೆಲ ದಿನಗಳ ಹಿಂದೆ ಕೃಷಿ ಸಾಮಗ್ರಿ ಮಾರಾಟ ಮಳಿಗೆಯಲ್ಲಿ ಗವಿಸಿದ್ದಪ್ಪ ನಾಯಕ ಮತ್ತು ಬಾನು ಕೆಲಸ ಮಾಡುತ್ತಿದ್ದರು. ಕೆಲಸ ಮಾಡುವ ಜಾಗದಲ್ಲಿ ಪರಿಚಯ ಆಗಿದ್ದ ಇವರು, ನಂತರ ಒಬ್ಬರಿಗೊಬ್ಬರು ಪ್ರೀತಿಸಿದ್ದಾರೆ. ಇಷ್ಟೇ ಅಲ್ಲದೇ ಸುಮಾರು 7 ತಿಂಗಳ ಹಿಂದೆ ಮೃತ ಗವಿಸಿದ್ದಪ್ಪ ಮತ್ತು ಆಗ ಅಪ್ರಾಪ್ತೆ ಆಗಿದ್ದ ಬಾನು ಮದುವೆಯಾಗಲು ಓಡಿ ಹೋಗಿದ್ದರು. ಆಗ ಬಾನು ಅಪ್ರಾಪ್ತೆ ಆಗಿದ್ದರಿಂದ ರಾಜಿ ಪಂಚಾಯಿತಿ ನಡೆದು, ಇವರನ್ನು ಬೇರೆ ಮಾಡಿದ್ದರು. ಘಟನೆ ನಂತರ ಇಬ್ಬರನ್ನೂ ಕೆಲಸ ಬಿಡಿಸಲಾಗಿತ್ತು. ನಂತರವೂ ಗವಿಸಿದ್ದಪ್ಪ ಮತ್ತು ಬಾನು ಪ್ರೀತಿ-ಪ್ರೇಮ ಮುಂದುವರೆದಿತ್ತು. ಇದೇ ಬಾನು ಅವಳನ್ನು ಮದುವೆ ಆಗಬೇಕು ಅಂದುಕೊಂಡಿದ್ದ ಸಾದಿಕ್, ಗವಿಸಿದ್ದಪ್ಪ ನಾಯಕನನ್ನು ಕೊಲೆ ಮಾಡಿದ್ದಾನೆ. ಅನ್ಯಕೋಮಿಗೆ ಸಂಬಂಧಿಸಿದವರ ಪ್ರಕರಣ ಆಗಿರುವ ಹಿನ್ನೆಲೆ ಪೊಲೀಸರು ಹೈ ಅಲರ್ಟ್ ಆಗಿದ್ದಾರೆ. ಎಸ್ಪಿ ಡಾ.ರಾಮ್ ಎಲ್ ಅರಸಿದ್ದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪತ್ನಿಯನ್ನು ಕೊಂದು ಪತಿ ಆತ್ಮಹತ್ಯೆ

ಹಾವೇರಿ: ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ತಡಸ ಗ್ರಾಮದಲ್ಲಿ ಪವಿತ್ರಾ ಹಡಗಲಿ (35) ಎಂಬುವವರ ಕೊಲೆ ನಡೆದಿದ್ದು, ಆರೋಪಿ ಎನ್ನಲಾದ ಪತಿ ರವಿ (40) ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಡಸ ಗ್ರಾಮದ ನಿವಾಸಿ ಪವಿತ್ರಾ ಹಾಗೂ ರವಿ ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಆರೋಪಿ ರವಿ, ಕೂಲಿ ಕೆಲಸ ಮಾಡುತ್ತಿದ್ದರು' ಎಂದು ಹೆಚ್ಚುವರಿ ಎಸ್ಪಿ ಎಲ್.ವೈ. ಶಿರಕೋಳ ತಿಳಿಸಿದರು. ಪತ್ನಿ ಶೀಲದ ಬಗ್ಗೆ ಶಂಕಿಸುತ್ತಿದ್ದ ಆರೋಪಿ, ಅದೇ ಕಾರಣಕ್ಕೆ ಜಗಳ ಮಾಡುತ್ತಿದ್ದ. ಸೋಮವಾರ ನಸುಕಿನಲ್ಲಿ ಇಬ್ಬರ ನಡುವೆ ಪುನಃ ಜಗಳ ಶುರುವಾಗಿತ್ತು. ಇದೇ ಸಂದರ್ಭದಲ್ಲಿಯೇ ಆರೋಪಿ ಪತ್ನಿಯನ್ನು ಕತ್ತು ಸೀಳಿ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಹೇಳಿದರು.

ಬೈಕ್ ಅಪಘಾತ: ಇಬ್ಬರು ಸಾವು

ಚಿಕ್ಕಬಳ್ಳಾಪುರ: ಸ್ನೇಹಿತರ ದಿನ ಹಿನ್ನೆಲೆ ನಂದಿಬೆಟ್ಟಕ್ಕೆ ತೆರಳಿ ಅಲ್ಲಿಂದ ವಾಪಸಾಗುವಾಗ ಬೈಕ್ ಅಪಘಾತಕ್ಕೀಡಾಗಿ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಂದಿಬೆಟ್ಟ ರಸ್ತೆಯ 15ನೇ ತಿರುವಿನ ಬಳಿ ಸಂಭವಿಸಿದೆ. ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ನಿವಾಸಿ ಶ್ರೀಕಾಂತ್(21) ಹಾಗೂ ಚಿಕ್ಕಬಳ್ಳಾಪುರ ತಾಲೂಕಿನ ಕಣಿತಹಳ್ಳಿ ಗ್ರಾಮದ ನಿವಾಸಿ ಅರವಿಂದ್(21) ಮೃತರು. ಅರವಿಂದ್ ಹಾಗೂ ಶ್ರೀಕಾಂತ್ ಸಂಬಂಧಿಕರು. ನಂದಿಬೆಟ್ಟದಿಂದ ವಾಪಸಾಗುವಾಗ ಬೈಕ್ ನಿಯಂತ್ರಣ ತಪ್ಪಿ ಬಂಡೆಗೆ ಡಿಕ್ಕಿ ಹೊಡೆದು ಅಪಘಾತವಾಗಿದೆ. ಘಟನೆ ಸಂಬಂಧ ನಂದಿ ಗಿರಿಧಾಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ವಿಷಕಾರಿ ಬೀಜ ತಿಂದು 9 ಮಕ್ಕಳು ಅಸ್ವಸ್ಥ

ಚಾಮರಾಜನಗರ: ವಿಷಕಾರಿ ಬೀಜಗಳನ್ನು ತಿಂದು ಒಂಬತ್ತು ಮಕ್ಕಳು ಅಸ್ವಸ್ಥಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಯರಿಯೂರು ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಮಹಾರಾಷ್ಟ್ರದಿಂದ ಕಬ್ಬು ಕೊಯ್ಲು ಮಾಡಲು ಬಂದಿದ್ದ ಪೋಷಕರ ಜತೆಗೆ ಮಕ್ಕಳು ಬಂದಿದ್ದರು ಎಂದು ಅವರು ತಿಳಿಸಿದ್ದಾರೆ. ಭಾನುವಾರ, ಈ ಮಕ್ಕಳಲ್ಲಿ ಕೆಲವರು 'ಮರಳೇಕಾಯಿ' ಯನ್ನು ತಿಂದಿದ್ದಾರೆ ಮತ್ತು ನಂತರ ವಾಂತಿ ಮಾಡಿದ್ದಾರೆ. ಅಸ್ವಸ್ಥಗೊಂಡ ಅವರನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಅವರು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು ಅಪಾಯದಿಂದ ಪಾರಾಗಿದ್ದಾರೆ ಎಂದು ಹೇಳಲಾಗುತ್ತದೆ. ಈ ಸಂಬಂಧ ಅವರ ಪೋಷಕರು ಇನ್ನೂ ಯಾವುದೇ ದೂರು ನೀಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬೋನಿಗೆ ಬಿದ್ದ ಚಿರತೆ

ರಾಮನಗರ: ತಾಲೂಕಿನ ಕೂಟಗಲ್ ಹೋಬಳಿಯ ಅಕ್ಕೂರು ಗ್ರಾಮದಲ್ಲಿ ಎರಡು ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಸೆರೆಯಾಗಿದೆ. ಗ್ರಾಮದ ಆಸುಪಾಸಿನ ಬೆಟ್ಟಗುಡ್ಡಗಳಲ್ಲಿ ಚಿರತೆಗಳು ವಾಸಿಸುತ್ತಿವೆ. ಸಂಜೆಯಾದರೆ ಆಹಾರ ಅರಸಿ ಗ್ರಾಮದೊಳಗೆ ಬಂದು ಕುರಿ, ಹಸುವಿನ ಕರು, ಮೇಕೆ, ಕೋಳಿ, ಸಾಕು ನಾಯಿಗಳ ಮೇಲೆ ದಾಳಿ ನಡೆಸಿ ಹೊತ್ತೊಯ್ಯುತ್ತಿದ್ದವು. ನಸುಕಿನಲ್ಲಿ ಜನರ ಕಣ್ಣಿಗೂ ಬಿದ್ದಿದ್ದ ಚಿರತೆ ಗ್ರಾಮಸ್ಥರಲ್ಲಿ ಆತಂಕ ಹುಟ್ಟಿಸಿತ್ತು. ಆಹಾರ ಅರಸಿ ಬಂದಿದ್ದ ಚಿರತೆ ಬೋನಿನಲ್ಲಿ ಕೂಡಿ ಹಾಕಿದ್ದ ಕೋಳಿಗಳನ್ನು ತಿನ್ನಲು ಬೋನಿನೊಳಕ್ಕೆ ನುಗ್ಗಿ ಸೆರೆಯಾಗಿದೆ. ಚಿರತೆ ಸೆರೆಯಾಗಿರುವ ವಿಷಯವನ್ನು ಗ್ರಾಮಸ್ಥರು ಅರಣ್ಯ ಇಲಾಖೆಗೆ ಅಧಿಕಾರಿಗಳಿಗೆ ತಿಳಿಸಿದರು. ಸ್ಥಳಕ್ಕೆ ಬಂದ ಅಧಿಕಾರಿಗಳು ಬೋನು ಸಮೇತ ಚಿರತೆಯನ್ನು ಅರಣ್ಯದೊಳಕ್ಕೆ ಕೊಂಡೊಯ್ದು ಬಿಟ್ಟು ಬಂದರು.

ಮೀನುಗಾರರ ರಕ್ಷಣೆ

ಉಡುಪಿ: ಮಲ್ಪೆಯಿಂದ ಮೀನುಗಾರಿಕೆಗೆ ತೆರಳಿದ್ದ ದೋಣಿಯೊಂದು ಸೋಮವಾರ ಕಾಪು ಲೈಟ್ ಹೌಸ್ ಬಳಿ ಮಗುಚಿದ್ದು, ಅದರಲ್ಲಿದ್ದ ಏಳು ಮಂದಿ ಮೀನುಗಾರರನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಆಂಧ್ರ ಪ್ರದೇಶದ ಏಳು ಮಂದಿ ಮೀನುಗಾರರಿದ್ದ ಟ್ರಾಲ್ ಬೋಟ್ ಮಲ್ಪೆಯಿಂದ ಹೊರಟಿತ್ತು. ಕಾಪು ಪಡು ಗ್ರಾಮದ ಲೈಟ್ ಹೌಸ್ ಬೀಚ್‌ನ ಬಳಿ ತಲುಪಿದಾಗ ರಭಸದಿಂದ ಗಾಳಿ ಬೀಸಿದ ಪರಿಣಾಮವಾಗಿ ದೋಣಿ ಮಗುಚಿದೆ. ದೋಣಿಯಲ್ಲಿದ್ದ ಮೀನುಗಾರರೆಲ್ಲ ಆಂಧ್ರಪ್ರದೇಶದ ವಿಶಾಖಪಟ್ಟಣದವರಾಗಿದ್ದು, ಮಲ್ಪೆಯಲ್ಲಿ ಮೀನುಗಾರಿಕಾ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು.

ವಿಶ್ವವಾಣಿ ಕ್ಲಬ್ ಹೌಸ್
05.08.2025
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ



ಹರೀಶ್ ನಾಗರಾಜು
ವಿಷಯ
ನಿರೂಪಣಾ ಜಗತ್ತು
vishwavani.news

ತನಿಖೆಗೆ ಅಧಿಕಾರಿಗಳ ಆದೇಶ | ಹುಲಿಗಳ ಸಾವು ಬೆನ್ನಲ್ಲೇ ಮತ್ತೊಂದು ಪ್ರಕರಣ

20 ನವಿಲುಗಳ ಮಾರಣ ಹೋಮ

ತುಮಕೂರು: ಕರ್ನಾಟಕದಲ್ಲಿ ವನ್ಯಜೀವಿಗಳ ಸರಣಿ ಸಾವು ಪ್ರಕರಣ ಮುಂದುವರಿದಿದ್ದು, 4 ಹುಲಿಗಳ ಸಾವು ಪ್ರಕರಣ ಹಸಿರಾಗಿರುವಂತೆಯೇ ಇತ್ತ 20 ನವಿಲುಗಳು ಅನುಮಾನಾಸ್ಪದವಾಗಿ ಸಾವನ್ನಪ್ಪಿವೆ.

ಕರ್ನಾಟಕದ ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಿಡಿಗೇಶಿಯ ಹನುಮಂತಪುರ ಗ್ರಾಮದ ಕೆರೆ ಕೋಡಿ ನೀರು ಹರಿಯುವ ಪಕ್ಕದ ಜಮೀನುಗಳಲ್ಲಿ 5 ಗಂಡು ಹಾಗೂ 15 ಹೆಣ್ಣು ಸೇರಿ ಒಟ್ಟು 20 ನವಿಲುಗಳು ನಿಗೂಢವಾಗಿ ಸಾವನ್ನಪ್ಪಿರುವುದು ಪತ್ತೆ ಆಗಿದೆ. ಸೋಮವಾರ ಬೆಳಗ್ಗೆ ರೈತರು ಜಮೀನಿಗೆ ಬಂದಾಗ ನವಿಲುಗಳ ಮೃತದೇಹಗಳು ಪತ್ತೆ ಆಗಿದ್ದು, ಆಗಸ್ಟ್ 1ರ ರಾತ್ರಿ ನವಿಲುಗಳು ಮೃತಪಟ್ಟ ಬಗ್ಗೆ ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳು ದೌಡು: ಇತ್ತ ನವಿಲುಗಳ ಸಾವಿನ ವಿಚಾರ ತಿಳಿಯುತ್ತಲೇ ಘಟನಾ ಸ್ಥಳಕ್ಕೆ ಅಧಿಕಾರಿಗಳು ದೌಡಾಯಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ನ್ಯಾಯಾಧೀಶರ ಅನುಮತಿ ಬಳಿಕ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ಆ ಮೂಲಕ ನವಿಲುಗಳ ಸಾವಿನ ಕಾರಣದ ವರದಿ ಪಡೆಯಲು ಅರಣ್ಯಾಧಿಕಾರಿಗಳು ಮುಂದಾಗಿದ್ದಾರೆ.

ಒಂದೇ ಕಡೆ 20 ನವಿಲುಗಳು ಸಾವನ್ನಪ್ಪಿರುವುದು.

ಕ್ರಿಮಿನಾಶಕ ಸೇವನೆ ಶಂಕೆ

ನವಿಲುಗಳ ಸಾವಿಗೆ ನಿಖರ ಮಾಹಿತಿ ತಿಳಿದುಬಂದಿಲ್ಲ. ಕ್ರಿಮಿನಾಶಕ ಸಿಂಪಡಣೆ ಮಾಡಿರುವ ಬೆಳೆಗಳನ್ನು ಸೇವಿಸಿ ನವಿಲುಗಳು ಮೃತಪಟ್ಟಿರಬಹುದು ಅಥವಾ ಯಾರಾದರೂ ಏನಾದರೂ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

- ಹನುಮಂತಪುರ ಗ್ರಾಮದ ಕೆರೆ ಪಕ್ಕದ ಜಮೀನುಗಳಲ್ಲಿ ನವಿಲುಗಳು ಸಾವು
- 5 ಗಂಡು ಹಾಗೂ 15 ಹೆಣ್ಣು ಸೇರಿ ಒಟ್ಟು 20 ನವಿಲುಗಳು ಸಾವು
- ಸೋಮವಾರ ಬೆಳಗ್ಗೆ ಪ್ರಕರಣ ಬೆಳಕಿಗೆ
- ಎಫ್‌ಎಸ್‌ಎಲ್‌ಗೆ ನವಿಲುಗಳ ರವಾನೆ

ತನಿಖೆಗೆ ಆದೇಶಿಸಿದ ಖಂಡ್ರೆ

ಬೆಂಗಳೂರು: ಕೆಲ ದಿನಗಳ ಹಿಂದಷ್ಟೇ ರಾಷ್ಟ್ರಪ್ರಾಣಿ ಹುಲಿಗಳಿಗೆ ವಿಶಪ್ರಾಶನ ಮಾಡಿ ಕೊಂದ ಬೆನ್ನಲ್ಲೇ, ಇದೀಗ ತುಮಕೂರಿನಲ್ಲಿ ಮಿಡಿಗೇಶಿಯ ಜಮೀನಿನಲ್ಲಿ ರಾಷ್ಟ್ರಪಕ್ಷಿ ನವಿಲುಗಳ ಅನುಮಾನಾಸ್ಪದ ಸಾವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರಕಾರ, ಡಿಸಿಎಫ್ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದೆ. ಈ ಬಗ್ಗೆ ಮಾತನಾಡಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಮಿಡಿಗೇಶಿಯ ಬಳಿ ರೈತರೊಬ್ಬರ ಜಮೀನಿನಲ್ಲಿ 19 ನವಿಲುಗಳು ಮೃತಪಟ್ಟಿರುವುದು ಬೇಸರದ ವಿಷಯ. ಒಂದೂವರೆ ತಿಂಗಳ ಹಿಂದೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಮ್ಮ ರಾಷ್ಟ್ರಪ್ರಾಣಿಯಾದ ಹುಲಿ ಮತ್ತು ಅದರ ನಾಲ್ಕು ಮರಿಗಳು ವಿಶಪ್ರಾಶನದಿಂದ ಮೃತಪಟ್ಟಿದ್ದವು, ನಂತರ ಕೋತಿಗಳನ್ನು ಕೊಂದು ಬಂಡೀಪುರದ ಬಳಿ ಎಸೆದಿದ್ದ ಘಟನೆ ನಡೆದಿತ್ತು. ಈಗ ನಮ್ಮ ರಾಷ್ಟ್ರಪಕ್ಷಿ ನವಿಲಿನ ಮಾರಣ ಹೋಮ ನಡೆದಿರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ತಿಳಿಸಿದ್ದಾರೆ. ನವಿಲುಗಳ ಸಾವಿಗೆ ಕೀಟನಾಶಕ ಸೇವನೆ ಕಾರಣ ಎಂದು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಕೀಟನಾಶಕವನ್ನು ನವಿಲುಗಳನ್ನು ಸಾಯಿಸಲೆಂದೇ ಹಾಕಲಾಗಿತ್ತೆ ಅಥವಾ ಬೆಳೆಗಳಿಗೆ ಸಿಂಪಡಿಸಿದ ಕೀಟನಾಶಕಯುಕ್ತ ಫಸಲು ತಿಂದು ನವಿಲುಗಳು ಮೃತಪಟ್ಟಿವೆಯೇ ಎಂಬ ಬಗ್ಗೆ ಡಿಸಿಎಫ್ ನೇತೃತ್ವದ ತಂಡದಿಂದ ತನಿಖೆ ನಡೆಸಿ 5 ದಿನಗಳ ಒಳಗಾಗಿ ವರದಿ ಸಲ್ಲಿಸಲು ಮತ್ತು ನಿಯಮಾನುಸಾರ ಕ್ರಮ ಜರುಗಿಸಲು ಸೂಚಿಸಿದ್ದಾರೆ. ಇದರೊಂದಿಗೆ ಶೆಡ್ಯೂಲ್ 1 ಮತ್ತು 2ರ ಯಾವುದೇ ವನ್ಯಜೀವಿ ಮೃತಪಟ್ಟರೂ ಆಡಿಟ್ ಮಾಡಿಸಿ ತತಕ್ಷಣವೇ ಸಚಿವರ ಕಾರ್ಯಾಲಯಕ್ಕೆ ಮಾಹಿತಿ ನೀಡಲು ಕ್ರಮ ವಹಿಸಲೂ ನಿರ್ದೇಶನ ನೀಡಿದ್ದಾರೆ.

11ನೇ ಸ್ಥಳ ಸಮೀಪದಲ್ಲಿ ಎಸ್‌ಐಟಿಗೆ ಮೂಳೆ ಪತ್ತೆ

ಧರ್ಮಸ್ಥಳ: ಅಪರಿಚಿತ ಶವಗಳನ್ನೂ ಹೂತಿಟ್ಟ ಪ್ರಕರಣದ ಸಂಬಂಧ ಎಸ್‌ಐಟಿ ಧರ್ಮಸ್ಥಳ ಪರಿಸರದಲ್ಲಿ ತೀವ್ರಗತಿಯಲ್ಲಿ ಶೋಧ ನಡೆಸಿದೆ. ಶವಗಳನ್ನು ಹೂತಿಟ್ಟಿದ್ದೇನೆ ಎಂದು ಮುಸುಕುಧಾರಿ ಗುರುತಿಸಿರುವ 13 ಸ್ಥಳಗಳ ಪೈಕಿ ಸೋಮವಾರ 6ನೇ ದಿನ ಕಾರ್ಯಾಚರಣೆ 11ನೇ ಸ್ಥಳದಲ್ಲಿ ನಡೆಯಿತು. ಉತ್ಖನನ ನಡೆಸಿದ ಎಸ್‌ಐಟಿ ತಂಡಕ್ಕೆ 11ನೇ ಸ್ಥಳದ ಮೇಲ್ಭಾಗದಲ್ಲಿ ಮಾನವ ಕಳೇಬರ ಪತ್ತೆಯಾಗಿದೆ ಎನ್ನಲಾಗಿದ್ದು, ಅಧಿಕೃತವಾಗಿ ದೃಢಪಟ್ಟಿಲ್ಲ.

ಶನಿವಾರ ನಡೆಸಿದ 9, 8, 10ನೇ ಸ್ಥಳದಲ್ಲಿ ಯಾವುದೇ ಕಳೇಬರ ಪತ್ತೆ ಆಗಿರಲಿಲ್ಲ. ಸದ್ಯ 11ನೇ ಸ್ಥಳದಲ್ಲಿ ಮತ್ತೊಂದು ಕಳೇಬರ ಸಿಕ್ಕಿರುವ ಮಾಹಿತಿದೆ. ಈಗಾಗಲೇ 6ನೇ ಸ್ಥಳದಲ್ಲಿ ಕಳೇಬರ ಪತ್ತೆ ಆಗಿದ್ದು, ಮೂಳೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದೆ. ಸೋಮವಾರ ಬೆಳಗ್ಗೆ 11.30ಕ್ಕೆ ಬಂಗ್ಲೆ ಗುಡ್ಡೆಯ ಪರಿಸರಲ್ಲಿ ಶೋಧ ಕಾರ್ಯ ನಡೆಯಿತು. ಉಪ್ಪು ಹಾಗೂ ಅಗತ್ಯ ಪರಿಕರಗಳೊಂದಿಗೆ ತೆರಳಿದ ಎಸ್‌ಐಟಿ ಸಂಜೆ ವರೆಗೆ ಶೋಧ ನಡೆಸಿದೆ. ಮಂಗಳವಾರ ನಡೆಯುವ 7ನೇ ದಿನ ಕಾರ್ಯಾಚರಣೆಯಲ್ಲಿ ಗುರುತಿಸಿದ 12 ಹಾಗೂ 13 ಪಾಯಿಂಟ್‌ಗಳಲ್ಲಿ ಉತ್ಖನನ ನಡೆಯಲಿದೆ.

ನಿತ್ಯ ಎಸ್‌ಐಟಿ ತಂಡಕ್ಕೆ 1.5 ಲಕ್ಷ ಖರ್ಚು: ಎಸ್‌ಐಟಿ ತಂಡಕ್ಕೆ ಭಾರೀ ಮೊತ್ತದಲ್ಲಿ ಹಣ ಖರ್ಚು ಮಾಡಲಾಗುತ್ತಿದೆ. ಸದ್ಯ ಬೆಳ್ತಂಗಡಿಯಲ್ಲಿ ತನ್ನ ಕಚೇರಿ ತೆರೆದಿರುವ ಎಸ್‌ಐಟಿ ತಂಡ ನಿತ್ಯವೂ ಧರ್ಮಸ್ಥಳ ಪರಿಸರದಲ್ಲಿ ಬೃಹತ್ ತಂಡದೊಂದಿಗೆ ಶೋಧ ಕಾರ್ಯ ನಡೆಸುತ್ತಿದೆ. ಎಸ್‌ಐಟಿ ತಂಡಕ್ಕೆ ಪ್ರತಿ ದಿನ ಸುಮಾರು ಒಂದೂವರೆ ಲಕ್ಷ ರುಪಾಯಿ ಖರ್ಚಾಗುತ್ತಿದೆ. ಎಸ್‌ಐಟಿ ತಂಡದಲ್ಲಿ 26 ಜನ, ಫೊರೆನ್ಸಿಕ್ ವಿಭಾಗದಿಂದ 5 ಜನ, ಸೀನ್ ಆಫ್ ಕ್ರೈಮ್ ಆಫೀಸರ್ಸ್, 15 ಪೌರ ಕಾರ್ಮಿಕರು, 200 ಪೊಲೀಸ್ ಸಿಬ್ಬಂದಿ, ಒಬ್ಬರು ಎಸಿ, 1ಒಬ್ಬರು ತಹಸೀಲ್ದಾರ್, ಸ್ಥಳೀಯ ಆಡಳಿತಾಧಿಕಾರಿಗಳು ಭಾಗವಹಿಸಿದ್ದಾರೆ.

ನಿತ್ಯ ಎಸ್‌ಐಟಿ ಖರ್ಚು

ಊಟ, ತಿಂಡಿ, ವಸತಿ	10,000
15 ಜನ ಕಾರ್ಮಿಕರು	ನಿತ್ಯ 30,000
ವಾಹನಗಳ ಇಂಧನ	20,000
ಕಚೇರಿ ಸಾಮಾನು	40,000
ಫೋರೆನಿಕ್ಸ್ ಉಪಕರಣಗಳು	3 –4 ಸಾವಿರ
ಶೋಧ ಸ್ಥಳದಲ್ಲಿ ಟೆಂಟ್	3 – 4 ಸಾವಿರ

ಅಭಿಮನ್ಯು, ಪ್ರಶಾಂತ, ಭೀಮ, ಮಹೇಂದ್ರ, ಧನಂಜಯ, ನಾಡಿಗೆ | ಆನೆಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಪೂಜೆ

ದಸರಾ ಉತ್ಸವಕ್ಕೆ ಮೈಸೂರಿಗೆ ಆಗಮಿಸಿದ ಗಜಪಡೆಗೆ ಅದ್ದೂರಿ ಸ್ವಾಗತ

ಮೈಸೂರು: ಅಭಿಮನ್ಯು ನೇತೃತ್ವದ 9 ಆನೆಗಳ ಮೊದಲ ತಂಡ ಸೋಮವಾರ ಮೈಸೂರಿಗೆ ಆಗಮಿಸುವ ಮೂಲಕ 2025ನೇ ಸಾಲಿನ ದಸರಾ ಮಹೋತ್ಸವ ಸಾಂಕೇತಿಕ ಚಾಲನೆ ಪಡೆದುಕೊಂಡಿತು.

ಹುಣಸೂರು ತಾಲೂಕಿನ ವೀರನಹೊಸಹಳ್ಳಿ ಗ್ರಾಮದ ಗಡಿ ಯಂಚಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಧ್ಯಾಹ್ನ 12.34ರಿಂದ 12.59ರೊಳಗಿನ ಶುಭ ಅಭಿಜಿನ್(ತುಲಾ) ಲಗ್ನದಲ್ಲಿ ಗಜಪಯಣಕ್ಕೆ ಚಾಲನೆ ನೀಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಇತರ ಗಣ್ಯರು ಗಜಪಯಣಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ವಿವಿಧ ಆನೆ ಶಿಬಿರಗಳಿಂದ ಆನೆಗಳನ್ನು ಆಯ್ಕೆ ಮಾಡಿದ್ದ ಅಧಿಕಾರಿಗಳು, ಈಗಾಗಲೇ ಆನೆಗಳ ಆರೋಗ್ಯ ತಪಾಸಣೆ ಪೂರ್ಣಗೊಳಿ ಸಿದ್ದರು. ಮೊದಲ ತಂಡದಲ್ಲಿ ಅಭಿಮನ್ಯು, ಪ್ರಶಾಂತ, ಭೀಮ, ಮಹೇಂದ್ರ, ಧನಂಜಯ, ಕಂಜನ್, ಏಕಲವ್ಯ, ಕಾವೇರಿ, ಲಕ್ಷ್ಮಿ ಆನೆಗಳು ಮೈಸೂರಿಗೆ ಆಗಮಿಸಿದವು. ಮೈಸೂರಿನತ್ತ ತೆರಳುವ 9 ಆನೆಗಳ ಮೊದಲ ತಂಡಕ್ಕೆ ಸಾಂಪ್ರದಾಯಿಕವಾಗಿ ಪೂಜೆ ನೆರವೇರಿಸಿ, ಕಬ್ಬು, ಅಕ್ಕಿ, ಬೆಲ್ಲ ತಿನ್ನಿಸಿ ಗಜಪಯಣಕ್ಕೆ ಚಾಲನೆ ನೀಡಲಾಯಿತು.

ಹುಣಸೂರು ತಾಲೂಕಿನ ವೀರನಹೊಸಹಳ್ಳಿ ಗ್ರಾಮದ ಗಡಿಯಂಚಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಜಪಯಣಕ್ಕೆ ಚಾಲನೆ ನೀಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಇತರ ಗಣ್ಯರು ಗಜಪಯಣಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು.
ಚಿತ್ರ: ಕೃಷ್ಣೋಜಿರಾವ್

ಆನೆ ಕಂದಕ, ಸೌರ ತಂತಿ ಬೇಲಿಗಳ ನಿರ್ವಹಣೆಗೆ ಸೂಚನೆ

ಸಫಾರಿಯಲ್ಲಿ ವನ್ಯಜೀವಿಗಳನ್ನು, ದಸರಾ ಜಂಬೂಸವಾರಿಯಲ್ಲಿ ಅಲಂಕೃತ ಆನೆಗಳನ್ನು ನೋಡಿ ಆನಂದಿಸುವ ನಾವು ಅವುಗಳ ಸಂರಕ್ಷಣೆಗೂ ಮುಂದಾಗಬೇಕು ಎಂದು ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟರು. ಸುದ್ದಿಗಾರರೊಂದಿಗೆ ಮಾತನಾಡಿ, ಆನೆ ಸೇರಿದಂತೆ ವನ್ಯಜೀವಿ-ಮಾನವ ಸಂಘರ್ಷ ನಿಯಂತ್ರಣಕ್ಕೆ ಸರಕಾರ ಅನೇಕ ಕ್ರಮ ಕೈಗೊಂಡಿದೆ. ಸೌರ ತಂತಿಬೇಲಿ, ಟೆಂಟಕಲ್ ಫೆನ್ಸಿಂಗ್, ಆನೆ ಕಂದಕಗಳ ಸಮರ್ಪಕ ನಿರ್ವಹಣೆ ಮಾಡಲು ನಾನು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದೇನೆ. ನಾನು ಅರಣ್ಯ ಸಚಿವನಾಗುವ ಮೊದಲು ಅಂದರೆ 2023ರ ಜೂನ್ ವರೆಗೆ ರಾಜ್ಯದಲ್ಲಿ 312.918 ಕಿ.ಮೀ ಮಾತ್ರ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿತ್ತು. ನಾನು ಸಚಿವನಾದ ಬಳಿಕ ಕಳೆದ 2 ವರ್ಷದಲ್ಲಿ 115.085 ಕಿ.ಮೀ ರೈಲ್ವೆ ಬ್ಯಾರಿಕೇಡ್ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಇನ್ನೂ 193 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಅನುಮೋದನೆ ನೀಡಲಾಗಿದೆ. ಮುಂದಿನ ಒಂದೆರೆಡು ವರ್ಷದಲ್ಲಿ 500 ಕೋಟಿ ರು. ವೆಚ್ಚದಲ್ಲಿ ಉಳಿದ ಕಡೆಯೂ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದರು.

ಅರ್ಜುನ ಪ್ರಶಸ್ತಿ ಪ್ರದಾನ

ಆನೆ ಸೆರೆ ಕಾರ್ಯಾಚರಣೆ, ಆನೆಗಳನ್ನು ಪಳಗಿಸುವುದು ಮತ್ತು ಯಶಸ್ವಿಯಾಗಿ ವನ್ಯಜೀವಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಉತ್ತಮ ಕಾರ್ಯ ಮಾಡಿದ ಮಾವುತರು, ಕಾವಾಡಿ ಹಾಗೂ ಅರಣ್ಯ ಸಿಬ್ಬಂದಿಗೆ ಇನ್ನು ಮುಂದೆ ಅರ್ಜುನ ಆನೆ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುವುದು ಎಂದು ಘೋಷಿಸಿದ್ದಂತೆ ಮೊದಲ ಸಾಲಿನ ಪ್ರಶಸ್ತಿಯನ್ನು ಭೀಮ ಆನೆಯ ಮಾವುತ ಗುಂಡ ಮತ್ತು ಕವಾಡಿ ನಂಜುಂಡಸ್ವಾಮಿಯವರಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿ ತಲಾ 10000 ರು. ಗೌರವಧನ ಹಾಗೂ ಪ್ರಶಂಸಾ ಪತ್ರ ಒಳಗೊಂಡಿತ್ತು. ಇದೇ ಸಂದರ್ಭದಲ್ಲಿ ಈ ಬಾರಿಯ ದಸರಾದಲ್ಲಿ ಪಾಲ್ಗೊಳ್ಳುವ ಆನೆಗಳ ಕಿರುಪರಿಚಯದ ಕೈಪಿಡಿ ಮತ್ತು ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಅವಕಾಶ ಕೊಟ್ಟರೆ ಭಿನ್ನಮತ ಪರಿಹರಿಸುವೆ

ದಾವಣಗೆರೆ: ರಾಜ್ಯ ಬಿಜೆಪಿಯಲ್ಲಿ ಎದ್ದಿರುವ ಭಿನ್ನಮತವನ್ನು ಅವಕಾಶ ಕೊಟ್ಟರೆ ನಾನು ಶಮನ ಮಾಡುತ್ತೇನೆ ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಬಿಜೆಪಿಯಲ್ಲಿ ಯಾವುದೇ ಗೊಂದಲವಿಲ್ಲ, ಒಗ್ಗಟ್ಟಿದೆ. ನನಗೆ ಪಕ್ಷ ಅವಕಾಶ ಮಾಡಿಕೊಟ್ಟರೇ ಬಿಜೆಪಿಯಲ್ಲಿನ ಭಿನ್ನಮತ ಎಲ್ಲವನ್ನು ಬಗೆಹರಿಸುವೆ. ರಮೇಶ ಜಾರಕಿಹೊಳಿ ಸೇರಿದಂತೆ ಎಲ್ಲರನ್ನು ಒಂದೇ ವೇದಿಕೆಗೆ ತರುವೆ. ನನ್ನನ್ನು ಹಾಗೂ ಜನಾರ್ಧನ ರೆಡ್ಡಿಯವರನ್ನ ಒಂದು ಮಾಡುವಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಮತ್ತು ಯಡಿಯೂರಪ್ಪ ಅವರ ಸಹಕಾರ ಇದೆ ಎಂದರು.

ರಾಜ್ಯ ಕಾಂಗ್ರೆಸ್‌ನಲ್ಲಿ ಮುನ್ನೆಗೆಲೆ ಬಂದಿರುವ ಸಿಎಂ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ವಿಚಾರಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದ ಅವರು, ಒಂದು ವೇಳೆ ಅಧಿಕಾರ ಡಿ.ಕೆ ಶಿವಕುಮಾರ ಅವರಿಗೆ ಬಿಟ್ಟು ಕೊಡುವ ಪರಿಸ್ಥಿತಿ ಬಂದ್ರೆ, ಸಿದ್ದರಾಮಯ್ಯ ಸರಕಾರವನ್ನೇ ಬೀಳಿಸುತ್ತಾರೆ ವಿನಃ ಅಧಿಕಾರ ಬಿಟ್ಟುಕೊಡಲ್ಲ. ಮೊದಲಿನಿಂದಲು ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ತಿಕ್ಕಾಟ ನಡೆಯುತ್ತಲೇ ಇದೆ. ಇದು ಹೊಸದಲ್ಲ ಸಿದ್ದರಾಮಯ್ಯ ಮಾತ್ರ ಅಧಿಕಾರ ಬಿಟ್ಟು ಕೊಡಲ್ಲ ಎಂದರು.

ಆ.6ಕ್ಕೆ ಫಯಾಜ್ ಹಾಜರಾಗಲು ಕೋರ್ಟ್ ಆದೇಶ

ನೇಹಾ ಕೊಲೆ ಹಂತಕನ ಜಾಮೀನು ವಜಾ

ಹುಬ್ಬಳ್ಳಿ: ನೇಹಾ ಕೊಲೆ ಆರೋಪಿಗೆ ಜೈಲೇ ಗತಿ ಎಂಬುವಂತಾಗಿದೆ. ಕೊಲೆ ಆರೋಪಿ ಫಯಾಜ್ ಸಲ್ಲಿಸಿದ್ದ ಜಾಮೀನು ಅರ್ಜಿ ತಿರಸ್ಕೃತಗೊಂಡಿದೆ. ಆ.6 ಕ್ಕೆ ವಿಚಾರಣೆ ಮುಂದೂಡಿಕೆ ಮಾಡಿದ್ದು, ಫಯಾಜ್ ಖುದ್ದು ಹಾಜರಿಗೆ ನ್ಯಾಯಾಧೀಶರು ಸೂಚನೆ ನೀಡಿದ್ದಾರೆ.

ಹುಬ್ಬಳ್ಳಿ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧಿಶರಿಂದ ತೀರ್ಪು ಪ್ರಕಟಿಸಿದ್ದು, ಸುದೀರ್ಘವಾದ- ಪ್ರತಿವಾದ ಆಲಿಸಿದ್ದ ನ್ಯಾಯಾಧೀಶರು, ಪೊಲೀಸರು ಬಂಧನ ಪ್ರಕ್ರಿಯೆ ಸರಿಯಾಗಿ ಮಾಡಿಲ್ಲ. ಪೋಷಕರಿಗೆ ಯಾವುದೇ ಮಾಹಿತಿ ನೀಡಿಲ್ಲ. ಈ ಆಧಾರದಲ್ಲಿ ಫಯಾಜ್‌ಗೆ ಜಾಮೀನು ನೀಡುವಂತೆ ಫಯಾಜ್ ಪರ ವಕೀಲರು ಮನವಿ ಮಾಡಿದ್ದರು. ಆದರೆ ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿದೆ. ಕಳೆದ 1 ವರ್ಷ 4 ತಿಂಗಳಿಂದ ಧಾರವಾಡ 4 ಕಾರಾಗೃಹದಲ್ಲಿರುವ ಫಯಾಜ್‌ಗೆ ಜಾಮೀನಿನ ಮೇಲೆ ಹೊರಬರುವ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಜಾಮೀನು ಅರ್ಜಿ ತಿರಸ್ಕಾರಗೊಂಡ ಹಿನ್ನೆಲೆ ನೇಹಾ ಪೋಷಕರಿಗೆ ಸಮಾಧಾನವಾಗಿದೆ. ಇನ್ನೂ ಹೈಕೋರ್ಟ್ ಮೊರೆ ಹೋಗಲು ಫಯಾಜ್ ಪರ ವಕೀಲರ ಚಿಂತನೆ ನಡೆಸಿದ್ದು, ಮುಂದಿನ ಬೆಳವಣಿಗೆ ಕಾಯ್ದು ನೋಡಬೇಕಿದೆ.

ವಿಜಯಪುರದಲ್ಲಿ ಭೂಕಂಪ

ವಿಜಯಪುರ: ಜಿಲ್ಲೆಯಲ್ಲಿ ಎರಡು ಕಡಿಮೆ ತೀವ್ರತೆಯ ಕಂಪನಗಳು ದಾಖಲಾಗಿದ್ದು, ರಿಕ್ಟರ್ ಮಾಪಕದಲ್ಲಿ 2.6 ತೀವ್ರತೆಯನ್ನು ಹೊಂದಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಪ್ರಕಾರ, ಈ ಕಂಪನಗಳು ರಿಕ್ಟರ್ ಮಾಪಕದಲ್ಲಿ 2.6 ತೀವ್ರತೆಯನ್ನು ಹೊಂದಿದ್ದವು. ಮೊದಲನೆಯದು ಟಿಕೋಟಾ ತಾಲೂಕಿನ ಹೊನ್ವಾಡ್ ಗ್ರಾಮ ಪಂಚಾಯತ್‌ನ ಪೂರ್ವ-ಈಶಾನ್ಯ 2.9 ಕಿ.ಮೀ ದೂರದಲ್ಲಿ ಬೆಳಗ್ಗೆ 11.41 ಕ್ಕೆ ಸಂಭವಿಸಿದೆ ಮತ್ತು ಎರಡನೆಯದು ಬಸವನ ಬಾಗೇವಾಡಿ ತಾಲೂಕಿನ ಮಂಗೋಲಿ ಗ್ರಾಮ ಪಂಚಾಯತ್‌ನಲ್ಲಿ ಕೇಂದ್ರೀಕೃತವಾಗಿದೆ. ಭೂಕಂಪದ ಘಟನೆಯು 10 ಕಿ.ಮೀ ಆಳದಲ್ಲಿ ಸಂಭವಿಸಿದೆ. ಸೆಸ್ಮಿಕ್ ತೀವ್ರತೆಯ ನಕ್ಷೆಯ ಪ್ರಕಾರ, ಭೂಕಂಪನದ ತೀವ್ರತೆಯು ತುಂಬಾ ಕಡಿಮೆಯಾಗಿದೆ ಮತ್ತು ಭೂಕಂಪ ಕೇಂದ್ರಬಿಂದುವಿನಿಂದ 20–30 ಕಿ.ಮೀ ರೇಡಿಯಲ್ ದೂರದವರೆಗೆ ಅನುಭಕ್ಕೆ ಬರಬಹುದಾಗಿದೆ. ತೀವ್ರತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಈ ರೀತಿಯ ಭೂಕಂಪಗಳು ಸ್ಥಳೀಯ ಸಮುದಾಯಕ್ಕೆ ಯಾವುದೇ ಹಾನಿಯನ್ನುಂಟುಮಾಡುವುದಿಲ್ಲ. ಆದರೂ ಸ್ಥಳೀಯ ಕಂಪನಗಳು ಅನುಭವಿಸಬಹುದು ಎಂದು ಕೆಎಸ್‌ಎನ್‌ಡಿಎಂಸಿ ಹೇಳಿಕೆಯಲ್ಲಿ ತಿಳಿಸಿದೆ.

ನೀರಿಗೆ ಕಳೆನಾಶಕ ಹಾಕಿದ ವಿದ್ಯಾರ್ಥಿ

ಹೂವಿನಕೋಣೆ ಶಾಲೆಗೆ ಭೇಟಿ ನೀಡಿ ಎಸ್‌ಪಿ ಮಿಥುನ್ ಕುಮಾರ್ ಮಾಹಿತಿ ಪಡೆದರು.

ಶಿವಮೊಗ್ಗ: ಸರಕಾರಿ ಶಾಲೆಯ ನೀರಿನ ಟ್ಯಾಂಕ್‌ಗೆ ಕಳೆನಾಶಕ ಮಿಶ್ರಣ ಮಾಡಿದ್ದ ಪ್ರಕರಣವನ್ನು ಹೊಸನಗರ ಠಾಣೆ ಪೊಲೀಸರು ಕೊನೆಗೂ ಬೇಧಿಸಿದ್ದಾರೆ. ಅಪ್ರಾಪ್ತ ಬಾಲಕನಿಂದಲೇ ಈ ದುಷ್ಕೃತ್ಯ ನಡೆದಿದ್ದು ಎಂದು ತನಿಖೆಯಿಂದ ಬಯಲಾಗಿದೆ. 5ನೇ ತರಗತಿ ವಿದ್ಯಾರ್ಥಿ ನೀರಿನ ಟ್ಯಾಂಕ್‌ಗೆ ವಿಷ ಮಿಶ್ರಣ ಮಾಡಿದ್ದಾನೆ. ಪೊಲೀಸರ ತನಿಖೆಯಲ್ಲಿ ಅಪ್ರಾಪ್ತ ವಯಸ್ಕ ಬಾಲಕನ ಕೃತ್ಯ ಬಯ ಲಾಗಿದೆ. ಹುಡುಗಾಟಿಕೆಯಿಂದ ಬೇರೆಯ ವರಿಗೆ ಪಾಠ ಕಲಿಸಲು ಕೃತ್ಯ ಮಾಡಿರುವುದಾಗಿ ಬಾಲಕ ವಿಚಾರಣೆ ವೇಳೆ ಹೇಳಿಕೊಂಡಿದ್ದಾನೆ.

ತನಿಖೆಗೆ ಸೂಚಿಸಿದ್ದ ಸಿಎಂ

ಈ ಸಂಬಂಧ ಹೊಸನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿತ್ತು. ಇದು ಭಯೋತ್ಪಾದನಾ ಕೃತ್ಯಕ್ಕೆ ಸಮ ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಪ್ರಕರಣದ ಕುರಿತು ತನಿಖೆಗೆ ಸೂಚಿಸಿದ್ದರು. ಸಿಎಂ ಸೂಚನೆ ಬೆನ್ನಲ್ಲೇ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಕುಮಾರ್ ಸರಕಾರಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದರು. ತನಿಖೆಗೆ ನಾಲ್ಕು ತಂಡ ರಚನೆ ಮಾಡಿದ್ದರು.

ಸಚಿವರ ಹೇಳಿಕೆಗೆ ಬಿಜೆಪಿ ಆಕ್ರೋಶ, ಅಡಿಗಲ್ಲಿನಲ್ಲಿ ಟಿಪ್ಪು ಹೆಸರಿದೆ: ಸಚಿವರ ಸಮರ್ಥನೆ

ಮತ್ತೆ ಟಿಪ್ಪು ವಿವಾದದ ಕಿಡಿ ಹೊತ್ತಿಸಿದ ಮಹದೇವಪ್ಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೃಷ್ಣರಾಜ ಸಾಗರ ಅಣೆಕಟ್ಟು (ಕನ್ನಂಬಾಡಿ)ಗೆ ಮೊದಲು ಅಸ್ತಿಭಾರ ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ಸಚಿವ ಡಾ. ಎಚ್. ಸಿ. ಮಹದೇವಪ್ಪ ನೀಡಿದ್ದ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಈ ನಡುವೆ 1794ರಲ್ಲಿ ಸಿಕ್ಕಿರುವ ಶಿಲಾನ್ಯಾಸ ಫಲಕದಲ್ಲಿ ಟಿಪ್ಪು ಹೆಸರಿದ್ದು ಈ ಬಗ್ಗೆ ತಾವು ಉಲ್ಲೇಖಿಸಿದ್ದಾಗಿ ಸಚಿವರು ಹೇಳಿದ್ದಾರೆ. ಸಚಿವರ ಹೇಳಿಕೆಗೆ ಬಿಜೆಪಿ ಕಿಡಿಕಾರಿದ್ದು, ಜಾಲತಾಣದಲ್ಲೂ ಈ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಸಚಿವರ ಹೇಳಿಕೆಗೆ ಕಿಡಿಕಾರಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ಜಲಾಶಯಕ್ಕೆ ಮತಾಂಧ ಟಿಪ್ಪು ಜಲಾಶಯ ಎಂದು ಮರುನಾಮಕರಣ ಮಾಡುವ ಹುನ್ನಾರ ನಡೆಯುತ್ತಿದೆಯೇ ಎಂದರು ಪ್ರಶ್ನಿಸಿದ್ದಾರೆ. ನಾಡದ್ರೋಹಿ, ಮತಾಂಧ ಟಿಪ್ಪು ಸುಲ್ತಾನ ಸತ್ತಿದ್ದು 1799ರಲ್ಲಿ. ಮೈಸೂರು ಭಾಗದ ಗ್ರಾಮೀಣ ಜನರ ನಾಲಿಗೆಯ ಮೇಲೆ ಇಂದಿಗೂ ಕನ್ನಂಬಾಡಿ ಕಟ್ಟೆ ಎಂದೇ ಕರೆಸಿಕೊಳ್ಳುವ ಕೆಆರ್‌ಎಸ್ ಜಲಾಶಯದ ಕಾಮಗಾರಿ ಪ್ರಾರಂಭವಾದದ್ದು 1911ರಲ್ಲಿ. 1799ರಲ್ಲಿ ಸತ್ತ ಮತಾಂಧ ಟಿಪ್ಪು ಸುಲ್ತಾನನಿಗೂ, ಅವನು ಸತ್ತ ಮೇಲೆ 112 ವರ್ಷ ಆದ ಮೇಲೆ ಕಾಮಗಾರಿ ಪ್ರಾರಂಭವಾದ ಕನ್ನಂಬಾಡಿ ಕಟ್ಟೆಗೂ ಏನು ಸಂಬಂಧ ಸಚಿವರೇ? ನಿಮ್ಮ ಬಾಲಿಶ ಹೇಳಿಕೆ ಗೋಕುಲಾಷ್ಟಮಿಗೂ ಇಮಾಮ್ ಸಾಬಿಗೂ ಏನು ಸಂಬಂಧ ಎನ್ನುವಂತಾಗಿದೆ ಎಂದಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರ ಪುತ್ರ ನಾಲ್ವಡಿ ಅವರಿಗಿಂತ ಸಿದ್ದರಾಮಯ್ಯ ದೊಡ್ಡವರು ಎನ್ನುವಂತೆ ಇತ್ತೀಚೆಗಷ್ಟೇ ಮಾತನಾಡಿ ನಾಲ್ವಡಿ ಅವರಿಗೆ ಅಪಮಾನ ಮಾಡಿದರು. ಈಗ ಸಿದ್ದರಾಮಯ್ಯನವರ ಆಪ್ತ ಸಚಿವ ಮಹದೇವಪ್ಪ ಕನ್ನಂಬಾಡಿ ಕಟ್ಟೆಗೆ ಅಡಿಗಲ್ಲು ಹಾಕಿದ್ದು ಮತಾಂಧ ಟಿಪ್ಪು ಸುಲ್ತಾನ ಎಂದು ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಮತ್ತೊಮ್ಮೆ ಅಪಮಾನಮಾಡಿದ್ದಾರೆ. ಸಿದ್ದರಾಮಯ್ಯ ಅವರ ಆಪ್ತ ವಲಯದಿಂದ ಕೇಳಿಬರುತ್ತಿರುವ ಈ ಹೇಳಿಕೆಗಳನ್ನು ಗಮನಿಸಿದರೆ ಮೈಸೂರು ರಾಜಮನೆತನದ ತೇಜೋವಧೆ ಹುನ್ನಾರ ನಡೆಯುತ್ತಿದೆ ಅನ್ನಿಸುತ್ತಿದೆ ಎಂದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಸಚಿವರ ಹೇಳಿಕೆ ಅಕ್ಷಮ್ಯ ಅಪರಾಧ. ಸಿಎಂ ಸಿದ್ದರಾಮಯ್ಯ, ಮಹದೇವಪ್ಪ ಅಥವಾ ಕಾಂಗ್ರೆಸಿಗರಿಗೆ ಮೈಸೂರಿನ ಮಹಾರಾಜರಿಗೆ ಅಪಮಾನ ಮಾಡುವುದರಲ್ಲಿ ಅವರಿಗೆ ಅದೇನು ತೃಪ್ತಿ ಸಿಗುತ್ತದೋ, ಸಂತೋಷ ನೀಡುತ್ತದೋ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ ಅನೇಕ ಸಂದರ್ಭದಲ್ಲಿ ಕೃಷ್ಣರಾಜ ಒಡೆಯರ್‌ಗೆ ಅವಮಾನ ಮಾಡುವುದನ್ನು ನಿರಂತರವಾಗಿ ಮಾಡುತ್ತ ಬಂದಿದ್ದಾರೆ ಎಂದು ಟೀಕಿಸಿದ್ದಾರೆ.

ಪ್ರತಾಪ್ ಸಿಂಹ ಕಿಡಿ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ನಮ್ಮ ತಂದೆ ಜಾಸ್ತಿ ಕೆಲಸ ಮಾಡಿದ್ದಾರೆ ಅಂತ ಡಾ.ಯತೀಂದ್ರ ಹೇಳುತ್ತಾರೆ. ಕನ್ನಂಬಾಡಿಗೆ ಅಡಿಗಲ್ಲು ಹಾಕಿದ್ದು ಟಿಪ್ಪು ಅಂತ ಸಚಿವ ಡಾ. ಮಹದೇವಪ್ಪ ಹೇಳುತ್ತಾರೆ. ಕನ್ನಂಬಾಡಿಗೆ ಪ್ಲಾನ್ ಹಾಕಿದ್ದ ಅಂತಹ ಮಹಾನುಭಾವ ಇಂಜಿನಿಯರ್ ಯಾರು ಹೇಳಿ? ಮಹದೇವಪ್ಪ ಅವರೇ. ಸುಳ್ಳು ಸುದ್ದಿ ಹರಡುವವರನ್ನು ತಡೆಯಲು ಕಾಯ್ದೆ ತರುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದರು, ಮೊದಲು ಆ ಕಾಯ್ದೆ ಜಾರಿಗೆ ತನ್ನಿ, ಇಂತಹ ಸುಳ್ಳುಗಳನ್ನು ನಿಮ್ಮ ಸಚಿವರೇ ಹೇಳುತ್ತಿದ್ದಾರೆ. ಒಬ್ಬರು ಸುಳ್ಳು ಇತಿಹಾಸ ಹೇಳುತ್ತಾರೆ. ಇನ್ನೊಬ್ಬರು ಸುಳ್ಳು ಇತಿಹಾಸ ಬರೆಯಲು ಹೊರಟಿದ್ದಾರೆ. ಈ ಮೂಲಕ ಯಾರನ್ನು ಓಲೈಕೆ ಮಾಡಲು ಹೋಗುತ್ತಿದ್ದೀರಾ? ಓಲೈಕೆಯಿಂದ ಈಗಾಗಲೇ ನಿಮಗೆ ಮತಗಳು ಬರುತ್ತಿವೆ. ಇನ್ನೂ ಯಾಕೆ ಈ ರೀತಿಯ ಓಲೈಕೆ. ಇವುಗಳಿಗೆ ಕಡಿವಾಣ ಹಾಕಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾವೇರಿ ಪ್ರಾಂತ್ಯದ ಜನರಿಗೆ ನೀರಿನ ವ್ಯವಸ್ಥೆ ಮಾಡಬೇಕು ಎನ್ನುವ ಉದ್ದೇಶದಿಂದ ಮೈಸೂರು ಸಂಸ್ಥಾನದ ಆಗಿನ ರಾಜಮಾತೆ ತಮ್ಮ ಆಭರಣಗಳನ್ನ ಮಾರಾಟ ಮಾಡಿ ಕೆಆರ್‌ಎಸ್ ಜಲಾಶಯ ಕಟ್ಟಿಸಿದ್ದಾರೆ. ರಾಜಮನೆ ತನದ ತ್ಯಾಗದ ಫಲವಾಗಿ ಕೆಆರ್‌ಎಸ್ ಡ್ಯಾಂ ನಿರ್ಮಾಣವಾಗಿದೆ. ಇನ್ನೂ ಬೇರೆ ಬೇರೆ ವಿಚಾರ ಬಂದರೆ, ಬೇರೆಯವರ ಹೆಸರುಗಳು ಬಂದರೆ ಅದರ ಬಗ್ಗೆ ಇತಿಹಾಸ ತಜ್ಞರೇ ಹೇಳಬೇಕು ಹೊರತು ನಾವು ಅದರ ಬಗ್ಗೆ ಹೆಚ್ಚಿನ ಮಾಹಿತಿ ಹೇಳಲು ಸಾಧ್ಯವಿಲ್ಲ.

– ಸುಬುಧೇಂದ್ರ ತೀರ್ಥ ಸ್ವಾಮೀಜಿ
ಮಂತ್ರಾಲಯ ರಾಘವೇಂದ್ರ ಮಠದ ಪೀಠಾಧಿಪತಿ

ಶಂಕುಸ್ಥಾಪನೆಯ ಉಲ್ಲೇಖ: ಎಚ್ಸಿಎಮ್

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಅಂಬೇಡ್ಕರ್ ಭವನ ನಿರ್ಮಾಣದ ಕಾಮಗಾರಿಗೆ ಶಂಕುಸ್ಥಾಪನೆಯ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಸಚಿವರು, ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದವರು ಹಜರತ್ ಟಿಪ್ಪು ಸುಲ್ತಾನ್. ಈಗ ಅದನ್ನು ಹೇಳಲು ಯಾರಿಗಾದರೂ ಧೈರ್ಯವಿದೆಯೇ? ಕೆಆರ್‌ಎಸ್ ಗೇಟಿನ ಹೆಬ್ಬಾಗಿಲಿನಲ್ಲಿ ಅದರ ಅಡಿಗಲ್ಲನ್ನು ನೀವು ಕಾಣಬಹುದು ಎಂದು ಭಾನುವಾರ ಹೇಳಿದ್ದರು. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆ, 1794ರಲ್ಲಿ ಶಿಲಾನ್ಯಾಸ ಸಿಕ್ಕಿದೆ, ನಾನು ಯಾರನ್ನೂ ಓಲೈಸಲು ಈ ಮಾತು ಹೇಳುತ್ತಿಲ್ಲ. ಅಣೆಕಟ್ಟು ಕಟ್ಟಿದ್ದು ಟಿಪ್ಪು ಸುಲ್ತಾನ್ ಎಂದು ನಾನು ಹೇಳಿಲ್ಲ. ಡ್ಯಾಂ ಕಟ್ಟುವ ವೇಳೆ ಶಿಲಾನ್ಯಾಸ ಸಿಕ್ಕಿದೆ ಎಂದು ನಾನು ಹೇಳಿದ್ದು. ಹಜರತ್ ಟಿಪ್ಪು ಸುಲ್ತಾನ್‌ಗೆ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟುವ ಉದ್ದೇಶವಿತ್ತು. ಅದಕ್ಕಾಗಿ ಆತ ಕೆಲಸ ಮಾಡಿದ್ದ ಎಂಬುದಕ್ಕೆ ಈಗಲೂ ಸಾಕ್ಷಿಯಾಗಿರುವ ಅಡಿಗಲ್ಲು ಎಂದು ಸಚಿವರು ಟ್ವೀಟ್ ಮಾಡಿ ಸ್ಪಷ್ಟನೆ ನೀಡಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಕಾರ್ಮೋಡದಂಚಿನ ಬೆಳ್ಳಿಕಿರಣ

ಪದ್ಮಭೂಷಣ ಡಾ. ರಾಜ್‌ಕುಮಾರ್, ಸಾಹಸಸಿಂಹ ವಿಷ್ಣುವರ್ಧನ್, ರೆಬೆಲ್‌ಸ್ಟಾರ್ ಅಂಬರೀಶ್ ಮುಂತಾದ ಘಟಾನುಘಟಿಗಳು ಅಸ್ತಂಗತರಾದಾಗಿನಿಂದ ಕನ್ನಡ ಚಲನಚಿತ್ರೋದ್ಯಮಕ್ಕೆ ಮಂಕು ಬಡಿದಂತಾಗಿದೆ; 'ನಾಯಕನಾರೋ ನಡೆಸುವನೆಲ್ಲೋ' ಎಂಬಂತಾಗಿದೆ'' ಎಂಬ ಅಳಲು ಬಹಳ ವರ್ಷಗಳಿಂದ ಕೇಳಿಬರುತ್ತಿರುವುದು ನಿಮಗೆ ಗೊತ್ತಿರುವಂಥದ್ದೇ. ಇವರೆಲ್ಲಾ ಇದ್ದಾಗ, ಚಿತ್ರೋದ್ಯಮದೊಳಗಿನ ಸಣ್ಣ ಪುಟ್ಟ ಅಸಮಾಧಾನಗಳು/ಸಮಸ್ಯೆಗಳು ಅಲ್ಲಲ್ಲೇ ಇವರ ಸಮ್ಮುಖದಲ್ಲೇ ನಿವಾರಣೆಯಾಗಿಬಿಡುತ್ತಿದ್ದವೇ ಹೊರತು, ಈಗಿನಂತೆ 'ಹಾದಿರಂಪ-ಬೀದಿರಂಪ'ದ ಸ್ವರೂಪವನ್ನು ಪಡೆಯುತ್ತಿರಲಿಲ್ಲ ಎಂಬುದು ಉದ್ಯಮದ ಬಹುತೇಕರ ಅಭಿಪ್ರಾಯ. ಒಂದು ಮಟ್ಟಿಗೆ ಇದು ನಿಜ ಕೂಡ. ಮತ್ತೊಂದೆಡೆ, ಪ್ರೇಕ್ಷಕರನ್ನು ಚಿತ್ರಮಂದಿರಗಳೆಡೆಗೆ ಸೆಳೆಯಬಲ್ಲಂಥ ಚಿತ್ರಗಳು ಈಗ ಬರುತ್ತಿಲ್ಲ, ಅಂಥ 'ಜಾದೂ' ಕಣ್ಮರೆಯಾಗಿದೆ ಎಂಬ ಮಾತುಗಳೂ ಅಲ್ಲಲ್ಲಿ ಕೇಳಿಬರುತ್ತಿದ್ದುದುಂಟು. 'ಕೆಜಿಎಫ್', 'ಕಾಂತಾರ' ಮುಂತಾದ ಚಿತ್ರಗಳು ಬಂದುಹೋದ ನಂತರ, ಅಂಥದೊಂದು ಸಂಭ್ರಮ-ಸಡಗರಗಳು ಗಾಂಧಿನಗರದಿಂದ ಮಾಯವಾಗಿದ್ದವು. ಆದರೆ ಕೆಲ ದಿನದ ಹಿಂದೆ ಬಿಡುಗಡೆಯಾಗಿ ಅಭಿಮಾನಿಗಳನ್ನು ಇನ್ನಿಲ್ಲದಂತೆ ರಂಜಿಸುತ್ತಿರುವ 'ಸು ಫ್ರಮ್ ಸೋ' ಚಲನಚಿತ್ರವು ಕಾರ್ಮೋಡದಂಚಿನ ಬೆಳ್ಳಿಕಿರಣವಾಗಿ ಹೊಳೆಯುತ್ತಿದೆ ಎನ್ನಲಡ್ಡಿಯಿಲ್ಲ. 'ಟೇಕನ್ ಫಾರ್ ಗ್ರಾಂಟೆಡ್' ಎನ್ನುವ ರೀತಿಯಲ್ಲಿ ಪ್ರೇಕ್ಷಕರನ್ನು ಹಗುರವಾಗಿ ಪರಿಗಣಿಸದೆ, ಚಿತ್ರನಿರ್ಮಾಣ ಎಂಬ ಕುಸುರಿ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡು ಉತ್ತಮ ಚಲನಚಿತ್ರವನ್ನು ಕಟ್ಟಿಕೊಟ್ಟರೆ, ಯಾವ 'ಸ್ಟಾರ್-ಕಾಸ್ಟ್' ಇಲ್ಲದಿದ್ದರೂ ಪ್ರೇಕ್ಷಕರು ಆ ಚಿತ್ರವನ್ನು ಹಿಡಿದೆತ್ತಿ ಗೆಲ್ಲಿಸುತ್ತಾರೆ ಎಂಬುದಕ್ಕೆ 'ಸು ಫ್ರಮ್ ಸೋ' ಚಿತ್ರವೇ ಸಾಕ್ಷಿ. ಕಾರಣ ನಟ-ನಿರ್ದೇಶಕ ರಾಜ್ ಬಿ.ಶೆಟ್ಟಿ ಮತ್ತು ಒಂದಿಬ್ಬರನ್ನು ಹೊರತುಪಡಿಸಿದರೆ ಇದರಲ್ಲಿರುವುದು ಹೊಸಮುಖಗಳೇ. ಒಂದು ಗಟ್ಟಿಕಥೆ ಯನ್ನು ಆರಿಸಿಕೊಂಡು, ಅದರ ಸುತ್ತ ಸಮರ್ಥನೀಯ ಚಿತ್ರಕಥೆಯನ್ನು ಹೆಣೆದು, ಕಲಾವಿದರ ಕುಸುರಿ ಕೆಲಸದೊಂದಿಗೆ ಬೆಳ್ಳಿತೆರೆಯಲ್ಲಿ ಬಿಂಬಿಸಿದರೆ, ಜನರು ಅದನ್ನು ಒಪ್ಪುತ್ತಾರೆ, ಅಪ್ಪುತ್ತಾರೆ ಎಂಬುದಕ್ಕೆ ಈ ಚಿತ್ರದ ಯಶಸ್ಸೇ ಸಾಕ್ಷಿ. ನಮ್ಮ ಚಿತ್ರೋದ್ಯಮಿಗಳು ಈ ಸಾಧನೆಯನ್ನು ಮೇಲ್ಪಂಕ್ತಿಯಾಗಿ ಪರಿಗಣಿಸಲಿ.

ಸೊಂಪಾದಕೀಯ

ಅಯೋಗ್ಯ ವೈದ್ಯ

ಇದು ಒಬ್ಬ ಅಡ್ಡಕಸುಬಿ ಡಾಕ್ಟರ್‌ನ ಕರ್ಮಕಾಂಡ. 'ಭ್ರೂಣಹತ್ಯೆ ಮಹಾಪಾಪ' ಅನ್ನೋ ಮಾತುಗಳ ನಡುವೆ ಒಬ್ಬ ಮಹಾವೈದ್ಯ ಕಳೆದ 3 ವರ್ಷಗಳಲ್ಲಿ ಬರೋಬ್ಬರಿ 900 ಅಬಾರ್ಷನ್ ಮಾಡಿದ್ದಾನೆ. ಈಗ ಪೊಲೀಸರ ಅತಿಥಿ ಆಗಿದ್ದಾನೆ. ಆದರೆ ವೈದ್ಯೋ ನಾರಾಯಣೋ ಹರಿಃ ಅನ್ನೋ ಕಾಲದಲ್ಲಿ, ಅದರಲ್ಲೂ ಭ್ರೂಣಪತ್ತೆ ಕಾನೂನಿಗೆ ವಿರುದ್ಧ ಅನ್ನೋ ಕಾಲದಲ್ಲಿ ಈತ ಭ್ರೂಣಪತ್ತೆ ಮಾಡಿದ್ದಲ್ಲದೆ, ಅದನ್ನು ಪತ್ತೆ ಇಲ್ಲದಂತೆ ಕೂಡಾ ಮಾಡಿ ಈಗ ಅನುಭವಿಸುತ್ತಿದ್ದಾನೆ. ಆದರೂ 3 ವರ್ಷಗಳಲ್ಲಿ 900 ಅಂದ್ರೆ ಪ್ರತಿವರ್ಷಕ್ಕೆ 300 ಅಬಾರ್ಷನ್. ಅದರಲ್ಲೂ ಈತ ಕರ್ನಾಟಕದಲ್ಲಿ ಇರೋ ಡಾಕ್ಟರ್. ಹಾಗಾಗಿ ಸರಿಸುಮಾರು ನಮ್ಮ ರಾಜ್ಯದಲ್ಲೇ ಇಷ್ಟಾದರೆ ಇನ್ನು ದೇಶ, ಪ್ರಪಂಚದಲ್ಲಿ ಪ್ರತಿನಿತ್ಯ ಅದೆಷ್ಟು ಅಬಾರ್ಷನ್ ಕೆಲಸ ನಡೆಯುತ್ತಿದೆಯೋ ದೇವರೇ ಬಲ್ಲ. ಅಲ್ಲದೆ ಈ ಡಾಕ್ಟರ್ ಪ್ರತಿ ಅಬಾರ್ಷನ್‌ಗೆ 30 ಸಾವಿರ ರುಪಾಯಿ ಚಾರ್ಜ್ ಮಾಡುತ್ತಿದ್ದನಂತೆ. ಅಲ್ಲಿಗೆ ಈತ ವರ್ಷಕ್ಕೆ ಎಷ್ಟು ಕಮಾಯಿ ಮಾಡುತ್ತಿದ್ದ ಲೆಕ್ಕ ಹಾಕಿ. ಈ ರೀತಿ ಭ್ರೂಣಹತ್ಯೆ ಮಾಡಿ, ಡಾಕ್ಟರ್ ಅಂದ್ರೆ ಜೀವ ಉಳಿಸಿಯೇ ದುಡ್ಡು ಮಾಡಬೇಕಿಲ್ಲ, ಜೀವ ತೆಗೆದು ಕೂಡ ದುಡ್ಡು ಮಾಡಬಹುದು ಅನ್ನೋದಕ್ಕೆ ಕೆಟ್ಟ ಉದಾಹರಣೆ ಆದ. ಈ ಮಹಾನುಭಾವ ನಗರದ ಹೊರವಲಯದಲ್ಲಿ ಇರೋ ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗವೊಂದರಲ್ಲಿ ಯಾರಿಗೂ ಗೊತ್ತಿಲ್ಲದಂತೆ ಈ ಕೆಲಸ ಮಾಡುತ್ತಿದ್ದನಂತೆ. ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗದಲ್ಲಿ ತಾಯಿಯ ಗರ್ಭಕೋಶದಿಂದ ಮಗು ತೆಗೆಯೋ ಭಂಡ ಕೆಲಸ ಮಾಡಿದ ಈತ ಮತ್ತು ಈತನ ಸಹಚರರು ಈಗ ಪೊಲೀಸರ ಅತಿಥಿ ಆಗಿದ್ದಾರೆ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಆಸನಗಳ ವ್ಯವಸ್ಥೆ

ವಿಮಾನದಲ್ಲಿ ಆಸನಗಳನ್ನು ವ್ಯವಸ್ಥೆ ಮಾಡುವುದು ಒಂದು ಸಂಕೀರ್ಣ ಪ್ರಕ್ರಿಯೆ. ಇದು ಪ್ರಯಾಣಿಕರ ಸುರಕ್ಷತೆ, ಸೌಕರ್ಯ ಮತ್ತು ವಿಮಾನಯಾನ ಸಂಸ್ಥೆಯ ಲಾಭದಾಯಕತೆಯನ್ನು ಸಮತೋಲನಗೊಳಿಸಬೇಕಾದ ಒಂದು ಪ್ರಮುಖ ವಿಷಯ. ವಿಮಾನಯಾನ ಸಂಸ್ಥೆಗಳು ವಿಮಾನದ ಗಾತ್ರ, ಅದರ ಉದ್ದೇಶ ಮತ್ತು ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಆಸನಗಳನ್ನು ವಿನ್ಯಾಸಗೊಳಿಸುತ್ತವೆ. ವಿಮಾನಗಳಲ್ಲಿ ಸಾಮಾನ್ಯವಾಗಿ ಆಸನಗಳನ್ನು 3 ಮುಖ್ಯ ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಇಕಾನಮಿ, ಬಿಸಿನೆಸ್ ಮತ್ತು ಫಸ್ಟ್ ಕ್ಲಾಸ್. ಕೆಲವೊಮ್ಮೆ, ಈ ವರ್ಗಗಳ ನಡುವೆ ಪ್ರೀಮಿಯಂ ಇಕಾನಮಿ ಎಂಬ ಇನ್ನೊಂದು ವರ್ಗವನ್ನೂ ಸೇರಿಸಲಾಗುತ್ತದೆ. ಇದು ವಿಮಾನದಲ್ಲಿ ಅತ್ಯಂತ ಸಾಮಾನ್ಯ ಮತ್ತು ದೊಡ್ಡ ಭಾಗವನ್ನು ಆಕ್ರಮಿಸುವ ವರ್ಗ. ಈ ವಿಭಾಗದಲ್ಲಿ ಟಿಕೆಟ್ ದರವು ಕಡಿಮೆ ಇರುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಸೇವೆಗಳು ಮತ್ತು ಸೌಲಭ್ಯಗಳು ಸೀಮಿತವಾಗಿರುತ್ತವೆ. ಇಕಾನಮಿ ಕ್ಲಾಸ್‌ನಲ್ಲಿ ಆಸನಗಳ ನಡುವಿನ ಅಂತರ (ಒಂದು ಆಸನದ ಹಿಂಭಾಗದಿಂದ ಮುಂದಿನ ಆಸನದ ಹಿಂಭಾಗದವರೆಗಿನ ಅಂತರ) ಸಾಮಾನ್ಯವಾಗಿ 28ರಿಂದ 32 ಇಂಚುಗಳಷ್ಟು ಇರುತ್ತದೆ. ಈ ಅಂತರವು ಕಡಿಮೆ ಇರುವುದರಿಂದ, ಕಾಲುಗಳಿಗೆ ಜಾಗ ಕಡಿಮೆಯಿರುತ್ತದೆ. ಆಸನಗಳ ಅಗಲವು ಸಾಮಾನ್ಯವಾಗಿ 17ರಿಂದ 18 ಇಂಚುಗಳಷ್ಟು ಇರುತ್ತದೆ. ವಿಮಾನಯಾನ ಸಂಸ್ಥೆಗಳು ಹೆಚ್ಚು ಪ್ರಯಾಣಿಕರನ್ನು ಕೂರಿಸಲು, ಆಸನಗಳನ್ನು ಆದಷ್ಟು ಚಿಕ್ಕದಾಗಿ ವಿನ್ಯಾಸಗೊಳಿಸುತ್ತವೆ. ಇಕಾನಮಿ ಕ್ಲಾಸ್‌ನಲ್ಲಿ ಆಸನಗಳನ್ನು ಸಾಲುಗಳಲ್ಲಿ ಜೋಡಿಸಲಾಗುತ್ತದೆ. ಉದಾಹರಣೆಗೆ, 'ಏರ್‌ಬಸ್ ಎ-320'ನಂಥ ಸಣ್ಣ ವಿಮಾನಗಳಲ್ಲಿ 3-3 ವಿನ್ಯಾಸ (ಒಂದು ಕಡೆ 3, ಇನ್ನೊಂದು ಕಡೆ 3 ಆಸನಗಳು, ನಡುವೆ ಒಂದು ಕಾರಿಡಾರ್) ಇರುತ್ತದೆ. 'ಬೋಯಿಂಗ್ 777'ನಂಥ ದೊಡ್ಡ ವಿಮಾನಗಳಲ್ಲಿ 3-4-3 ವಿನ್ಯಾಸ (ಒಂದು ಕಡೆ 3, ಮಧ್ಯದಲ್ಲಿ 4, ಇನ್ನೊಂದು ಕಡೆ 3) ಇರುತ್ತದೆ. ಈ ವರ್ಗದಲ್ಲಿ ಮೂಲಭೂತ ಸೌಲಭ್ಯಗಳಾದ ಸಣ್ಣ ಮನರಂಜನಾ ಪರದೆ, ಒಂದು ಊಟದ ಮೇಜು ಮತ್ತು ಸ್ವಲ್ಪ ಮಲಗುವಂತೆ ಮಾಡಬಹುದಾದ ಆಸನಗಳು ಲಭ್ಯವಿರುತ್ತವೆ. ಪ್ರೀಮಿಯಂ ಇಕಾನಮಿ ಕ್ಲಾಸ್ ಇದೆಯಲ್ಲ ಅದು ಇಕಾನಮಿ ಮತ್ತು ಬಿಸಿನೆಸ್ ಕ್ಲಾಸ್ ನಡುವಿನ ಒಂದು ವರ್ಗ. ಈ ವಿಭಾಗದಲ್ಲಿ ಪ್ರಯಾಣಿಕರು ಇಕಾನಮಿ ಕ್ಲಾಸ್‌ಗಿಂತ ಸ್ವಲ್ಪ ಹೆಚ್ಚು ದರವನ್ನು ಪಾವತಿಸಿ, ಉತ್ತಮ ಸೌಲಭ್ಯಗಳನ್ನು ಪಡೆಯಬಹುದು. ಇದು ಪ್ರಯಾಣಿಕರಿಗೆ ಹೆಚ್ಚು ಆರಾಮದಾಯಕವಾಗಿ ಕೂರಲು ಅನುವು ಮಾಡಿಕೊಡುತ್ತದೆ. ಈ ವರ್ಗದ ಆಸನಗಳು ಇಕಾನಮಿ ಕ್ಲಾಸ್‌ಗಿಂತ ಹೆಚ್ಚು ಆರಾಮದಾಯಕವಾಗಿ ಹಿಮ್ಮುಖವಾಗಿ ಮಲಗುತ್ತವೆ. ಅಲ್ಲದೇ, ಉತ್ತಮ ಗುಣಮಟ್ಟದ ಆಹಾರ ಮತ್ತು ಹೆಚ್ಚುವರಿ ಲಗೇಜ್ ಸೌಲಭ್ಯಗಳು ಸಿಗುತ್ತವೆ. ಬಿಸಿನೆಸ್ ಕ್ಲಾಸ್ ಮುಖ್ಯವಾಗಿ ವ್ಯಾಪಾರ ಮತ್ತು ವೃತ್ತಿಪರ ಪ್ರಯಾಣಿಕರಿಗಾಗಿ ವಿನ್ಯಾಸಗೊಳಿಸಲ್ಪಟ್ಟಿದೆ. ಈ ವರ್ಗದ ಟಿಕೆಟ್ ದರವು ಅಧಿಕವಾಗಿದ್ದು, ಅದಕ್ಕೆ ತಕ್ಕಂತೆ ಸೇವೆ ಮತ್ತು ಸೌಲಭ್ಯಗಳು ಅತ್ಯುತ್ತಮವಾಗಿರುತ್ತವೆ. ಬಿಸಿನೆಸ್ ಕ್ಲಾಸ್‌ನಲ್ಲಿ ಆಸನಗಳು ವಿಶಾಲವಾಗಿರುತ್ತವೆ ಮತ್ತು ಸಂಪೂರ್ಣವಾಗಿ ಮಲಗುವ ಹಾಸಿಗೆಗಳಾಗಿ ಪರಿವರ್ತಿಸಬಹುದು (Lie-flat beds). ಕೆಲವು ಆಧುನಿಕ ವಿಮಾನಗಳಲ್ಲಿ, ಪ್ರತಿಯೊಬ್ಬ ಪ್ರಯಾಣಿಕರಿಗೂ ತಮ್ಮದೇ ಆದ ಖಾಸಗಿ ಜಾಗ (Suite) ಇರುತ್ತದೆ. ಬಿಸಿನೆಸ್ ಕ್ಲಾಸ್‌ನಲ್ಲಿ ಆಸನಗಳನ್ನು ವಿವಿಧ ಮಾದರಿಗಳಲ್ಲಿ ಜೋಡಿಸಬಹುದು. ಉದಾಹರಣೆಗೆ, 1-2-1 ಅಥವಾ 2-2-2 ಜೋಡಣೆ. ಈ ರೀತಿಯ ವಿನ್ಯಾಸವು ಪ್ರತಿಯೊಬ್ಬ ಪ್ರಯಾಣಿಕರಿಗೂ ನೇರವಾಗಿ ಕಾರಿಡಾರ್‌ಗೆ ಹೋಗಲು ಅನುಕೂಲ ಕಲ್ಪಿಸುತ್ತದೆ. ಈ ವರ್ಗದಲ್ಲಿ ಉನ್ನತ ಗುಣಮಟ್ಟದ ಊಟ ಮತ್ತು ಪಾನೀಯಗಳು, ದೊಡ್ಡ ಮನರಂಜನಾ ಪರದೆಗಳು, ವಿದ್ಯುತ್ ಪೋರ್ಟ್‌ಗಳು ಮತ್ತು ವೈಫೈ ಸೌಲಭ್ಯಗಳು ಲಭ್ಯವಿರುತ್ತವೆ. ಅಲ್ಲದೆ, ವಿಮಾನ ಹತ್ತುವ ಮೊದಲು ವಿಶ್ರಾಂತಿ ಪಡೆಯಲು ವಿಮಾನ ನಿಲ್ದಾಣದ ಲೌಂಜ್‌ಗಳ ಪ್ರವೇಶಾವಕಾಶವೂ ಇರುತ್ತದೆ. ಫಸ್ಟ್ ಕ್ಲಾಸ್ ವಿಮಾನದಲ್ಲಿ ಅತ್ಯಂತ ಐಷಾರಾಮಿ ಮತ್ತು ದುಬಾರಿ ವರ್ಗ. ಫಸ್ಟ್ ಕ್ಲಾಸ್‌ನಲ್ಲಿ ಪ್ರಯಾಣಿಕರಿಗೆ ಅತಿ ಹೆಚ್ಚು ಸೌಲಭ್ಯಗಳು ಮತ್ತು ವೈಯಕ್ತಿಕ ಸೇವೆ ಲಭ್ಯವಿರುತ್ತದೆ. ಫಸ್ಟ್ ಕ್ಲಾಸ್ ಆಸನಗಳು ಒಂದು ಸ್ಟುಡಿಯೋ ಅಪಾರ್ಟ್‌ಮೆಂಟ್‌ನಂತೆ ಇರುತ್ತವೆ. ಇದರಲ್ಲಿ ಸಂಪೂರ್ಣವಾಗಿ ಮಲಗಲು ಹಾಸಿಗೆ, ಡೈನಿಂಗ್ ಟೇಬಲ್ ಮತ್ತು ಖಾಸಗಿ ಕೋಣೆ ಇರಬಹುದು. ಕೆಲವು ವಿಮಾನಯಾನ ಸಂಸ್ಥೆಗಳು ಶವರ್ ಮತ್ತು ವೈಯಕ್ತಿಕ ಸೌಲಭ್ಯಗಳನ್ನು ಸಹ ನೀಡುತ್ತವೆ. ಸಾಮಾನ್ಯವಾಗಿ ಈ ವರ್ಗದಲ್ಲಿ ಆಸನಗಳ ಜೋಡಣೆ 1-1-1 ಅಥವಾ 1-2-1 ಆಗಿರುತ್ತದೆ. ಇದು ಪ್ರಯಾಣಿಕರಿಗೆ ಸಂಪೂರ್ಣ ಖಾಸಗಿ ಅನುಭವವನ್ನು ನೀಡುತ್ತದೆ. ಫಸ್ಟ್ ಕ್ಲಾಸ್ ಪ್ರಯಾಣಿಕರಿಗೆ ವೈಯಕ್ತಿಕ ಕ್ಯಾಬಿನ್ ಸಿಬ್ಬಂದಿ ಸೇವೆ, ಅತ್ಯುತ್ತಮ ಆಹಾರ ಮತ್ತು ಪಾನೀಯಗಳು, ಮತ್ತು ವಿಮಾನ ನಿಲ್ದಾಣದಲ್ಲಿ ವಿಶೇಷ ಭದ್ರತಾ ಮತ್ತು ಲೌಂಜ್ ಸೌಲಭ್ಯಗಳು ಇರುತ್ತವೆ.

ಮತಗಳ್ಳತನವನ್ನು ಸಾಕ್ಷ್ಯ ಸಮೇತ ಕಟ್ಟಿಹಾಕಲಿ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಯಾವುದೇ ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳ 'ಕೆಸರೆರಚಾಟ' ಸಾಮಾನ್ಯ ಸಂಗತಿ. ಭಾರತದಲ್ಲಿ ಒಂದು ರೀತಿಯಲ್ಲಿ ಕೆಸರೆರಚಾಟ ನಡೆದರೆ, ಅಮೆರಿಕದಲ್ಲಿ ಮತ್ತೊಂದು ರೀತಿಯ ವಾಕ್ಸಮರ ನಡೆಯಬಹುದು. ಆದರೆ ಚುನಾವಣೆಯ ಗೆಲುವಿಗೆ ಆರೋಪ-ಪ್ರತ್ಯಾರೋಪ ಸರ್ವೇಸಾಮಾನ್ಯ. ಅದರಲ್ಲಿಯೂ ಭಾರತದಂಥ ದೇಶದಲ್ಲಿ, ಚುನಾವಣೆಯ ಹೊರತಾಗಿಯೂ ಪರಸ್ಪರ ಕೆಸರೆರಚಾಟ ನಡೆಯುವುದನ್ನು ನೋಡಬಹುದು. ಅನೇಕ ಬಾರಿ, ಚುನಾವಣೆ ಮುಗಿದು ಫಲಿತಾಂಶ ಬಂದರೂ ಆ ಫಲಿತಾಂಶವನ್ನೇ ಪ್ರಶ್ನಿಸುವ, ಅನುಮಾನಿಸುವ ಅನೇಕ ನಿದರ್ಶನಗಳನ್ನು ನೋಡಿದ್ದೇವೆ. ಆದರೆ ಚುನಾವಣೆ ಮುಗಿದು ಹತ್ತಿರ ಹತ್ತಿರ ಎರಡು ವರ್ಷದ ಬಳಿಕ 'ಚುನಾವಣೆಯಲ್ಲಿ ಅಕ್ರಮ' ಎನ್ನುವ ಆರೋಪ ತೀರಾ ಅಪರೂಪ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಯಾವುದೂ ಅಸಾಧ್ಯವೆನ್ನಲು ಸಾಧ್ಯವಿಲ್ಲ ಎನ್ನುವುದಕ್ಕೆ ಈಗಿನ 'ಮತಗಳ್ಳತನ'ದ ಆರೋಪವೇ ಸ್ಪಷ್ಟ ಉದಾಹರಣೆ.

ಹೌದು, ಕಳೆದ ಒಂದೆರಡು ವಾರಗಳಿಂದ ಇಡೀ ದೇಶದಲ್ಲಿ ಸದ್ದಾಗುತ್ತಿರುವುದು 'ಮತಗಳ್ಳತನ'ದ ಆರೋಪ. ಇದಕ್ಕೂ ಮೊದಲು ವಿಧಾನಸಭಾ ಚುನಾವಣಾ ಹೊಸ್ತಿಲಿನಲ್ಲಿರುವ ಬಿಹಾರದಲ್ಲಿ ಮತಪಟ್ಟಿ ಪರಿಷ್ಕರಣೆಯ ವಿವಾದ ಶುರುವಾಗಿತ್ತು. ಈ ವಿವಾದವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸೇರಿದಂತೆ 'ಇಂಡಿ ಒಕ್ಕೂಟ' ಆರಂಭಿಸಿದ್ದ ಆರೋಪ, ಹೋರಾಟ, ಪ್ರತಿಭಟನೆ ಹಾಗೂ ಕಾನೂನು ಸಮರ ನಡೆಯುತ್ತಲೇ ಇದೆ. ಆದರೆ ಈ ಸಮಯದಲ್ಲಿ ಈ ಕಿಚ್ಚಿಗೆ ಇನ್ನಷ್ಟು ಕಿಚ್ಚು ಹಚ್ಚಿದ್ದು, ಬಿಹಾರಕ್ಕೆ ಸೀಮಿತವಾಗಿದ್ದ ಆರೋಪವನ್ನು ಇಡೀ ದೇಶಕ್ಕೆ ವ್ಯಾಪಿಸುವಂತೆ ಮಾಡಿದ್ದು ಮಾತ್ರ ಕಾಂಗ್ರೆಸ್ ವರಿಷ್ಠ, ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ 'ಮತಗಳ್ಳತನ'ದ ಆರೋಪ. ರಾಹುಲ್ ಗಾಂಧಿಯವರ ಈ ಆರೋಪದ ಬೆನ್ನಲ್ಲೇ, ಕಾಂಗ್ರೆಸ್ ಸೋತಿರುವ ಕಡೆಯೆಲ್ಲ ತಮ್ಮ ಸೋಲಿಗೆ ಮತಗಳ್ಳತನ ಕಾರಣವಿರಬಹುದು ಎಂದು ಪರಾಜಿತ ಅಭ್ಯರ್ಥಿಗಳು ಹೇಳಲು ಶುರುಮಾಡಿದ್ದಾರೆ. ಈ ಆರೋಪಕ್ಕೆ ತಮ್ಮ ಬಳಿ ಸಾಕ್ಷ್ಯವಿದೆ ಎಂದು ರಾಹುಲ್ ಗಾಂಧಿ ಹೇಳುತ್ತಿದ್ದರೆ, ಕಾಂಗ್ರೆಸ್ ನಾಯಕರು ಸೂಕ್ತ ಸಮಯದಲ್ಲಿ ರಾಹುಲ್ ತಮ್ಮ ಸಾಕ್ಷ್ಯವನ್ನು ಬಹಿರಂಗಪಡಿಸಲಿದ್ದಾರೆ ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ.

ಮತಗಳ್ಳತನದ ಆರೋಪವನ್ನು ಮಾಡಿದ ದಿನವೇ ಬಿಜೆಪಿ ನಾಯಕರು ಹಾಗೂ ಕೇಂದ್ರ ಚುನಾವಣಾ ಆಯೋಗದವರು ಇದೊಂದು ಆಧಾರರಹಿತ ಆರೋಪವೆಂದು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಆದರೂ, ಕಾಂಗ್ರೆಸ್ ನಾಯಕರು ಈ ವಿಷಯವನ್ನೇ ಮುಂದಿಟ್ಟುಕೊಂಡು ರಾಷ್ಟ್ರಾದ್ಯಂತ ಆಂದೋಲನ ನಡೆಸುವ ಲೆಕ್ಕಾಚಾರದಲ್ಲಿದ್ದಾರೆ. ಈ ವಿಷಯವನ್ನು ಮುಂದಿಟ್ಟುಕೊಂಡು ಸಂಸತ್‌ನ ಉಭಯ ಸದನದಲ್ಲಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಬಿಜೆಪಿ ವಿರುದ್ಧ ಹೋರಾಟವನ್ನು ನಡೆಸುವ ಜತೆಜತೆಗೆ ಚುನಾವಣಾ ಆಯೋಗವನ್ನೇ ಅನುಮಾನಿಸುತ್ತಿವೆ. ಸದನದ ಒಳ-ಹೊರಗೆ ಕೈ ನಾಯಕರು ಈ ಪ್ರಮಾಣದಲ್ಲಿ ಹೋರಾಟ ನಡೆಸಲು ಸಿದ್ಧತೆ ನಡೆಸಿಕೊಂಡಿದ್ದರೂ, ಚುನಾವಣಾ ಆಯೋಗವು ರಾಹುಲ್ ಗಾಂಧಿ ಅವರಿಗೆ ಹಾಕಿರುವ 'ಸವಾಲ'ನ್ನು ಸ್ವೀಕರಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಈ ಮತಗಳ್ಳತನ ಆರೋಪ ಕರ್ನಾಟಕದಲ್ಲಿ ತೀವ್ರ ಚರ್ಚೆ ಹುಟ್ಟುಹಾಕಲು ಕಾರಣವೆಂದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಸೋಲಿಗೆ ಇದೇ ಮತಗಳ್ಳತನ ಕಾರಣವಂತೆ. ಇದೇ ರೀತಿ ಬೆಂಗಳೂರು ಕೇಂದ್ರದಲ್ಲಿ ಆರಂಭಿಕ ಸುತ್ತಿನಲ್ಲಿ ಮುಂದಿದ್ದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಮಹದೇವಪುರ ಭಾಗದ ಮತ ಎಣಿಕೆಯಾಗುತ್ತಿದ್ದಂತೆ ತೀವ್ರ ಹಿನ್ನಡೆ ಅನುಭವಿಸಲು ಇದೇ ಮತಗಳ್ಳತನ ಕಾರಣವಂತೆ. ಈ ಆರೋಪಕ್ಕೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆಗಳು ಒಂದೆಡೆಯಾದರೆ, ಚುನಾವಣೆ ನಡೆದು ಒಂದೂವರೆ ವರ್ಷ ಕಳೆದ ಬಳಿಕ ಈ ವಿಷಯವನ್ನು ಮುನ್ನೆಲೆಗೆ ತಂದಿದ್ದೇಕೆ? ಎನ್ನುವುದು ಬಿಜೆಪಿಯವರ ಪ್ರಶ್ನೆಯಾಗಿದೆ.

ಹಾಗೆ ನೋಡಿದರೆ, ಯಾವುದೇ ಚುನಾವಣೆಯಲ್ಲಿ ಫಲಿತಾಂಶ ವ್ಯತಿರಿಕ್ತವಾಗಿ ಬಂದಾಗ, ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಫಲಿತಾಂಶವನ್ನು ಪ್ರಶ್ನಿಸುವ ಅವಕಾಶವಿರುತ್ತದೆ. ಸಕಾರಣಗಳಿದ್ದರೆ, ಸ್ಥಳದಲ್ಲಿಯೇ ಮರುಎಣಿಕೆ ನಡೆಸಲೂ ಅವಕಾಶವಿರುತ್ತದೆ (ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಿನ ಜಯನಗರ ಕ್ಷೇತ್ರದಲ್ಲಿ ಮರುಎಣಿಕೆಯ ಸಮಯದಲ್ಲಿಯೇ ಸಿ.ಕೆ.ರಾಮಮೂರ್ತಿ ಅವರು ಗೆಲುವು ಸಾಧಿಸಿದ್ದು). ಒಂದು ವೇಳೆ ಅದಕ್ಕೂ ಅವಕಾಶ ಸಿಗದಿದ್ದರೆ, ನ್ಯಾಯಾಲಯದಲ್ಲಿ ಫಲಿತಾಂಶವನ್ನು ಪ್ರಶ್ನಿಸಲು ಅಥವಾ ಫಲಿತಾಂಶವನ್ನು ಅಸಿಂಧುಗೊಳಿಸುವಂತೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ನ್ಯಾಯಾಲಯದಲ್ಲಿ ಪ್ರಕ್ರಿಯೆ ಇತ್ಯರ್ಥವಾಗುವ ವೇಳೆಗೆ ಮುಂದಿನ ಚುನಾವಣೆ ಘೋಷಣೆಯಾಗಿರುತ್ತದೆ ಎನ್ನುವುದು ಬೇರೆ ಮಾತು. ಆದರೆ ಅದಕ್ಕೆ ಕಾನೂನಿನಲ್ಲಿ ಅವಕಾಶವಂತೂ ಇದೆ.

ಆದರೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ಕೇಂದ್ರದಲ್ಲಿ ಮತಗಳ್ಳತನದ ಆರೋಪವನ್ನು ಸಾಕ್ಷ್ಯ ಸಮೇತ ಸಾಬೀತುಪಡಿಸುತ್ತೇವೆ ಎನ್ನುವ ಮಾತುಗಳನ್ನು ಆಡುತ್ತಿರುವ ಕಾಂಗ್ರೆಸ್ ನಾಯಕರು ಫಲಿತಾಂಶ ಬರುತ್ತಿದ್ದಂತೆ ನ್ಯಾಯಾಲಯದಲ್ಲಿ ಏಕೆ ಪ್ರಶ್ನಿಸಿಲ್ಲ? ಆ ಸಮಯದಲ್ಲಿ ಸಾಕ್ಷ್ಯವಿರಲಿಲ್ಲ. ಈಗ ಸಿಕ್ಕಿದೆ ಎನ್ನುವುದಾದರೆ ಕನಿಷ್ಠ ಈಗಲಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಲ್ಲವೇ? ಎನ್ನುವ ಪ್ರಶ್ನೆಗೆ ಕಾಂಗ್ರೆಸ್ ನಾಯಕರಿಂದ ಈವರೆಗೆ ಸಮರ್ಪಕ ಉತ್ತರ ಬಂದಿಲ್ಲ. ಒಂದು ವೇಳೆ ಮತಗಳ್ಳತನವಾಗಿರುವುದಕ್ಕೆ ಬಲವಾದ ಸಾಕ್ಷಿಯಿದ್ದರೆ, ಅದರ ವಿರುದ್ಧ ಹೋರಾಡಬೇಕಿರುವುದು ಕಾಂಗ್ರೆಸ್‌ನ ಆದ್ಯ ಕರ್ತವ್ಯ. ಏಕೆಂದರೆ, ಇಡೀ ಪ್ರಜಾಪ್ರಭುತ್ವ ವ್ಯವಸ್ಥೆ ನಿಂತಿರುವ ಚುನಾವಣೆಯಲ್ಲಿಯೇ ಅಕ್ರಮ ನಡೆದಿದ್ದರೆ ಅದು ಇಡೀ ವ್ಯವಸ್ಥೆಯನ್ನೇ ಕಲಕಿದಂತಾಗುತ್ತದೆ. ಈ ವಿಷಯವನ್ನು ಕಾಂಗ್ರೆಸ್ ಇತರೆ ರಾಜಕೀಯ ಆರೋಪದ ರೀತಿ ಪರಿಗಣಿಸದೇ, ತಾರ್ಕಿಕ ಅಂತ್ಯಕ್ಕಾಗಿ ಹೋರಾಡಬೇಕು. ಏಕೆಂದರೆ, ಬಿಜೆಪಿ ವಿರುದ್ಧ ಅಥವಾ ಕೇಂದ್ರ ಸರಕಾರದ ವಿರುದ್ಧ ಮಾಡುವ ಆರೋಪಕ್ಕೂ ಸ್ವಾಯತ್ತ ಸಂಸ್ಥೆಗಳ ಮೇಲೆ ಮಾಡುವ ಆರೋಪಗಳಿಗೂ ಅಜಗಜಾಂತರವಿದೆ. ಚುನಾವಣಾ ಆಯೋಗವು ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಿದ್ದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗಿರಲು ಸಾಧ್ಯ. ಆದ್ದರಿಂದ ಕೇಂದ್ರ ಸರಕಾರದ ವಿರುದ್ಧ ತಾನು ಕಂಡುಕೊಂಡಿರುವ ಹೊಸ 'ಅಸ್ತ್ರ'ವನ್ನು ಕಾಂಗ್ರೆಸ್ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕೆ ಹೊರತು, ಕೇವಲ ಟೀಕೆಗೆ ಅಥವಾ ಒಂದೆರಡು ಪ್ರತಿಭಟನೆಗೆ ಅದನ್ನು ಸೀಮಿತಗೊಳಿಸಬಾರದು.

ಸದ್ಯ, ಮತಗಳ್ಳತನದ ವಿರುದ್ಧದ ಹೋರಾಟಕ್ಕೆ ಕರ್ನಾಟಕದಿಂದಲೇ ಮುನ್ನುಡಿ ಬರೆಯಲು ಕಾಂಗ್ರೆಸ್ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಇಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಬೇಕಿತ್ತು. ಆದರೆ ಶಿಬು ಸೊರೇನ್ ನಿಧನದಿಂದ ಮುಂದಕ್ಕೆ ಹೋಗಿದೆ. ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಸ್ತಾಪಿಸುತ್ತಿರುವ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ಹಾಗೂ ಮಹದೇವಪುರ ಕ್ಷೇತ್ರದಲ್ಲಿ ಮತಗಳ್ಳತನವಾಗಿದೆ ಎನ್ನುವ ವಿಷಯದಲ್ಲಿ 'ಏಕ್‌ದಮ್' ಬಿಜೆಪಿ ಅಭ್ಯರ್ಥಿ ಲೀಡ್ ಸಿಕ್ಕಿದೆ ಎನ್ನುವುದು ಈಗ ಅನುಮಾನಕ್ಕೆ ಕಾರಣವಾಗಿದೆ. ಆದರೆ ಕಳೆದ ಮೂರು ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ, ಬೆಂಗಳೂರು ಕೇಂದ್ರದಲ್ಲಿ ಮಹದೇವಪುರ ಕ್ಷೇತ್ರದಲ್ಲಿಯೇ ಬಿಜೆಪಿಗೆ ಅತಿಹೆಚ್ಚು ಲೀಡ್ ಸಿಕ್ಕಿರುವುದು. ಅದಕ್ಕೆ ಕಾರಣ, ಕ್ಷೇತ್ರದಲ್ಲಿ ಅರವಿಂದ ಲಿಂಬಾವಳಿ ತಮ್ಮದೇ ಪ್ರಭಾವದಿಂದ ಪಕ್ಷದ ಸಂಘಟನೆಯನ್ನು ಗಟ್ಟಿಯಾಗಿಸಿಕೊಂಡಿದ್ದಾರೆ. ಆದ್ದರಿಂದ ಸಹಜವಾಗಿಯೇ ಶೇ.50ಕ್ಕಿಂತ ಹೆಚ್ಚು ಮತಗಳು ಬಿಜೆಪಿ ಪಾಲಾಗುತ್ತವೆ. ಒಂದು ವೇಳೆ ಈ ಬಾರಿ ಮಹದೇವಪುರದಲ್ಲಿ ಮತಗಳ್ಳತನವಾಗಿದೆ ಎನ್ನುವುದಾದರೆ, ಈ ಹಿಂದಿನ ಎರಡು ಲೋಕಸಭಾ ಚುನಾವಣೆಯಲ್ಲಿ, ವಿಧಾನಸಭಾ ಚುನಾವಣೆಗಳಲ್ಲಿ ಈ ವಿಷಯವನ್ನು ಕಾಂಗ್ರೆಸ್ ಏಕೆ ಗಮನಿಸಲಿಲ್ಲ ಎನ್ನುವ ಸಹಜ ಪ್ರಶ್ನೆ ಮೂಡುತ್ತದೆ.

ಹಾಗೆ ನೋಡಿದರೆ, ಕೇಂದ್ರ ಚುನಾವಣಾ ಆಯೋಗ ಹಾಗೂ ಚುನಾವಣಾ ವ್ಯವಸ್ಥೆಯ ಮೇಲೆ ಆರೋಪ ಬಂದಿರುವುದು ಇದೇ ಮೊದಲಲ್ಲ. ಕಾಂಗ್ರೆಸ್ ಸೋತಾಗಲೆಲ್ಲ ಇವಿಎಂ ಹ್ಯಾಕ್ ಎನ್ನುವ ಸಹಜ ಆರೋಪವನ್ನು ಮಾಡಿಕೊಂಡೇ ಬಂದಿತ್ತು. ಗೆದ್ದಾಗ ಇವಿಎಂ ಮೇಲೆ 'ವಿಶ್ವಾಸ'ವಿಟ್ಟು ಸೋತಾಗ ಮಾತ್ರ ಹ್ಯಾಕ್ ಆಗಿದೆ ಎಂದು ಆರೋಪಿಸಿದ್ದ ಕಾಂಗ್ರೆಸ್, ಈ ಮತಗಳ್ಳತನ ವಿಷಯದಲ್ಲಿಯೂ ಅದೇ ರೀತಿ ವರ್ತಿಸುತ್ತಿರುವುದು 'ವಿಶ್ವಾಸಾರ್ಹತೆ'ಗೆ ಧಕ್ಕೆಯಾಗುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಆದ್ದರಿಂದ ಕಾಂಗ್ರೆಸ್ ತನ್ನ ಬಳಿಯಿರುವ ಸಾಕ್ಷ್ಯವನ್ನು ತಡ ಮಾಡದೇ ಬಹಿರಂಗಪಡಿಸುವ ಮೂಲಕ ಚುನಾವಣಾ ಆಯೋಗದ ಸವಾಲಿಗೆ ಪ್ರತಿಸವಾಲು ಹಾಕಬೇಕಿದೆ.

ಇನ್ನು ಜಗತ್ತಿನ ಹಲವು ದೇಶಗಳು ಭಾರತದ ಚುನಾವಣಾ ವ್ಯವಸ್ಥೆಯನ್ನು 'ಉತ್ತಮ'ವೆಂದು ಒಪ್ಪಿಕೊಂಡಿರುವುದಷ್ಟೇ ಅಲ್ಲದೇ, ತಮ್ಮಲ್ಲಿಯೂ ಅಳವಡಿಸಿಕೊಳ್ಳಬಹುದೇ ಎನ್ನುವ ಆಲೋಚನೆಯಲ್ಲಿವೆ. ಅದರಲ್ಲಿಯೂ ಮುಂದುವರಿದ ರಾಷ್ಟ್ರಗಳಲ್ಲಿಯೂ ಇರದ ಆಧುನಿಕ ತಂತ್ರಜ್ಞಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಅನೇಕ ಉದಾಹರಣೆಗಳಿವೆ. ಹಾಗೆಂದ ಮಾತ್ರಕ್ಕೆ ಚುನಾವಣಾ ವ್ಯವಸ್ಥೆಯಲ್ಲಿನ ಲೋಪಗಳನ್ನು ಎತ್ತಿ ತೋರಿಸುವುದು ತಪ್ಪಲ್ಲ. ಆದರೆ ಕಳೆದ ಒಂದು ದಶಕದಿಂದ ಚುನಾವಣಾ ಆಯೋಗದ ಮೇಲೆ ಮಾಡುತ್ತಿರುವ ಬಹುತೇಕ ಆರೋಪಗಳು 'ಹಿಟ್ ಆ್ಯಂಡ್ ರನ್' ರೀತಿಯಲ್ಲಿಯೇ ಇರುವುದು ಆತಂಕಕಾರಿ ವಿಷಯ. ವಿವಿಧ ರಾಜಕೀಯ ಪಕ್ಷಗಳು ಹಲವು ಬಾರಿ ಮಾಡಿರುವ ಆರೋಪಗಳಿಗೆಲ್ಲ ಚುನಾವಣಾ ಆಯೋಗ ನಿರಾಕರಿಸುವ ಜತೆಜತೆಗೆ ಮಾಡಿರುವ ಆರೋಪಗಳಿಗೆ ಒಂದಾದರೂ 'ಸಾಕ್ಷ್ಯ' ನೀಡಲಿ ಎಂದು ಹಲವು ಬಾರಿ ಕೇಳಿದ್ದರೂ ಈವರೆಗೆ ಯಾರೊಬ್ಬರೂ ಸಾಕ್ಷ್ಯ ನೀಡುವ ಸವಾಲನ್ನು ಪೂರ್ಣಗೊಳಿಸಿಲ್ಲ ಎನ್ನುವುದು ವಾಸ್ತವ. ಈ ಹಿಂದಿನ ಆರೋಪಗಳನ್ನೆಲ್ಲ ಬದಿಗಿಟ್ಟು, ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಈಗ ಮಾಡುತ್ತಿರುವ 'ಮತಗಳ್ಳತನ'ದ ಆರೋಪಕ್ಕಾದರೂ ಸಾಕ್ಷ್ಯ ನೀಡುವ ಮೂಲಕ ಚುನಾವಣಾ ವ್ಯವಸ್ಥೆಯಲ್ಲಿನ 'ಲೋಪ'ವನ್ನು ಇಡೀ ದೇಶಕ್ಕೆ ತೋರಿಸಬೇಕಿದೆ. ಇಲ್ಲವಾದರೆ ಇಷ್ಟು ದಿನ ಮಾಡಿರುವ ನೂರು ಆರೋಪಗಳ ಜತೆಗೆ 'ಮತಗಳ್ಳತನ' ನೂರಾ ಒಂದನೇ ಆರೋಪವಾಗಿ ಕೆಲವೇ ದಿನದಲ್ಲಿ ಕಳೆದುಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚಿರಕಾಲ ಉಳಿಯಲಿ

ವಿಶ್ವೇಶ್ವರ ಭಟ್ಟರು 'ಇದೇ ಅಂತರಂಗ ಸುದ್ದಿ' ಅಂಕಣದಲ್ಲಿ (ಆ.3) ನೀಡಿರುವ ಭೂತಾನ್ ದೇಶದ ಕುರಿತಾದ ಮಾಹಿತಿ ಹೃದಯಂಗಮವಾಗಿತ್ತು. ನಮ್ಮ ನೆರೆಯ ಈ ಪುಟ್ಟದೇಶದ ಬಗ್ಗೆ ತಿಳಿದು ಬಹಳ ಸಂತಸವಾಯಿತು, ಅಭಿಮಾನ ಉಕ್ಕಿಬಂದಿತು. ಆ ಪ್ರದೇಶದ ಜನರ ಸಂಸ್ಕೃತಿ, ಆಚಾರ-ವಿಚಾರ, ಅಲ್ಲಿನ ರಾಜರ ಧಾರಾಳತನ, ಸರಳತನ, ಅವರ ನೈಜ ಪ್ರಜಾಪ್ರಭುತ್ವದ ಆಳ್ವಿಕೆಯ ಪರಿ, ನಿಸರ್ಗದ ಮೇಲೆ ಅಲ್ಲಿನ ಜನ ಇಟ್ಟಿರುವ ಅಪಾರ ಕಾಳಜಿ, ಪ್ರಾಮಾಣಿಕ ದೇಶಪ್ರೇಮ, ಪರಿಸರದಲ್ಲಿ ಆಮ್ಲಜನಕವನ್ನು ಕಾಪಿಟ್ಟುಕೊಳ್ಳಲು ಭೂತಾನ್ ನೀಡಿರುವ ಕೊಡುಗೆ ಇವೆಲ್ಲವೂ ನಮ್ಮ ಭಾರತೀಯರ ಕನಸಿನ 'ರಾಮರಾಜ್ಯ'ವನ್ನು ನೆನಪಿಸುತ್ತವೆ. ಇಂಥ ಸಾಂಸ್ಕೃತಿಕ, ಸಂಪದ್ಭರಿತ ರಾಷ್ಟ್ರ ನಮ್ಮ ಪಕ್ಕದಲ್ಲಿದೆ ಅನ್ನೋದೇ ನಮಗೆ ಹೆಮ್ಮೆಯ ಸಂಗತಿ. ಭಾರತ ಮತ್ತು ಭೂತಾನ್ ದೇಶಗಳ ಸಂಬಂಧ ಹೀಗೆಯೇ ಗಟ್ಟಿಯಾಗಿರಲಿ, ಚಿರಕಾಲ ಉಳಿಯಲಿ. ಅತ್ಯುತ್ತಮ ಲೇಖನ ನೀಡಿದ್ದಕ್ಕೆ ಭಟ್ಟರಿಗೆ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಇದು ಗಿನ್ನೆಸ್ ದಾಖಲೆ!

ಮಾಸಿಕ 15,000 ರುಪಾಯಿ ಸಂಬಳ ಪಡೆಯುವ, ಕಸ ಗುಡಿಸುವ ಕಾಯಕದ ಗುತ್ತಿಗೆ ನೌಕರನೊಬ್ಬನ ಆಸ್ತಿಯ ಮೌಲ್ಯ 100 ಕೋಟಿ ರು. ಎಂಬ ಸುದ್ದಿಯನ್ನು ಓದಿ ಗಾಬರಿಯಿತು. ಲೋಕಾಯುಕ್ತ ದಾಳಿಯ ವೇಳೆ ಹೊರಬಂದ ಈ ಅಕ್ರಮ ಸಂಪತ್ತಿನ ಆಳ-ಅಗಲವನ್ನು ನೋಡಿ ಪ್ರಜ್ಞಾವಂತರು ಬೆಚ್ಚಿ ಬಿದ್ದಿದ್ದಾರೆ. ಇಂಥ ನೌಕರನೇ ಇಷ್ಟು ಸ್ವತ್ತು ಮಾಡಿರಬೇಕಾದರೆ, ಈತನ ಮೇಲಿನವರು ಅದೆಷ್ಟು ಮಾಡಿರಬಹುದು ಎಂದು ಕೆಲವರು ಲೆಕ್ಕ ಹಾಕುತ್ತಿದ್ದಾರೆ. ಈತನ ಅಕ್ರಮ ಸಂಪಾದನೆ ಈ ಮಟ್ಟಕ್ಕೆ ತಲುಪಿದ್ದರೂ ಇಷ್ಟು ದಿನದವರೆಗೆ ಯಾರ ಗಮನಕ್ಕೂ ಬಾರದಿದ್ದುದು ವಿಪರ್ಯಾಸ.

ನಮ್ಮ ದೇಶದಲ್ಲಿ ಕಾಶ್ಮೀರ ಸಮಸ್ಯೆ, ಕಾವೇರಿ ನದಿನೀರು ಹಂಚಿಕೆಯ ವಿವಾದ, ಬಡತನ, ಮಹದಾಯಿ ಯೋಜನೆ, ಭಾಷಾ ಸಮಸ್ಯೆ, ಬೆಳಗಾವಿ ಗಡಿ ವಿವಾದ ಮುಂತಾದವು ಒಂದು ದಿನ ಅಂತ್ಯಕಾಣಬಹುದು, ರಸ್ತೆಗಳಲ್ಲಿನ ಗುಂಡಿಗಳೂ ಇಲ್ಲವಾಗಬಹುದು; ಆದರೆ ಭ್ರಷ್ಟಾಚಾರಕ್ಕೆ ಮಾತ್ರ ಎಂದಿಗೂ ಅಂತ್ಯವಿಲ್ಲ ಎಂಬುದು ಸತ್ಯ. ಈ 100 ಕೋಟಿ ಭ್ರಷ್ಟಾಚಾರವು ಗಿನ್ನೆಸ್ ದಾಖಲೆಗೆ ಸೇರಲಿ.

- ರಮಾನಂದ ಎಸ್., ಬೆಂಗಳೂರು

ಪುಸ್ತಕವಾಗಿ ಬರಲಿ

ಸಂಪಾದಕರ ಸದ್ಯಶೋಧನೆ ವಿಭಾಗದಲ್ಲಿ ವಿಮಾನ ಪ್ರಯಾಣ ಮತ್ತು ಅದಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳ ಬಗ್ಗೆ ನೀಡಲಾಗುತ್ತಿರುವ ಖಚಿತವಾದ ಮತ್ತು ತಾಂತ್ರಿಕ ನೆಲೆಗಟ್ಟಿನ ವಿವರಗಳು ತುಂಬಾ ಪ್ರಯೋಜನಕಾರಿಯಾಗಿವೆ. ಇದು ನನ್ನ ನೆಚ್ಚಿನ ವಿಷಯವೂ ಹೌದು. ಈ ಬರಹಗಳು ಆದಷ್ಟು ಬೇಗ ಪುಸ್ತಕ ರೂಪದಲ್ಲಿ ಹೊರಬರಲಿ ಎಂದು ಆಶಿಸುವೆ.

- ಡಾ. ಮಧುಸೂದನ್ ಜಾಗೀರ್‌ದಾರ್, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ನಗುವನ್ನು ಸಾಂಕ್ರಾಮಿಕವಾಗಿಸಿದ ಸುಲೋಚನಾ...

ಪದಸಾಗರ
ನವೀನ್ ಸಾಗರ್
vveditoped@gmail.com

ಬೆಂಗಳೂರು ಮಾತ್ರ ಅಲ್ಲ, ಇಡೀ ಕರ್ನಾಟಕದಲ್ಲಿ ಎಲ್ಲೇ ಹೋದರೂ ಕಳೆದ ಎರಡು ವಾರದಿಂದ ಒಂದೇ ಮಾತು. ಅಲ್ಲ... ನೀವಂದುಕೊಂಡಂತೆ ಧರ್ಮಸ್ಥಳದ ಮಾತಲ್ಲ. 'ಸು ಫ್ರಮ್ ಸೋ' ಎಂಬ ವಿಚಿತ್ರ ಹೆಸರಿನ ಸಿನಿಮಾ ಬಗ್ಗೆ ಮಾತು. ಅಪರೂಪಕ್ಕೆ ಭೇಟಿ ಆದವರು, ಆಫೀಸು, ಕಾಲೇಜು, ಅಂಗಡಿ ಮುಂದೆ, ಜಿಮ್ಮು, ಮದುವೆಕಾರ್ಯ, ಕೊನೆಗೆ ಸ್ಮಶಾನಕ್ಕೆ ಹೆಣ ಒಯ್ತಿರೋ ಮೆರವಣಿಗೆಯಲ್ಲಿ ಇರೋವ್ರದ್ದೂ ಇದೇ ಮಾತು.. 'ಸು ಫ್ರಮ್ ಸೋ ನೋಡಿದ್ರಾ?' ಅಂತ.

'ಸು ಫ್ರಮ್ ಸೋ' ನೋಡದವರು ಯಾರಾದರೂ ಇದ್ರೆ ಅವರನ್ನು ಅನ್ಯಗ್ರಹ ಜೀವಿಗಳ ಹಾಗೆ ನೋಡೋ ಸಾಧ್ಯತೆ ಇದೆ. ಅನ್ಯಗ್ರಹದಲ್ಲಿ ರಿಲೀಸಾದ್ರೂ ಈ ಸಿನಿಮಾ ಹಿಟ್ ಆಗಿಬಿಡುತ್ತೇನೋ.. ಯಾರಿಗ್ಗೊತ್ತು! ಒಟ್ನಾರೆ 'ಸು ಫ್ರಮ್ ಸೋ' ನೋಡುವುದು, ಅದರ ಬಗ್ಗೆ ಮಾತನಾಡುವುದು ಒಂದು ಟ್ರೆಂಡ್ ಆಗಿಬಿಟ್ಟಿದೆ. ಆ ಸಿನಿಮಾದ ಬಗ್ಗೆ ಮಾತನಾಡುವ ಪ್ರತಿ ಮುಖದಲ್ಲೂ ಒಂದು ಅವರ್ಣನೀಯ ನಗು ಅಥವಾ ಮುಗುಳ್ನಗು ಇದ್ದೇ ಇರುತ್ತದೆ. ಯಾಕಂದ್ರೆ ಇದು ಸಿನಿಮಾ ನೋಡಿ ಬಂದಮೇಲೆ ಮೆಲುಕು ಹಾಕುವಂತೆ ಮಾಡಿ ನಗು ಮೂಡಿಸುವ ಸಿನಿಮಾ. ಯಾರೊಂದಿಗಾದ್ರೂ ಈ ಸಿನಿಮಾದ ಬಗ್ಗೆ ಮಾತಾಡಿ, ಪಾತ್ರಗಳ ಬಗ್ಗೆ ಚರ್ಚೆ ಮಾಡಿ ನಗೋಣ ಅನಿಸುವಂತೆ ಮಾಡುತ್ತದೆ. ಮಾತಿಗ್ಯಾರೂ ಸಿಗದೇ ಹೋದರೆ, ಪಾತ್ರಗಳನ್ನು ನೆನೆಸಿಕೊಂಡು, ನಮ್ಮಲ್ಲೊಬ್ಬ ಇಂಥವ್ನಿದ್ದನಲ್ಲ ಎಂದು ಕನೆಕ್ಟ್ ಮಾಡಿಕೊಂಡು ಒಬ್ಬೊಬ್ಬರೇ ಮನಸಲ್ಲೇ ನಗುವಂತ್ ಮಾಡುತ್ತದೆ ಈ 'ಸು ಫ್ರಮ್ ಸೋ'.

ಇದರ ದಾಖಲೆ, ಬಾಕ್ಸಾಫೀಸ್ ಅಂಕಿ-ಅಂಶ ಇತ್ಯಾದಿಗಳ ಬಗ್ಗೆ ಹೇಳೋ ಅಗತ್ಯ ಇಲ್ಲ. ಬೆರಳೆಣಿಕೆಯಷ್ಟು ಶೋಗಳೊಂದಿಗೆ ತೆರೆಕಂಡ ಚಿತ್ರ ಎರಡೇ ಎರಡು ದಿನದಲ್ಲಿ ರಾಜ್ಯದ ಎಲ್ಲ ಸ್ಕ್ರೀನುಗಳನ್ನೂ ಬಾಚಿಕೊಂಡುಬಿಟ್ಟಿತು. ಹಸಿದ ಕನ್ನಡ ಸ್ಕ್ರೀನ್‌ಗಳು 'ನಂಗೊಂದು ಶೋ ಕೊಡಿ, ನಂಗೊಂದು ಶೋ ಕೊಡಿ' ಎಂದು ಬೇಡಿ ಪಡೆದವು. ಮೊದಲ ದಿನ ಎಪ್ಪತ್ತೆಂಟು ಲಕ್ಷ ಗಳಿಕೆ ಮಾಡಿದ್ದ ಚಿತ್ರ ಕೇವಲ ಹತ್ತು ದಿನಗಳಲ್ಲಿ ಕೂಡಿ ಹಾಕಿರೋ ಮೊತ್ತ, ಸುಮಾರು 35 ಕೋಟಿ. ದಿನದಿಂದ ದಿನಕ್ಕೆ ಕಲೆಕ್ಷನ್ ಕೋಟಿಗಳಲ್ಲಿ ಏರಿಕೆ ಕಾಣುತ್ತಿದೆ. ಬಿಡುಗಡೆಯಾದ ಒಂಬತ್ತನೇ ದಿನ 'ಸು ಫ್ರಮ್ ಸೋ' ಗಳಿಸಿದ್ದು ಐದು ಕೋಟಿ.

ಅಂಥದ್ದೇನಿದೆ ಈ ಚಿತ್ರದಲ್ಲಿ? ಈ ರೀತಿ ಒಂದು ಮೇನಿಯಾ, ಕ್ರೇಜ್ ಹುಟ್ಟಿಕೊಳ್ಳುವುದಕ್ಕೆ ಕಾರಣ ಏನು? ನೋಡಿದವರೇ ಮತ್ತೆ ಮತ್ತೆ ನೋಡಲು ಹೋಗುತ್ತಿರುವುದು ಏಕೆ? ಹಾಡಿಗಾಗಿಯಾ? ಫೈಟಿಗಾಗಿಯಾ? ಹೀರೋ-ಹೀರೋಯಿನ್‌ಗಾಗಿಯಾ? ಕ್ಲೈಮ್ಯಾಕ್ಸ್‌ಗಾಗಿಯಾ? ಹೀಗೆ ಯಾವ ಪ್ರಶ್ನೆ ಕೇಳಿದರೂ 'ಹೂಂ' ಎಂಬ ಉತ್ತರ ಸಿಗುವುದಿಲ್ಲ. ಆದರೆ 'ಸು ಫ್ರಮ್ ಸೋ' ಚಿತ್ರಕ್ಕೆ ಜನಪ್ರವಾಹ ಮಾತ್ರ ಕಮ್ಮಿಯಾಗುತ್ತಲೇ ಇಲ್ಲ. ಕನ್ನಡದಲ್ಲಿ ಸಾಲದು ಅಂತ ಅತ್ತ ಮಲಯಾಳಂ, ಇತ್ತ ತೆಲುಗು ಚಿತ್ರರಂಗಗಳು 'ಸು ಫ್ರಮ್ ಸೋ' ಎಂಬ ಈ ಯಶಸ್ವಿ ಚಿತ್ರದ ಹಿಂದೆ ಬಿದ್ದಿವೆ.

ಮತ್ತೆ ನನ್ನನ್ನೇ ನಾನು ಕೇಳಿಕೊಳ್ತೀನಿ.. 'ಸು ಫ್ರಮ್ ಸೋ' ಅಂಥ ಅದ್ಭುತ ಸಿನಿಮಾನಾ? ಹಿಂದೆಂದೂ ಯಾವ ಚಿತ್ರವೂ ನಗಿಸದಷ್ಟು ಈ ಚಿತ್ರ ನಗಿಸುತ್ತಿದೆಯಾ? ಕನ್ನಡ ಚಿತ್ರರಂಗ ಇಂಥ ಒಂದು ಸಿನಿಮಾವನ್ನು ಇಲ್ಲಿಯವರೆಗೆ ನೋಡಿಯೇ ಇಲ್ವಾ?

'ಸು ಫ್ರಮ್ ಸೋ' ಚಿತ್ರದಲ್ಲಿ ಭರಪೂರ ನಗು ಇದೆ. ಆದರೆ ಇದು ಕಾಮಿಡಿ ಸಿನಿಮಾ ಅಲ್ಲ. ಇದರಲ್ಲಿ ಬೆಚ್ಚಿಬೀಳಿಸುವ ಒಂದೆರಡು ಶಾಟ್‌ಗಳಿವೆ. ಆದರೆ ಇದು ಹಾರರ್ ಚಿತ್ರವೂ ಅಲ್ಲ. ಶುರುವಲ್ಲಿ ಲವ್ವಿನ ಸಣ್ಣದೊಂದು ಮಿಂಚಿದೆ. ಕೊನೆಯಲ್ಲೊಂದು ಅಪರೂಪವೆನಿಸುವ ಪ್ರೀತಿಕತೆ ಇದೆ. ಆದರೆ ಇದು ಲವ್‌ಸ್ಟೋರಿ ಅಲ್ಲ. ಸಾಮಾಜಿಕ ಪಿಡುಗು, ಮೌಢ್ಯ ಇತ್ಯಾದಿಗಳನ್ನು ಸಿನಿಮಾ ಟಚ್ ಮಾಡುತ್ತದೆ. ಆದರೆ ಇದು ಸಂದೇಶ ಕೊಡಲೋಸುಗ ಮಾಡಿರುವ ಚಿತ್ರವಲ್ಲ. ತಾಯಿ ಸೆಂಟಿಮೆಂಟ್ ಇದೆ. ತಾಯಿಯೇ ಇಲ್ಲ. ಲವ್ ಇದೆಯಾದರೂ ನಾಯಕ ನಾಯಕಿ ಪಾತ್ರಗಳೇ ಇಲ್ಲ. ವಿಲನ್ ಇದ್ದಾರೆ. ಯಾರು ಅಂತ ಹೇಳಲಾಗುವುದಿಲ್ಲ. ನಗಿಸುವವರಿದ್ದಾರೆ. ಆದರೆ ಇಂಥವ್ರನ್ನೇ ಕಾಮಿಡಿಯನ್ ಅನ್ನಲಾಗುವುದಿಲ್ಲ. ಪೋಷಕ ಪಾತ್ರಗಳಿವೆ.. ಆದರೆ ಅವೆಲ್ಲವೂ ಚಿತ್ರಕ್ಕೆ ಪ್ರಮುಖ ಪಾತ್ರಗಳು. ಹಾಗಾದರೆ ಈ ಚಿತ್ರದ ನಾಯಕ ನಾಯಕಿ, ಪಿಲ್ಲರ್ ಯಾರು? ಕಥೆ.. ಕಂಟೆಂಟ್!

ಚಿತ್ರರಂಗ ಅರ್ಥ ಮಾಡ್ಕೋಬೇಕು. ಕಂಟೆಂಟ್ ಅಂದಾಕ್ಷಣ, ಈವರೆಗೆ ಯಾರೂ ಹೇಳಿರದ ಕಥೆಯೊಂದನ್ನು ಹೇಳುವುದೇ ಕಂಟೆಂಟ್ ಅಲ್ಲ. ಯಾರಿಗೂ ಅರ್ಥವಾಗದಂತೆ ಜಟಿಲ ಕಥೆ ಹೇಳುವುದೂ ಕಂಟೆಂಟ್ ಅಲ್ಲ. ಅಂತೆಯೇ ಕೋಟಿ ಕೋಟಿ ಸೆಟ್ ಹಾಕುವುದು, ಗ್ರಾಫಿಕ್ಸ್ ಮಾಡುವುದು, ಫಾರಿನ್ ಶೂಟ್ ಮಾಡುವುದು, ಪ್ರತಿ ಶಾಟ್‌ನಲ್ಲೂ ರಿಚ್‌ನೆಸ್ ತೋರಿಸುವುದು ಮೇಕಿಂಗ್ ಅಲ್ಲ. ಅಸಲಿಗೆ, ಮೇಕಿಂಗ್ ಮತ್ತು ಕಂಟೆಂಟ್ ಅನ್ನೋದು ಕೇವಲ ಹಣ ಮತ್ತು ಅತಿ ಬುದ್ಧಿವಂತಿಕೆಗೆ ಮೀಸಲಾದ ವಿಷಯಗಳಲ್ಲವೇ ಅಲ್ಲ.

'ಸು ಫ್ರಮ್ ಸೋ' ಎಲ್ಲರೂ ಹೇಳುವಂತೆ ಕಾಮಿಡಿ ಚಿತ್ರವಲ್ಲ, ಅದು ಹ್ಯೂಮರಸ್ ಚಿತ್ರ. ಕಾಮಿಡಿಗೂ ಹ್ಯೂಮರ್‌ಗೂ ಒಂದು ವ್ಯತ್ಯಾಸವಿದೆ. ಇಲ್ಲಿ ಪ್ರೇಕ್ಷಕನನ್ನು ನಗಿಸಲೆಂದು ಪಾತ್ರಗಳನ್ನು ಸೃಷ್ಟಿಸಿ, ದೃಶ್ಯ ಬರೆದು, ಡೈಲಾಗ್ ಪೋಣಿಸಿ ನಗಿಸುವ ಪ್ರಯತ್ನ ಮಾಡಿಲ್ಲ. ಗಂಭೀರ ಕಥೆಯ ಮಧ್ಯೆ ರಿಲೀಫ್ ಕೊಡಲೆಂದು ಹಾಸ್ಯದೃಶ್ಯಗಳನ್ನು ಬರೆದಿಲ್ಲ. ಶತಾಯಗತಾಯ ನಗಿಸಬೇಕು ಎಂದು ಹಟ ತೊಟ್ಟು ದೃಶ್ಯಗಳನ್ನು ರಚಿಸಿಲ್ಲ. ಆದರೆ ಕರಾವಳಿ ಮಂದಿಯ ಗುಣದಲ್ಲಿ ಹಾಸುಹೊಕ್ಕಾಗಿರುವ ಹಾಸ್ಯಪ್ರಜ್ಞೆಯನ್ನು ಸಂಪೂರ್ಣವಾಗಿ ಕಥೆಯೊಂದಿಗೆ ಬೆರೆಸಿದ್ದಾರೆ ನಿರ್ದೇಶಕರು. ಪ್ರತಿ ಹಳ್ಳಿಯಲ್ಲೂ, ಮನೆಯಲ್ಲೂ ಇದ್ದೇ ಇರುವ ಕ್ಯಾರೆಕ್ಟರ್‌ಗಳನ್ನು ಈ ಚಿತ್ರದ ಪಾತ್ರವಾಗಿಸಿದ್ದಾರೆ. ಸಿನಿಮಾ ಪ್ರಾರಂಭವಾಗಿ ಕೆಲವೇ ನಿಮಿಷಗಳಲ್ಲಿ ಪ್ರೇಕ್ಷಕರನ್ನು ತನ್ನೊಳಗೆ ಎಳೆದುಕೊಂಡು ಬಿಡುತ್ತದೆ. ಪ್ರೇಕ್ಷಕ ದೈಹಿಕವಾಗಿ ಥಿಯೇಟರ್ ಸೀಟಿನಲ್ಲಿರುತ್ತಾನೆ. ಆದರೆ ಮಾನಸಿಕವಾಗಿ ಮರ್ಲೂರಿನ (ಸಿನಿಮಾಕಥೆ ನಡೆಯುವ ಹಳ್ಳಿ) ಅಂಗಳದಲ್ಲಿ ನಿಂತು ಬಿಟ್ಟಿರುತ್ತಾನೆ. ಸಿನಿಮಾ ಪ್ರೇಕ್ಷಕನಿಗೆ ಇಷ್ಟವಾಗಿರುವುದು ಇಲ್ಲಿ.

ಹಾಗಾದರೆ ಸೀಟಿಂದೆಲ್ಲಾ ಕೆಳಗೆ ಬಿದ್ದು ನಗ್ತಾ ಇರೋದು.. ಕೈಲಿರುವ ಪಾಪ್‌ಕಾರ್ನ್ ಚೆಲ್ಲಾಡಿ ಹೋಗುವಂತೆ ನಗ್ತಾ ಇರೋದು.. ಉಸಿರಾಡೋಕೂ ಗ್ಯಾಪ್ ಸಿಗದಂತೆ ನಗುತ್ತಿರೋದು ಇವೆಲ್ಲ ನಿಜವಾ? ನಿಜ. ಅಷ್ಟೊಂದು ನಗಿಸುವಂತಿದೆಯಾ ಸಿನಿಮಾ? ಅವರವರ ವೈಯಕ್ತಿಕ ಮನಸ್ಥಿತಿ, ಅಭಿರುಚಿ, ಸೆನ್ಸ್ ಆಫ್ ಹ್ಯೂಮರ್, ಮೂಡ್, ಇತರ ಚಿತ್ರಗಳೊಂದಿಗೆ ತುಲನೆ, ಇವೆಲ್ಲದರ ಮೇಲೆ ಉತ್ತರ ಬದಲಾಗುತ್ತದೆ. ಕನ್ನಡ ಚಿತ್ರಪ್ರೇಮಿ ಅದ್ಭುತ ಹಾಸ್ಯ ಚಿತ್ರಗಳನ್ನು ನೋಡಿದ್ದಾನೆ. 'ರಾಮ ಶಾಮ ಭಾಮ', 'ಕೋತಿಗಳು ಸಾರ್ ಕೋತಿಗಳು', 'ಗಣೇಶನ ಮದುವೆ', 'ಗೌರಿ ಗಣೇಶ', 'ಭಾಗ್ಯದಾ ಲಕ್ಷ್ಮೀ ಬಾರಮ್ಮ', 'ಗೋಲ್‌ಮಾಲ್ ರಾಧಾಕೃಷ್ಣ', 'ಉಲ್ಟಾಪಲ್ಟಾ', 'ಅಧ್ಯಕ್ಷ', 'ಎದ್ದೇಳು ಮಂಜುನಾಥ'- ಹೀಗೆ ಭಿನ್ನ ಭಿನ್ನ ರೀತಿಯ ಹಾಸ್ಯಚಿತ್ರಗಳನ್ನು ನೋಡಿಕೊಂಡು ಬಂದಿದ್ದಾನೆ. ಹೊಟ್ಟೆ ತುಂಬ ನಕ್ಕು ಎಂಜಾಯ್ ಮಾಡಿದ್ದಾನೆ. ಈ ಚಿತ್ರಕ್ಕಿಂತಲೂ ಹೆಚ್ಚಿನ ಹಾಸ್ಯದ ರಸದೂಟ ಆ ಚಿತ್ರಗಳಲ್ಲಿ ಸವಿದಿದ್ದಾನೆ. ಆದರೆ ಅದನ್ನೆಲ್ಲ ಮರೆತು ನಾನು ಇಲ್ಲೀತನಕ ಇಷ್ಟೊಂದು ನಕ್ಕೇ ಇಲ್ಲ ಅಂತ ಹೇಳುತ್ತಿರುವುದು ಅತಿರೇಕ ಅನಿಸುತ್ತಿಲ್ಲವೇ? ಹೀಗಂತ ಕೇಳಿದರೆ ಮತ್ತೆ ಗೊಂದಲದ ಉತ್ತರವನ್ನೇ ಕೊಡಬೇಕಾಗುತ್ತದೆ.

ವೈಯಕ್ತಿಕವಾಗಿ ನಾನು ಈ ಚಿತ್ರದ ಅವಧಿಯುದ್ದಕ್ಕೂ ಒಂದು ಕಿರುನಗೆಯನ್ನು ಜಾರಿಯಲ್ಲಿಟ್ಟುಕೊಂಡಿದ್ದೆ. ಎಲ್ಲಿಯೂ ಗಹಗಹಿಸಿ, ಎದ್ದುಬಿದ್ದು ನಗಲಿಲ್ಲ. ಆದರೆ ಅಲ್ಲಲ್ಲಿ ನಗು ಉಕ್ಕಿದ್ದಂತೂ ಹೌದು. ಈ ಚಿತ್ರ ಮೇಲ್ನೋಟಕ್ಕೆ ನಗಿಸುವ ಸಿನಿಮಾವೇ ಆದರೂ, ಮೆಲ್ಲನೆ ವಿಶ್ಲೇಷಿಸಿದರೆ ಹಲವಾರು ಪದರಗಳನ್ನು ಹೊತ್ತಿದೆ. ಯುವಕರ ಮನಸ್ಥಿತಿ, ಮೌಢ್ಯ ಮಾಡುವ ಅನಾಹುತಗಳು, ದೈವಮಾನವರ ನಕಲಿತನ, ಪಾಪಪ್ರಜ್ಞೆ, ಗುಣದ ರೂಪಾಂತರ ಹೀಗೆ ಬಹಳಷ್ಟು ಆಯಾಮಗಳನ್ನು ನಮ್ಮ ಸುತ್ತಲಿರುವ ಟಿಪಿಕಲ್ ಪಾತ್ರಗಳ ಮೂಲಕ ನಗಿಸುತ್ತ ನಗಿಸುತ್ತಲೇ ಹೇಳುತ್ತಾ ಹೋಗುತ್ತದೆ 'ಸು ಫ್ರಮ್ ಸೋ'. ಕೆಲವರಿಗೆ ಕೇವಲ ನಗು ದಕ್ಕುತ್ತದೆ. ಕೆಲವರಿಗೆ ಎಮೋಷನ್ಸ್ ಟಚ್ ಮಾಡುತ್ತವೆ. ಇನ್ನು ಕೆಲವರು ಪಾತ್ರಗಳ ಜತೆ ಕಳೆದುಹೋಗುತ್ತಾರೆ. ರವಿ ಅಣ್ಣ ಪಾತ್ರವಾಗಿ ಉಳಿಯುವುದಿಲ್ಲ. ಆತ ಮುಂದಿನ ಹಲವಾರು ವರ್ಷ ರವಿ ಅಣ್ಣನಾಗಿಯೇ ಹೋಗುತ್ತಾನೆ. ಬಾವ ಕೂಡ ಕರ್ನಾಟಕದ ಬಾವನಾಗಿಯೇ ಪ್ರಚಲಿತನಾಗುತ್ತಾನೆ. ಹೀಗೆ ಸಿನಿಮಾ ತನ್ನದೇ ರೀತಿಯಲ್ಲಿ ಪ್ರೇಕ್ಷಕರ ಮನ ಗೆಲ್ಲುತ್ತಾ ಹೋಗಿದೆ.

ಆದರೂ, ಮತ್ತದೇ ಪ್ರಶ್ನೆ. ಸಿನಿಮಾ ಚೆನ್ನಾಗಿದೆ ಅಂತಲೇ ಇಟ್ಕೊಳ್ಳೋಣ. ಈ ರೀತಿ ಹಿಟ್ ಆಗಿದ್ದು ಹೇಗೆ? ಜನ ಕನ್ನಡ ಸಿನಿಮಾ ನೋಡೋಕೆ ಥಿಯೇಟರ್‌ಗೆ ಬರ್ತಾ ಇಲ್ಲ ಅಂತ ಇಂಡಸ್ಟ್ರಿ ಅಳ್ತಾ ಇದೆ. ಇದಕ್ಕೆ ಈ ರೀತಿ ನುಗ್ಗುತ್ತಿರೋದಾದ್ರೂ ಹೇಗೆ? ಸೆಲೆಬ್ರಿಟಿ ಶೋಗಳನ್ನು ಮಾಡಲಿಲ್ಲ. ಯಾವ ಸ್ಟಾರೂ ಬಂದು ಸಿನಿಮಾದ ಬಗ್ಗೆ ಹೊಗಳಿ, ರೆಕಮೆಂಡ್ ಮಾಡಲಿಲ್ಲ. ಟ್ರೋಲ್ ಪೇಜ್‌ಗಳು, ಯೂಟ್ಯೂಬ್‌ಗಳು, ಪತ್ರಿಕೆ-ಟಿವಿಗಳು ಪ್ರೊಮೋಟ್ ಮಾಡಲಿಲ್ಲ. ಕೋಟಿಗಟ್ಟಲೆ ಹಣ ಹೂಡಿ ಪೋಸ್ಟರ್, ಬ್ಯಾನರ್ ಏನನ್ನೂ ಹಾಕಿಸಲಿಲ್ಲ. ನವಾಜ್, ಅಮುಕುಡುಮುಕುಗಳ ಕೈಲಿ ಕಿರುಚಾಡಿಸಲಿಲ್ಲ. ಆದರೂ ಹಿಟ್ ಆಗಿದ್ದು ಹೇಗೆ?

'ಪೇಯ್ಡ್ ಪ್ರೀಮಿಯರ್' ಮಾಡಿದ್ದು ಇವರೇ ಮೊದಲೇನಲ್ಲ. ಪ್ರಚಾರವೇ ಇಲ್ಲದೇ ಬಂದದ್ದು ಇವರೇ ಮೊದಲೇನಲ್ಲ. ಬೇರೆಯವರು ಕಾಣದ ಗೆಲುವು ಇವರು ಕಂಡಿದ್ದು ಹೇಗೆ? ಬಿದ್ದು ಬಿದ್ದು ನಗುವ ಪ್ರೇಕ್ಷಕರನ್ನು ಸೃಷ್ಟಿ ಮಾಡಿ ಥಿಯೇಟರ್ ಒಳಗೆ ಕಳಿಸಿ ಸಮೂಹಸನ್ನಿ ಉಂಟುಮಾಡಿದರಾ? ನಗುವನ್ನು ಸಾಂಕ್ರಾಮಿಕಗೊಳಿಸುವ ವ್ಯವಸ್ಥಿತ ತಂತ್ರ ನಡೆಯಿತಾ? ಅಲ್ಲಲ್ಲಿ ತಮ್ಮದೇ ಪ್ರೇಕ್ಷಕರನ್ನು ಕೂರಿಸಿ ಪಂಚಿಂಗ್ ಪಾಯಿಂಟ್‌ಗಳಲ್ಲಿ ಬಿದ್ದುಬಿದ್ದು ನಗಲು ಹೇಳಿ, ಅವರ ಮೂಲಕ ಇಡೀ ಥಿಯೇಟರ್‌ಗೆ ನಗು ಹರಡಿಸಲಾಯ್ತಾ? ಈ ಸಿನಿಮಾದ ಗೆಲುವನ್ನು ಡೀಕೋಡ್ ಮಾಡಲಾಗದ ಒಂದಷ್ಟು ಮಂದಿ ಇಂಥ ಸಾಧ್ಯತೆಗಳನ್ನೆಲ್ಲ ಊಹಿಸುತ್ತಿದ್ದಾರೆ. ಇದು ಕರಾವಳಿ ಶೆಟ್ಟರ ಮಾರ್ಕೆಟಿಂಗ್ ತಂತ್ರದಿಂದ ಗೆದ್ದಿರುವುದು ಎಂದು ಗೊಣಗುತ್ತಿದ್ದಾರೆ.

ವಾಸ್ತವ ಏನೆಂದರೆ, ಕನ್ನಡ ಚಿತ್ರರಂಗದ ಪ್ರೇಕ್ಷಕ ಹಸಿದಿದ್ದ, ಹತಾಶನಾಗಿದ್ದ. ಅಕ್ಕಪಕ್ಕದ ರಾಜ್ಯಗಳಲ್ಲಿ ಬರುತ್ತಿರೋ ಒಳ್ಳೇ ಚಿತ್ರಗಳು ನಮ್ಮಲ್ಯಾಕೆ ಬರುತ್ತಿಲ್ಲ ಎಂದು ಬೇಸರಗೊಂಡಿದ್ದ. ನಕಲಿ ಪ್ರಚಾರಗಳು, ಪ್ಯಾನ್ ಇಂಡಿಯಾ ಹೆಸರಿನಲ್ಲಿ ಬರುವ ಅರ್ಥಹೀನ ರಿಚ್ ಸಿನಿಮಾಗಳು, ಯಾಕೆ ನೋಡಬೇಕು ಎಂಬ ಪ್ರಶ್ನೆಗೆ ಉತ್ತರವೇ ಇಲ್ಲದ ಚಿತ್ರಗಳು, ಇವೆಲ್ಲದರಿಂದ ರೋಸತ್ತು ಬೇಸತ್ತಿದ್ದ ಪ್ರೇಕ್ಷಕ ಒಂದು ಆರ್ಡಿನರಿ ಸರಳ ಸುಂದರ ಚಿತ್ರ ಸಿಕ್ಕರೂ ಸಾಕು ಎತ್ತಿ ಮುದ್ದಾಡಲು ಕಾದಿದ್ದ. ಕನ್ನಡ ಚಿತ್ರಗಳ ವಿಷಯದಲ್ಲಿ ಅವನ ನಿರೀಕ್ಷೆಯನ್ನೂ ತಗ್ಗಿಸಿಕೊಂಡುಬಿಟ್ಟಿದ್ದ. 'ಕಾಂತಾರ'ದ ತನಕ ಇನ್ಯಾವ ಚಿತ್ರದ ಮೇಲೂ ಆತನಿಗೆ ನಿರೀಕ್ಷೆ ಇರಲಿಲ್ಲ. ಜನಾರ್ದನ ರೆಡ್ಡಿ ಮಗನ 'ಜೂನಿಯರ್' ಬಂದಾಗ ಆತ, 'ಕನ್ನಡದಲ್ಲಿ ಇಷ್ಟಾದ್ರೂ ಚೆನ್ನಾಗಿರೋ ಸಿನಿಮಾ ಬಂತಲ್ಲ' ಎಂಬ ಖುಷಿ ತೋರಿಸಿದ್ದ. ಹೀಗೆ ಹಸಿದು ಬರಗೆಟ್ಟಿದ್ದಾಗ ಸಿಕ್ಕ ಚಿತ್ರ 'ಸು ಫ್ರಮ್ ಸೋ'. ನಿರೀಕ್ಷೆಯೇ ಇಲ್ಲದ, ಹೆಸರೇ ಕೇಳಿರದಿದ್ದ, ಸ್ಟಾರ್‌ಗಳಿಲ್ಲದ ಒಂದು ಚಿತ್ರ ಸರ್‌ಪ್ರೈಸ್ ಎಂಬಂತೆ ನೋಡಿಸಿಕೊಂಡುಬಿಟ್ಟಿತು. ಪ್ರೇಕ್ಷಕ ಖುಷಿಯಿಂದ ಚೂರು ಅತಿಯಾಗಿಯೇ ರಿಯಾಕ್ಟ್ ಮಾಡಿದ. ಹೆಚ್ಚೇ ಹೊಗಳಿದ. ಪ್ರೇಕ್ಷಕರ ಮಾತನ್ನು ಜನ ನಂಬಿದರು. 'ವರ್ಡ್ ಆಫ್ ಮೌತ್ ಪಬ್ಲಿಸಿಟಿ' ವರ್ಕ್ ಆಯ್ತು. ಚಿತ್ರ ನಂಬಲಾಗದಂಥ ದೊಡ್ಡ ಗೆಲುವು ಸಾಧಿಸಿಬಿಟ್ಟಿತು.

ಅದರರ್ಥ ಪ್ರೇಕ್ಷಕ ಚಿತ್ರಮಂದಿರಗಳಿಂದ ದೂರವಾಗಿಲ್ಲ. ಸಿನಿಮಾ ಹುಚ್ಚು ಅವನಲ್ಲಿ ಚೂರೂ ಕಮ್ಮಿ ಆಗಿಲ್ಲ. ಅವನಿಗಿಷ್ಟ ಆಗುವ ಸಿನಿಮಾ ಕೊಡುತ್ತಿಲ್ಲ. ಅವನು ಟ್ರೈ ಕೂಡ ಮಾಡೋಕೆ ಬರಲು ಹೆದರುವಷ್ಟು ಕೆಟ್ಟ ಸಿನಿಮಾ ಕೊಟ್ಟು ಅವನನ್ನು ಥಿಯೇಟರ್‌ಗಳಿಂದ ದೂರ ಇಟ್ಟಿದ್ದಾರೆ. ಬೇರೆ ಭಾಷೆಯ ಸಿನಿಮಾಗಳಿಗೆ ಪ್ರೇಕ್ಷಕ ಥಿಯೇಟರ್‌ಗೆ ಬರುತ್ತಾನೆ ಅಂದ ಮೇಲೆ ಕನ್ನಡಕ್ಕೂ ಬರಲೇಬೇಕಲ್ವಾ?

ಇನ್ನು, ದೊಡ್ಡ ಬಜೆಟ್, ರಿಚ್ ಸಿನಿಮಾಗಳನ್ನು ಮಾತ್ರ ಥಿಯೇಟರಲ್ಲಿ ನೋಡಬಯಸುತ್ತಾನೆ ಅನ್ನೋದು ಕೂಡ ಶುದ್ಧ ಮಿಥ್! ಆತನಿಗೆ ಬಜೆಟ್, ಮೇಕಿಂಗ್ ಇವ್ಯಾವುದೂ ಮುಖ್ಯವಲ್ಲ. 'ಸು ಫ್ರಮ್ ಸೋ' ಚಿತ್ರವನ್ನು ಕಿಲಕಿಲ ನಗುಗಳ ಮಧ್ಯೆ ತುಂಬಿದ ಥಿಯೇಟರ್‌ನಲ್ಲಿ ನೋಡುವ ಮಜವೇ ಬೇರೆ. ಅದು ಒಟಿಟಿಯಲ್ಲಿ ಸಿಗುವುದಿಲ್ಲ.

ಕನ್ನಡದ ಸ್ಟಾರ್‌ಗಳ ಬಾಯಿಂದ ಈ ಚಿತ್ರದ ಗೆಲುವಿನ ಬಗ್ಗೆ ಮಾತುಗಳೇ ಬರುತ್ತಿಲ್ಲ. ಒಂದು ಹೊಗಳಿಕೆ ಮೆಚ್ಚುಗೆ ಏನೂ ಇಲ್ಲ. ನಿರ್ಮಾಪಕರೂ ದಂಗಾಗಿದ್ದಾರೆ. 'ಸು ಫ್ರಮ್ ಸೋ' ಕನ್ನಡ ಇಂಡಸ್ಟ್ರಿ ಪಾಲಿಗೆ ಒಂದು ಅಧ್ಯಯನದ ವಸ್ತು ಆಗಬೇಕು. ಅದರರ್ಥ ಎಲ್ಲರೂ ಈಗ 'ಸು ಫ್ರಮ್ ಸೋ' ಥರದ ಚಿತ್ರ ತೆಗೆಯಲು ಹೊರಡಬೇಕು ಅಂತಲ್ಲ. ಪ್ಯಾನ್ ಇಂಡಿಯಾ ಭ್ರಮೆ, ಸ್ಟಾರ್ ಭ್ರಮೆ, ಟಿವಿ ಒಟಿಟಿ ಭ್ರಮೆ ಇವೆಲ್ಲದರಿಂದ ಹೊರಬಂದು, ಜನಕ್ಕೆ ಹತ್ತಿರವೆನಿಸುವ, ಎರಡು ಗಂಟೆ ಮೈಮರೆಸುವ ಚಿತ್ರಗಳನ್ನು ಚಿಕ್ಕ ಬಜೆಟ್‌ನಲ್ಲಿ, ಕಮ್ಮಿ ಅವಧಿಯಲ್ಲಿ ಗಟ್ಟಿ ಕತೆ-ನಿರೂಪಣೆಯೊಂದಿಗೆ ಮಾಡುವ, ಹೊಸ ಥರದಲ್ಲಿ ಪ್ರಾಮಾಣಿಕ ಪ್ರಚಾರ ಮಾಡುವ ತಂತ್ರಗಳನ್ನು ಕಲಿಯಬೇಕು. ಆಗ ಕನ್ನಡ ಚಿತ್ರರಂಗವು ಮಲಯಾಳಂ ಇಂಡಸ್ಟ್ರಿಗೆ ಸೆಡ್ಡು ಹೊಡೆಯುತ್ತದೆ. ನಾವು ಹಾಲಿವುಡ್-ಬಾಲಿವುಡ್ ಜತೆ ಸ್ಪರ್ಧಿಸಿ ಏನೂ ಆಗಬೇಕಿಲ್ಲ. ತಮಿಳು-ಮಲಯಾಳಂ ಚಿತ್ರರಂಗಗಳು ಕೊಡುವಂಥ ಮನಮುಟ್ಟುವ ಮನರಂಜನಾ ಚಿತ್ರಗಳನ್ನು ನಮ್ಮಲ್ಲಿ ಮಾಡಬೇಕಿದೆ. ಅಂಥ ಕಥೆ ಹೇರಳವಾಗಿವೆ. ಹಣವಿರುವವರು, ನಟನೆಯ ಹಸಿವಿರುವ ನಟರು, ತಂತ್ರಜ್ಞರು ಒಂದುಗೂಡಬೇಕಷ್ಟೆ. ಸ್ಟಾರ್‌ಗಳು, ಪ್ಯಾನ್ ಇಂಡಿಯಾ ಪ್ರಜೆಗಳು ಅಲ್ಲೇ ಇರಲಿ.

ಭಟ್ಟರ್ ಸ್ಕಾಚ್

- **ಎಂ.ಕೆ.ರಾಜು, ರಾಜಾಜಿನಗರ**
ಭಟ್ರೇ, ನನ್ನ ಹೆಂಡತಿಗೆ ನೆನಪಿನ ಶಕ್ತಿ ಕಡಿಮೆ ಆಗ್ತಿದೆಯಲ್ಲ?
– **ಮೊದಲು ಹೇಳು, ಯಾವ ದೇವರಿಗೆ ಹರಕೆ ಹೊತ್ತಿದ್ದೆ!?**

- **ವಿಷ್ಣು ದಾಸ್, ಕೋಣನಕುಂಟೆ**
ಸರ್, ಎಲೆ ಅಡಕೆ ಪತ್ರಕರ್ತನಿಗೆ ಇನ್ನೂ ಗೌರವ ಡಾಕ್ಟರೇಟ್ ಏಕೆ ಕೊಟ್ಟಿಲ್ಲ?
– **ಗಂಡಸರಿಗೆಲ್ಲ ಕೊಟ್ಟು ಮುಗಿಯಲಿ ಅಂದುಕೊಂಡಿರಬಹುದು!**

- **ವಿನೋದ ಪೈ, ಉಡುಪಿ**
ಭಟ್ರೇ, ಕೆಎಸ್‌ಆರ್‌ಟಿಸಿ ಬಸ್ ಲಾಭ ಗಳಿಸಲು ಏನು ಮಾಡಬೇಕು?
– **'ಹೆಂಗಸರಿಗೆ ಮಾತ್ರ' ಬೋರ್ಡ್ ತೆಗೆದು ಹೆಂಗಸರ ಪಕ್ಕದಲ್ಲಿ ಗಂಡಸರೇ ಕುಳಿತುಕೊಳ್ಳಬೇಕು ಎಂಬ ನಿಯಮ ಮಾಡಬೇಕು!**

- **ಜೀವನ ಭಟ್, ಯಲ್ಲಾಪುರ**
ಭಟ್ರೇ, ಯಾರು ರೋಡ್ ಶೋ ಮಾಡಿದರೆ ಜನ ಸೇರ್ತಾರೆ?
– **ಕರೋಡ್ ಇದ್ದವರು!**

- **ಅಪರ್ಣಾ ಬಾಪಟ್, ಶಿವಮೊಗ್ಗ**
ಭಟ್ರೇ, ಮೋದಿಯವರು ಕೆಲ ವರ್ಷಗಳ ಹಿಂದೆ ಈಶ್ವರಪ್ಪ ಮತ್ತು ರಾಮದಾಸನನ್ನು ಅಕ್ಕಪಕ್ಕದಲ್ಲಿಟ್ಟುಕೊಂಡಿದ್ದೇಕೆ?
– **ಗುದ್ದಿದ್ದು ನೋವಾಯ್ತಾ ಅಂತ ವಿಚಾರಿಸಿಕೊಳ್ಳಲಿಕ್ಕಂತೆ!**

- **ಅರುಣ್ ಎಂ.ಪೇತ್ರಿ, ಹುಬ್ಬಳ್ಳಿ**
ಭಟ್ರೇ, ನೀವು ಕೆಲವರ ಪ್ರಶ್ನೆಗಳಿಗೆ ಮಾತ್ರ 'ಭಟ್ಟರ್ ಸ್ಕಾಚ್'ನಲ್ಲಿ ಮಣೆ ಹಾಕುತ್ತೀರಿ ಅಂತ ಆಪಾದನೆ ಇದೆಯಲ್ಲ?
– **ಕೆಲವರಿಗೆ ಮಾತ್ರ ಅಲ್ಲ, ಹುಡುಗಿಯರಿಗೆ ಮಾತ್ರ ಎಂದಿದ್ದರೆ ಉತ್ತರಿಸುತ್ತಿದ್ದೆ!**

- **ಸಂದೀಪ ನಾಯಕ, ಬೆಂಗಳೂರು**
ರಾಹುಲ್ ಗಾಂಧಿ ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದಾರಾ, ಭಟ್ರೇ?
– **ಹೂಂ.. ಒಣದ್ರಾಕ್ಷಿಗೆ ಹೆಚ್ಚು ಬೆಲೆ ಇರುವಾಗ, ಹಸಿದ್ರಾಕ್ಷಿ ಬೆಳೆಯಬೇಡಿ ಎಂಬ ಸಲಹೆ ಕೊಟ್ಟ ಮೇಲೂ ಈ ಪ್ರಶ್ನೆಯಾ?!**

- **ಆದರ್ಶ ಶ್ರೀಕಾಂತ್, (ಇಮೇಲ್ ಮೂಲಕ)**
ಭಟ್ರೇ, ನಾನೊಬ್ಬ ರಿಯಲ್ ಎಸ್ಟೇಟ್ ವ್ಯಾಪಾರಿ, ನನ್ನ ಹೆಂಡತಿಗೆ ಯಾವ ಸರ್ಪ್ರೈಸ್ ಕೊಡಲಿ?
– **ತಾಜ್‌ಮಹಲ್ ಪಕ್ಕದಲ್ಲಿ ಒಂದು ಸೈಟ್ ಗಿಫ್ಟ್ ಮಾಡಿ ನೋಡಿ!**

- **ನಾಗರಾಜ್ ಮೆಷ್ಠಿ , ಹುಬ್ಬಳ್ಳಿ**
ಭಟ್ರೇ, 'ಭಟ್ಟರ್ ಸ್ಕಾಚ್'ನಲ್ಲಿ ಅಸಂಬದ್ಧ ಪ್ರಶ್ನೆ ಇಲ್ಲವಂತೆ, ಹೌದಾ?
– **ನಿಜ, ಅಂಥ ಪ್ರಶ್ನೆಗಳನ್ನು ಅಸೆಂಬ್ಲಿ, ಪಾರ್ಲಿಮೆಂಟಿನಲ್ಲಿ ಮಾತ್ರ ಕೇಳಲಾಗುತ್ತದೆ!**

ಸಿನಿಮಾ ವೀಕ್ಷಣೆಯ ಹಲವು ಮುಖಗಳು!

ಮೂರು ದಶಕದಲ್ಲಿ ಬದುಕು, ಜಗತ್ತು ಬದಲಾದ ರೀತಿ, ವೇಗ ಅಚ್ಚರಿ ಹುಟ್ಟಿಸುತ್ತವೆ. ನೆಟ್ ಫ್ಲಿಕ್ಸ್, ಅಮೆಜಾನ್ ಪ್ರೈಮ್ ಮುಂತಾದ ಸರ್ವೀಸ್ ಪ್ರೊವೈಡರ್ಸ್ ಇಂದು ಮಾರುಕಟ್ಟೆಯಲ್ಲಿದ್ದಾರೆ. ನಮಗೆ ಬೇಕಾದ ಫಿಲಂ, ಡಾಕ್ಯುಮೆಂಟರಿ, ವೆಬ್ ಸಿರೀಸ್‌ಗಳನ್ನು ನಮಗಿಷ್ಟದ ಸಮಯದಲ್ಲಿ ನೋಡಬಹುದು. ಇಂಥ ಬದಲಾವಣೆ ನೋಡಿದಾಗೆಲ್ಲ ಹಿಂದೆ ಒಂದು ಚಲನಚಿತ್ರ ವೀಕ್ಷಿಸಲು ಎಷ್ಟೆಲ್ಲಾ ಹರಸಾಹಸ ಪಟ್ಟಿದ್ದೆವು ಎನ್ನುವುದು ನೆನಪಾಗಿ, ಇವತ್ತಿನ ದಿನ ನಿಜವೋ ಸುಳ್ಳೋ ಎನ್ನಿಸುತ್ತದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ಸಿರಾದಿಂದ 16 ಕಿಲೋಮೀಟರ್ ದೂರದಲ್ಲಿರುವ ಹೊಸೂರು ಅಮ್ಮನ ತವರು. ನಾನು ಹುಟ್ಟಿ ಬೆಳೆದದ್ದು, ಎರಡನೇ ತರಗತಿಯವರೆಗೆ ಕಲಿತದ್ದು ಆ ಊರಿನಲ್ಲಿ. ಹೀಗಾಗಿ ಬಾಲ್ಯದ ಮೊದಲ ದಿನಗಳ ನೆನಪು ಅಲ್ಲಿಯದು. ಊರಿನ ಮುಂದೆ ಇದ್ದ ಜಾಗದಲ್ಲಿ ಒಂದು ಟೆಂಟ್ ಇತ್ತು. ಅದೇನೂ ಪರ್ಮನೆಂಟ್ ಅಲ್ಲ. ವರ್ಷದಲ್ಲಿ ಒಂದಷ್ಟು ದಿನ ಅಲ್ಲಿ ಟೆಂಟ್ ಹಾಕುತ್ತಿದ್ದರು. ಆ ಟೆಂಟಿನಲ್ಲಿ ಎಲ್ಲರೂ ನೆಲದ ಮೇಲೆ ಕೂರಬೇಕು. ಕೆಲವರು ಮನೆಯಿಂದ ಚೇರು ತಂದು ಹಾಕಿಕೊಂಡು ಕೂರುತ್ತಿದ್ದರು. ಯಾವ ಸಿನಿಮಾ ಎನ್ನುವುದು ನನಗೆ ನೆನಪಿಲ್ಲ. ಆದರೆ ಸಿನಿಮಾಗೆ ಮುಂಚೆ 'ಜೈ ಜವಾನ್, ಜೈ ಕಿಸಾನ್' ಎನ್ನುವ ಘೋಷಣೆಯೊಂದಿಗೆ ಬೆಳೆಗಳಿಗೆ ಸಿಂಪಡಿಸುವ ಯಾವುದೋ ಒಂದು ಔಷಧದ ಜಾಹೀರಾತು ನೆನಪಿದೆ. ಹೇಳಿದ ಸಮಯಕ್ಕೆ ಸಿನಿಮಾ ಶುರುವಾದ ನೆನಪಂತೂ ಇಲ್ಲ. ಏಕೆಂದರೆ ನನಗೆ ಅಂದಿಗೂ, ಇಂದಿಗೂ ಕಾಯುವುದು ಎಂದರೆ ಬಹಳ ಅಲರ್ಜಿ. ಹೀಗಾಗಿ ಜೀವನದಲ್ಲಿ ಯಾರನ್ನೂ ಕಾಯಿಸ ಬಾರದು ಎನ್ನುವ ಪ್ರಮಾಣ ಮಾಡಿಕೊಂಡಿದ್ದೇನೆ. ಅದನ್ನು ಪಾಲಿಸಿಕೊಂಡು ಬಂದಿದ್ದೇನೆ. ಜನ ಬಂದು ಟೆಂಟು ಭರ್ತಿಯಾಗುವವರೆಗೂ ಸಿನಿಮಾ ಶುರುವಾಗುತ್ತಿರಲಿಲ್ಲ. ಒಂದಷ್ಟು ತಿಂಗಳುಗಳ ನಂತರ ಮೈಕಿನಲ್ಲಿ 'ನಮೋ ವೆಂಕಟೇಶ, ನಮೋ ತಿರುಮಲೇಶ' ಎನ್ನುವ ಹಾಡನ್ನ ಹಾಕುತ್ತಿದ್ದರು. ಅದು ಕೊನೆಯ ಹಾಡು, ನಂತರ ಫಿಲಂ ಶುರು ಎನ್ನುವುದನ್ನು ಕಂಡುಹಿಡಿದು ಅದನ್ನು ಎಲ್ಲರಿಗೂ ಹೇಳಿಕೊಂಡು ತಿರುಗಿದ್ದೆ. ಅಂದಿಗೆ ಗೊತ್ತಾಗಲಿಲ್ಲ, ಆದರೆ ಇಂದಿಗೆ ಅವರು ನೋಡುತ್ತಿದ್ದ ನೋಟದಲ್ಲಿ ಈ ಸತ್ಯ ಊರಿಗೆಲ್ಲಾ ಗೊತ್ತಿದೆ. ನಿನಗೆ ಇಂದು ಜ್ಞಾನೋದಯ ಆಯ್ತಾ ಎನ್ನುವಂತಿರುತ್ತಿತ್ತು.

ಆಮೇಲೆ ನಾವು ಬೆಂಗಳೂರಿನ ಸಮೀಪದ ವಿಜಯಪುರದಲ್ಲಿ ಒಂದೆರಡು ವರ್ಷವಿದ್ದೆವು. ಅಲ್ಲಿ ಗೌರಿಶಂಕರ ಎನ್ನುವ ಥಿಯೇಟರಿನಲ್ಲಿ ನೋಡಿದ ಸಿನಿಮಾಗಳ ನೆನಪಿಗಿಂತ ಥಿಯೇಟರಿನ ಚೇರುಗಳಲ್ಲಿ ಕುಳಿತು 'ವಾಹ್' ಎನ್ನಿಸಿದ ನೆನಪುಗಳು ಉಳಿದುಕೊಂಡಿವೆ. ಟೆಂಟಿನಿಂದ ಬಡ್ತಿ ಹೊಂದಿದ್ದು ಸುಲಭವಾಗಿ ಹೇಗೆ ಮರೆಯಲು ಸಾಧ್ಯ? ಆ ನಂತರ ಬೆಂಗಳೂರಿನ ಪೀಣ್ಯಕ್ಕೆ ವಲಸೆ ಬಂದೆವು. ಅಚ್ಚರಿ ಎನ್ನಿಸುವಂತೆ ಗೆಳೆಯ ಜನಾರ್ದನನ ಮನೆಯಲ್ಲಿ ಟಿವಿ ಇತ್ತು. ನನ್ನ ಪಾಲಿಗೆ ಅದೊಂದು ಅದ್ಭುತ. ಅದಕ್ಕೆ ಮುಂಚೆ ನಮ್ಮ ಹಳ್ಳಿಯ ಅವರಿವರ ಬಾಯಿಯಲ್ಲಿ 'ಅಮೆರಿಕದಲ್ಲಿ ಮನೆಯಲ್ಲೇ ಕುಳಿತು ಪಿಚ್ಚರ್ ನೋಡುತ್ತಾರಂತೆ' ಎನ್ನುವ ಮಾತುಗಳನ್ನು ಕೇಳಿದ್ದೆ. ಈಗ ಅದನ್ನು ಜೀವಿಸುವ ಅವಕಾಶ ಸಿಕ್ಕಾಗ ಅಚ್ಚರಿಯಾಗದೆ ಇರುತ್ತದೆಯೇ? ಪ್ರತಿ ಭಾನುವಾರ ರಾತ್ರಿ ಪ್ರಸಾರವಾಗುತ್ತಿದ್ದ ಕನ್ನಡ ಚಲನಚಿತ್ರಕ್ಕೆ ಕಾದು ನೋಡುತ್ತಿದ್ದೆವು. ವರ್ಷಕೊಮ್ಮೆ ಶಿವರಾತ್ರಿ ಸಮಯದಲ್ಲಿ 'ಅಕೈ ವಿಸಿಆರ್' ಬಾಡಿಗೆಗೆ ತರುವುದು ಮತ್ತು ಅದರ ಜತೆಗೆ ಐದಾರು ಸಿನಿಮಾ ಕೂಡ ತರುವುದು ವಾಡಿಕೆಯಾಗಿತ್ತು. ಹೀಗೆ ಒಂದೇ ರಾತ್ರಿ 'ಬ್ಯಾಕ್-ಟು-ಬ್ಯಾಕ್' ನೋಡಿದ ಚಿತ್ರಗಳಲ್ಲಿ 'ತೇಜಾಬ್' ನೆನಪಿದೆ. ಮಾಧುರಿ ದೀಕ್ಷಿತ್ ಮತ್ತು ಅನಿಲ್ ಕಪೂರ್ ಸ್ವರ್ಗದಿಂದ ಇಳಿದು ಬಂದವರಂತೆ ಅಂದಿಗೆ ನನ್ನ ಕಣ್ಣಿಗೆ ಕಂಡಿದ್ದರು. ಅದಾದ ಮೇಲೆ ಹೆಚ್ಚು ನೆನಪಲ್ಲಿ ಉಳಿದ ಸಿನಿಮಾ 'ಈವಿಲ್ ಡೆಡ್'. ಈ ಚಿತ್ರ ನೋಡಿದ ಮೇಲೆ ಒಂದು ವಾರ ಮತ್ತೂ ಆಮೇಲೂ ಒಬ್ಬನೇ ಕತ್ತಲೆ ಕೋಣೆಯೊಳಗೆ ಹೋಗಲು ಭಯವಾಗುತ್ತಿತ್ತು ಎನ್ನುವುದು ಇದು ನೆನಪಲ್ಲಿ ಉಳಿಯಲು ಪ್ರಮುಖ ಕಾರಣ. ಇವತ್ತಿಗೂ ಹಾರರ್ ಸಿನಿಮಾ ಎಂದರೆ ನನಗೆ ಅಲರ್ಜಿ. ಹೀಗೆ ಹತ್ತಾರು ಜನ ಕಡಿಮೆ ಜಾಗದಲ್ಲಿ ನೆಲದ ಮೇಲೆ ಕೂತು ಒಟ್ಟಾಗಿ ಸಿನಿಮಾ ನೋಡುತ್ತಾ ಇದ್ದದ್ದು ಇಂದಿಗೆ ಮಧುರ ನೆನಪು. ನಂತರದ ದಿನಗಳಲ್ಲಿ ನನ್ನ ಮನೆಗೂ ಟಿವಿ ಬಂದಿತು. ಅಂದಿನ ದಿನದಲ್ಲಿ ರಾಮಾಯಣ ಸೀರಿಯಲ್ ಪ್ರತಿ ಭಾನುವಾರ ಬರುತ್ತಿತ್ತು. ಅದನ್ನು ನೋಡುವ ಸಲುವಾಗಿ 'ಆಸ್ಕರ್' ಎನ್ನುವ ಕಪ್ಪು ಬಿಳುಪು ಟಿವಿಯನ್ನು ಅಪ್ಪ ಖರೀದಿಸಿದ್ದರು. ಅಂದಿಗೆ ಬರುತ್ತಿದ್ದ ದೂರದರ್ಶನದ ಕಾರ್ಯಕ್ರಮಗಳು ಬದುಕಿನ ಎಲ್ಲವೂ ಆಗಿದ್ದವು.

ಭಾರತ ಬದಲಾಗಿ ಇಂದಿನ ಭಾರತವಾಗಿ ಹತ್ತಾರು ಚಾನಲ್ ಬಂದು ನಮ್ಮೆಲ್ಲರ ಮನೆಯ ಬಾಗಿಲು ಬಡಿಯುವಾಗ ನಾನು ದುಬೈನಲ್ಲಿದ್ದೆ. ದುಬೈ ವಾಸ ಕೇವಲ ಮೂರು ತಿಂಗಳದ್ದು ಆದರೂ ಅಲ್ಲಿ ಕೂಡ ಬಹಳಷ್ಟು ಚಾನಲ್‌ಗಳು ಬರುತ್ತಿದ್ದವು. ಕನ್ನಡ ಕಡಿಮೆ, ಆದರೆ ಮಲಯಾಳಂ ಮತ್ತು ತಮಿಳು ಚಾನಲುಗಳು ಹೇರಳವಾಗಿ ಬರುತ್ತಿದ್ದವು. 99/2000 ಕೂಡ ಇನ್ನೂ ಡಿವಿಡಿ ಯುಗ ಅಂತ ಹೇಳಬಹುದು. ಚಲನಚಿತ್ರಗಳಲ್ಲಿ ವಿಶೇಷ ಆಸಕ್ತಿ ಇರದ ಕಾರಣ ನನಗೆ ಇದರ ಬದಲಾವಣೆ ಅಷ್ಟೇನೂ ತಟ್ಟಲಿಲ್ಲ.

ಬಾರ್ಸಿಲೋನಾಗೆ ಬಂದಾಗ 2000ನೇ ಇಸವಿಯಲ್ಲಿ ಇಲ್ಲಿ ಯಾವುದೇ ಭಾರತೀಯ ಚಾನಲ್ ಇರಲಿಲ್ಲ. ಭಾರತೀಯ ಚಾನಲ್ ಅಥವಾ ಚಲನಚಿತ್ರ ನೋಡಬೇಕೆಂದರೆ ದೊಡ್ಡ ಜರಡಿಯಾಕಾರದ ಆಂಟೆನಾ ಹಾಕಬೇಕಿತ್ತು. ಅದು ಕೂಡ ಬಾರ್ಸಿಲೋನಾದಲ್ಲಿ ಸಿಗುತ್ತಿರಲಿಲ್ಲ. ಇಂಗ್ಲೆಂಡ್‌ನಲ್ಲಿ ಒಬ್ಬ ಸರ್ದಾರ್ಜಿ ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದ. ಇದನ್ನ ಸ್ಥಾಪಿಸಲು ಪೂರ್ಣ ಸಾವಿರ ಯುರೋ ಖರ್ಚಾಗುತ್ತಿತ್ತು. ಆಮೇಲೆ ಪ್ರತಿವರ್ಷ 350 ಯುರೋ ಕೊಟ್ಟು ಕಾರ್ಡ್ ರಿನ್ಯೂಯಲ್ ಮಾಡಿಸಬೇಕಿತ್ತು. ಇದೇನೋ ಸುಲಭದ ಕೆಲಸ. ಆದರೆ ಬಿಲ್ಡಿಂಗ್ ಮೇಲೆ ಇಂಥ ಆಂಟೆನಾ ಅಳವಡಿಸಲು ನಾವಿದ್ದ ಅಪಾರ್ಟ್ಮೆಂಟ್ ಕಮ್ಯುನಿಟಿ ಇಂದ ಅನುಮತಿ ಪಡೆಯಬೇಕಿತ್ತು. ಮುಕ್ಕಾಲು ಪಾಲು ಅಪಾರ್ಟ್ಮೆಂಟ್‌ಗಳು ಇದಕ್ಕೆ ಅನುಮತಿ ಕೊಟ್ಟಿರಲಿಲ್ಲ. ಅವರಿಗೆ 'ಈ ಪಾಕಿಸ್ತಾನಿ ತನ್ನ ದೇಶದ ಜತೆ ಏನೋ ಗುಟ್ಟಾಗಿ ಮಾತನಾಡಲು ಇಂಥ ಆಂಟೆನಾ ಹಾಕಿಸುತ್ತಿದ್ದಾನೆ' ಎನ್ನುವ ಗುಮಾನಿ. ಅಯ್ಯಗಳಿರಾ ನಾನು ಪಾಕಿಸ್ತಾನಿಯಲ್ಲ ಎಂದು ವಿಧ ವಿಧವಾಗಿ ಗೋಗರೆದರೂ ನಮ್ಮ ಸ್ಪ್ಯಾನಿಷರಿಗೆ ಅದು ಅರ್ಥವಾಗುತ್ತಲೇ ಇರಲಿಲ್ಲ. 2004ರ ಅಂತ್ಯಕ್ಕೆ ಸ್ವಂತ ಮನೆಯನ್ನ ಕೊಂಡೆ. 2005ರಲ್ಲಿ ಮದುವೆ, ರಮ್ಯ ಜತೆಯಾದಳು. ಪ್ಯಾರಾಬೋಲಿಕ್ ಆಂಟೆನಾ ಹಾಕಿಸು ಎನ್ನುವುದು ಅವಳ ಒತ್ತಾಯ. ಸರಿ ಇಷ್ಟು ದಿನ ಬಾಡಿಗೆ ಮನೆ, ಕಮ್ಯುನಿಟಿಯವರು ಹೇಳಿದ್ದಕ್ಕೆಲ್ಲಾ ತಲೆ ಅಲ್ಲಾಡಿಸಿ ಆಗಿತ್ತು. ಈಗ ಸ್ವಂತ ಮನೆ, ಏನೇ ಆದರೂ ಸರಿ ಈ ಆಂಟೆನಾ ಹಾಕಿಸಿಯೆ ಸರಿ ಎಂದು ನಮ್ಮ ಕಮ್ಯುನಿಟಿ ಪ್ರೆಸಿಡೆಂಟ್ ಅನ್ನು ವಿಚಾರಿಸಿದೆ. ಅವನು 'ಇಲ್ಲ' ಅಂತ ಉದ್ದುದ್ದ ಕೈ ಆಡಿಸಿದ. ನಾನು ಬಿಡಲಿಲ್ಲ. 'ನೆಕ್ಸ್ಟ್ ಮೀಟಿಂಗ್‌ನಲ್ಲಿ ವಿಷಯ ಪ್ರಸ್ತಾಪ ಮಾಡು' ಅಂದ. ಮುಂದಿನ ಮೀಟಿಂಗ್‌ನಲ್ಲಿ ನಮ್ಮ ಬಿಲ್ಡಿಂಗ್‌ನಲ್ಲಿದ್ದ 36 ಫ್ಲಾಟ್‌ಗಳಲ್ಲಿ 34 ಫ್ಲಾಟ್‌ನಲ್ಲಿದ್ದವರು ಸ್ಪ್ಯಾನಿಷರು. ನಾನು ಮತ್ತು ಇನ್ನೊಂದು ಸೌತ್ ಅಮೆರಿಕನ್ ಕುಟುಂಬ ಮಾತ್ರ ವಿದೇಶಿಯರು. ಅದೂ ಹೇಳಿಕೇಳಿ ಮುಕ್ಕಾಲು ಪಾಲು ಅಲ್ಲಿನ ಸ್ಪ್ಯಾನಿಷ್ ನಿವಾಸಿಗಳು ಹಿರಿಯ ನಾಗರಿಕರು. ಬದಲಾವಣೆಗೆ ಬಡಪೆಟ್ಟಿಗೂ ಒಪ್ಪದವರು. ಕೊನೆಗೆ ಮೂರು ತಿಂಗಳ ಹೋರಾಟ ಮಾಡಿ ಲಾಯರ್ ನೋಟಿಸ್ ಕಳಿಸಿ ಆಂಟೆನಾ ಸ್ಥಾಪಿಸಿದೆವು. ಆಗ ಬರುತ್ತಿದ್ದ ಝೀ ಮೂವೀಸ್ ಮತ್ತು B4U ಮೂವೀಸ್ ನಮ್ಮ ಭಾರತೀಯ ಚಲನಚಿತ್ರದ ಸೋರ್ಸ್ ಆಗಿದ್ದವು.



ನಂತರದ ದಿನಗಳಲ್ಲಿ ವೀಕ್ ಎಂಡ್ ಬಂದರೆ ಸಾಕು ಬಾರ್ಸಿಲೋನಾದಿಂದ 'ಈಜಿ ಜೆಟ್' ಏರಿ ಇಂಗ್ಲೆಂಡ್‌ನ ಲಂಡನ್ ನಗರವನ್ನ ತಲುಪುತ್ತಿದ್ದೆವು. ಅಲ್ಲಿನ ಸಿಂಗಲ್ ಸ್ಕ್ರೀನ್ ಥಿಯೇಟರ್‌ನಲ್ಲಿ ಗುಜರಾತಿ ಹುಡುಗಿಯರು, ಮಹಿಳೆಯರು, ಅಜ್ಜಿಯರು ಸಿನಿಮಾವನ್ನ ಕೇಕೆ ಹಾಕುತ್ತ, ವಿಸಿಲ್ ಹೊಡೆಯುತ್ತ ನೋಡುವುದಕ್ಕೆ ಸಾಕ್ಷಿಯಾದೆವು. 'ಗಜನಿ', 'ರಬ್ ನೇ ಬನಾದಿಯ ಜೋಡಿ' ಹೀಗೆ ಅಲ್ಲಿ ನೋಡಿದ ಸಿನಿಮಾಗಳ ಲಿಸ್ಟ್ ದೊಡ್ಡದು. ನನಗೆ ಸಿನಿಮಾ ಅಂದರೆ ವಿಶೇಷ ಪ್ರೀತಿಯೇನೂ ಇಲ್ಲ. ಆದರೆ ವಾರ ಪೂರ್ತಿ ಸೋಷಿಯಲ್ ಲೈಫ್ ಇಲ್ಲದ ರಮ್ಯಳಿಗೆ ಈ ಸಿನಿಮಾಗಳು ಲೈಫ್‌ಲೈನ್ ಆಗಿದ್ದವು. ಲಂಡನ್ ನಗರದ ಗಲ್ಲಿಗಲ್ಲಿಯನ್ನ ಬಿಡುಬೀಸಾಗಿ ಸುತ್ತಿದ ಆ ದಿನಗಳ ನೆನಪು ಸುಖಕರ.

ಮೂರು ದಶಕದಲ್ಲಿ ಬದುಕು, ಜಗತ್ತು ಬದಲಾದ ರೀತಿ, ವೇಗ ಅಚ್ಚರಿ ಹುಟ್ಟಿಸುತ್ತವೆ. ಈಗ ಎಲ್ಲವೂ ಕೈ ಬೆರಳ ತುದಿಯಲ್ಲಿವೆ! ನೆಟ್ ಫ್ಲಿಕ್ಸ್, ಅಮೆಜಾನ್ ಪ್ರೈಮ್ ಜತೆಗೆ ಇನ್ನೂ ಅಸಂಖ್ಯಾತ ಸರ್ವೀಸ್ ಪ್ರೊವೈಡರ್ಸ್ ಇಂದು ಮಾರುಕಟ್ಟೆಯಲ್ಲಿದ್ದಾರೆ. ನಮಗೆ ಬೇಕಾದ ಫಿಲಂ, ಡಾಕ್ಯುಮೆಂಟರಿ, ವೆಬ್ ಸಿರೀಸ್, ಇತರ ಏನೇ ಆದರೂ ಎಲ್ಲವನ್ನೂ ನಮಗಿಷ್ಟದ ಸಮಯದಲ್ಲಿ ನಾವು ನೋಡಬಹುದು. ಇಂಥ ಬದಲಾವಣೆ ನೋಡಿದಾಗೆಲ್ಲ ಹಿಂದಿನ ದಿನಗಳಲ್ಲಿ ಒಂದು ಚಲನಚಿತ್ರ ವೀಕ್ಷಿಸಲು ಎಷ್ಟೆಲ್ಲಾ ಹರಸಾಹಸ ಪಟ್ಟಿದ್ದೆವು ಎನ್ನುವುದು ನೆನಪಾಗಿ, ಇವತ್ತಿನ ದಿನ ನಿಜವೋ ಸುಳ್ಳೋ ಎನ್ನುವ ಭಾವನೆ ಬರುತ್ತದೆ.

ಒಟಿಟಿ ಎನ್ನುವುದು ನಾವು ಸಿನಿಮಾ ನೋಡುವ ರೀತಿಯನ್ನು ಬದಲಿಸಿಬಿಟ್ಟಿದೆ. ಇಂದಿಗೆ ಹಲವಾರು ಚಿತ್ರಗಳು ಒಟಿಟಿಯಲ್ಲಿ ನೇರವಾಗಿ ಬಿಡುಗಡೆಯಾಗುತ್ತವೆ. ಅವುಗಳು ಥಿಯೇಟರ್ ಗೋಜಿಗೆ ಹೋಗುವುದಿಲ್ಲ. ಇಂದು ಸಮಾಜ ಬದಲಾಗಿದೆ. ನಗರ ಪ್ರದೇಶದಲ್ಲಿ ಹೆಚ್ಚಾಗಿರುವ ಟ್ರಾಫಿಕ್ ಸಮಸ್ಯೆಯಿಂದ ಜನ ದೋಸೆಯನ್ನು ಕೂಡ ಸ್ವಿಗ್ಗಿಯಲ್ಲಿ ಆರ್ಡರ್ ಮಾಡಿ ತಿನ್ನುವ ಮಟ್ಟಕ್ಕೆ ಬದಲಾಗಿದ್ದಾರೆ. ಇನ್ನು ಸಿನಿಮಾ ತೀರಾ ಚೆನ್ನಾಗಿದೆ ಎನ್ನುವ ಅಂಶ ತಿಳಿಯದಿದ್ದರೆ ಥಿಯೇಟರಿಗೆ ಹೋಗುವವರ ಸಂಖ್ಯೆ ಕೂಡ ಕುಸಿದಿದೆ. ಕರೋನ ನಂತರ ಮನೆಯೇ ಮಂತ್ರಾಲಯ ಎನ್ನುವ ಮಾತಿಗೆ ಜನ ಹೆಚ್ಚು ಬೆಲೆ ಕೊಡುತ್ತಿದ್ದಾರೆ.

ಇವತ್ತಿಗೆ ಮನೆಯಲ್ಲಿ ಕುಳಿತು ಜಗತ್ತಿನ ಬೇರೆ ಬೇರೆ ಭಾಷೆಯ ಅನೇಕ ಸಿನಿಮಾ, ವೆಬ್ ಸಿರೀಸ್ ಎಲ್ಲವನ್ನೂ ಕನ್ನಡದಲ್ಲಿ ಅಥವಾ ಹಿಂದಿಯಲ್ಲಿ ನೋಡುವ ಅವಕಾಶ ಸೃಷ್ಟಿಯಾಗಿದೆ. ಕೊರಿಯನ್ ಸೀರಿಯಲ್‌ಗಳಿಗೆ ನಮ್ಮ ಯುವಜನತೆ ಮಾರುಹೋಗಿದ್ದಾರೆ. ಇದರ ಜತೆಗೆ ಯೂಟ್ಯೂಬ್ ಎನ್ನುವುದು ಜಗತ್ತನ್ನು ಪುಟಾಣಿ ಹಳ್ಳಿಯನ್ನಾಗಿ ಪರಿವರ್ತಿಸಿದೆ. ಅಲ್ಲಿನ ಶಾರ್ಟ್ ವಿಡಿಯೋಗಳಲ್ಲಿನ ಕಂಟೆಂಟ್ ಆ ಸಮಾಜಕ್ಕೆ ಒಪ್ಪಿತವಾಗಿರುತ್ತದೆ. ಅವುಗಳನ್ನು ಇಲ್ಲಿನ ನಮ್ಮ ಜನ ಯಥಾವತ್ತು ನಕಲು ಮಾಡುತ್ತಿದ್ದಾರೆ. ನನ್ನ ಆಪ್ತರೊಬ್ಬರ ಜತೆಗಿನ ಮಾತುಕತೆಯಲ್ಲಿ ಅವರೊಂದು ವಿಷಯ ಹೇಳಿದರು. ಒಮ್ಮೆ ಅವರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅವರ ಎದುರು ಮಧ್ಯಮ ವರ್ಗದ ಒಂದು ಸಂಸಾರ ಬಂದು ಕುಳಿತರಂತೆ, ಅವರ ಏಳೆಂಟು ವರ್ಷದ ಮಗು ಪೂರ್ಣ ಬ್ರಿಟಿಷ್ ಶೈಲಿಯ ಇಂಗ್ಲಿಷಿನಲ್ಲಿ ಮಾತಾಡುತ್ತಿತ್ತಂತೆ. ಇವರು ಕುತೂಹಲ ತಾಳಲಾಗದೆ ನೀವು ಬ್ರಿಟನ್ ನಿವಾಸಿಗಳೇ? ಎಂದು ಕೇಳಿದರಂತೆ. ಅದಕ್ಕವರು, ಇಲ್ಲ ನಾವು ಕೆಂಗೇರಿ ನಿವಾಸಿಗಳು ಎಂದವರು ಮುಂದುವರಿದು ನಮ್ಮ ಮಗಳು ಯೂಟ್ಯೂಬಿನಲ್ಲಿ ನಿತ್ಯ 'ಪೆಪ್ಪಾ ಪಿಗ್' ಎನ್ನುವ ವಿಡಿಯೋಗಳನ್ನು ನೋಡುತ್ತಾಳೆ, ಹಾಗಾಗಿ ಅವಳ ಇಂಗ್ಲಿಷ್ ಆ ರೀತಿಯಿದೆ ಎಂದರಂತೆ!

ಮೂರು ದಶಕದ ಹಿಂದೆ ಇಷ್ಟೆಲ್ಲಾ ಬದಲಾವಣೆಯಾಗುತ್ತದೆ ಎಂದು ಯಾರಾದರೂ ಹೇಳಿದ್ದರೆ ಅವರನ್ನು ನಾವು ಹುಚ್ಚ ಎಂದಿರುತ್ತಿದ್ದೆವು. ಮುಂದಿನ ದಶಕಗಳಲ್ಲಿ ಬದುಕು ಯಾವ ರೀತಿ ಬದಲಾಗಬಹುದು? ಶಾಲೆ, ಕಾಲೇಜು, ಸಿನಿಮಾ ಮಂದಿರ, ಬ್ಯಾಂಕು, ಪೋಸ್ಟ್ ಆಫೀಸ್, ಇತರೆ ಆಫೀಸ್ ಇತ್ಯಾದಿ ಯಾವೆಲ್ಲಾ ಇಂದಿಗೆ ನಮ್ಮ ಬದುಕಿನ ಭಾಗವಾಗಿವೆ ಅವೆಲ್ಲವೂ ಮಾಯವಾಗಲಿವೆ. ಎಲ್ಲವೂ ಬೆರಳ ತುದಿಯಲ್ಲಿ, ಡಿಜಿಟಲ್ ಮಯವಾಗಲಿವೆ. ಬದಲಾವಣೆಯ ಜತೆ ಜತೆಗೆ ಹೆಜ್ಜೆ ಹಾಕುವುದೇ ಬದುಕು, ಅಲ್ಲವೇ?

ಕಳಕಳಿ

ದೀಪಶ್ರೀ ಎಸ್.ಕೂಡ್ಲಿಗಿ

ಸಭ್ಯ ಪ್ರಸ್ತುತಿಗಳು ಬೇಕು

ಈಚೀಚಿನ ಚಲನಚಿತ್ರ, ನಾಟಕ, ಮಕ್ಕಳ ಹಾಡುಗಾರಿಕೆ ಮತ್ತು ನೃತ್ಯದ ರಿಯಾಲಿಟಿ ಶೋ, ಕಾಮಿಡಿ ಕಾರ್ಯಕ್ರಮ ಹೀಗೆ ಯಾವುದನ್ನೇ ವೀಕ್ಷಿಸ ಹೊರಟರೂ ಅಲ್ಲಿ ಮೌಲ್ಯಗಳ ಕೊರತೆ ಎದ್ದು ಕಾಣುತ್ತದೆ. ಹಾಸಮಯ ಪ್ರಸ್ತುತಿಯ ಹೆಸರಲ್ಲಿ ಬಹುತೇಕವಾಗಿ ಅಶ್ಲೀಲತೆ, ದ್ವಂದ್ವಾರ್ಥ ಸಂಭಾಷಣೆ, ಕೆಟ್ಟ ಹಾವಭಾವ, ಜಂಭದ ಡೈಲಾಗ್ ಮುಂತಾದವುಗಳೇ ತುಂಬಿಕೊಂಡಿರುತ್ತವೆ. ಇಂಥ ಪ್ರದರ್ಶನಗಳನ್ನು ಆ ಮಕ್ಕಳ ತಂದೆ-ತಾಯಿಯರೂ ಕಣ್ಣರಳಿಸಿ ನೋಡುತ್ತಾರೆ, ಇನ್ನಿಲ್ಲದಂತೆ ಸಂಭ್ರಮಿಸುತ್ತಾರೆ. ಈ ಕಾರ್ಯಕ್ರಮಗಳ ಜಡ್ಜ್‌ಗಳೂ ಇಂಥ ಪ್ರಸ್ತುತಿಕಾರರನ್ನು ಹೊಗಳಿ ಅಟ್ಟಕ್ಕೇರಿಸುತ್ತಾರೆ.

ಇನ್ನು ಕೆಲವರಂತೂ ಈ ರೀತಿಯ ರಿಯಾಲಿಟಿ ಶೋಗಳಲ್ಲಿ 'ಡ್ರಾಮಾ' ಮಾಡುತ್ತಾರೆ, ಗೋಗರೆಯುತ್ತಾರೆ, ಗೋಳುಕರೆಯುತ್ತಾರೆ, ಕುಟುಂಬದ ಕಣ್ಣೀರಿನ ಕಥೆ ಹೆಣೆಯುತ್ತಾರೆ, ತಮ್ಮ ಅಂಗವೈಕಲ್ಯವನ್ನು ಇದಕ್ಕಾಗಿ ಬಳಸಿಕೊಳ್ಳುತ್ತಾರೆ. ಇಂಥವರು ನೃತ್ಯಗಾತಿ ಹಾಗೂ ಚಿತ್ರನಟಿ ಸುಧಾ ಚಂದ್ರನ್‌ರನ್ನು ಏಕೆ ಮಾದರಿಯಾಗಿ ಪರಿಗಣಿಸುವುದಿಲ್ಲ? ಅಪಘಾತದಲ್ಲಿ ಎರಡೂ ಕಾಲುಗಳನ್ನು ಕಳೆದುಕೊಂಡರೂ, ಭರತನಾಟ್ಯದಲ್ಲಿ ಅದ್ವಿತೀಯ ಸಾಧನೆ ಮಾಡಿದಾಕೆ ಸುಧಾ. ಅವರು ತಮ್ಮ ಅಂಗವೈಕಲ್ಯವನ್ನು ಎಂದೂ ಅತಿರೇಕವಾಗಿ ಹೇಳಿಕೊಂಡು ಅನುಕಂಪ ಗಿಟ್ಟಿಸಿಕೊಳ್ಳಲು ಮುಂದಾದವರಲ್ಲ; ಪ್ರದರ್ಶನ ಕಲೆಯ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯೊಂದನ್ನೇ ನೆಚ್ಚಿ ಛಲದಿಂದ ಸಾಧಿಸಿದವರು ಸುಧಾ ಚಂದ್ರನ್ ಎಂಬುದನ್ನು ಇಂಥವರು ಮರೆಯಬಾರದು. ಇನ್ನು ಜಡ್ಜ್‌ಗಳೆನಿಸಿಕೊಂಡವರು ಸಹ ಬಾಲ ಪ್ರತಿಭೆಗಳ ತಪ್ಪು ತಿದ್ದುವುದನ್ನು ಬಿಟ್ಟು ಅತಿರೇಕವಾಗಿ ಹೊಗಳುತ್ತಾರೆ, ಇಲ್ಲವೇ ತಮ್ಮ ಹಳೆಯ ನೆನಪುಗಳ ಕುರಿತು 'ರಾಡಿ ಪುರಾಣ' ಹೇಳಿಕೊಳ್ಳುತ್ತಾರೆ! ಒಟ್ಟಿನಲ್ಲಿ, ಉತ್ಪ್ರೇಕ್ಷೆ ಮಾಡುವುದು, ಅತಿಯಾಗಿ ಹೊಗಳುವುದು, ವೀಕ್ಷಕರ/ಪ್ರೇಕ್ಷಕರ ಅನುಕಂಪ ಗಿಟ್ಟಿಸಿಕೊಳ್ಳಲು ಪ್ರಸ್ತುತಿಕಾರರು ಇನ್ನಿಲ್ಲದ ಡ್ರಾಮಾ ಮಾಡುವುದು ಬಹುತೇಕ ರಿಯಾಲಿಟಿ ಶೋಗಳ ಬಂಡವಾಳವಾಗಿಬಿಟ್ಟಿದೆ.

ಪ್ರೇಕ್ಷಕರನ್ನು ನಕ್ಕು ನಲಿಸಲು ಡಬಲ್ ಮೀನಿಂಗ್ ಸಂಭಾಷಣೆ, ಕೀಳುಹಾಸ್ಯ ಇವುಗಳಷ್ಟೇ ಮಾರ್ಗವಾ? ಹಳೆಯ ಚಲನಚಿತ್ರಗಳಲ್ಲಿ ಬಾಲಕೃಷ್ಣ, ನರಸಿಂಹರಾಜು, ರಮಾದೇವಿ ಮುಂತಾದವರು ತಮ್ಮ ವಾಕ್ಚಾತುರ್ಯ, ಹಾಸ್ಯದಲ್ಲಿನ ಟೈಮಿಂಗ್ ಮುಂತಾದ ಅಂಶಗಳಿಂದ ಅಭಿಮಾನಿಗಳನ್ನು ರಂಜಿಸಿದ್ದಾರೆ. ಚಾರ್ಲಿ ಚಾಪ್ಲಿನ್ ಮೌನವಾಗಿದ್ದುಕೊಂಡೇ ತಮ್ಮ ಹಾವಭಾವದಿಂದಲೇ ಜನರನ್ನು ರಂಜಿಸಲಿಲ್ಲವೇ? ಕಮಲಹಾಸನ್ ಅಭಿನಯದ 'ಪುಷ್ಪಕ ವಿಮಾನ' ಚಲನಚಿತ್ರವು ಪರಿಣಾಮಕಾರಿಯಾಗಿತ್ತಲ್ಲವೇ? ಚಿತ್ರವೊಂದು ಯಶಸ್ಸು ಕಾಣಲು ಹೀರೋ ಅಂಗಿ ಬಿಚ್ಚಿ 'ಸಿಕ್ಸ್ ಪ್ಯಾಕ್' ಪ್ರದರ್ಶಿಸಬೇಕು, ನಾಯಕಿ ಅರೆಬೆತ್ತಲೆಯಾಗಬೇಕು ಎಂಬುದು ಈಗ ಅಲಿಖಿತ ನಿಯಮವಾಗಿಬಿಟ್ಟಿದೆ. ಡಾ.ರಾಜ್‌ಕುಮಾರ್ ಅವರು ತಮ್ಮ ಯೋಗಾಭ್ಯಾಸದ ಕಾರಣದಿಂದಾಗಿ ಸಹಜವಾಗೇ ದೇಹವನ್ನು ಹುರಿಗಟ್ಟಿಸಿಕೊಂಡಿದ್ದರೂ, ಹೀಗೆ ಹುಚ್ಚುಚ್ಚಾಗಿ 'ಸಿಕ್ಸ್ ಪ್ಯಾಕ್' ಪ್ರದರ್ಶನ ಮಾಡುತ್ತಿರಲಿಲ್ಲ. ಲಕ್ಷಣವಾಗಿ ಸೀರೆ ಉಟ್ಟ ಪಂಢರೀಬಾಯಿಯವರ ನಟನೆಯನ್ನು ಮೆಚ್ಚಿಕೊಳ್ಳದವರಿಲ್ಲ, ನೋಡಲಿಕ್ಕೆ ಅಪ್ಸರೆಯಂತೆ ಇಲ್ಲದಿದ್ದರೂ ನಮ್ಮ ಅಭಿನಯ ಸಾಮರ್ಥ್ಯದಿಂದಲೇ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿದ್ದರು ನಟಿ ಸರಿತಾ. ಹೇಳುತ್ತಾ ಹೋದರೆ ಇಂಥ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಆದ್ದರಿಂದ ಟಿವಿ ಧಾರಾವಾಹಿಗಳು, ರಿಯಾಲಿಟಿ ಶೋಗಳು ಮತ್ತು ಚಲನಚಿತ್ರಗಳ ನಿರ್ಮಾತೃಗಳು ಈ ಸೂಕ್ಷ್ಮಗಳನ್ನು ಇನ್ನಾದರೂ ಅರಿತುಕೊಂಡು, ಮನೆ-ಮಂದಿಯೆಲ್ಲಾ ಒಟ್ಟಾಗಿ ಕುಳಿತು ನೋಡಬಹುದಾದ 'ಸಭ್ಯ ಕಾರ್ಯಕ್ರಮ'ಗಳನ್ನು ಕಟ್ಟಿಕೊಡುವುದರ ಕಡೆಗೆ ಮನಸ್ಸು ಮಾಡಲಿ.

(ಲೇಖಕಿ ಶಿಕ್ಷಕಿ ಮತ್ತು ಕಥೆಗಾರ್ತಿ)

ಮನದಾಳ

ವಿದ್ಯಾಶಂಕರ ಶರ್ಮ, ಬೆಂಗಳೂರು

ಗುರುನಿಂದನೆ ತರವೇ?

ಕೆಲವು ದಿನಗಳ ಹಿಂದೆ ಕೆಲಸದ ನಿಮಿತ್ತ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಕೆಲವು ಕಾಲೇಜು ವಿದ್ಯಾರ್ಥಿಗಳು ಜೋರಾಗಿ ಮಾತನಾಡುತ್ತಿದ್ದರು, ಹಾಗಾಗಿ ಅವರ ಸಂಭಾಷಣೆ ಅಯಾಚಿತವಾಗಿ ಕಿವಿಗೆ ಬಿದ್ದಿತು. ಅವರು ತಮ್ಮ ಅಧ್ಯಾಪಕರ ಬಗ್ಗೆ ಮಾತನಾಡಿಕೊಳ್ಳುತ್ತಿರುವುದು ಎಂಬುದು ತಿಳಿಯಿತು. ಆದರೆ ಮಾತಿನ ರೀತಿ ನಿಜಕ್ಕೂ ಬಹಳ ಬೇಸರ ತಂದಿತು. ಕಾರಣ, ಅವರು ತಮ್ಮ ಅಧ್ಯಾಪಕರ ಕುರಿತು ಏಕವಚನದಲ್ಲಿ ಮಾತನಾಡುತ್ತಿದ್ದರು. ''ಅವನು ಯಾಕೆ ಆ ಥರ ಕಿರಿಕಿರಿ ಮಾಡ್ತಾನೋ?'', ''ನಾಳೆ ಅವನ ಕ್ಲಾಸ್‌ಗೆ ಹೋಗುವುದು ಬೇಡ'' ಹೀಗಿದ್ದವು ಅವರ ಮಾತುಗಳು. ನಾನು ಯೋಚನಾಲಹರಿಗೆ ಬಿದ್ದೆ. ನಮ್ಮ ಶಾಲಾ ದಿನಗಳಲ್ಲಿ, ಪಾಠ ಕಲಿಸುವ ಗುರುಗಳೆಂದರೆ ನಮಗೆ ಅದೆಷ್ಟು ಗೌರವ ಮತ್ತು ಭಯ ಇತ್ತು. ಅವರಿಗೆ ನಾವು ಕೊಡುತ್ತಿದ್ದ ಗೌರವವೇ ನಮಗೆ ಭಯದ ಭಾವವನ್ನು ತರುತ್ತಿತ್ತೋ ಗೊತ್ತಿಲ್ಲ, ಅವರ ಮಾತುಗಳೆಂದರೆ ನಮಗೆ ವೇದವಾಕ್ಯವಾಗಿತ್ತು. ಮನೆಯಲ್ಲಿ ತಂದೆ ತಾಯಿಯರ ಮಾತುಗಳನ್ನೂ ನಾವು ಕಡೆಗಣಿಸುವುದಿತ್ತು, ಆದರೆ ಗುರುಗಳ ಮಾತನ್ನು ಹಗುರವಾಗಿ ಕಂಡಿದ್ದಿಲ್ಲ, ತರಗತಿಯನ್ನು ಬಿಟ್ಟರೆ, ಅವರ ಎದುರು ನಾವು ಕುಳಿತು ನೇರಾನೇರ ದೃಷ್ಟಿ ಕೊಟ್ಟು ಮಾತನಾಡಿದ್ದು ನೆನಪಿಗೆ ಬರುತ್ತಿಲ್ಲ.

ಆದರೆ ಈಗಿನ ಪರಿಸ್ಥಿತಿ ಏನು? ತಮಗೆ ವಿದ್ಯೆ ಕಲಿಸಿದ ಗುರುವಿನ ಬಗೆಗೆ ಎಷ್ಟು ಹಗುರವಾದ ಭಾವನೆ! ಜತೆಗೆ ಏಕವಚನ ಪದ ಪ್ರಯೋಗ. ಇದನ್ನು ನಮ್ಮಂಥವರು ಊಹಿಸಲೂ ಸಾಧ್ಯವಿಲ್ಲ. ಶಿಶುವಿಹಾರದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಅಧ್ಯಾಪಕರು ಮಕ್ಕಳಿಗೆ ತಿಳಿಹೇಳುವುದಕ್ಕೆ ಹೆದರುವ ಸನ್ನಿವೇಶ ಸೃಷ್ಟಿಯಾಗಿದೆ. ಅಧ್ಯಾಪಕರ ಒಂದು ಬುದ್ಧಿಮಾತನ್ನು ದೂರು ಎಂಬಂತೆ ಅದನ್ನು ಪ್ರಶ್ನಿಸುವ ಮತ್ತು ಅದಕ್ಕಾಗಿ ಹೆತ್ತವರು ಶಿಕ್ಷಣ ಸಂಸ್ಥೆಗೆ ಬಂದು ರಂಪಾಟ ಮಾಡುವ ನಿದರ್ಶನಗಳು ಈಗೀಗ ಸಾಮಾನ್ಯವಾಗಿಬಿಟ್ಟಿವೆ. ಗುರುಕುಲ ಪರಂಪರೆಯನ್ನು ನೆನಪಿಸಿಕೊಂಡರೆ ನಾವು ಎಂಥ ಉತ್ಕೃಷ್ಟ ಮಟ್ಟದಿಂದ ಅವನತಿಯ ದಾರಿ ಹಿಡಿದ್ದೇವೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಗುರುವಿನ ಆದೇಶ ಪಾಲನೆಗಾಗಿ ಎಂಥ ಕಷ್ಟಕ್ಕೂ ಸಿದ್ಧರಾಗಿರುತ್ತಿದ್ದ ಶಿಷ್ಯರು, ಗುರುವಿನ ಕೃಪೆಗಾಗಿ ಹಾತೊರೆಯುವ ಅವರ ವಿನೀತಭಾವ, ಗುರುವಾಕ್ಯ ಪಾಲನೆ, ಗುರುಸೇವೆ ಹೀಗೆ ವಿವಿಧ ರೀತಿಯಲ್ಲಿ ವ್ಯಕ್ತಿತ್ವ ವಿಕಸನದ, ನೈತಿಕ ಉನ್ನತಿಯ ವರ್ತನೆಗಳು ವಿದ್ಯಾರ್ಥಿಗಳನ್ನು ಸುಸಂಸ್ಕೃತ ನಾಗರಿಕರನ್ನಾಗಿ ರೂಪಿಸುತ್ತಿದ್ದವು. ತರಗತಿಗಳು ಅಂಥ ಕಾರ್ಯಾಗಾರಗಳಾಗಿದ್ದವು. ಆದರೆ ಬದಲಾದ ಶಿಕ್ಷಣ ಪದ್ಧತಿಯು ನಮ್ಮ ಸಂಸ್ಕೃತಿ ನಮಗೇ ಅಪರಿಚಿತ ಎಂಬಂತ ವಿಚಿತ್ರ ಕಾಲಕ್ಕೆ ನಮ್ಮನ್ನು ತಳ್ಳುತ್ತಿದೆ. ಏನೋ ಹೇಗೋ ಒಂದು ಪದವಿಯನ್ನು ಗಳಿಸಿ ಉದ್ಯೋಗವನ್ನು ಪಡೆಯುವುದೇ ನಮ್ಮ ಈಗಿನ ಶಿಕ್ಷಣದ ಮುಖ್ಯ ಗುರಿಯಾಗಿದೆ. ಗುರುಗಳ ಮಾರ್ಗದರ್ಶನ, ಅವರ ಜತೆ ಸಂವಾದ, ವಿಷಯಗಳ ಚರ್ಚೆ ಇವೆಲ್ಲ ಕನಸಿನ ಕತೆಯಾಗಿದೆ.

ಗುರು ಮತ್ತು ಶಿಷ್ಯರ ನಡುವಿನ ಪವಿತ್ರ ಸಂಬಂಧಕ್ಕಿರುವ ಮಹತ್ವವನ್ನು ನಾವು ಕಡೆಗಣಿಸಿ ಬಲು ದೂರ ಸಾಗಿದ್ದೇವೆ. ಕಾಲನ ಓಟದಲ್ಲಿ ಎಷ್ಟೆಲ್ಲ ಬದಲಾವಣೆಗಳು! ನಮಗೆ ಪಾಠ ಕಲಿಸಿದ ಗುರುಗಳು, ಅವರು ಪ್ರಾಥಮಿಕ ಅಥವಾ ಪ್ರೌಢ ಶಾಲೆ, ಪದವಿ ಶಿಕ್ಷಣ ಯಾವುದೇ ಆಗಿರಲಿ, ಅವರನ್ನು ಯಾವಾಗ ಕಂಡರೂ ನಮಗೆ ಗೊತ್ತಿಲ್ಲದಂತೆ ನಾವು ನಮಸ್ಕಾರ ಮಾಡುತ್ತೇವೆ. ನಾವು ನಮ್ಮ ಮಧ್ಯವಯಸ್ಸು ದಾಟಿದ್ದರೂ ಈಗಲೂ ಅವರ ಎದುರು ಕುಳಿತುಕೊಂಡು ಮಾತನಾಡುವುದಕ್ಕೆ ಸಂಕೋಚವಾಗುತ್ತದೆ, ನಿಂತು ಮಾತನಾಡುವುದೇ ನಮಗೆ ಹೆಚ್ಚು ಆರಾಮದಾಯಕ ಅನಿಸುತ್ತದೆ. 'ಹರ ಮುನಿದರೆ ಗುರು ಕಾಯ್ವನು, ಗುರು ಮುನಿದರೆ ಯಾರು ಕಾಯ್ವರು?' ಎಂಬ ಮಾತಿನಂತೆ, ಗುರುಗಳಿಗೆ ಗೌರವ ಕೊಡದೆ ವಿದ್ಯಾರ್ಥಿಗಳ ಶ್ರೇಯಸ್ಸು ಖಂಡಿತ ಸಾಧ್ಯವಿಲ್ಲ. ಗಳಿಸಿದ ಪದವಿಯಿಂದ ಉದ್ಯೋಗ, ಅಧಿಕಾರ, ಹಣ ಎಲ್ಲ ಸುಖ ಸೌಕರ್ಯಗಳನ್ನು ಹೊಂದಬಹುದು, ಆದರೆ ನೈತಿಕತೆಯ, ಆದರ್ಶಗಳ ಬಡತನ ಶಿಷ್ಯರನ್ನು ಕಾಡುವುದಂತೂ ನಿಶ್ಚಿತ.

(ಲೇಖಕರು ಹವ್ಯಾಸಿ ಬರಹಗಾರರು)

ಹಳದಿ ಮಾರ್ಗಕ್ಕೆ ಇನ್ನೇನು ದಕ್ಕಲಿದೆ ಹಸಿರು ನಿಶಾನೆ!

ಬೆಂಗಳೂರಿನ ಕೆಲ ಪ್ರದೇಶಗಳಲ್ಲಿ 'ನಮ್ಮ ಮೆಟ್ರೋ' ಕಾಮಗಾರಿ ಇನ್ನೂ ನಡೆಯುತ್ತಿದೆ. 'ನೇರಳೆ' ಮತ್ತು 'ಹಸಿರು' ಮಾರ್ಗಗಳಲ್ಲಿ ಕಾಮಗಾರಿ ಬಹುತೇಕ ಪೂರ್ಣಗೊಂಡು ಪೂರ್ಣ ಪ್ರಮಾಣದಲ್ಲಿ ಮೆಟ್ರೋ ರೈಲು ಸಂಚರಿಸುತ್ತಿರುವುದರಿಂದ ಜನರು ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. 'ಹಳದಿ' ಮಾರ್ಗದಿಂದ ಬೆಂಗಳೂರು ದಕ್ಷಿಣ, ಹೊಸೂರು ರಸ್ತೆ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಉಪಯೋಗವಾಗಲಿದೆ.

ಟ್ರ್ಯಾಕ್-ರೆಕಾರ್ಡ್
ರವೀ ಸಜಂಗದ್ದೆ
vveditoped@gmail.com

ದಕ್ಷಿಣ ಭಾರತದಲ್ಲಿ ತುಲನಾತ್ಮಕವಾಗಿ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ನಗರ 'ನಮ್ಮ ಬೆಂಗಳೂರು'. ಅಂತೆಯೇ, ಕಳೆದ 14 ವರ್ಷಗಳಿಂದ ಹಂತಹಂತವಾಗಿ ಅಭಿವೃದ್ಧಿ ಹೊಂದಿ, ಬೆಂಗಳೂರಿನ ಮಹತ್ವದ, ವಿಶ್ವಸನೀಯ ಮತ್ತು ಜನಾನುರಾಗಿ ಸಂಚಾರ ವ್ಯವಸ್ಥೆಯಾಗಿ ಬೆಳೆದು ನಿಂತಿದೆ 'ನಮ್ಮ ಮೆಟ್ರೋ'. 2011ರಲ್ಲಿ ಲೋಕಾರ್ಪಣೆಗೊಂಡು, ಬೆಂಗಳೂರು ನಗರವಾಸಿಗಳ ನೆಚ್ಚಿನ ಪ್ರಯಾಣದ ಆಯ್ಕೆಯಾಗಿ 'ನಮ್ಮ ಮೆಟ್ರೋ' ಕಾರ್ಯನಿರ್ವಹಿಸುತ್ತಿದೆ. ಮಹಾನಗರಿಯ ಕೆಲ ಭಾಗಗಳಲ್ಲಿ ಜನದಟ್ಟಣೆ/ವಾಹನ ದಟ್ಟಣೆ/ಸಂಚಾರ ದಟ್ಟಣೆ ಆಗುವುದಕ್ಕೆ ಕಾರಣವಾಗಿರುವ ಬೆಂಗಳೂರಿನ ಐಟಿ ಸಂಸ್ಥೆಗಳ ನೆಲೆವೀಡಾಗಿರುವ 'ಇಲೆಕ್ಟ್ರಾನಿಕ್ ಸಿಟಿ'ಗೆ ಸಂಪರ್ಕ ಕಲ್ಪಿಸುವ ಮೆಟ್ರೋ 3ನೇ ಹಂತದ 'ಹಳದಿ ಮಾರ್ಗ'ವು ಇದೇ ಆಗಸ್ಟ್ 10ರಂದು ಪ್ರಧಾನಿ ನರೇಂದ್ರ ಮೋದಿಯವರಿಂದ ಲೋಕಾರ್ಪಣೆಯಾಗಲಿದೆ. ಈ ಹಿನ್ನೆಲೆಯಲ್ಲಿ 'ಮೆಟ್ರೋ' ಸಾಗಿಬಂದ ಮಾರ್ಗ, ಭವಿಷ್ಯದ ಯೋಜನಾ ಚಟುವಟಿಕೆಗಳ ಕಡೆಗೊಮ್ಮೆ ಕಣ್ಣು ಹಾಯಿಸೋಣ.

'ಮೆಟ್ರೋ ರೈಲು ಸಾರಿಗೆ ವ್ಯವಸ್ಥೆ'ಯ ಭಾಗವಾಗಿ 2003ರಲ್ಲಿ ಮೊದಲ ಹಂತದ ಯೋಜನಾ ವರದಿಯನ್ನು ತಯಾರಿಸಲಾಯಿತು. ಮುಂದಿನ ದಿನಗಳಲ್ಲಿ 'ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್' (ಬಿಎಂಆರ್‌ಸಿಎಲ್) ಅಸ್ತಿತ್ವಕ್ಕೆ ಬಂತು. 2006ರ ಏಪ್ರಿಲ್ 25ರಂದು ಮೊದಲ ಹಂತದ ಕಾಮಗಾರಿಗೆ ಕೇಂದ್ರ ಸರಕಾರ ಅನುಮೋದನೆ ನೀಡಿತು. 2007ರ ಏಪ್ರಿಲ್ 15ರಂದು ಕಾಮಗಾರಿ ಆರಂಭವಾಯಿತು. 2011ರ ಅಕ್ಟೋಬರ್ 20ರಂದು, ನೇರಳೆ ಮಾರ್ಗದ, ಬೈಯಪ್ಪನಹಳ್ಳಿ ಮತ್ತು ಮಹಾತ್ಮ ಗಾಂಧಿ ರಸ್ತೆಗೆ ಸಂಪರ್ಕ ಕಲ್ಪಿಸುವ 'ರೀಚ್-1' ಮಾರ್ಗವು ಸಾರ್ವಜನಿಕ ಸೇವೆಗೆ ಮುಕ್ತವಾಯಿತು. ಅಂದು ಹಲವರು ಬೆರಗು ಮತ್ತು ಉತ್ಸಾಹದೊಂದಿಗೆ ಎರಡೂ ನಿಲ್ದಾಣಗಳ ನಡುವೆ ಸಂಚರಿಸಿ ಸಂಭ್ರಮಿಸಿದರು. ಮನೆಯಿಂದ ಕಚೇರಿಗೆ ಹೋಗುವ ಮಾರ್ಗ ಅಲ್ಲದಿದ್ದರೂ, ನಾನೂ ಅಂದು ಬೈಕನ್ನು ಬೈಯಪ್ಪನಹಳ್ಳಿ ನಿಲ್ದಾಣದೆಡೆಗೆ ತಿರುಗಿಸಿ, ಮೆಟ್ರೋದಲ್ಲಿ ಮಹಾತ್ಮ ಗಾಂಧಿ ನಿಲ್ದಾಣಕ್ಕೆ ಹೋಗಿ, ಅಲ್ಲಿಂದ ವಾಪಸಾದೆ! ಹೀಗೆ ಮೆಟ್ರೋದಲ್ಲಿ ಮೊದಲ ದಿನವೇ ಸಂಚರಿಸಿ ಖುಷಿಪಟ್ಟ ನೆನಪು ಇನ್ನೂ ಹಸಿರಾಗಿದೆ.

ಬೆಂಗಳೂರಿನ ಕೆಲ ಪ್ರದೇಶಗಳಲ್ಲಿ 'ನಮ್ಮ ಮೆಟ್ರೋ' ಕಾಮಗಾರಿ ಇನ್ನೂ ನಡೆಯುತ್ತಿದೆ. 'ನೇರಳೆ' ಮತ್ತು 'ಹಸಿರು' ಮಾರ್ಗಗಳಲ್ಲಿ ಕಾಮಗಾರಿ ಬಹುತೇಕ ಪೂರ್ಣಗೊಂಡು ಪೂರ್ಣ ಪ್ರಮಾಣದಲ್ಲಿ ಮೆಟ್ರೋ ರೈಲು ಸಂಚರಿಸುತ್ತಿರುವುದರಿಂದ ಜನರು ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸದ್ಯದಲ್ಲೇ ಕಾರ್ಯಾರಂಭ ಮಾಡಲಿರುವ 'ಹಳದಿ' ಮಾರ್ಗದಿಂದ ಬೆಂಗಳೂರು ದಕ್ಷಿಣ, ಹೊಸೂರು ರಸ್ತೆ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಉಪಯೋಗವಾಗಲಿದೆ. 'ಹಳದಿ' ಮಾರ್ಗವೂ ಸೇರಿದಂತೆ 'ನಮ್ಮ ಮೆಟ್ರೋ'ದ ಒಟ್ಟು ಉದ್ದ 95.82 ಕಿಲೋಮೀಟರುಗಳು!

'ನೇರಳೆ' ಮಾರ್ಗವು 43.49 ಕಿ.ಮೀ. ಉದ್ದವಿದ್ದು 37 ನಿಲ್ದಾಣಗಳನ್ನು ಒಳಗೊಂಡಿದೆ. ಈ ಮಾರ್ಗವು 'ಪೂರ್ವ-ಪಶ್ಚಿಮ ಕಾರಿಡಾರ್' ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪೂರ್ವದಲ್ಲಿ ವೈಟ್‌ಫೀಲ್ಡ್ ನಿಲ್ದಾಣದಿಂದ ಶುರುವಾಗಿ ಪಶ್ಚಿಮದ ಚಲ್ಲಘಟ್ಟ ನಿಲ್ದಾಣದಲ್ಲಿ ಇದು ಕೊನೆಗೊಳ್ಳುತ್ತದೆ. 'ಹಸಿರು' ಮಾರ್ಗವು 33.5 ಕಿ.ಮೀ. ಉದ್ದವಿದ್ದು 32 ನಿಲ್ದಾಣಗಳನ್ನು ಒಳಗೊಂಡಿದೆ. 'ಉತ್ತರ-ದಕ್ಷಿಣ ಕಾರಿಡಾರ್' ಆಗಿ ಕಾರ್ಯನಿರ್ವಹಿಸುತ್ತಿರುವ ಈ ಮಾರ್ಗವು, ಉತ್ತರದಲ್ಲಿ ಮಾದಾವರ ನಿಲ್ದಾಣದಿಂದ ಶುರುವಾಗಿ ದಕ್ಷಿಣದಲ್ಲಿ ಕನಕಪುರ ರಸ್ತೆಯ ಸಿಲ್ಕ್ ಇನ್‌ಸ್ಟಿಟ್ಯೂಟ್ ನಿಲ್ದಾಣದಲ್ಲಿ ಕೊನೆಗೊಳ್ಳುತ್ತದೆ. ಇನ್ನು, ಸದ್ಯದಲ್ಲೇ ತೆರೆದುಕೊಳ್ಳಲಿರುವ 'ಹಳದಿ' ಮಾರ್ಗವು 19.15 ಕಿ.ಮೀ. ಉದ್ದವಿದ್ದು, 16 ನಿಲ್ದಾಣಗಳನ್ನು ಒಳಗೊಂಡಿದೆ. ಇದು ಬೊಮ್ಮಸಂದ್ರ ನಿಲ್ದಾಣದಿಂದ ಶುರುವಾಗಿ ರಾಷ್ಟ್ರೀಯ ವಿದ್ಯಾಲಯ ರಸ್ತೆ ನಿಲ್ದಾಣದಲ್ಲಿ ಕೊನೆಗೊಳ್ಳುತ್ತದೆ.

'ನಮ್ಮ ಮೆಟ್ರೋ'ದ ಸದ್ಯದ ದೈನಂದಿನ ಪ್ರಯಾಣಿಕರ ಸಂಖ್ಯೆ ಏಳೂವರೆಯಿಂದ ಎಂಟು ಲಕ್ಷ. ಹಳದಿ ಮಾರ್ಗದ ಕಾರ್ಯಾಚರಣೆ ಶುರುವಾದ ನಂತರ ಇದು ಹತ್ತಿರ 11 ಲಕ್ಷಕ್ಕೆ ಮುಟ್ಟುವ ನಿರೀಕ್ಷೆಯಿದೆ. ವರದಿಗಳ ಪ್ರಕಾರ, 2030ರ ವೇಳೆಗೆ 'ನಮ್ಮ ಮೆಟ್ರೋ'ದಲ್ಲಿ ವರ್ಷಕ್ಕೆ ಅಂದಾಜು 43 ಕೋಟಿ ಜನರು ಪ್ರಯಾಣಿಸಲಿದ್ದಾರೆ. ಹಸಿರು ಮಾರ್ಗದ 'ರಾಷ್ಟ್ರೀಯ ವಿದ್ಯಾಲಯ ರಸ್ತೆ' ನಿಲ್ದಾಣದಿಂದ ಹಳದಿ ಮಾರ್ಗಕ್ಕೆ ಸಂಪರ್ಕ ಲಭ್ಯವಿದೆ. ಚಾಲಕರಹಿತ ರೈಲು ಕಾರ್ಯಾಚರಣೆ ನಡೆಯಲಿರುವುದು ಈ ಮಾರ್ಗದ ವೈಶಿಷ್ಟ್ಯ. ಭವಿಷ್ಯದಲ್ಲಿ ಚಾಲಕರಹಿತ ರೈಲುಗಳು ಹೆಚ್ಚೆಚ್ಚು ಓಡಲಿವೆ. ಇನ್ಫೋಸಿಸ್ ಫೌಂಡೇಷನ್, ಬಯೋಕಾನ್ ಮುಂತಾದ ಸಂಸ್ಥೆಗಳು ದೇಣಿಗೆ ನೀಡಿ ತಮ್ಮ ಕಚೇರಿಯ ಬಳಿಯ ನಿಲ್ದಾಣಗಳ ನಿರ್ಮಾಣದಲ್ಲಿ ಸಹಕರಿಸಿವೆ ಮತ್ತು ಇವುಗಳಿಗೆ 'ಇನ್ಫೋಸಿಸ್ ಫೌಂಡೇಷನ್ ಕೋನಪ್ಪನ ಅಗ್ರಹಾರ ನಿಲ್ದಾಣ', 'ಬಯೋಕಾನ್ ಹೆಬ್ಬಗೋಡಿ ನಿಲ್ದಾಣ' ಎಂದು ಆಯಾ ಸಂಸ್ಥೆಗಳ ಹೆಸರಿಡಲಾಗಿದೆ.

ಕಾಳೇನ ಅಗ್ರಹಾರದಿಂದ ನಾಗಾವರದವರೆಗಿನ 21.25 ಕಿ.ಮೀ. ಉದ್ದದ 'ಗುಲಾಬಿ' ಮಾರ್ಗ, ಸೆಂಟ್ರಲ್ ಸಿಲ್ಕ್‌ಬೋರ್ಡ್‌ನಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ 58.19 ಕಿ.ಮೀ. ಉದ್ದದ 'ನೀಲಿ' ಮಾರ್ಗದ ಕಾಮಗಾರಿಯೂ ಪ್ರಗತಿಯಲ್ಲಿದೆ. 'ನಮ್ಮ ಮೆಟ್ರೋ' 3ನೇ ಹಂತದ 'ಕಾರಿಡಾರ್-1'ರ ಯೋಜನೆಯ ಅಡಿಯಲ್ಲಿ ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳ-ಕೆಂಪಾಪುರವರೆಗಿನ 32.5 ಕಿ.ಮೀ. ಮಾರ್ಗ ಮತ್ತು 'ಕಾರಿಡಾರ್-2' ಯೋಜನೆಯ ಭಾಗವಾಗಿ ಹೊಸಹಳ್ಳಿಯಿಂದ ಮಾಗಡಿರಸ್ತೆಯ ಕಡಬಗೆರೆವರೆಗಿನ 12.13 ಕಿ.ಮೀ. ಮಾರ್ಗದ ಕಾಮಗಾರಿಗಳಿಗೆ ಸಂಬಂಧಿಸಿ 15,611 ಕೋಟಿ ರುಪಾಯಿಗಳ ಯೋಜನಾ ವೆಚ್ಚಕ್ಕೆ ಕೇಂದ್ರ ಹಣಕಾಸು ಸಚಿವಾಲಯ ಅನುಮೋದನೆ ನೀಡಿದೆ. ಈ ಕಾಮಗಾರಿಯ ಅಧಿಕೃತ ಶಂಕುಸ್ಥಾಪನೆಯನ್ನು ಆಗಸ್ಟ್ 10ರಂದು ಪ್ರಧಾನಿ ನೆರವೇರಿಸಲಿದ್ದಾರೆ. 2030ರ ವೇಳೆಗೆ ಈ ಕಾಮಗಾರಿ ಪೂರ್ಣವಾಗುವ ನಿರೀಕ್ಷೆಯಿದೆ. 'ನಮ್ಮ ಮೆಟ್ರೋ' 3 'ಎ' ಹಂತವು ಸರ್ಜಾಪುರದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸಲಿದೆ. 37 ಕಿ.ಮೀ. ಉದ್ದದ ಈ ಮಾರ್ಗವು 28 ನಿಲ್ದಾಣಗಳನ್ನು ಒಳಗೊಳ್ಳಲಿದೆ. 15,000 ಕೋಟಿ ರುಪಾಯಿಗಳಷ್ಟು ವೆಚ್ಚದ ಈ ಯೋಜನೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ.

ಹಳದಿ ಮಾರ್ಗದ ಕಾರ್ಯಾಚರಣೆ ಶುರುವಾದ ನಂತರ, 'ನಮ್ಮ ಮೆಟ್ರೋ'ಗೆ ಟಿಕೆಟ್ ಮೂಲಕ ಬರಲಿರುವ ಸರಾಸರಿ ಮಾಸಿಕ ಆದಾಯ 90 ಕೋಟಿ ರುಪಾಯಿಗಳು. ಜಾಹೀರಾತು, ಅಂಗಡಿಗಳು ಮತ್ತಿತರ ಮೂಲದಿಂದ ಸದ್ಯಕ್ಕೆ ಮೂರೂವರೆಯಿಂದ ನಾಲ್ಕು ಕೋಟಿ ರುಪಾಯಿ ಮಾಸಿಕ ಆದಾಯವಿದ್ದು, ಅದು ಐದೂವರೆ ಕೋಟಿಯನ್ನು ತಲುಪುವ ನಿರೀಕ್ಷೆಯಿದೆ. 'ನಮ್ಮ ಮೆಟ್ರೋ' ಯೋಜನೆ ಆರಂಭವಾದಾಗಿನಿಂದ ಇದುವರೆಗೆ ಬಿಎಂಆರ್‌ಸಿಎಲ್‌ಗೆ ರಾಜ್ಯ ಮತ್ತು ಕೇಂದ್ರ ಸರಕಾರಗಳು 56,218 ಕೋಟಿ ರುಪಾಯಿಗಳಷ್ಟು ಅನುದಾನವನ್ನು ನೀಡಿದ್ದು, ಮುಂದಿನ 5 ವರ್ಷಗಳಲ್ಲಿ 'ನಮ್ಮ ಮೆಟ್ರೋ'ದ ಯೋಜನಾ ವೆಚ್ಚ 1 ಲಕ್ಷ ಕೋಟಿ ರುಪಾಯಿಗಳನ್ನು ದಾಟಲಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ, ಯೋಜನಾ ವರದಿಯ ಒಪ್ಪಿಗೆಗೆ ವಿಳಂಬ, ಕಾಮಗಾರಿ ಶುರುವಾದ ನಂತರದ ಕ್ಷೀಣ ಪ್ರಗತಿ ಇತ್ಯಾದಿ ಅಂಶಗಳು 'ನಮ್ಮ ಮೆಟ್ರೋ'ದ ಒಟ್ಟಾರೆ ಕಾರ್ಯಪ್ರಗತಿಗೆ ಒಂದಷ್ಟು ಹೊಡೆತ ನೀಡಿರುವುದು ವಾಸ್ತವ.

'ನಮ್ಮ ಮೆಟ್ರೋ' ಹಲವಾರು ವೈಶಿಷ್ಟ್ಯಗಳಿಂದ ಕೂಡಿರುವುದು ಅದರ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇಲ್ಲಿನ ಪ್ರತಿಯೊಂದು ನಿಲ್ದಾಣವೂ ತಂತ್ರಜ್ಞಾನದ ಸಮರ್ಥ ಬಳಕೆಯಿಂದಾಗಿ ಆಧುನಿಕತೆಯ ಸ್ಪರ್ಶವನ್ನು ಹೊಂದಿದೆ. ವಿಕಲಚೇತನ-ಸ್ನೇಹಿ, ಮಹಿಳಾ-ಸ್ನೇಹಿ ವ್ಯವಸ್ಥೆ ಮತ್ತು ಅನುಕೂಲಗಳನ್ನು ಕಲ್ಪಿಸಲಾಗಿದೆ. ನಿಲ್ದಾಣಗಳಲ್ಲಿ ಅಲ್ಲಲ್ಲಿ ಮಾಹಿತಿ/ದಿಕ್ಸೂಚಿ ಫಲಕಗಳನ್ನು ಸಜ್ಜುಗೊಳಿಸಿರುವುದು ಮಾತ್ರವಲ್ಲದೆ, ಪ್ರಯಾಣ ಸಂಬಂಧಿತ ಪ್ರಕಟಣೆ/ಉದ್ಘೋಷಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ರೈಲಿನೊಳಗೆ ಹಾಗೂ ನಿಲ್ದಾಣಗಳಲ್ಲಿ ಮಾಡಲಾಗುತ್ತದೆ. ನಗದು ಪಾವತಿ, ಆನ್‌ಲೈನ್ ಮತ್ತು ಸ್ಮಾರ್ಟ್‌ಕಾರ್ಡ್ ಮೂಲಕ ಟಿಕೆಟ್ ಪಡೆದು ಮೆಟ್ರೋ ರೈಲುಗಳಲ್ಲಿ ಸುಲಭವಾಗಿ ಪ್ರಯಾಣಿಸಬಹುದು. ಅಂಗವಿಕಲರು, ರೋಗಿಗಳು, ಹಿರಿಯ ನಾಗರಿಕರು, ಬಾಣಂತಿಯರು, ಚಿಕ್ಕ ಮಕ್ಕಳೊಂದಿಗೆ ಪ್ರಯಾಣಿಸುವವರಿಗೆ ಪ್ರತಿ ಬೋಗಿಯಲ್ಲೂ ಆಸನಗಳನ್ನು ಮೀಸಲಿರಿಸಲಾಗಿದೆ. ಅಂಗಾಂಗ ರವಾನೆ ಮತ್ತಿತರ ವೈದ್ಯಕೀಯ ತುರ್ತು ಸೇವೆಗಳಿಗೂ 'ನಮ್ಮ ಮೆಟ್ರೋ' ಬಳಕೆ ಶುರುವಾಗಿದೆ.

ನಿರೀಕ್ಷೆಯಂತೆ ಕಾಮಗಾರಿ ನಡೆದರೆ, ಮುಂದಿನ ಐದಾರು ವರ್ಷಗಳಲ್ಲಿ ಬೆಂಗಳೂರಿನ ಎಲ್ಲಾ ಭಾಗಗಳನ್ನೂ ಮೆಟ್ರೋ ತಲುಪಲಿದೆ. ಹಾಗಾದಾಗ, ಮೆಟ್ರೋದಲ್ಲಿ ಪ್ರಯಾಣಿಸುವವರ ಸಂಖ್ಯೆಯೂ ದುಪ್ಪಟ್ಟಾಗಲಿದೆ. ಬೆಂಗಳೂರಿನಲ್ಲಿ ಸಂಚಾರಿ ದಟ್ಟಣೆಯ ತಲೆಬಿಸಿಯಿಲ್ಲದೆ, ಸರಿಯಾದ ಸಮಯಕ್ಕೆ ಉದ್ದೇಶಿತ ಜಾಗವನ್ನು ತಲುಪಲು ಬಳಸಬಹುದಾದ ಹೆಚ್ಚು ಅವಲಂಬಿತ ಮತ್ತು ವಿಶ್ವಾಸಾರ್ಹ ಸಾರಿಗೆಯಾಗಿ 'ನಮ್ಮ ಮೆಟ್ರೋ' ಗರಿಮೆಯನ್ನು ಪಡೆಯಲಿದೆ. ಬೋಗಿಗಳನ್ನು ಕಾಲಕಾಲಕ್ಕೆ ಆಮದು ಮಾಡಿಕೊಂಡು ರೈಲುಗಳ ಸಂಖ್ಯೆಯು ನಿರಂತರವಾಗಿ ಹೆಚ್ಚುವಂತೆ ನೋಡಿಕೊಳ್ಳಲಾಗಿದೆ. ಸದ್ಯಕ್ಕೆ ಒಂದು ನಿಲ್ದಾಣದಲ್ಲಿ ಸರಾಸರಿ 30 ಸಿಬ್ಬಂದಿಯನ್ನು ಸೇವೆಗೆ ತೊಡಗಿಸಿರುವ 'ನಮ್ಮ ಮೆಟ್ರೋ' ಅಂದಾಜು ಮೂರು ಸಾವಿರ ಉದ್ಯೋಗಿಗಳನ್ನು ಮಡಿಲಲ್ಲಿ ಇಟ್ಟುಕೊಂಡಿದೆ.

ಬೆಂಗಳೂರಿನ ಜೀವನಾಡಿ ಎನಿಸಿರುವ 'ನಮ್ಮ ಮೆಟ್ರೋ'ದ ಉದ್ದೇಶಿತ ಕಾಮಗಾರಿಗಳು ನಿರೀಕ್ಷೆಯಂತೆ ಪೂರ್ಣಗೊಂಡು ಜನರಿಗೆ ನಗರಸಂಪರ್ಕವು ಮತ್ತಷ್ಟು ಸುಲಭವಾಗಲಿ ಎಂಬುದು ಸಹೃದಯಿಗಳ ಹಾರೈಕೆ. 'ಹಳದಿ' ಮಾರ್ಗಕ್ಕೆ ಒಂದಷ್ಟು ತಡವಾಗಿಯಾದರೂ ಹಸಿರು ನಿಶಾನೆ ದಕ್ಕಿ, ಜನರ ಉಪಯೋಗಕ್ಕೆ ಅದು ಲಭ್ಯವಾಗಲಿರುವುದು ಖುಷಿಯ ವಿಚಾರ. ದಕ್ಕಿರುವ ಬದುಕನ್ನು ಚೆಂದದಿಂದ ಬದುಕಲು ನಿರಂತರ ಓಟ ಬೇಡುವ ಬೆಂಗಳೂರೆಂಬ ಮಾಯಾನಗರಿಯ ದೈನಂದಿನ ಬದುಕಿನಲ್ಲಿ ನಗರವಾಸಿಗಳ ನೆಚ್ಚಿನ ಪ್ರಯಾಣ ಸಂಗಾತಿಯಾಗಲಿದೆ 'ನಮ್ಮ ಮೆಟ್ರೋ' ಎಂಬುದು ನಿಸ್ಸಂಶಯ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:203

ಸಮಾಚಾರ ಸಣ್ಣದಲ್ಲ

ಸಾಧು ಸೋಗಿನ ಬಾಂಗ್ಲಾ ಅಪರಾಧಿ ಸೆರೆ

ನಾದಿಯಾ: ಅಕ್ರಮವಾಗಿ ಭಾರತ ಪ್ರವೇಶಿಸಿ ಸಾಧು ಸೋಗಿನಲ್ಲಿ ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದ ಬಾಂಗ್ಲಾ ದೇಶದ ಒಬ್ಬ ಅಪರಾಧಿಯನ್ನು ನಾದಿಯಾ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಖಚಿತ ಮಾಹಿತಿ ಮೇರೆಗೆ ರಾಜ್ಯ ವಿಶೇಷ ಕಾರ್ಯಪಡೆ ಅಧಿಕಾರಿಗಳು ಸ್ಥಳೀಯ ಪೊಲೀಸರ ಜತೆಗೂಡಿ ತೆಹಟ್ಟಾ ಪ್ರದೇಶದಲ್ಲಿ ದಾಳಿ ನಡೆಸಿ, ನುಸುಳು ಕೋರ ಮೊಹಮ್ಮದ್ ಹಾಷೆಮ್ (60) ಅಲಿಯಾಸ್ ಹಶೀಮ್ ಅಲಿ ಮಲ್ಲಿಕ್ ಎಂಬಾತನನ್ನು ಬಂಧಿಸಿದ್ದಾರೆ. ಈತ ಹಲವು ಅಪರಾಧ ಪ್ರಕರಣಗಳಲ್ಲಿ ಬಾಂಗ್ಲಾದೇಶ ಪೊಲೀಸರಿಗೆ ಬೇಕಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಪಶ್ಚಿಮ ಬಂಗಾಳ ವಿಶೇಷ ಕಾರ್ಯಪಡೆ ಸಬ್ ಇನ್‌ಸ್ಪೆಕ್ಟರ್ ಮೊಹಮ್ಮದ್ ಅಬ್ದುನ್ ನೂರ್ ಚೌಧರಿ ನೀಡಿದ ದೂರಿನ ಆಧಾರ ತನಿಖೆ ಪ್ರಾರಂಭಿಸಲಾಗಿದೆ. ಹಾಷೆಮ್ ಭಾರತದ ನಕಲಿ ದಾಖಲೆ ಸೃಷ್ಟಿಸಿಕೊಂಡು ತೆಹಟ್ಟಾದ ಬಲಿಯುರಾ ಪುಬಾರ್ ಪಾರಾದಲ್ಲಿ ತಲೆಮರೆಸಿಕೊಂಡಿದ್ದ.

ಲೋಕ, ರಾಜ್ಯಸಭೆ ಕಲಾಪ ಮುಂದಕ್ಕೆ

ದೆಹಲಿ: ಬಿಹಾರದಲ್ಲಿನ ಮತದಾರರ ಪಟ್ಟಿ ವಿಶೇಷ ಕ್ಷಿಪ್ರ ಪರಿಷ್ಕರಣೆ(ಎಸ್‌ಐಆರ್) ಮತ್ತಿತರ ವಿಚಾರಗಳ ಕುರಿತ ಇಂದೇ ಚರ್ಚೆ ಮಾಡೋಣ ಎಂದು ಪ್ರತಿಪಕ್ಷಗಳು ಸೋಮವಾರ ಪಟ್ಟು ಹಿಡಿದ ಹಿನ್ನೆಲೆ ಲೋಕಸಭೆ ಕಲಾಪವನ್ನು ಮೊದಲಿಗೆ ಮಧ್ಯಾಹ್ನ 2 ಗಂಟೆವರೆಗೆ ಮುಂದೂಡಲಾಯಿತು. ಬಳಿಕ ಮಂಗಳವಾರಕ್ಕೆ ಮುಂದೂಡಲಾಯಿತು. ಸೋಮವಾರ ಬೆಳಗ್ಗೆ ಲೋಕಸಭೆ ಸದನ ಸಮಾವೇಶಗೊಂಡಾಗ ಕಾಂಗ್ರೆಸ್ ಸಂಸದ ಮಾಣಿಕಂ ಟ್ಯಾಗೋರ್, ಬಿಹಾರದಲ್ಲಿನ ಎಸ್ ಐಆರ್ ಕುರಿತು ಚರ್ಚೆ ನಡೆಸಲು ನಿರ್ಣಯ ಮಂಡಿಸಿದರು. ಎಸ್‌ಐಆರ್ ಪ್ರಕ್ರಿಯೆಯು ದುರ್ಬಲ ವರ್ಗ, ಅನಕ್ಷರಸ್ತ ಸಮುದಾಯಗಳ ಮೇಲೆ ಅಸಮಾನ ಪರಿಣಾಮ ಬೀರಿದೆ. ಇದೇ ರೀತಿ ಮತದಾನದ ಹಕ್ಕು ನಿರಾಕರಣೆ ಮುಂದೆ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ದಂತಹ ರಾಜ್ಯಗಳಿಗೂ ಹರಡಬಹುದು ಎಂದು ಆತಂಕ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಚರ್ಚೆಗೆ ಪ್ರತಿಪಕ್ಷಗಳು ಗದ್ದಲ ಎಬ್ಬಿಸಿದ ಹಿನ್ನೆಲೆಯಲ್ಲಿ ಕಲಾಪ ವನ್ನು ಮೊದಲಿಗೆ ಮಧ್ಯಾಹ್ನ 2ರವರೆಗೆ, ನಂತರ ದಿನದ ಮಟ್ಟಿಗೆ ಮುಂದೂಡಲಾಯಿತು. ಈ ಮಧ್ಯೆ, ಹಾಲಿ ಸಂಸದ ಶಿಬು ಸೊರೇನ್ ನಿಧನ ಹಿನ್ನೆಲೆಯಲ್ಲಿ ಗೌರವ ಸೂಚಕವಾಗಿ ರಾಜ್ಯಸಭೆ ಕಲಾಪವನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು.

ಛತ್ತೀಸ್‌ಗಢ ಸಿಎಎಫ್ ಅಧಿಕಾರಿ ಆತ್ಮಹತ್ಯೆ

ಕೊಂಡಗಾಂವ್: ಛತ್ತೀಸ್‌ಗಢದ ಕೊಂಡಗಾಂವ್ ಜಿಲ್ಲೆಯಲ್ಲಿ 'ಛತ್ತೀಸ್‌ಗಢ ಸಶಸ್ತ್ರ ಪಡೆ'(ಸಿಎಎಫ್) ಅಧಿಕಾರಿಯೊಬ್ಬರು ಸರ್ವಿಸ್ ರೈಫಲ್‌ನಿಂದಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ಲಟೂನ್ ಕಮಾಂಡರ್ ದಿನೇಶ್ ಸಿಂಗ್ ಚಾಂಡೆಲ್ ಶಿಬಿರದಲ್ಲಿರುವ ತಮ್ಮ ಕೋಣೆಯೊಳಗೆ ಎಕೆ-47 ರೈಫಲ್‌ನಿಂದ ಗುಂಡು ಹಾರಿಸಿಕೊಂಡಿ ಸಾವನ್ನಪ್ಪಿದ್ದಾರೆ. ಬಯಾನಾರ್ ಗ್ರಾಮದಲ್ಲಿರುವ ಸಿಎಎಫ್‌ನ 2ನೇ ಬೆಟಾಲಿಯನ್ ಶಿಬಿರದಲ್ಲಿ ಭಾನುವಾರ ರಾತ್ರಿ ದುರಂತ ಘಟನೆ ನಡೆದಿದೆ ಎಂದು ಕೊಂಡಗಾವ್ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ(ಎಎಸ್‌ಪಿ) ಕೌಶಲೇಂದ್ರ ದೇವ್ ಪಟೇಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಗುಂಡಿನ ಸದ್ದು ಕೇಳಿ ಸಹೋದ್ಯೋಗಿಗಳು ಚಾಂಡೆಲ್ ಅವರ ಕೋಣೆಗೆ ಧಾವಿಸಿದಾಗ ಕಮಾಂಡರ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಈ ಕೃತ್ಯಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ಪ್ರಾಥಮಿಕ ಮಾಹಿತಿಗಳ ಪ್ರಕಾರ, ದಿನೇಶ್‌ಗೆ ಕೌಟುಂಬಿಕ ಸಮಸ್ಯೆಗಳಿದ್ದವು ಎಂಬುದು ತಿಳಿದುಬಂದಿದೆ ಎಂದು ಎಎಸ್‌ಪಿ ಹೇಳಿದ್ದಾರೆ.

ತೆಲಂಗಾಣ ಮಾಜಿ ಸಿಎಂಗೆ ಬಂಧನ ಭೀತಿ

ಹೈದರಾಬಾದ್: ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್‌ಗೆ ಬಂಧನ ಭೀತಿ ಎದುರಾಗಿದೆ. 2022ರಲ್ಲಿ ಕಾಳೇಶ್ವರಂ ಏತ ನೀರಾವರಿ ಯೋಜನೆಯ ವಿನ್ಯಾಸ ಮತ್ತು ಹಣ ನಿರ್ವಹಣೆಯಲ್ಲಿ ದೊಡ್ಡ ಅಕ್ರಮ ನಡೆದಿದೆ ಎಂಬುದನ್ನು ಹಗರಣದ ತನಿಖೆ ನಡೆಸಿದ ಆಯೋಗ ವರದಿಯಲ್ಲಿ ಉಲ್ಲೇಖಿಸಿದೆ. ಅಲ್ಲದೇ, ಎಲ್ಲಾ ಅಕ್ರಮಗಳಿಗೂ ಮಾಜಿ ಸಿಎಂ ಕೆ.ಚಂದ್ರಶೇಖರ ರಾವ್ ಅವರೇ ನೇರ ಹೊಣೆಗಾರರು ಎಂದೂ ಹೇಳಿದೆ. ಕಾಳೇಶ್ವರಂ ಏತ ನೀರಾವರಿ ಯೋಜನೆ ಅಕ್ರಮಗಳ ಕುರಿತು ತನಿಖೆಗೆ ರೇವಂತ್ ರೆಡ್ಡಿ ಸರಕಾರ ನ್ಯಾ.ಪಿ.ಸಿ.ಘೋಷ್ ನೇತೃತ್ವದಲ್ಲಿ ಮೂವರು ವಿಶೇಷ ಅಧಿಕಾರಿಗಳ ಆಯೋಗ ರಚಿಸಿತ್ತು. ಆಯೋಗ ಜು.31ರಂದು ಸರಕಾರಕ್ಕೆ ವರದಿ ಸಲ್ಲಿಸಿದೆ. ವರದಿಯಲ್ಲಿ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಅಧ್ಯಕ್ಷ ಮತ್ತು ತೆಲಂಗಾಣ ಮಾಜಿ ಮುಖ್ಯಮಂತ್ರಿ, ಕೆ.ಚಂದ್ರಶೇಖರ ರಾವ್ ಅವರನ್ನು ಪ್ರಾಥಮಿಕವಾಗಿ ಹೊಣೆಗಾರರನ್ನಾಗಿ ಹೆಸರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿರಾಮ
ಪ್ರತಿ ಭಾನುವಾರ

{ಕಮಲ್ ಹಾಸನ್} ನಟ-ಸಂಸದ

ಸರ್ವಾಧಿಕಾರ ಮತ್ತು ಸನಾತನ ಸರಪಳಿಗಳನ್ನು ಮುರಿಯಬಲ್ಲ ಏಕೈಕ ಅಸ್ತ್ರ ಶಿಕ್ಷಣ. ಬೇರೆ ಏನನ್ನೂ ಕೈಗೆತ್ತಿಕೊಳ್ಳಬೇಡಿ, ಶಿಕ್ಷಣವನ್ನು ಮಾತ್ರ ಬಿಡಬೇಡಿ. ಅದು ಇಲ್ಲದೇ ನಾವು ಗೆಲ್ಲಲು ಸಾಧ್ಯವೇ ಇಲ್ಲ, ಬಹುಸಂಖ್ಯಾತರಾಗಿರುವ ಮೂರ್ಖರು ನಿಮ್ಮನ್ನು ಸೋಲಿಸಬಹುದು. ಆದರೆ, ಜ್ಞಾನ ಮಾತ್ರ ಎಂದೂ ಸೋಲದು. ಅದಕ್ಕಾಗಿ, ನಾವು ಸದಾ ಶಿಕ್ಷಣವನ್ನು ದೃಢವಾಗಿ ಹಿಡಿದಿಟ್ಟುಕೊಳ್ಳಬೇಕು.

ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಗೆ ಸುಪ್ರೀಂ ಕೋರ್ಟ್ ತರಾಟೆ | ಚೀನಾ ಭಾರತದ ಭೂಮಿ ಕಬಳಿಸಿದೆ ಎಂದು ನಿಮಗೆ ಹೇಗೆ ಗೊತ್ತು?| ನೀವೇನಾದರೂ ಅಲ್ಲಿಗೆ ಹೋಗಿದ್ದಿರಾ?: ನ್ಯಾ.ದೀಪಂಕರ ದತ್ತ

ನಿಜವಾದ ಭಾರತೀಯರಾಗಿದ್ದರೆ...

ದೆಹಲಿ: ಚೀನಾ ಸೇನೆ ಭಾರತದ ಸುಮಾರು 2 ಸಾವಿರ ಕಿಮೀ ಭೂಮಿ ಕಬಳಿಸಿದೆ ಎಂದು ಆರೋಪ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆ ತೆಗೆದುಕೊಂಡಿದೆ. ನೀವು ನಿಜವಾದ ಭಾರತೀಯರಾಗಿದ್ದರೆ ಹೀಗೆ ಹೇಳುತ್ತಿರಲಿಲ್ಲ ಎಂದೂ ಕಿಡಿಕಾರಿದೆ.

ನ್ಯಾ.ದೀಪಂಕರ ದತ್ತ

ನ್ಯಾ. ಎ.ಜಿ.ಮಾಸಿಹ್

ಭಾರತದ ಭೂಮಿ ಚೀನಾ ವಶವಾಗಿದೆ ಎಂಬ ಹೇಳಿಕೆ ಕುರಿತು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ದೀಪಂಕರ ದತ್ತ ಮತ್ತು ನ್ಯಾ.ಅಗಸ್ಟೀನ್ ಜಾರ್ಜ್ ಮಸಿಹ್ ಅವರ ಪೀಠ ಸೋಮವಾರ ಅರ್ಜಿ ವಿಚಾರಣೆ ವೇಳೆ ತರಾಟೆಗೆ ತೆಗೆದುಕೊಂಡಿತು.

ಚೀನಾ ದೇಶ ನಿಖರವಾಗಿ 2 ಸಾವಿರ ಚದರ ಕಿ.ಮೀ.ನಷ್ಟು ಭಾರತದ ನೆಲವನ್ನು ವಶಪಡಿಸಿಕೊಂಡಿದೆ ಎಂಬುದು ನಿಮಗೆ ಹೇಗೆ ತಿಳಿಯಿತು? ನೀವೇನಾದರೂ ಅಲ್ಲಿಗೆ ಹೋಗಿದ್ದಿರಾ? ಎಂದು ನ್ಯಾ.ದೀಪಂಕರ ದತ್ತ ಅವರು ನೇರವಾಗಿ ಪ್ರಶ್ನೆ ಮಾಡಿದರು.

ನಡೆದಿರುವುದೇನು?: 2022ರ ಡಿಸೆಂಬರ್‌ನಲ್ಲಿ 'ಭಾರತ್ ಜೋಡೋ' ಹೆಸರಿನಲ್ಲಿ ರಾಹುಲ್ ಗಾಂಧಿ ಹಮ್ಮಿಕೊಂಡಿದ್ದ ಪಾದಯಾತ್ರೆಯ ವೇಳೆ, ಸಾರ್ವಜನಿಕರನ್ನು ಉದ್ದೇಶಿಸಿ ಸಭೆಯೊಂದರಲ್ಲಿ ಮಾತನಾಡಿದ್ದ ಕಾಂಗ್ರೆಸ್ ನಾಯಕ, ಅರುಣಾಚಲ ಪ್ರದೇಶದಲ್ಲಿ ಚೀನಾ ಸೇನೆಯು ಭಾರತೀಯ ಸೈನಿಕರನ್ನು ಥಳಿಸುತ್ತಿದೆ, 20 ಭಾರತೀಯ ಸೈನಿಕರನ್ನು ಕೊಂದುಹಾಕಿದೆ. ಮಾಧ್ಯಮಗಳು ಇದನ್ನೆಲ್ಲಾ ಪ್ರಶ್ನಿಸುವುದೇ ಇಲ್ಲ ಎಂದಿದ್ದರು. ಭಾರತದ ನೆಲವನ್ನು ಚೀನಾ ಪಾಲಾಗಲು ಅವಕಾಶ ಮಾಡಿಕೊಡಲಾಗಿದೆ ಎಂದೂ ದೂಷಿಸಿದ್ದರು.

ಈ ಎಲ್ಲಾ ಮಾತುಗಳಿಂದ ನೊಂದ ಮಾಜಿ ಸೇನಾಧಿಕಾರಿಯೊಬ್ಬರು, 'ರಾಹುಲ್ ಸೇನೆಯನ್ನು ನಿಂದಿಸಿದ್ದಾರೆ. ಸೈನಿಕರ ಮನೋಬಲ ಕುಗ್ಗುವಂತೆ ಮಾತನಾಡಿದ್ದಾರೆ' ಎಂದು ಆರೋಪಿಸಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಅದನ್ನು ರದ್ದು ಪಡಿಸುವಂತೆ ಕಾಂಗ್ರೆಸ್ ನಾಯಕ ಸಲ್ಲಿಸಿದ್ದ ಮೇಲ್ಮನವಿ ಸುಪ್ರೀಂ ಕೋರ್ಟ್‌ನಲ್ಲಿ ಈಗ ವಿಚಾರಣೆಗೆ ಬಂದಿದೆ.

ಲೋಕಸಭೆಯಲ್ಲೇಕೆ ಹೇಳಲಿಲ್ಲ?: ನೀವು ನಿಜವಾದ ಭಾರತೀಯರಾಗಿದ್ದರೆ ಇದನ್ನು ಬಹಿರಂಗವಾಗಿ, ಅದೂ ಸಾರ್ವಜನಿಕ ಸಭೆಯಲ್ಲಿ ಹೇಳುತ್ತಿರಲಿಲ್ಲ ಎಂದು ಕಿಡಿಕಾರಿದ ನ್ಯಾ.ದೀಪಂಕರ ದತ್ತ, ಹಾಗೊಮ್ಮೆ ನಿಮಗೆ ಈ ವಿಷಯವನ್ನು ಹೇಳಲೇಬೇಕು ಎನಿಸಿದ್ದರೆ ಲೋಕಸಭೆಯಲ್ಲಿ ಹೇಳಬಹುದಿತ್ತು. ಅಲ್ಲೇಕೆ ಹೇಳಲಿಲ್ಲ? ಎಂದೂ ಪ್ರಶ್ನೆ ಮಾಡಿದರು. ಜೂನ್ 2020 ರಲ್ಲಿ ಲಡಾಖ್ನ ಗಾಲ್ವಾನ್ ಕಣಿವೆಯಲ್ಲಿ ಚೀನಾದ ಸೈನಿಕರೊಂದಿಗಿನ ಹಿಂಸಾತ್ಮಕ ಘರ್ಷಣೆಯ ಕುರಿತಾದ ರಾಹುಲ್ ಗಾಂಧಿ ಹೇಳಿಕೆಗೂ ನ್ಯಾಯಮೂರ್ತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ರಾಹುಲ್ ಗಾಂಧಿ ಪರ ನ್ಯಾಯಾಲಯದಲ್ಲಿ ವಕಾಲತು ವಹಿಸಿದ್ದ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಈ ವಿಷಯಗಳನ್ನು ಹೇಳಲು ಸಾಧ್ಯವಾಗದೇ ಇದ್ದರೆ ಅವರು ಪ್ರತಿಪಕ್ಷ ನಾಯಕರಾಗಿರಲು ಹೇಗೆ ಸಾಧ್ಯ? ಎಂದು ಪೀಠವನ್ನು ಪ್ರಶ್ನಿಸಿದರು.

ಪ್ರತಿಪಕ್ಷ ನಾಯಕನಿಗೆ ಹೀಗೆ ದೇಶದ ಸಮಸ್ಯೆಗಳ ಬಗ್ಗೆ ದನಿ ಎತ್ತಲು ಅವಕಾಶವಿಲ್ಲ ಎನ್ನುವುದಾದರೆ ಅದು ದುರದೃಷ್ಟಕರ ಎಂದೂ ಸಿಂಘ್ವಿ ವಾದಿಸಿದರು. ಅದಕ್ಕೆ ನ್ಯಾ.ದತ್ತಾ ಪ್ರತಿಕ್ರಿಯಿಸಿ, ಅರ್ಜಿದಾರರು ಪ್ರತಿಪಕ್ಷದ ನಾಯಕರು, ಸಂಸತ್ತಿನಲ್ಲಿ ಮಾತನಾಡಲಿ. ದೇಶದ ಭದ್ರತೆಗೆ ಸಂಬಂಧಿಸಿದ ವಿಚಾರಗಳನ್ನೆಲ್ಲಾ ಸಾಮಾಜಿಕ ಮಾಧ್ಯಮದಲ್ಲಿ ಏಕೆ ಹೇಳಬೇಕು? ಎಂದು ಬಲು ಕಠಿಣವಾಗಿ ಪ್ರಶ್ನಿಸಿದರು.

ಮಾನಹಾನಿ ದಾವೆ ಹೂಡಿದ್ದು ಯಾರು?

ರಾಹುಲ್ ಗಾಂಧಿ ಮಾತಿನಿಂದ ಭಾರತೀಯ ಸೇನೆಗೆ ಅವಮಾನವಾಗಿದೆ ಎಂದು 'ಬಾರ್ಡರ್ ರೋಡ್ ಆರ್ಗನೈಸೇಷನ್'(ಬಿಆರ್‌ಒ) ಮಾಜಿ ಅಧಿಕಾರಿ ಉದಯಶಂಕರ್ ಶ್ರೀವಾಸ್ತವ್ ಅವರು ಮಾನನಷ್ಟ ದಾವೆ ಹೂಡಿದ್ದಾರೆ. ಈ ಸಂಬಂಧ ಲಖನೌನಲ್ಲಿನ ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ರಾಹುಲ್ ಗಾಂಧಿಗೆ ಸಮನ್ಸ್ ಜಾರಿ ಮಾಡಿದೆ. ಆ ಸಮನ್ಸ್‌ಗೆ ತಡೆ ನೀಡುವಂತೆ ಮತ್ತು ಪ್ರಕರಣ ವಜಾಗೊಳಿಸುವಂತೆ ಕೋರಿ ರಾಹುಲ್ ಗಾಂಧಿ ಮೊದಲಿಗೆ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹಲವು ದಿನಗಳ ವಿಚಾರಣೆ ಬಳಿಕ ಹೈಕೋರ್ಟ್ ರಾಹುಲ್ ಅರ್ಜಿಯನ್ನು ಮೇ ತಿಂಗಳಲ್ಲಿ ತಿರಸ್ಕರಿಸಿತ್ತು. ರಾಹುಲ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಆ ಅರ್ಜಿ ನ್ಯಾಯಮೂರ್ತಿ ದೀಪಂಕರ ದತ್ತ ಮತ್ತು ನ್ಯಾ.ಎ.ಜಿ.ಮಸಿಹ್ ಅವರ ದ್ವಿಸದಸ್ಯ ಪೀಠದಲ್ಲಿ ವಿಚಾರಣೆಗೆ ಬಂದಿದೆ. 2022ರಲ್ಲಿನ ಸಾರ್ವಜನಿಕ ಸಭೆಯಲ್ಲಿ ರಾಹುಲ್, ಪ್ರಧಾನಿ ನರೇಂದ್ರ ಮೋದಿ ಸರಕಾರ ಚೀನಾಗೆ ಶರಣಾಗಿದೆ. 2,000 ಚದರ ಕಿ.ಮೀ. ಭಾರತದ ನೆಲವನ್ನು ಚೀನಾ ಆಕ್ರಮಿಸಿಕೊಂಡಿದೆ ಎಂದು ಟೀಕಿಸಿದ್ದರು. ಪ್ರಧಾನಿ ಮೋದಿ ದೇಶಕ್ಕೆ ಸುಳ್ಳು ಹೇಳುತ್ತಿದ್ದಾರೆ. ಭಾರತದ ಬಲು ವಿಸ್ತಾರವಾದ ಜಾಗವನ್ನು ಚೀನಾ ಅಕ್ರಮಿಸಿಕೊಂಡಿದೆ ಎಂದೂ ರಾಹುಲ್ ಹಲವು ಬಾರಿ ಹೇಳಿದ್ದರು.

ಮಾನಹಾನಿ ಪ್ರಕರಣ ವಿಚಾರಣೆಗೆ ಸದ್ಯ ತಡೆ

ಲಖನೌನಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಡೆಸುತ್ತಿರುವ ಭಾರತೀಯ ಸೇನೆಯ ಮಾನಹಾನಿ ಪ್ರಕರಣದ ವಿಚಾರಣೆಗೆ ಸೋಮವಾರ ತಡೆ ನೀಡಿರುವ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಮುಂದಿನ ವಿಚಾರಣೆಗೆ 3 ವಾರಗಳ ಬಳಿಕ ದಿನ ನಿಗದಿಪಡಿಸಿದೆ. ಅಲ್ಲದೇ, ಉತ್ತರ ಪ್ರದೇಶ ಸರಕಾರ ಮತ್ತು ದೂರುದಾರರಿಗೆ ನೋಟಿಸ್ ಜಾರಿ ಮಾಡಿದೆ.

ಸರ ಕಿತ್ತೆಳೆದಾಗ ಸಂಸದೆ ಕುತ್ತಿಗೆಗೆ ಗಾಯ, ಹರಿದ ಬಟ್ಟೆ

ಜಾಗಿಂಗ್ ವೇಳೆ ಕಾಂಗ್ರೆಸ್ ಸಂಸದೆ ಸರ ಕಿತ್ತೊಯ್ದ!

ದೆಹಲಿ: ಸ್ಕೂಟರ್‌ನಲ್ಲಿ ಎದುರಿನಿಂದ ಬಂದ ಸರಗಳ್ಳನೊಬ್ಬ ಸೋಮವಾರ ಮುಂಜಾನೆ 6.15ರಲ್ಲಿ ಜಾಗಿಂಗ್ ಮಾಡುತ್ತಿದ್ದ ತಮಿಳುನಾಡಿನ ಕಾಂಗ್ರೆಸ್ ಸಂಸದೆಯ ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾ ಗಿದ್ದಾನೆ.

ದೆಹಲಿಯ ಹೈ ಸೆಕ್ಯೂರಿಟಿ (ಅತ್ಯಂತ ಗರಿಷ್ಠ ಭದ್ರತಾ ವ್ಯವಸ್ಥೆ) ವಲಯದಲ್ಲಿ, ಅದೂ ಸಂಸದೆಯೊಬ್ಬರ ಚಿನ್ನದ ಸರ ಹಾಡಹಗಲೇ ಕಳವು ಆಗಿರುವುದು ರಾಷ್ಟ್ರ ರಾಜಧಾನಿಯಲ್ಲಿನ ಭದ್ರತಾ ವ್ಯವಸ್ಥೆ ಬಗ್ಗೆ ಪ್ರಶ್ನೆಯೇಳುವಂತೆ ಮಾಡಿದೆ.

ದೆಹಲಿಯ ಚಾಣಕ್ಯಪುರಿಯಲ್ಲಿನ ತಮಿಳು ನಾಡು ಹೌಸ್‌ನಿಂದ ಮತ್ತೊಬ್ಬ ಸಂಸದೆ ಜತೆ ಜಾಗಿಂಗ್ ಹೋಗಿದ್ದ ಸುಧಾ ಅವರ ಎದುರಿನಿಂದ ಸ್ಕೂಟರ್‌ನಲ್ಲಿ ಬಹಳ ನಿಧಾನಗತಿಯಲ್ಲಿ ಬಂದ ಯುವಕ, ಸಮೀಪಕ್ಕೆ ಬರುತ್ತಲೇ ಸಂಸದೆಯ ಕೊರಳಿಗೆ ಕೈಹಾಕಿ ಚಿನ್ನದ ಸರವನ್ನು ಎಳೆದು ಕಿತ್ತುಕೊಂಡು, ಸ್ಕೂಟರನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಪರಾರಿಯಾಗಿದ್ದಾನೆ. ಸಂಸದೆ ಆರ್.ಸುಧಾ ಅವರ 32 ಗ್ರಾಂ ತೂಕದ ಚಿನ್ನದ ಸರ ಕಳ್ಳನ ಪಾಲಾಗಿದೆ.

ಸರಗಳ್ಳ ಮುಖ ಚೂರೂ ಕಾಣದಂತೆ ಹೆಲ್ಮೆಟ್ ಧರಿಸಿದ್ದ, ಎದುರಿನಿಂದ ನಿಧಾನವಾಗಿ ಸ್ಕೂಟರ್ ಚಲಾಯಿಸಿಕೊಂಡು ಬಂದ. ನನಗೇ ಅವರ ಬಗ್ಗೆ ಅನುಮಾನ ಬಂದಿರಲಿಲ್ಲ. ಹತ್ತಿರ ಬಂದವನೇ ಕೊರಳಿಗೆ ಕೈಹಾಕಿ ಪಟ್ಟನೆ ಸರ ಕಸಿದುಕೊಂಡು ಹೋದ. ಈ ವೇಳೆ ಸುಧಾ ಅವರ ಕುತ್ತಿಗೆಗೆ ಗಾಯಗಳಾಗಿವೆ, ಚೂಡಿದಾರ್ ಹರಿದಿದೆ. ಆದರೆ, ನೆಲಕ್ಕೆ ಬೀಳುವುದರಿಂದ ಸ್ವಲ್ಪದರಲ್ಲಿ ಪಾರಾದೆ ಎಂದು ಸುಧಾ ಹೇಳಿದ್ದಾರೆ.

ಘಟನೆ ಬಹಳ ಆಘಾತ ಉಂಟು ಮಾಡಿದೆ. ದೇಶದ ರಾಜಧಾನಿಯಲ್ಲೇ, ಅದೂ ಅತ್ಯಧಿಕ ಭದ್ರತೆ ಇರುವ ಪ್ರದೇಶದಲ್ಲಿಯೇ ಮಹಿಳೆಯರು ಸುರಕ್ಷಿತವಾಗಿಲ್ಲ ಎಂಬುದು ಮನದಟ್ಟಾಗಿದೆ. ದೇಶದ ಉಳಿದ ಭಾಗಗಳಲ್ಲಿ ಮಹಿಳೆ ಇನ್ನೆಷ್ಟು ಸುರಕ್ಷಿತೆ ಎಂದು ಪ್ರಶ್ನಿಸಬೇಕಾಗಿದೆ ಎಂದು ತಮಿಳುನಾಡಿನ ಮೈಲಾಡುತುರೈ ಕ್ಷೇತ್ರದ ಸಂಸದೆ ಸುಧಾ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಲಿಖಿತ ದೂರು ನೀಡಿ!

ಸರಗಳವು ನಡೆದ ತಕ್ಷಣವೇ ಸಂಸದೆ ಗಸ್ತು ಪೊಲೀಸರಿಗೆ ಕರೆ ಮಾಡಿದರೆ, 'ಘಟನೆ ನಡೆದ ಪ್ರದೇಶದ ವ್ಯಾಪ್ತಿಯ ಠಾಣೆಗೆ ಲಿಖಿತ ದೂರು ನೀಡಿ' ಎಂಬ ಪ್ರತಿಕ್ರಿಯೆ ಬಂದಿದೆ. ಈ ವಿಚಾರವಾಗಿ ಹಾಗೂ ಸರಗಳವು ಬಗ್ಗೆ ಸುಧಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದು ದೂರಿದ್ದಾರೆ. ಭದ್ರತೆ ವಿಚಾರದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಬಳಿಕ ಸಂಸದೆ ಪೊಲೀಸರಿಗೆ ದೂರು ನೀಡಿದ್ದು, ಅಪರಾಧಿಯನ್ನು ಶೀಘ್ರ ಬಂಧಿಸುವಂತೆ ಒತ್ತಾಯಿಸಿದ್ದಾರೆ.

ಸೋದರಳಿಯನಿಗೆ ದೀದಿ ಪಟ್ಟಾಭಿಷೇಕ

ಕೋಲ್ಕತ್ತ: ಲೋಕಸಭೆಯಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಸದನದ ನಾಯಕನಾಗಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸಂಸದ ಅಭಿಷೇಕ್ ಬ್ಯಾನರ್ಜಿ ಅವರನ್ನು ನೇಮಕ ಮಾಡಲಾಗಿದೆ.

ಲೋಕಸಭೆಯಲ್ಲಿ ಟಿಎಂಸಿಯ ಹಲವು ಹಿರಿಯ ನಾಯಕರಿದ್ದರೂ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರನ್ನೇ ಮಮತಾ ಬ್ಯಾನರ್ಜಿ ಪಕ್ಷದ ಸದನ ನಾಯಕನಾಗಿ ನೇಮಕ ಮಾಡಿರುವುದು ಪಕ್ಷದೊಳಗೇ ಚರ್ಚೆ, ಅಸಮಾಧಾನಕ್ಕೆ ಕಾರಣವಾಗಿದೆ ಎಂದು ವರದಿಯಾಗಿದೆ. ಅಭಿಷೇಕ್ ಪ್ರಸ್ತುತ ಲೋಕಸಭೆಗೆ ಮೂರನೇ ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಈವರೆಗೆ ಸದನದಲ್ಲಿ ಟಿಎಂಸಿ ನಾಯಕರಾಗಿದ್ದ ಸುದೀಪ್ ಬಂದೋಪಾಧ್ಯಾಯ ಅವರನ್ನು ಅನಾ ರೋಗ್ಯದ ಕಾರಣ ಸದನದ ನಾಯಕ ಹೊಣೆಗಾರಿಕೆಯಿಂದ ಮುಕ್ತಗೊಳಿಸಲಾಗಿದೆ. ಆ ಸ್ಥಾನಕ್ಕೆ 'ದೀದಿ' ಅವರ ಸೋದರಳಿಯನನ್ನು ತಂದು ಕೂರಿಸಲಾಗಿದೆ.

ಈ ಸಂಬಂಧ ಮುಖ್ಯಮಂತ್ರಿ, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರ ನೇತೃತ್ವದಲ್ಲಿ ವರ್ಚುವಲ್ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲಾಗಿದೆ. ಟಿಎಂಸಿ ಲೋಕಸಭೆಯಲ್ಲಿ ಸದ್ಯ 29 ಸದಸ್ಯರನ್ನು ಹೊಂದಿದೆ. ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯ'ದಲ್ಲಿಯೂ ಪ್ರಮುಖ ಪಾತ್ರ ಹೊಂದಿದೆ.

ಎನ್ನಾರೈ ಸಾಲಿಸಿಟರ್‌ಗೆ ಜನಾಂಗೀಯ ನಿಂದನೆ

ವಾಷಿಂಗ್ಟನ್: ಭಾರತ ಮೂಲದ ನ್ಯಾಯವಾದಿ ಮಧುರಾ ಶ್ರೀಧರನ್ ಅವರು ಅಮೆರಿಕದ ಒಹಿಯೊ ರಾಜ್ಯದ 12ನೇ ಸಾಲಿಸಿ ಟರ್ ಜನರಲ್ ಆಗಿ ನೇಮಕ ಗೊಂಡಿ ದ್ದಾರೆ. ಅಟಾರ್ನಿ ಜನ ರಲ್ ಡೇವ್ ಯೋಸ್ಟ್ ಅವರು ನೇಮಕ ಆದೇಶ ಹೊರಡಿಸಿದ್ದಾರೆ.



ಮಧುರಾ ನೇಮಕ ಸುದ್ದಿ ಅವರ ಚಿತ್ರ ಸಮೇತ ಪ್ರಕಟಗೊಂಡ ಬಳಿಕ, ಅವರ ಹಣೆಯಲ್ಲಿನ ಬಿಂದಿ ಗುರಿಯಾಗಿಸಿ ನಿಂದನೆ ಗಳನ್ನು ಹರಿಬಿಡಲಾಗಿದೆ, ಸಂಪ್ರದಾಯವಾದಿ ಭಾರತೀಯರು ಎಂದು ಮಧುರಾ ಅವರನ್ನು ಟ್ರೋಲ್ ಮಾಡಲಾಗುತ್ತಿದೆ.

ಪ್ರಮುಖ ಹುದ್ದೆಗೆ ಅಮೆರಿಕದವರನ್ನೇಕೆ ಆಯ್ಕೆ ಮಾಡಲಿಲ್ಲ? ಎಂದೂ ಕೆಲವು ನೆಟ್ಟಿಗರು ಪ್ರಶ್ನಿಸಿದ್ದಾರೆ. ಮಧುರಾ ಪ್ರತಿಭಾವಂತೆ. ಹಾ ಗಾಗಿ, ಆಕೆಯನ್ನು 12ನೇ ಸಾಲಿಸಿಟರ್ ಜನರಲ್ ಆಗಿ ನೇಮಕ ಮಾಡಲಾಗಿದೆ. ಅವರು ಒಹಿಯೊ ದಲ್ಲಿ ಉತ್ತಮ ಸೇವೆ ಸಲ್ಲಿಸಲಿದ್ದಾರೆ. ಮಧುರಾ ಅಮೆರಿಕದವರಲ್ಲ ಎಂದು ಕೆಲವರು ಟೀಕಿಸುತ್ತಿ ದ್ದಾರೆ. ಈಗ ಆಕೆ ಅಮೆರಿಕ ಪ್ರಜೆ. ಅಮೆರಿಕನ್ ಪ್ರಜೆಯನ್ನೇ ಮದುವೆಯಾಗಿದ್ದಾರೆ. ಮಧುರಾ ಹೆಸರು ನಿಮಗೆ ತೊಂದರೆ ಮಾಡುತ್ತಿದ್ದರೆ ಅದು ನಿಮ್ಮ ಸಮಸ್ಯೆ ಎಂದು ಡೇವ್ 'ಎಕ್ಸ್'ನಲ್ಲಿ ವಿವರಿಸಿದ್ದಾರೆ.

ಜಾರ್ಖಂಡ್ ಮಾಜಿ ಸಿಎಂ ಶಿಬು ಸೊರೇನ್ ನಿಧನ

ರಾಂಚಿ: ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ (81) ಸೋಮವಾರ ದೆಹಲಿಯ ಗಂಗಾರಾಮ್ ಆಸ್ಪತ್ರೆಯಲ್ಲಿ ಅಸು ನೀಗಿದರು.

ಶಿಬು ಸೊರೇನ್ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷದ ಸಂಸ್ಥಾಪಕರು. ಪ್ರಸ್ತುತ ರಾಜ್ಯಸಭಾ ಸಂಸದರಾಗಿ ಕಾರ್ಯನಿರ್ವಹಿಸಿದ್ದರು.

ಶಿಬು ಸೊರೇನ್ ಅವರನ್ನು ಜುಲೈನಲ್ಲಿ ಮೂತ್ರಪಿಂಡ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಕಾರಣ ವೆಂಟಿಲೇಟರ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಪತ್ನಿ ರೂಪಿ ಸೊರೇನ್, ಮಕ್ಕಳಾದ ಸಮಾಜ ಸೇವಕಿ ಅಂಜಲಿ ಸೊರೇನ್, ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಜೆಎಂಎಂ ಯುವ ವಿಭಾಗ ಮುಖ್ಯಸ್ಥ ಬಸಂತ್ ಸೊರೇನ್ ಇದ್ದಾರೆ.

ಶಿಬು ಸೊರೇನ್ ಬಾಲ್ಯ: ಶಿಬು ಸೊರೇನ್ 1944ರ ಜ.11ರಂದು ಅವಿಭಜಿತ ಬಿಹಾರದ (ಈಗ ಜಾರ್ಖಂಡ್) ರಾಮಗಢ ಜಿಲ್ಲೆಯ ಹಜಾರಿಬಾಗ್‌ನಲ್ಲಿ ಜನಿಸಿದರು. ರಾಜಕೀಯ ಪ್ರವೇಶ ಆರಂಭದ ದಿನಗಳಲ್ಲಿ ಅವರು ಬುಡಕಟ್ಟು ಜನಾಂಗದವರ ಶೋಷಣೆ ವಿರುದ್ಧ ಹೋರಾಡಿದರು. 70 ರ ದಶಕದಲ್ಲಿ ಧಂಕಟ್ನಿ ಆಂದೋಲನ' ಮತ್ತು ಇತರ ಚಳವಳಿಗಳ ಮೂಲಕ ಬುಡಕಟ್ಟು ಸಮಾಜದ ಧ್ವನಿಯಾದರು. ಹಾಗಾಗಿ ಅವರನ್ನು ಜಾರ್ಖಂಡ್ ಜನತೆ 'ದಿಶೋಮ್ ಗುರು' ಮತ್ತು 'ಗುರೂಜಿ' ಎಂದೇ ಕರೆಯುತ್ತಿದ್ದರು.

ರಾಜಕೀಯ ಜೀವನ: ತಂದೆ ಶೋಭ್ರಾಮ್ ಸೊರೇನ್ ಅವರ ಹತ್ಯೆಯ ನಂತರ ಶಿಬು ಸೊರೇನ್ ರಾಜಕೀಯ ಪ್ರವೇಶಿಸಿದರು. ಬಿಹಾರದಿಂದ ಪ್ರತ್ಯೇಕಗೊಂಡು ಜಾರ್ಖಂಡ್ ರಾಜ್ಯ ರಚಿಸುವ ಚಳವಳಿಯಲ್ಲಿ ಶಿಬು ಅವರದು ನಿರ್ಣಾಯಕ ಪಾತ್ರ. ಅವರು ಮೂರು ಬಾರಿ (2005, 2008, 2009) ಜಾರ್ಖಂಡ್ ಮುಖ್ಯಮಂತ್ರಿಯಾದರು. ಆದರೆ ಒಮ್ಮೆಯೂ ಅವರಿಗೆ ಅಧಿಕಾರದ ಅವಧಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

ಶಿಬು 1977ರಲ್ಲಿ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರು, ಆದರೆ ಸೋಲನ್ನು ಎದುರಿಸಬೇಕಾಯಿತು. ಆದರೆ ಅವರು 1980 ರಲ್ಲಿ ಯಶಸ್ವಿಯಾದರು. ಇದಾದ ನಂತರ, ಅವರು 1986, 1989, 1991, 1996 ರಲ್ಲಿ ಚುನಾವಣೆಗಳಲ್ಲಿ ಗೆದ್ದರು. 2004 ರಲ್ಲಿ, ಅವರು ದುಮ್ಕಾದಿಂದ ಲೋಕಸಭೆಗೆ ಆಯ್ಕೆಯಾದರು. ಯುಪಿಎ ಸರಕಾರದ ಮೊದಲ ಅವಧಿಯಲ್ಲಿ ಶಿಬು ಸೊರೇನ್ ಕಲ್ಲಿದ್ದಲು ಸಚಿವರಾದರು. ಆದರೆ ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಜಾರ್ಖಂಡ್ ಮುಖ್ಯಮಂತ್ರಿಯೂ ಆದರು. ಈಗ ಅವರ ಮಗ ಹೇಮಂತ್ ಸೊರೇನ್ ಜಾರ್ಖಂಡ್ ಮುಖ್ಯಮಂತ್ರಿಯಾಗಿದ್ದಾರೆ.



ಜಾರ್ಖಂಡ್ ಮಾಜಿ ಮುಖ್ಯಮಂತ್ರಿ, ದೇಶದ ಹಿರಿಯ ರಾಜಕೀಯ ನಾಯಕರಲ್ಲೊಬ್ಬರಾದ ಶಿಬು ಸೊರೇನ್ ಸಮಾಜದ ದುರ್ಬಲ ವರ್ಗಗಳ, ವಿಶೇಷವಾಗಿ ಬುಡಕಟ್ಟು ಸಮಾಜದ ಹಕ್ಕುಗಳು ಮತ್ತು ಸಬಲೀಕರಣಕ್ಕಾಗಿ ಜೀವಮಾನವಿಡೀ ಹೋರಾಡಿದರು. ಜಾರ್ಖಂಡ್ ರಾಜ್ಯದ ಧೀಮಂತ ನಾಯಕ. ಅವರ ದೀರ್ಘ ಪರಿಚಯವಿತ್ತು. ಅವರ ನಿಧನದಿಂದ ನನಗೆ ತೀವ್ರ ದುಃಖವಾಗಿದೆ.

-ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಜಾರ್ಖಂಡ್ ಮಾಜಿ ಮುಖ್ಯಮಂತ್ರಿ, ಜೆಎಂಎಂ ಪಕ್ಷದ ಸ್ಥಾಪಕ ಶಿಬು ಸೊರೇನ್ ನಿಧನ ತುಂಬಲಾರದ ನಷ್ಟ. ಶಿಬು ಸೊರೇನ್ ಬುಡಕಟ್ಟು ಸಮುದಾಯದ ಕಲ್ಯಾಣಕ್ಕಾಗಿ ಜೀವನ ಮೀಸಲಿಟ್ಟಿದ್ದರು. ಸಾರ್ವಜನಿಕ ಜೀವನ ಶ್ರೇಣಿಯಲ್ಲಿ ಮೇಲೆರಿದ ತಳಮಟ್ಟದ ನಾಯಕರಾಗಿದ್ದರು. ಬುಡಕಟ್ಟು ಸಮುದಾಯಗಳು, ಬಡವರು ಮತ್ತು ದೀನದಲಿತರನ್ನು ಸಬಲೀಕರಣಗೊಳಿಸುವ ಬಗ್ಗೆ ಅವರು ವಿಶೇಷವಾಗಿ ಉತ್ಸುಕರಾಗಿದ್ದರು. ನಿಧನ ಸುದ್ದಿ ತಿಳಿಯುತ್ತಲೆ ದೆಹಲಿಯ ಗಂಗಾರಾಮ್ ಆಸ್ಪತ್ರೆಗೆ ತೆರಳಿ ಶಿಬು ಸೊರೇನ್ ಅವರಿಗೆ ಅಂತಿಮ ನಮನ ಸಲ್ಲಿಸಿದೆ. ಪುತ್ರ ಹೇಮಂತ್ ಸೊರೇನ್ ಅವರಿಗೆ ಸಮಾಧಾನ ಹೇಳಿದೆ.

-ನರೇಂದ್ರ ಮೋದಿ ಪ್ರಧಾನಿ

ನಕಲಿ ಗುರುತಿನ ಶಂಕೆ: ತನಿಖೆಗೆ ಚು.ಆಯೋಗ ಆದೇಶ

2 ಮತದಾರ ಚೀಟಿ: ತೇಜಸ್ವಿಗೆ ನೋಟಿಸ್

ಪಟನಾ: 'ಆ.1ರಂದು ಚುನಾವಣಾ ಆಯೋಗ ಪ್ರಕಟಿಸಿರುವ ಪರಿಷ್ಕೃತ ಮತದಾರರ ಪಟ್ಟಿಯ ಕರಡು ಪ್ರತಿಯಲ್ಲಿ ನನ್ನ ಹೆಸರೇ ಇಲ್ಲವಾಗಿದೆ' ಎಂದು ಸುದ್ದಿಗೋಷ್ಠಿ ನಡೆಸಿದ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದ್ದ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ನಾಯಕ, ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್‌ಗೆ ಈಗ ಹೊಸ ಸಂಕಷ್ಟ ಎದುರಾಗಿದೆ.

ಅವರು ಎರಡು ಬೇರೆ ಬೇರೆ ಸಂಖ್ಯೆಗಳ ಮತದಾರರ ಗುರುತಿನ ಚೀಟಿಗಳನ್ನು(ಎಪಿಕ್ ಕಾರ್ಡ್) ಹೊಂದಿದ್ದಾರೆ ಎಂದು ದೂಷಿಸಿರುವ ಚುನಾವಣಾ ಆಯೋಗ, ತೇಜಸ್ವಿ ಯಾದವ್‌ಗೆ ಸೋಮವಾರ ನೋಟಿಸ್ ಜಾರಿ ಮಾಡಿದೆ. ನಿಗದಿತ ಅವಧಿಯೊಳಗೆ ಲಿಖಿತ ಸ್ಪಷ್ಟೀಕರಣ ನೀಡುವಂತೆಯೂ ಸೂಚನೆ ನೀಡಿದೆ.

ತೇಜಸ್ವಿ ಯಾದವ್ ಅವರ ಹೆಸರಿನಲ್ಲಿ ಆರ್‌ಎಬಿ0456228 ಮತ್ತು ಆರ್‌ಎಬಿ2916120 ಸಂಖ್ಯೆಯ 2 'ಮತದಾರರ ಗುರುತಿನ ಚೀಟಿ' ಇರುವುದು ದೃಢಪಟ್ಟಿದೆ. ಮೊದಲಿನ ಸಂಖ್ಯೆಯನ್ನು 2020ರಲ್ಲಿ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದಾಗ ತೇಜಸ್ವಿ ನಮೂದಿಸಿದ್ದಾರೆ. 2015ರ ಮತದಾರರ ಪಟ್ಟಿಯಲ್ಲಿಯೂ ಆ 'ಎಪಿಕ್' ಕಾರ್ಡ್ ದಾಖಲಾಗಿದೆ, ಆದರೆ 2ನೇ ಸಂಖ್ಯೆ ಚುನಾವಣಾ ಆಯೋಗದಲ್ಲಿ ಅಸ್ತಿತ್ವದಲ್ಲಿಯೇ ಇಲ್ಲ ಎಂಬುದು ಪರಿಶೋಧನೆ ವೇಳೆ ಕಂಡುಬಂದಿದೆ. ಈ 2ನೇ ಎಪಿಕ್ ಕಾರ್ಡ್ ನಕಲಿ ಆಗಿರಬಹುದು ಎಂದು ಚುನಾವಣಾ ಆಯೋಗ ಶಂಕಿಸಿದೆ. ಅದನ್ನು ದೃಢಪಡಿಸಲು ತನಿಖೆ ನಡೆಸುವುದಕ್ಕೂ ಆಯೋಗ ಆದೇಶಿಸಿದೆ. ಈ ಸಂಬಂಧ ತನಿಖೆಗೆ ಅನುಕೂಲವಾಗಲು ತೇಜಸ್ವಿ ಅವರು ಗುರುತು ಚೀಟಿಗಳನ್ನು ಆಯೋಗಕ್ಕೆ ಒಪ್ಪಿಸುವಂತೆಯೂ ಸೂಚಿಸಿದೆ.

ಬಿಹಾರದ ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದ ಲೈಬ್ರರಿ ಕಟ್ಟಡದ ಮತದಾನ ಕೇಂದ್ರ, 204ರಲ್ಲಿ ಸರಣಿ ಸಂಖ್ಯೆ 416ರಲ್ಲಿ ಪ್ರಸಕ್ತ ತೇಜಸ್ವಿ ಯಾದವ್ ಅವರ ಹೆಸರಿದೆ. ಈ ಹಿಂದೆ ಮತದಾನ ಕೇಂದ್ರ 171ರ ಸರಣಿ ಸಂಖ್ಯೆ 481ರಲ್ಲಿಯೂ ಅವರ ಹೆಸರು ಇತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ.

ಅಡೆನ್ ಕೊಲ್ಲಿಯಲ್ಲಿ ಯೆಮೆನ್ ದೋಣಿ ದುರಂತ: 49 ಜನ ನಾಪತ್ತೆ

ದೋಣಿ ಮುಳುಗಿ 76 ವಲಸಿಗರು ಸಾವು

ಸನಾ: ಯೆಮೆನ್ ಕರಾವಳಿಯ ದಕ್ಷಿಣ ಪ್ರಾಂತ್ಯದ ಅಬ್ಯಾನ್ನ ಅಡೆನ್ ಕೊಲ್ಲಿಯಲ್ಲಿ ಭಾನುವಾರ ಮುಂಜಾನೆ ದೋಣಿ ದುರಂತ ಸಂಭವಿಸಿ 76 ಜನರು ಜಲಸಮಾಧಿಯಾಗಿದ್ದಾರೆ.

157 ವಲಸಿಗರು ಪ್ರಯಾಣಿಸುತ್ತಿದ್ದ ದೋಣಿ ಮುಳುಗಡೆಯಾಗಿದೆ. ರಕ್ಷಣಾ ತಂಡಗಳು ಭಾರೀ ಶ್ರಮಪಟ್ಟು 32 ಜನರನ್ನು ರಕ್ಷಿಸಿವೆ. ಬದುಕುಳಿದವರಲ್ಲಿ 9 ಮಂದಿ ಇಥಿಯೋಪಿಯನ್ ಪ್ರಜೆಗಳು ಮತ್ತು ಒಬ್ಬ ಯೆಮೆನ್ ಪ್ರಜೆ. ದೋಣಿಯಲ್ಲಿದ್ದವರಲ್ಲಿ 49 ಮಂದಿ ನಾಪತ್ತೆಯಾಗಿದ್ದು ರಕ್ಷಣಾ ತಂಡಗಳು ಹುಡುಕಾಟ ನಡೆಸುತ್ತಿವೆ ಎಂದು ಪ್ರಾಂತ್ಯದ ಆರೋಗ್ಯ ಅಧಿಕಾರಿ ಅಬ್ದುಲ್ ಖಾದಿರ್ ಬಜಮೀಲ್ ಹೇಳಿದ್ದಾರೆ.

ಇದು ವಿಶ್ವದ ಅತ್ಯಂತ ಅಪಾಯಕಾರಿ ವಲಸೆ ಮಾರ್ಗವಾಗಿದೆ. ಆಫ್ರಿಕಾದ ಕೊಂಬು ಮತ್ತು ಯೆಮೆನ್ ನಡುವಿನ ಸಮುದ್ರ ಮಾರ್ಗದ ಅಪಾಯಗಳ ಬಗ್ಗೆ ಅಂತಾರಾಷ್ಟ್ರೀಯ ವಲಸೆ ಸಂಸ್ಥೆ(ಐಒಎಂ) ಪದೇ ಪದೇ ಎಚ್ಚರಿಸಿದರೂ ಜನರ ಲೆಕ್ಕಿಸುತ್ತಿಲ್ಲ. ಇಥಿಯೋಪಿಯ ಮತ್ತು ಸೊಮಾಲಿಯ ವಲಸಿಗರು, ಸೌದಿ ಅರೇಬಿಯ ಮತ್ತಿತರ ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಹುಡುಕಿಕೊಂಡು ಈ ಮಾರ್ಗದಲ್ಲೇ ಸಂಚರಿಸುತ್ತಾರೆ ಎಂದು ಐಒಎಂ ವಿಷಾದ ವ್ಯಕ್ತಪಡಿಸಿದೆ.

2024ರಲ್ಲಿ 60,000ಕ್ಕೂ ಹೆಚ್ಚು ವಲಸಿಗರು ಯೆಮೆನ್ ದಾಟಲು ಇದೇ ಮಾರ್ಗದಲ್ಲಿ ಪ್ರಾಣವನ್ನೇ ಪಣಕ್ಕಿಟ್ಟು ಸಂಚರಿಸಿದ್ದಾರೆ. ಅವರಲ್ಲಿ 558 ಜನರು ಈ ಮಾರ್ಗದಲ್ಲಿಯೇ ಸಾವನ್ನಪ್ಪಿದ್ದಾರೆ. ಕಳೆದೊಂದು ದಶಕದಲ್ಲಿ ಈ ಮಾರ್ಗದಲ್ಲಿ ಸಂಚರಿಸುವಾಗ 2,082 ವಲಸಿಗರು ಕಾಣೆಯಾಗಿದ್ದಾರೆ. 693 ಜನರು ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

2014ರಲ್ಲಿ ಯೆಮೆನ್ ದೇಶದಲ್ಲಿ ಅಂತರಿಕ ಸಂಘರ್ಷ ಶುರುವಾದಾಗಿನಿಂದ ಸಾವಿರಾರು ವಲಸಿಗರು ಯೆಮೆನ್ ಪ್ರವೇಶಿಸಿದ್ದಾರೆ. ಸದ್ಯ 3.80 ಲಕ್ಷ ಯೆಮೆನ್ ನಿರಾಶ್ರಿತರು, ವಲಸಿಗರು ಯೆಮೆನ್‌ನಲ್ಲಿದ್ದಾರೆ ಎಂದು ವರದಿಯಾಗಿದೆ.

ಬಿಹಾರ: ಯಾವುದೇ ಪಕ್ಷ ತಿದ್ದುಪಡಿ ಕೇಳಿಲ್ಲ



416 RAB0456228
निर्वाचक का नाम : तेजस्वी प्रसाद यादव
पिता का नाम:: लालू प्रसाद
मकान संख्या : 110
उम्र : 36 लिंग: : पुरुष

ದೆಹಲಿ: ಆ.1ರಂದು ಪ್ರಕಟಿಸಲಾದ ಕರಡು ಮತದಾರರ ಪಟ್ಟಿಗೆ ಹೆಸರು ಸೇರಿಸಲಾಗಲೀ ಅಥವಾ ಪಟ್ಟಿಯಿಂದ ಹೆಸರು ತೆಗೆಸುವುದಕ್ಕಾಗಲೀ ಬಿಹಾರದ ಯಾವುದೇ ರಾಜಕೀಯ ಪಕ್ಷ ಈವರೆಗೂ ತಮ್ಮನ್ನು ಸಂಪರ್ಕಿಸಿಲ್ಲ, ತಿದ್ದುಪಡಿ ಕೋರಿ ಅರ್ಜಿಯನ್ನೂ ಕೊಟ್ಟಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ. ಆದರೆ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮತ್ತು ಕೆಲವು ಅನರ್ಹರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲು ನಾಗರಿಕರಿಂದ 941 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ತಿದ್ದುಪಡಿಗೆ ಅರ್ಜಿ ಸಲ್ಲಿಸಲು ಸೆ.1ರವರೆಗೂ ಅವಕಾಶವಿದೆ ಎಂದು ಆಯೋಗ ಹೇಳಿದೆ. ಬಿಹಾರದಲ್ಲಿನ ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಕಿಡಿಕಾರುತ್ತಿರುವ ಪ್ರತಿಪಕ್ಷಗಳು, ಲಕ್ಷಾಂತರ ಅರ್ಹರಿಗೆ ಮತದಾನ ಹಕ್ಕು ನಿರಾಕರಿಸಲಾಗುತ್ತಿದೆ ಎಂದು ಆರೋಪಿಸುತ್ತಿವೆ.

ಬಿಜೆಪಿ ಆಡಳಿತದ ಮ.ಪ್ರ: ಲವ್ ಜಿಹಾದ್-ಕೊಲೆ!

ಭೋಪಾಲ್: ಮಧ್ಯಪ್ರದೇಶದಲ್ಲಿ ಮತ್ತೊಂದು ಲವ್ ಜಿಹಾದ್ ಹತ್ಯೆಯಾಗಿದೆ. ಧರ್ಮಾಂತರ ಮತ್ತು ಮದುವೆಗೆ ಒಪ್ಪದ ಯುವತಿಯನ್ನು ಅನ್ಯಧರ್ಮೀಯ ಹುಚ್ಚುಪ್ರೇಮಿಯೊಬ್ಬ ಕತ್ತು ಸೀಳಿ ಕೊಲೆ ಮಾಡಿದ್ದಾನೆ.

ನೇಪಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ನವರಾದಲ್ಲಿ ಶೇಖ್ ರಯೀಸ್(42) ಎಂಬಾತ ಭಾಗ್ಯಶ್ರೀ ನಾಮದೇವ್ ಧನುಕ್ ಎಂಬಾಕೆಯನ್ನು ಇಸ್ಲಾಂಗೆ ಮತಾಂತರವಾಗಿ ತನ್ನನ್ನು ವರಿಸುವಂತೆ ಒತ್ತಡ ಹಾಕಿದ್ದಾನೆ. ಆಕೆ ನಿರಾಕರಿಸಿದ್ದಕ್ಕೆ ಆಕೆಯ ಮನೆಗೇ ನುಗ್ಗಿ ಕತ್ತು ಸೀಳಿ, ಹಲವು ಬಾರಿ ಇರಿದಿದ್ದಾನೆ. ತೀವ್ರ ರಕ್ತಸ್ರಾವದಿಂದಾಗಿ ಭಾಗ್ಯಶ್ರೀ ಸ್ಥಳದಲ್ಲೇ ಅಸುನೀಗಿದ್ದಾಳೆ.

ಮತಾಂತರಗೊಂಡು ಮದುವೆಯಾಗುವಂತೆ ತುಂಬಾ ದಿನಗಳಿಂದ ಅಕ್ಕನನ್ನು ಒತ್ತಾಯಿಸುತ್ತಿದ್ದ. ಆಕೆ ಒಪ್ಪಿರಲಿಲ್ಲ. ರಯೀಸ್ ಅಕ್ಕನ ಕೂದಲು ಹಿಡಿದೆಳೆದು ಹೊಡೆಯುತ್ತಿದ್ದ. ಬಹಳ ಕಿರುಕುಳ ನೀಡುತ್ತಿದ್ದ. ಕೊನೆಗೆ ಭಾನುವಾರ ರಾತ್ರಿ ಮನೆಗೇ ನುಗ್ಗಿ ಕತ್ತು ಸೀಳಿ ಕೊಲೆ ಮಾಡಿದ್ದಾನೆ ಎಂದು ಭಾಗ್ಯಶ್ರೀ ಸೋದರಿ ಸುಭದ್ರಾ ಬಾಯಿ ಆರೋಪಿಸಿದ್ದಾಳೆ.

ಸುದ್ದಿ ತಿಳಿಯುತ್ತಲೇ ಕಾರ್ಯೋನ್ಮುಖರಾದ ಪೊಲೀಸರು, ಕೆಲವೇ ಗಂಟೆಗಳಲ್ಲಿ ಆರೋಪಿ ಶೇಖ್ ರಯೀಸ್‌ನನ್ನು ಬಂಧಿಸಿ, ಕೊಲೆ ಮತ್ತು ಮತಾಂತರಕ್ಕೆ ಒತ್ತಾಯ, ದೌರ್ಜನ್ಯ ಆರೋಪಗಳಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.

ಈ ಘಟನೆ ಹಿಂದೂ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ. ಲವ್ ಜಿಹಾದ್ ಕೊಲೆ ಎಂದು ಕರೆದಿರುವ ಹಿಂದೂಪರ ಸಂಘಟನೆಗಳು ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿವೆ.

ರಷ್ಯಾ ಸಮರಕ್ಕೆ ಭಾರತ ಹಣ: ಟ್ರಂಪ್‌ನ ಆಪ್ತ

ವಾಷಿಂಗ್ಟನ್: ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಒತ್ತಡ ಹಾಕಿದ್ದರೂ ಭಾರತ ಲೆಕ್ಕಿಸಿಲ್ಲ. ಬದಲಾಗಿ ತೈಲ ಖರೀದಿ ಮುಂದುವ ರೆಸುತ್ತಾ ರಷ್ಯಾಕ್ಕೆ ಯುದ್ಧಕ್ಕೆ ಅನುಕೂಲ ವಾಗಲೆಂದು ಹಣ ಸಿಗುವಂತೆ ಮಾಡುತ್ತಿದೆ ಎಂದು ಟ್ರಂಪ್ ಆಪ್ತ ಸಲಹೆಗಾರ ಸ್ಟೀಫನ್ ಮಿಲ್ಲರ್ ಆರೋಪಿಸಿದ್ದಾರೆ.

ಉಕ್ರೇನ್ ವಿರುದ್ಧ ಯುದ್ಧ ನಡೆಸುತ್ತಿರುವ ರಷ್ಯಾ ದೇಶಕ್ಕೆ ಭಾರತ ಹಣ ಪೂರೈಸುತ್ತಿರುವುದು ಸ್ವೀಕಾರಾರ್ಹವಲ್ಲ ಎಂದು ಶ್ವೇತಭವನದ ಸಿಬ್ಬಂದಿ ಉಪ ಮುಖ್ಯಸ್ಥ ಮತ್ತು ಟ್ರಂಪ್‌ರ ಪ್ರಭಾವಿ ಸಹಾಯಕ ಸ್ಟೀಫನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ರಷ್ಯಾದಿಂದ ತೈಲ ಖರೀದಿಸುವ ಭಾರತ ಬೇರೊಂದು ರೂಪದಲ್ಲಿ ಚೀನಾ ಜತೆಗೂ ಸಂಬಂಧ ಹೊಂದಿದೆ. ಈ ವಿಚಾರ ತಿಳಿದರೆ ಭಾರತೀಯರು ಆಘಾತಕ್ಕೆ ಒಳಗಾಗುತ್ತಾರೆ ಎಂದು ಫಾಕ್ಸ್ ನ್ಯೂಸ್ ಸಂದರ್ಶನದಲ್ಲಿ ಮಿಲ್ಲರ್ ಹೇಳಿದ್ದಾರೆ. ಈ ಬಗ್ಗೆ ವಾಷಿಂಗ್ಟನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಸ್ಟೀಫನ್ ಟೀಕೆಗೆ ಅಮೆರಿಕದ ಪ್ರಮುಖ ಪಾಲುದಾರ ರಾಷ್ಟ್ರವಾದ ಭಾರತದಲ್ಲಿ ತೀವ್ರ ಖಂಡನೆ ವ್ಯಕ್ತವಾಗಿದೆ. ಅಮೆರಿಕದ ಒತ್ತಡ, ವಿರೋಧವಿದ್ದರೂ ಮಾಸ್ಕೊದಿಂದ ಕಚ್ಚಾತೈಲ ಖರೀದಿ ಮುಂದುವರಿಯಲಿದೆ ಎಂದು ಭಾರತ ಸರಕಾರದ ಮೂಲಗಳು ಪ್ರತಿಕ್ರಿಯಿಸಿವೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಆರಾಮ

ವಿಶ್ವವಾಣಿ
@vishwavaninews
05-08-2025
ಮಂಗಳವಾರ

ಚಿತ್ತವಿಹಾರ

ದ್ವಂದ್ವಗಳನ್ನು ದೂರವಿಡೋಣ

• ವಿದ್ಯಾಶಂಕರ ಶರ್ಮ

ಬದುಕಿನಲ್ಲಿ ಕೆಲವು ಆದರ್ಶಗಳು, ನಿಯಮಗಳು ಇದ್ದರೆ ಉತ್ತಮ. ಅವು ನಮ್ಮಿಂದ ಆಗಬಹುದಾದ ತಪ್ಪುಗಳನ್ನು ಬಹು ಮಟ್ಟಿಗೆ ಕಡಿಮೆ ಮಾಡುತ್ತವೆ. ಆದರೆ ನಮ್ಮ ಯಾವುದೇ ನೀತಿ ನಿಯಮಗಳು ಒಂದೇ ಬಗೆಯಾಗಿರಬೇಕು, ಅಂದರೆ ನಮ್ಮ ಅನುಕೂಲಕ್ಕೆ ತಕ್ಕಂತೆ ಅವು ಬದಲಾಗಬಾರದು. ಇಲ್ಲದಿದ್ದರೆ ಆ ನಿಯಮಗಳು ಇದ್ದರೆಷ್ಟು ಬಿಟ್ಟರೆಷ್ಟು ಅಲ್ಲವೇ? ಅವುಗಳನ್ನು ನಾವು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ನಾವು ನಮ್ಮ ದಾರಿಯಲ್ಲಿ ಎಡವುತ್ತಲೇ ಇರುತ್ತೇವೆ. ಅವುಗಳ ಪಾಲನೆಗೆ ಅಡ್ಡ ಆತಂಕಗಳು ಬರಬಹುದು, ಆದರೆ ಅವುಗಳನ್ನು ನಾವು ದಾಟಿದಾಗ ಮಾತ್ರ ನಾವು ಇಟ್ಟುಕೊಂಡ ಆದರ್ಶಗಳಿಗೆ ಒಂದು ಅರ್ಥವಿರುತ್ತದೆ.

ನಮ್ಮ ಬದುಕೆಂಬುದು ಏರಿಳಿತಗಳಿಂದ ಕೂಡಿದ ಮಹಾ ಸಾಗರ. ಒಮ್ಮೆ ಉಬ್ಬರವಿದ್ದರೆ ಇನ್ನೊಮ್ಮೆ ಇಳಿತವಿರುತ್ತದೆ. ನಮ್ಮ ನೀತಿ ನಿಯಮಗಳ ಸತ್ವ ಪರೀಕ್ಷೆ ನಡೆಯುವುದೇ ಈ ಉಬ್ಬರ ಮತ್ತು ಇಳಿತಗಳಿಂದ. ಇಂತಹ ಕಠಿಣ ಸವಾಲುಗಳು ನಮ್ಮೆದುರು ನಿಂತಾಗ ಬಹಳ ಸಲ ನಾವೊಂದು ಇಬ್ಬಗೆಯ ನೀತಿಯನ್ನು ಅನುಸರಿಸುವುದುಂಟು. ಬದುಕಿನ ಸಾಗರದಲ್ಲಿ ಪ್ರಶಾಂತತೆಯು ಮೆರೆಯುತ್ತಿರುವಾಗ ನಾವು ಅದು ನಮ್ಮ ಶ್ರಮದ ಫಲ ಎಂಬ ಅಹಂಗೆ ಒಳಗಾಗಿ, ಅಂತಹ ಸುಖ ಪಯಣದ ಮಾಲೀಕರು ನಾವೇ ಎಂದುಕೊಳ್ಳುತ್ತೇವೆ. ಆ ಭಾವವನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತ ಸಂತಸ ಪಡುತ್ತೇವೆ. ನಮ್ಮ ಯಶಸ್ಸನ್ನು ಬೇರೆಯವರಿಗೆ ಮಾದರಿ ಎಂಬಂತೆ ಪ್ರದರ್ಶಿಸಲು ಹಾತೊರೆಯುತ್ತೇವೆ. ನಮ್ಮ ದ್ವಂದ್ವವು

ಅನಾವರಣವಾಗುವುದು ಈ ಸುಂದರ ಪಯಣವು ಉಬ್ಬರಗಳಿಂದ ಅಲುಗಾಡಿದಾಗ, ನಾವೆಯ ದಿಕ್ಸೂಚಿ ತಪ್ಪಿದಾಗ. ಇಲ್ಲಿಯವರೆಗೆ ಶಾಂತ ಸಾಗರಕ್ಕೆ ವಾರಸುದಾರರಂತೆ ಅಬ್ಬರಿಸಿದ ನಾವುಗಳು, ಜೀವನ ನೌಕೆಯು ಗತಿ ತಪ್ಪಿದಾಗ ಅದಕ್ಕೆ ಹಣೆಬರಹ, ಪ್ರಾರಬ್ಧ, ದೈವನಿಯಮ ಎಂಬ ಅನೇಕ ಯಜಮಾನರನ್ನು ನಮ್ಮ ವಿಫಲತೆಗೆ ಹೊಣೆಗಾರರನ್ನಾಗಿ ಮಾಡುತ್ತೇವೆ. ಈ ಪರಿಯ ದ್ವಂದ್ವ ಸರಿಯೇ? ನಮ್ಮನ್ನು ನಾವು ಕೇಳಿಕೊಳ್ಳಬೇಕು. ಸುಖ ಸಂತೋಷಗಳಿಗೆ ನಾವೇ ಒಡೆಯರು, ದುಃಖ ದುಮ್ಮಾನಗಳು ಅಗೋಚರ ಶಕ್ತಿಯ ಆಯುಧಗಳು! ಇದೇ ದ್ವಂದ್ವ ಅಲ್ಲವೆ?

ನಿಜದಲ್ಲಿ ಅಲೆಗಳು ಎಂದೂ ನಮ್ಮ ನಿಯಂತ್ರಣದಲ್ಲಿ ಇರಲಿಲ್ಲ, ನಿಯಂತ್ರಿಸಿದ್ದು ಎಂಬ ಭ್ರಮೆಯಲ್ಲಿ ನಾವಿದ್ದೆವು. ಬದುಕಿನ ನಾವೆಯ ಅಸಲಿ ಮಾಲೀಕ ಸೃಷ್ಟಿಕರ್ತನೇ, ಅವನನ್ನು ಯಾವ ಹೆಸರಿನಿಂದಾದರೂ ಕರೆಯಬಹುದು, ಯಾವ ರೂಪದಲ್ಲಿ ಬೇಕಾದರೂ ಕಲ್ಪಿಸಿಕೊಳ್ಳಬಹುದು, ಅವನ ಅಧೀನದಲ್ಲಿ ನಮ್ಮ ಇರುವಿಕೆ ಎಂಬ ಸತ್ಯ ನೀತಿಯು ನಮ್ಮದಾಗಿರಬೇಕು ಮತ್ತು ಅದು ಸಂದರ್ಭಕ್ಕೆ ಅನುಗುಣವಾಗಿ ಬದಲಾಗಬಾರದು. ಈ ಶಿಸ್ತು ನಮ್ಮದಾದ ತೆರದಲ್ಲಿ, ನಾವು ಅನೇಕ ದ್ವಂದ್ವಗಳಿಂದ ಹೊರ ಬಂದೇವೆಂಬ ಅರ್ಥ. ನಮ್ಮ ಹಲವು ಪ್ರಶ್ನೆಗಳು, ಸಂದೇಹಗಳು, ದುಃಖಗಳು ನಿಟ್ಟುಸಿರನ್ನಾಗಿ ಹೋಗುವುವು. ಇಬ್ಬಗೆಯಿಂದ ದೂರವಾದ ಮನವು ತಿಳಿಯ ಪ್ರಶಾಂತ ಕೊಳವಾಗುವುದು. ನಮ್ಮೊಳಗಿನ ತಳಮಳವು ಮಿತಿಗೆ ಬರುವುದು. ನಿತ್ಯಯುಕ್ತ ದೃಷ್ಟಿಕೋನವು ಬದುಕಿನ ಎಲ್ಲ ಘಟ್ಟಗಳಲ್ಲೂ ನಮಗೆ ಆಸರೆಯಾಗಿರುವುದು. ಗಾಳಿಯ ರಭಸಕ್ಕೆ ಹೊಯ್ದಾಡುವ ದುರ್ಬಲ ವೃಕ್ಷದಂತೆ ನಮ್ಮ ನೀತಿ ನಿಯಮಗಳು ಕುಣಿಯುತ್ತಿದ್ದರೆ ನಮಗೆ ಸದಾ ಅಶಾಂತಿಯೇ ಕಾಡುವುದು.



ಮರಗಿಡಗಳಿಂದ ತುಂಬಿದ ಬೆಟ್ಟದ ಮೇಲಿರುವ ಈ ದೇಗುಲದ ಪಕ್ಕದಲ್ಲಿರುವ ನಾಲ್ಕು ಕೊಳಗಳು ಅಚ್ಚರಿ ಹುಟ್ಟಿಸುತ್ತವೆ. ಸ್ಪಷ್ಟವಾಗಿ ಪ್ರತಿಧ್ವನಿ ನೀಡುವ ಭಾರೀ ಬಂಡೆಯು ಇಲ್ಲಿನ ಇನ್ನೊಂದು ಬೆರಗು.

ಬೆಟ್ಟದ ತುದಿಯ ಬೆರಗು!

• ಸೌಮ್ಯ ಕಾರ್ಕಳ

ಹಸಿರು ತುಂಬಿದ ಕಾಡು ಮೇಡುಗಳ ನಡುವೆ ಒಂದು ಬೆಟ್ಟ; ಶಿಲೆಯಿಂದ ನಿರ್ಮಾಣಗೊಂಡ ಆ ಬೆಟ್ಟದಲ್ಲೂ ಹಸಿರಿನ ಸಿರಿ; ಈ ಸುಂದರ ಬೆಟ್ಟದ ತುದಿಯಲ್ಲಿರುವ ದೇಗುವಲೇ ಶ್ರೀಕಾರಿಂಜೇಶ್ವರ ದೇವಸ್ಥಾನ. ಈ ದೇಗುಲಕ್ಕೆ ಭೇಟಿ ನೀಡುವುದೆಂದರೆ, ಸುತ್ತಲೂ ಹರಡಿರುವ ಪ್ರಕೃತಿಯ ಪೂಜೆಯನ್ನು ಮಾಡುತ್ತಲೇ, ದೇಗು ದರ್ಶನ ಪಡೆಯುವ ಅವಕಾಶ. ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ಇರುವ ಕಾರಿಂಜ ಎಂಬಲ್ಲಿರುವ ಈ ಶಿವ ದೇವಾಲಯವು, ಆಸ್ತಿಕರಿಗೂ, ಪರಿಸರ ಪ್ರೇಮಿಗಳಿಗೂ ನೆಚ್ಚಿನ ತಾಣ.

ಶಿವನಿಗೆ ಸಮರ್ಪಿತವಾದ, ಈ ದೇಗುಲಕ್ಕೆ ಸುಮಾರು 1000 ವರ್ಷಗಳಷ್ಟು ಹಳೆಯ ಇತಿಹಾಸವಿದೆ. ಬೆಟ್ಟವೊಂದರ ತುದಿಯಲ್ಲಿ ಮೂಡಿಬಂದಿರುವ ಈ ದೇಗುಲವು ಸಮುದ್ರ ಮಟ್ಟದಿಂದ 1500 ಸಾವಿರ ಅಡಿ ಎತ್ತರದಲ್ಲಿದೆ. ಬಹುಪುರಾತನ ಕಾಲದಿಂದಲೇ ಇಲ್ಲಿ ಮಾನವನ ಚಟುವಟಿಕೆ, ಪೂಜಾಸ್ಥಳ ಇದ್ದಿರಲೇಬೇಕು; ಏಕೆಂದರೆ, ಇಲ್ಲಿರುವ ಗುಹೆಗಳಿಗೆ ಪಾಂಡವರು ಭೇಟಿಕೊಟ್ಟಿದ್ದರೆಂಬ ಐತಿಹ್ಯವಿದೆ. ಪಾಂಡವ ಸಹೋದರರಾದ ಭೀಮ ಮತ್ತು ಅರ್ಜುನರು ಕಾರಿಂಜೇಶ್ವರ ದೇವಾಲಯದಲ್ಲಿ ನಾಲ್ಕು ತೀರ್ಥಗಳು ಅಥವಾ ಪವಿತ್ರ ಕೊಳಗಳನ್ನುರಚಿಸಿದರು ಎಂಭ ನಂಬಿಕೆಯೂ ಇದೆ. ಭೀಮನು ತನ್ನ ಗದೆಯನ್ನು ನೆಲದ ಮೇಲೆ ಹೊಡೆದು 'ಗದಾತೀರ್ಥ'ವನ್ನು ಮತ್ತು ತನ್ನ ಹೆಬ್ಬೆರಳಿನಿಂದ 'ಅಂಗುಷ್ಟ ತೀರ್ಥ' ಮತ್ತು 'ಜಾನು ತೀರ್ಥ'ವನ್ನು ಸೃಷ್ಟಿಸಿದನೆಂಬ ನಂಬಿಕೆ. ಅರ್ಜುನನು ಹಂದಿಯೊಂದಕ್ಕೆ ಬಾಣ ಎಸೆದಾಗ



ರೂಪುಗೊಂಡ 'ಹಂದಿತೀರ್ಥ' ಅಥವಾ 'ವರಾಹ ತೀರ್ಥ'ವೂ ಇಲ್ಲಿದೆ! ಈ ಐತಿಹ್ಯವನ್ನು ಬಿಟ್ಟು, ಯೋಚಿಸಿದಾಗಲೂ, ಬೆಟ್ಟದ ಮೇಲಿರುವ ಈ ಜಲಮೂಲಗಳ ಪ್ರಾಮುಖ್ಯತೆಯನ್ನು ಗುರುತಿಸಬಹುದು. ಬಹು ಪುರಾತನ ಕಾಲದಲ್ಲಿ ಮಾನವನು ತನ್ನ ನೀರಿನ ಅವಶ್ಯಕತೆಗಳಿಗಾಗಿ ಈ ಕೊಳಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಬಹುಷಃ, ಹಂದಿಯ ಹೆಸರಿನಲ್ಲಿ ಪವಿತ್ರ ತೀರ್ಥವನ್ನು ಜನರು ಗುರುತಿಸಿರುವುದು ಇಲ್ಲೇ ಇರಬಹುದು!

ಇನ್ನೊಂದು ದಂತಕಥೆಯ ಪ್ರಕಾರ, ಸುಮಾರು ಎಂಟು ನೂರು ವರ್ಷಗಳ ಹಿಂದೆ ಕಾರಿಂಜತ್ತಾಯ ಮತ್ತು ಇಚ್ಛತ್ತಾಯ ಎಂಬ ಇಬ್ಬರು ಸಹೋದರರು ಉತ್ತರ ಕನ್ನಡ ಜಿಲ್ಲೆಯ ಕುಂಬಲದಿಂದ ಇಲ್ಲಿಗೆ ಬಂದಿದ್ದರು ಮತ್ತು ಇಚ್ಛತ್ತಾಯ ನೆಲೆಸಿದ ಸ್ಥಳವನ್ನು ಇಚ್ಲಂಪಾಡಿಯೆಂದೂ, ಕಾರಿಂಜತ್ತಾಯ ನೆಲೆಯೂರಿದ ಸ್ಥಳವನ್ನು ಕಾರಿಂಜ ಎಂದು ಕರೆಯಲಾಯಿತು. ಕಾರಿಂಜದಲ್ಲಿ ದಟ್ಟ ಹಸಿರಿನ ಮಧ್ಯೆ ಇರುವ ಬೆಟ್ಟದಲ್ಲಿ ಶಿವ ದೇವಾಲಯವನ್ನು ನಿರ್ಮಾಣ ಮಾಡಲಾಯಿತು. ಈ ಕ್ಷೇತ್ರವೇ ಮುಂದೆ ಕಾರಿಂಜೇಶ್ವರವೆಂದು ಪ್ರಸಿದ್ಧಿ ಪಡೆಯಿತು.

500 ಮೆಟ್ಟಿಲುಗಳು

ಕಾರಿಂಜೇಶ್ವರ ದೇವಾಲಯಕ್ಕೆ ಭೇಟಿ ನೀಡುವುದೆಂದರೆ, ಸಣ್ಣ ಚಾರಣ ಮಾಡಿದ ಅನುಭವ! ಹಸಿರಿನಿಂದ ಕೂಡಿದ ಈ ಬೆಟ್ಟವನ್ನು ಏರಬೇಕೆಂದರೆ ಸುಮಾರು ಐನೂರಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಹತ್ತಬೇಕು. ಇಲ್ಲಿ ಶಿವ ಹಾಗೂ ಪಾರ್ವತಿಯರ ಪ್ರತ್ಯೇಕ ದೇವಸ್ಥಾನಗಳಿದ್ದು ಶಿವ ಹಾಗೂ ಪಾರ್ವತಿಯರು ಇಲ್ಲಿ ಭೇಟಿಯಾಗುವುದು ವರ್ಷದಲ್ಲಿ ಒಂದು ದಿನ ಮಾತ್ರ. ಅದುವೇ ಶಿವರಾತ್ರಿಯ ಸಮಯದಲ್ಲಿ ನಡೆಯುವ ಉತ್ಸವದಂದು. ಮಹಾಶಿವರಾತ್ರಿಯಂದು ಇಲ್ಲಿ ವಾರ್ಷಿಕ ಜಾತ್ರೋತ್ಸವ ನಡೆಯುತ್ತದೆ. ನಾಲ್ಕು ದಿನಗಳ ಕಾಲ ನಡೆಯುವ ಈ ಜಾತ್ರೋತ್ಸವದಂದು ಗುಡ್ಡದ ಮೇಲಿನಿಂದ ಶಿವನ ವಿಗ್ರಹವನ್ನು ಪಾರ್ವತಿಯ ದೇವಾಲಯಕ್ಕೆ ತರುವ ಮೂಲಕ ಶಿವ ಪಾರ್ವತಿಯರ ಭೇಟಿ ನಡೆಯುತ್ತದೆ.

ಪ್ರತಿಧ್ವನಿಯ ಬೆರಗು

ಈ ಬೆಟ್ಟದ ಮೇಲೆ ಭಾರೀ ಗಾತ್ರದ ಕಲ್ಲುಗಳಿಗುರುವುದು ಬೆರಗನ್ನು ಹುಟ್ಟಿಸುತ್ತದೆ. ಇದಕ್ಕಿಂತ ಬೆರಗಿನ ಸಂಗತಿ ಎಂದರೆ, ಸ್ಪಷ್ಟ ಪ್ರತಿಧ್ವನಿ! ಇಲ್ಲಿನ ಬೃಹತ್ ಶಿಲಾ ಬೆಟ್ಟದತ್ತ ಕೂಗಿದರೆ ಸ್ಪಷ್ಟ ಪ್ರತಿಧ್ವನಿ ನೀಡುವ ಪ್ರತಿ ಧ್ವನಿ ಕಲ್ಲು ಇದೆ. ಸತ್ಯ ಪ್ರಮಾಣ ಮಾಡುತ್ತಿದ್ದ ಸೀತಾ ದೇವಿ ಪ್ರಮಾಣ ಕಲ್ಲೂ ಇದೆ. ನಿತ್ಯವೂ ಇಲ್ಲಿ ವಾನರ ಸೇನೆಗೆ ಅನ್ನ ನೈವೇದ್ಯವನ್ನು ನೀಡಲಾಗುತ್ತದೆ. ಆಷಾಢ ಹಾಗೂ ಶ್ರಾವಣ ಮಾಸದಲ್ಲಿ ಕರಾವಳಿಯಾದ್ಯಂತ ಅಮಾವಾಸ್ಯೆಯಂದು ಮಾಡುವ ತೀರ್ಥಸ್ನಾನ ಇಲ್ಲಿನ ಇನ್ನೊಂದು ವಿಶೇಷತೆಯಾಗಿದೆ.

ಹಸಿರು ಸಿರಿಯ ನಡುವೆ ಇರುವ ಕಾರೀಂಜೇಶ್ವರ ದೇಗುಲಕ್ಕೆ ನೀಡುವ ಭೇಟಿಯು, ತನ್ನ ವಿಶಿಷ್ಟ ನೋಟದಿಂದಾಗಿ ಮನಕ್ಕೆ ಉಲ್ಲಾಸ ನೀಡುವ ಆಪ್ತ ಭೇಟಿ ಎನಿಸುತ್ತದೆ.

ನಗುವಿಗೆ ಕೊನೆಯೇ ಇಲ್ಲ!

• ಸುಮಾ ಸೂರ್ಯ

ಎಲ್ಲಿಂದ ಶುರು ಮಾಡಬೇಕು ಗೊತ್ತಾಗ್ತಿಲ್ಲ! ಸುಲೋಚನಳಿಂದಲೋ.. ಸೋಮೇಶ್ವರದಿಂದಲೋ? ಈ ಚಲನಚಿತ್ರ ಈಗಾಗಲೇ ಅಭಿಪ್ರಾಯಗಳ ಸುರಿಮಳೆಗೆ ತೋಯ್ದು ಹೋಗಿದ್ದಾಗಿದೆ. ಆದರೂ, ವೀಕ್ಷಿಸಿದ ಮೇಲೆ ನಮ್ಮದೂ ಒಂದು ಅಭಿಪ್ರಾಯದ ಸೋನೆ ಮಳೆ ಹನಿಸದೆ ವಿಧಿ ಇಲ್ಲವಾಗಿದೆ .ಏಕೆಂದರೆ ಎರಡೂ ಕಾಲು ಗಂಟೆ ಬಿಟ್ಟೂ ಬಿಡದೆ ನಗಿಸಿದ ಚಲನ ಚಿತ್ರದ ಋಣ ನಮ್ಮ ಮೇಲಿದೆ. ಈ ಚಲನಚಿತ್ರ ಮಂಗಳೂರು, ದಕ್ಷಿಣ ಕನ್ನಡ ಭಾಗದ ಮಂದಿಗೆ ಆ ಮಣ್ಣಿನ ಘಮವನ್ನು ಪಸರಿಸುವುದರಲ್ಲಿ ಯಶಸ್ವಿಯಾಗಿದೆ. ಅಲ್ಲಿನ ಸಂಸ್ಕೃತಿ, ಆಚಾರ- ವಿಚಾರ, ಭಾಷೆ ಇವೆಲ್ಲವೂ ತಿಳಿದಿದ್ದರೆ ಮಾತ್ರ ಚಿತ್ರದಲ್ಲಿ 'ಗಮ್ಮತ್' ಆಸ್ವಾದಿಸಲಿಕ್ಕೆ ಸಾಧ್ಯ! ಉಳಿದವರಿಗೆ ಅರ್ಥ ಆಗಲ್ಲ, ಇಷ್ಟ ಆಗಲ್ಲ ಅಂತಲ್ಲ. ಎಲ್ಲರೂ ನಕ್ಕು ನಕ್ಕು ಆಸ್ವಾದಿಸಬಹುದಾದ ಚಿತ್ರ 'ಸು ಫ್ರಂ ಸೋ'. ಇಲ್ಲಿ ತೋರಿಸುವ ಎಲ್ಲಾ ಸಾಮಾಜಿಕ ಸಮಸ್ಯೆಗಳೂ ನಮ್ಮಲ್ಲಿವೆ. ನಮಗೆ ನೋಡಲು ಇಷ್ಟವಾಗದು ಅನ್ನಿಸಿದ ಮಾತ್ರಕ್ಕೆ ಸಮಸ್ಯೆಗಳಿಲ್ಲ ಎಂದಲ್ಲ. ಅದನ್ನು ಹಾಸ್ಯದೊಂದಿಗೆ ಮಿಳಿತಗೊಳಿಸಿ ತೋರಿಸಿ, ಅದಕ್ಕೊಂದು ತಾರ್ಕಿಕ ಅಂತ್ಯ ನೀಡುವ ಪ್ರಯತ್ನ ಮಾಡಿದ ಇಡೀ ತಂಡದ ಶ್ರಮಕ್ಕೆ ದೊಡ್ಡ ಚಪ್ಪಾಳೆ. ಮೌಢ್ಯವನ್ನು ವೈಭವೀಕರಿಸದೆ. ಚಿತ್ರ ತನ್ನ ಘನತೆಯನ್ನು ಉಳಿಸಿಕೊಂಡಿದೆ. ಈ ಚಿತ್ರದಲ್ಲಿ ವಿಪರೀತ ಮನಸೆಳೆದದ್ದು ರವಿಯಣ್ಣ. ರವಿಯಣ್ಣ ಲೋಕಲ್ ಹೀರೋ. ಆದರೂ ಅವನಿಗೆ ಹೆದರಿಕೆ ಆಗುತ್ತೆ, ಪ್ರೇಮ ಆಗುತ್ತೆ, ಅಸಹಾಯಕ ಆಗ್ತಾನೆ, ಧೈರ್ಯದಿಂದ ಫೈಟಿಂಗ್ ಮಾಡ್ತಾನೆ. ಎಲ್ಲಾ ಭಾವಗಳ ಮಿಶ್ರಣದ ಈ ಪಾತ್ರಕ್ಕೆ ಸಂಪೂರ್ಣ ನ್ಯಾಯ ನೀಡಿದ್ದಾರೆ ಶಾನಿಲ್. ನಮ್ಮ ಮಲೆನಾಡಿನ ವಿದ್ಯಾವಂತ ಶಿಷ್ಯರ ಗುರುವಾಗಿರುವ ಒಬ್ಬ ಸ್ವಾಮಿಯನ್ನು ಅಣಕು ಮಾಡಿದ ರಾಜ್ ಬಿ ಶೆಟ್ಟಿಯವರ ಅಭಿನಯ ಕಂಡು ನಕ್ಕೂ ನಕ್ಕೂ ಸಾಕಾಯ್ತು!

ಇನ್ನು ಕುಡುಕರ ಅಣಕ: ಇಂತಹ ಎಷ್ಟು ಮಂದಿ ಬೇಕು ನಿಮಗೆ? ಪುಕ್ಸಟ್ಟೆ ಸಿಕ್ಕರೆ ಡ್ರಂಗಟ್ಟಳೆ ಇಳಿಸುವವರು. ಸಮಾಜದಲ್ಲಿ ಇರುವ ಈ ಸಮಸ್ಯೆಯನ್ನು ಪರದೆ ಮೇಲೆ ತೋರಿಸಿದರೆ ಮಾತ್ರ ವೈಭವೀಕರಣ ಅಂತ ಅನ್ನಿಸಿಬಿಡುತ್ತಾ? ಈ ಪಾತ್ರದ ಮೂಲಕ ಭರಪೂರ ಮನರಂಜನೆ ನೀಡಿದ್ದಾರೆ ಪುಷ್ಪರಾಜ್.

ನಿರ್ದೇಶಕ ಜೆ ಪಿ ತೂಮಿನಾಡ್, ರಂಗ ಕಲಾವಿದರಾಗಿದ್ದು , ರಂಗಭೂಮಿ ಕಲಾವಿದರ ದಂಡನ್ನೇ ಕಟ್ಟಿಕೊಂಡು ಒಂದು ಒಳ್ಳೆಯ ಪ್ರಯತ್ನ ಮಾಡಿದ್ದಾರೆ. ಸದಭಿರುಚಿಯ ಹಾಸ್ಯದಿಂದಲೂ ಜನರನ್ನು ನಗಿಸಬಹುದು, ಬಾಕ್ಸಾಫೀಸ್ ಕೊಳ್ಳೆ ಹೊಡೆಯಬಹುದು ಎಂಬುದನ್ನು ಸಾಬೀತು ಪಡಿಸಿದ್ದಾರೆ. ಒಟ್ಟಾರೆ ಕೊಟ್ಟ ದುಡ್ಡಿಗೆ ಮೋಸ ಇಲ್ಲದೆ ಮನಃಪೂರ್ವಕವಾಗಿ ನಕ್ಕು ಹಗುರಾಗಿಸುವ 'ಸು ಫ್ರಂ ಸೋ' ಚಲನಚಿತ್ರವನ್ನು ಕುಟುಂಬದ ಎಲ್ಲರೂ ನೋಡಬಹುದು!

ಗೊತ್ತೇ ನಿಮಗೆ ಎಬಿಸಿ ಜ್ಯೂಸ್!

ಮೊದಲ ಬಾರಿ 'ಎಬಿಸಿ ಜ್ಯೂಸ್' ಹೆಸರನ್ನು ಕೇಳಿದಾಗ ತುಸು ಅಚ್ಚರಿ ಆಯಿತು; ವಿವರ ತಿಳಿದಾಗ ಹೆಮ್ಮೆಯೂ ಆಯಿತು! ಸರಳವಾದ ವಿಧಾನದಿಂದ ನಮ್ಮ ದೇಹಕ್ಕೆ ಬೇಕಾಗುವ ಖ ಪೌಷ್ಟಿಕಾಂಶವನ್ನು ಒದಗಿಸುವ ಒಂದು ಪಾನೀಯ ಇದು. ಸೇಬು (ಆ್ಯಪಲ್), ಬೀಟ್ ರೂಟ್ ಮತ್ತು ಕ್ಯಾರಟ್‌ನ್ನು ಬೆರೆಸಿ, ನಿಂಬೆ ರಸ ಸೇರಿಸಿ ತಯಾರಿಸುವ ಈ ಜ್ಯೂಸ್, ಹೆಚ್ಚಿನ ಖನಿಜ ಮತ್ತು ಪೌಷ್ಟಿಕಾಂಶವನ್ನು ಹೊಂದಿದ್ದು, ಬಳಲಿದ ದೇಹಕ್ಕೆ ಶಕ್ತಿ ತುಂಬುತ್ತದೆ. ತಯಾರರಿಸುವ ವಿಧಾನ: ಸೇಬು, ಕ್ಯಾರಟ್ ಮತ್ತು ಬೀಟ್ ರೂಟ್‌ಗಳ ಸಿಪ್ಪೆ ತೆಗೆದು ಹೋಳುಗಳನ್ನಾಗಿ ಮಾಡಬೇಕು. ಇದನ್ನು ಕುದಿಯುವ ನೀರಿನಲ್ಲಿ ಅದ್ದಿ ತೆಗೆದು (ಒಂದು ನಿಮಿಷ ಮಾತ್ರ), ಸ್ವಲ್ಪ ನಿಂಬೆ ರಸ ಬೆರೆಸಿ, ಮಿಕ್ಸಿಯಲ್ಲಿ ಅಥವಾ ಬ್ಲೆಂಡರ್‌ನಲ್ಲಿ ಹಾಕಿ ರಸ ಮಾಡಬೇಕು. ಸೋಸಿದರೆ ತಿಳಿ ಜ್ಯೂಸ್; ಸೋಸದೆಯೂ ಸೇವಿಸಬಹುದು.



ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1			■	2	■	3		4
	■	■	5			■	■	
6	7			■	■	8		
■		■	9	10			■	■
11		12	■		■	13	14	
■	■	15			16	■		■
17			■	■	18			19
	■	■	20	21		■	■	
22			■		■	23		

ಎಡದಿಂದ ಬಲಕ್ಕೆ

1. ಒಂದೇ ವಿಷಯದಲ್ಲಿ ಮಗ್ನ (3)
3. ಅವಕಾಶ ಸಿಕ್ಕಾಗ ನೋಡಬೇಕಾದ ಆಗಸ (3)
5. ಇಲ್ಲಿ ದೇವರೂ ವಾಸಿಸಬಹುದು! (3)
6. ಒಂದು ಊರಿನ ಹಿರಿಯರು (4)
8. ತಿಳಿವಳಿಕೆಯಿಲ್ಲದಿರುವಿಕೆ (3)
9. ಬರೆದು ದಾಖಲಿಸು (4)
11. ಕಿಂಕರರ ಜೊತೆಗೂಡಿ ಬಂದಿರುವ ಶಿವ (3)
13. ಗುಟ್ಟು (3)
15. ಕರದ ನಡುವೆ ಸಿಲುಕಿದ್ದಕ್ಕೆ ಉಂಟಾಗಿದೆ ಮರುಕ (4)
17. ಸುದ್ದಿ ತಿಳಿಸಲು ಇದುವೇ ದಾರಿ (3)
18. ಚೇತರಿಸಿಕೊಳ್ಳು ಎಂದರ್ಥ (4)
20. ಮಧುರಾವಾದ ಅಥವಾ ಕೋಮಲವಾದ (3)
22. ಕರಾರು ಅಥವಾ ನಿಯಮ (3)
23. ನದಿಗಳು ಸೇರುವ ಸ್ಥಳ (3)

ಮೇಲಿಂದ ಕೆಳಕ್ಕೆ

1. ಸಂಸ್ಕೃತ ಪದಕ್ಕೆ ಸಮನಾದುದು (3)
2. ಪ್ರಾಣಿಗಳ ಲಾಂಗೂಲ (2)
4. ರೋಗವನ್ನು ಗುಣಪಡಿಸುವಿಕೆ (3)
5. ಮುಖಕ್ಕೆ ಮತ್ತೊಂದು ಹೆಸರು (3)
7. ಮನಃಪೂರ್ವಕವಾದ (3)
8. ಅರದ ನಡುವಿನ ದಾನವ (3)
10. ಗಣಪತಿಯ ವಾಹನ (3)
12. ತಿರುಗಿ ಬಂದಿರುವ ಮೊಸಳೆ (3)
14. ಹಣದೊಂದಿಗೆ ಇರುವ ಜಿಂಕೆ ಅಸ್ತವ್ಯಸ್ತವಾಗಿದೆ (3)
16. ರಸಭರಿತ ಮಾವಿನ ಹಣ್ಣು (3)
17. ನರನಿಗೆ ಸಂಬಂಧಿಸಿದ (3)
19. ಮಗನ ಕೆಲಸ ಸರಾಗ (3)
21. ಕೋಟೆಗೆ ಮತ್ತೊಂದು ಹೆಸರು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ತನ್ಮಯ 3. ಆಕಾಶ 5. ಆಲಯ 6. ಮಹಾಜನ 8. ಅಜ್ಞಾನ 9. ನಮೂದಿಸು 11. ಶಂಕರ 13. ರಹಸ್ಯ 15. ಕನಿಕರ 17. ಮಾಧ್ಯಮ 18. ಸಾವರಿಸು 20. ಮೃದುಲ 22. ಷರತ್ತು 23. ಸಂಗಮ

ಮೇಲಿಂದ ಕೆಳಕ್ಕೆ
1. ತತ್ಸಮ 2. ಬಾಲ 4. ಶಮನ 5. ಆನನ 7. ಹಾರ್ದಿಕ 8. ಅಸುರ 10. ಮೂಷಿಕ 12. ರಕಮ 14. ಹಣರಿ 16. ರಸಾಲ 17. ಮಾನುಷ 19. ಸುಗಮ 21. ದುರ್ಗ

ವಿಗ್ರಹದಲ್ಲಿ ದೇವರು ಇದ್ದಾನೋ ಇಲ್ಲವೋ?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸ್ವಾಮಿ ವಿವೇಕಾನಂದರು ಭಾರತದ ಉದ್ದಗಲಕ್ಕೂ ಪ್ರವಾಸ ಮಾಡುವ ಸಂದರ್ಭದಲ್ಲಿ, ರಾಜಸ್ಥಾನದಲ್ಲಿರುವ ಅಲ್ವಾರ್ ರಾಜ್ಯಕ್ಕೆ ಬಂದರು. ಅಲ್ಲಿ ಅವರನ್ನು ರಾಜ ಮಂಗಲ್ ಸಿಂಗ್ ಸ್ವಾಗತ ಮಾಡಿದ. ರಾಜ ಮಂಗಲ್ ಸಿಂಗ್ ಸ್ವಾಮಿ ವಿವೇಕಾನಂದರ ಜೊತೆ ದೇವರು, ಧರ್ಮ, ನಂಬಿಕೆಗಳ ಬಗ್ಗೆ ಮಾತಾಡುವಾಗ ವಿಗ್ರಹಗಳನ್ನು ಪೂಜಿಸುವುದು ಸರಿಯಾದ ಅಭ್ಯಾಸ ಎನ್ನಿಸುವುದಿಲ್ಲ ಹಾಗು ಅವಗಳನ್ನೂ ನಾನು ನಂಬುವುದಿಲ್ಲ ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸಿದ. ಮೂಲತ: ರಾಜನು ದೇವರು ನಿರಾಕಾರ ಎಂದು ನಂಬುವವನಾಗಿದ್ದು ವಿಗ್ರಹ ಪೂಜೆಯನ್ನು ನಂಬುತ್ತಿರಲಿಲ್ಲ. ಹೀಗಾಗಿ ತನ್ನ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ಸ್ವಾಮಿ ವಿವೇಕಾನಂದರ ಮುಂದೆ ಹೇಳಿದ. ಇದಕ್ಕೆ ವಿವೇಕಾನಂದರು ಹೆಚ್ಚು ಪ್ರತಿಕ್ರಿಯೆಸದೆ ಮುಗುಳ್ನಕ್ಕು ಸುಮ್ಮನಾದರು. ಆದರೆ ಅವರ ಮನಸ್ಸಿನಲ್ಲಿ ಒಂದು ವಿಚಾರ ಓಡುತ್ತಿತ್ತು.

ನಮ್ಮ ಸನಾತನ ಭಾರತೀಯ ಪದ್ಧತಿಯಿಂದ ನಡೆದುಕೊಂಡು ಬಂದಂತಹ ವಿಗ್ರಹ ಪೂಜೆಯಲ್ಲಿ ಯಾವ ತಪ್ಪೂ ಇಲ್ಲ. ಇದು ಹಲವಾರು ಶತಮಾನಗಳ ನಂಬಿಕೆ ಮತ್ತು ಅದಕ್ಕೆ ಅದರದ್ದೇ ಆದ ಅರ್ಥವಿದೆ. ಆದರೆ ಅದನ್ನು ಪರಿಣಾಮಕಾರಿಯಾಗಿ ಆ ರಾಜನಿಗೆ ಹೇಗೆ ತಿಳಿಸುವುದು ಎಂದು ಯೋಚಿಸಿದರು. ರಾಜ ತನ್ನ ಅರಮನೆಯನ್ನು ಅವರಿಗೆ ಬಹಳ ಹೆಮ್ಮೆಯಿಂದ ತೋರಿಸುವಾಗ ಸ್ವಾಮಿ ವಿವೇಕಾನಂದರು ಅಲ್ಲೇ ಇದ್ದ ದಿವಾನರನ್ನು ಕರೆದು, ವಿಚಿತ್ರವಾದ ಒಂದು ಮಾತನ್ನು ಹೇಳಿದರು. ''ದಯವಿಟ್ಟು ಅಲ್ಲಿ ನೇತಾಡುತ್ತಿರುವ ರಾಜನ ತಂದೆಯ ಚಿತ್ರದ ಮೇಲೆ ಉಗುಳಿವಿರಾ?'' ಎಂದು ಹೇಳಿ ರಾಜ ಮಂಗಲ್ ಸಿಂಗ್ ನ ತಂದೆಯ ಛಾಯಾಚಿತ್ರದ ಕಡೆ ಕೈ ತೋರಿಸಿ ಮನವಿ ಮಾಡಿದರು. ಅಲ್ಲಿ ಅವರ ಜೊತೆ ನಡೆದು ಬರುತ್ತಿದ್ದವರಿಗೆಲ್ಲಾ ಬೆವರು ಇಳಿಯಲು ಪ್ರಾರಂಭಿಸಿತು. ರಾಜನಿಗಂತೂ ನಖ ಶಿಖಾಂತ ಸಿಟ್ಟು. ಇವರು ಏನನ್ನು ಮಾತನಾಡುತ್ತಿದ್ದಾರೆ ಎಂದು ತಿಳಿದಿದೆಯೇ? ಬೇರೆಯವರಾಗಿದ್ದರೆ ಇದಕ್ಕೆ ತಕ್ಕ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಮನದಲ್ಲೇ ಕೋಪವನ್ನು ನಿಗ್ರಹಿಸಿಕೊಳ್ಳುತ್ತಾ ನಿಂತಿದ್ದರು. ದಿವಾನರಿಗೆ ನಿಂತ ನೆಲವೇ ಬಾಯಿ ಬಿಟ್ಟಂತಾಯಿತು. ವಿವೇಕಾನಂದರ ಬಗ್ಗೆ ಗೌರವ, ಅನ್ನ ಹಾಕಿದ ರಾಜನ ಬಗ್ಗೆ ಅತಿಯಾದ ನಿಷ್ಠೆ ಜೊತೆಗೆ ಅಲ್ಲಿಯ ರಾಜನ ಪಠಕ್ಕೆ ಹಾಗೆ ಮಾಡಲು ಸಾಧ್ಯವೇ? ಇವರು ಹೀಗೇಕೆ ಹೇಳುತ್ತಿದ್ದಾರೆ ಎಂದು ಗೊಂದಲ, ಭಯ. ಕೈಮುಗಿದು ನಾನು ಇದನ್ನ ಮಾಡಲಾರೆ ಎಂದು ಹೇಳಿದರು.

ಆಗ ಸ್ವಾಮಿ ವಿವೇಕಾನಂದರು ರಾಜರ ಕಡೆ ತಿರುಗಿ ನೋಡಿ, ''ಆ ಚಿತ್ರವು ನಿಮ್ಮ ತಂದೆಯದಾಗಿದ್ದರೂ ಅದು ಕೇವಲ ಚಿತ್ರ ಹಾಗು ನಿಜವಾದ ತಂದೆಯಲ್ಲ. ಆದರೂ ದಿವಾನರು ಅದರ ಮೇಲೆ ಉಗುಳುವುದಕ್ಕೆ ಹಿಂಜರಿದರು ಏಕೆಂದರೆ ಆ ಚಿತ್ರ ನಿಮ್ಮ ತಂದೆಯನ್ನು ನೆನಪಿಸುವಂತೆಯೇ, ಅವರ ಮೇಲಿನ ಗೌರವವನ್ನು ನೆನಪಿಸುತ್ತದೆ. ಅದೇ ರೀತಿ ದೇವರ ಚಿತ್ರಗಳು, ವಿಗ್ರಹಗಳು ನಮಗೆ ದೇವರನ್ನು ನೆನಪಿಸುತ್ತವೆ ಹಾಗೂ ದೇವರ ಆದರ್ಶ ಮತ್ತು ಗುಣಗಳನ್ನು ನಾವು ಅವುಗಳ ಮೂಲಕ ಆರಾಧಿಸುತ್ತೇವೆ ಎಂದು ನಗುತ್ತಾ ನುಡಿದರು.

ರಾಜ ಮಂಗಲ್ ಸಿಂಗ್ ಕಣ್ಣೆದುರೇ ನಡೆದ ಘಟನೆಯಿಂದ ವಿಗ್ರಹ ಪೂಜೆಯಲ್ಲಿ ತಪ್ಪಿಲ್ಲ ಎಂದು ಅರಿವಾಯಿತು. ತನಗೆ ಸಮ್ಮತ ವಾಗುವಂತೆ ವಿಷಯ ತಿಳಿಸಲು ಅವರು ಈ ರೀತಿ ಮಾಡಿದ್ದಾರೆ ಎಂದು ಕೂಡ ತಿಳಿಯಿತು. ವಿಗ್ರಹ ಪೂಜೆಯ ಬಗ್ಗೆ ತನಗಿದ್ದ ತಪ್ಪು ತಿಳುವಳಿಕೆಯನ್ನು ಅಂದಿನಿಂದ ರಾಜ ಬದಲಿಸಿಕೊಂಡ.

ಕೆಲವೊಮ್ಮೆ ನಾವು ಕೂಡ ಪಾಶ್ಚಾತ್ಯರನ್ನು ನೋಡಿ, ಅವರಂತೆ ಅಂಧಾನುಕರಣೆ ಮಾಡುತ್ತಾ ನಮ್ಮ ಸಂಸ್ಕೃತಿ ಸಂಸ್ಕಾರವನ್ನೇ ಮರೆತುಬಿಡುತ್ತೇವೆ. ನಮ್ಮ ಸನಾತನ ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಯೊಂದು ಆಚರಣೆಗೂ ತನ್ನದೇ ಆದ ಅರ್ಥ ಮತ್ತು ಮಹತ್ವವಿದೆ. ನಮಗೆ ತಿಳಿದಿರದಿದ್ದರೆ ಅದಕ್ಕೆ ಬೆಲೆ ಇಲ್ಲ ಎಂದಲ್ಲ. ಮೊದಲು ನಾವು ನಮ್ಮ ಅರಿವನ್ನು ಹೆಚ್ಚಿಸಿಕೊಳ್ಳಬೇಕು. ಆಗ ಮಾತ್ರ ನಮ್ಮ ಸುತ್ತಲಿನ ವಿಷಯಗಳು ನಮಗೆ ಹೆಚ್ಚು ಅರ್ಥವಾಗುತ್ತದೆ.

ಈಸಬೇಕು ಇದ್ದು ಜೈಸಬೇಕು

ಹಾಳು ಹಾಳೆಲ್ಲ ಬಾಳೆನ್ನುತಿರ್ದೊಡೆಯುಮದ
ರೂಳಿಗವ ತಪ್ಪಿಸುವ ಜಾಣನೆಲ್ಲಿಹನು
ಊಳಿಗವೊ, ಕಾಳಗವೊ, ಕೂಳ್ಕರೆಯೊ, ಗೋಳ್ಕರೆಯೊ
ಬಾಳು ಬಾಳದೆ ಬಿಡದು - ಮಂಕುತಿಮ್ಮ||

ಮಾನವನ ಬಾಳು ಎಂಬುದೇ ಸಂಕಷ್ಟಗಳ ಸರಮಾಲೆ. ಈ ಸಂಕಷ್ಟಗಳು ಎದುರುಗೊಂಡಾಗ ಬಾಳೇ ಹಾಳು ಎಂದು ಪರಿತಪಿಸುವುದು ಉಂಟು. ಈ ಬಾಳು ಅದೆಷ್ಟೇ ಸಂಕಷ್ಟಗಳನ್ನೆದುರಿಸಲಿ, ಅದೆಷ್ಟೇ ಹಾಳು ಎಂದೆನಿಸಿದರೂ ಸಹ ಈ ಬಾಳಿನಿಂದ ತಪ್ಪಿಸಿಕೊಳ್ಳುವ ಜಾಣ ಎಲ್ಲಿಹನು? ಊಳಿಗಕ್ಕೋ, ಕಾಳಗಕ್ಕೋ, ಕೂಳ್ಕರೆಗೋ, ಗೋಳ್ಕರೆಗೋ ನಾವು ಓಗೊಡಲೇ ಬೇಕು. ಇದೇ ನಮ್ಮಯ ಗೋಳಿನ ಬಾಳು. ನಮ್ಮಯ ಬಾಳನ್ನು ಈ ಗೋಳೆಂಬುದು ಬಿಡುವುದೇ ಇಲ್ಲವಾದರೂ ನಾವು ಗೋಳೆಂಬುವ ಸಂಕಷ್ಟಗಳಲ್ಲಿಯೇ ಜೀವನ ನಡೆಸಲೇಬೇಕು ಎಂಬುದು ಈ ಪದ್ಯದ ಅರ್ಥವಾಗಿದೆ.

ಒಬ್ಬ ಮಾನವನು ಈ ಭೂಮಿಗೆ ಮೊದಲು ಕಾಲಿರಿಸಿದಾಗ ಈ ಪಂಚ ಭೂತಗಳಿಂದ ಆತನು ಮೊದಲಿಗೆ ಉಸಿರಾಗಿ ಗಾಳಿಯನ್ನು ಸ್ವೀಕರಿಸುತ್ತಾನೆ. ಹಾಗೆಯೇ ತಾನು ಅಂತ್ಯದಲ್ಲಿ ಬಯಲಲ್ಲಿ ಬಯಲಾಗುವಾಗ ಕೊನೆಯ ಉಸಿರನ್ನು ಬಿಡುತ್ತಾನೆ. ಅಲ್ಲಿಗೆ ಅವನ ಬದುಕೆಂಬುದು ಹುಟ್ಟುದಾಗಿನಿಂದ ಸಾವಿನೊಂದಿಗೆ ಅಂತ್ಯವಾಗುತ್ತದೆ. ಈ ಹುಟ್ಟು - ಸಾವುಗಳ ನಡುವೆ ಈ ಮಾನವ ಜೀವಿಯು ನಡೆಸುವ ಹೋರಾಟ ಇದೆಯೆಲ್ಲಾ ಅದೇ ಜೀವನವೆನ್ನಬಹುದು. ಈ ಜೀವನವೆಂಬ ಹೋರಾಟದಲ್ಲಿ ಏನೋ ಸಾಧನೆ ಮಾಡಬೇಕೆಂಬ ತವಕ, ಸಾಧನೆಯನ್ನು ಸಾಧಿಸಿದ ಬಳಿಕ ಸಾಧಿಸಿದೆನೆಂದು ಹಮ್ಮು, ಸಾಧಿಸದೆ ಹೋದರೆ ಸೋಲಿನ ಗೋಳು, ಬದುಕಿಗಾಗಿ, ಉಳಿವಿಗಾಗಿ, ಪದವಿಗಾಗಿ, ಸಂಪತ್ತಿಗಾಗಿ, ಅಹಂಕಾರದ ಪ್ರದರ್ಶನಕ್ಕಾಗಿ, ಆತ್ಮ ಸಂತೋಷವನ್ನು ಅರಸುವ ವ್ಯರ್ಥ ಪ್ರಯತ್ನ, ಅರಿವಿನ, ಮೌಢ್ಯದ, ಮೂರ್ಖತೆಯ, ಪ್ರೀತಿ ಪ್ರೇಮಗಳ, ಮೋಹ ಕಾಮಗಳ, ಕೋಪ ತಾಪಗಳ, ದ್ವೇಷ ಅಸೂಯೆಗಳ, ಹೀಗೇ ನೂರಾರು ಭಾವಗಳನ್ನು ಹೊತ್ತು ನಡೆಯುತ್ತದೆ ನಮ್ಮ ಬದುಕಿನ ಪ್ರಯಾಣ. ಇಂತಹ ಭಾವಗಳನ್ನು ಹೊತ್ತೆ ಬದುಕಬೇಕು. ಇವೆಲ್ಲವೂ ಇದ್ದರೇನೇ ಅದು ಬದುಕು ಎಂದಾಗುವುದು. ಏಳು ಬೀಳುಗಳ, ಸೊಗಸು ತೊಡರುಗಳ ಈ ಜೀವನದ ನಡಿಗೆಯಲ್ಲಿ ಕಷ್ಟಗಳು, ಸಂಕಟಗಳು, ಕಾರ್ಪಣ್ಯಗಳನ್ನು ಎದುರಿಸಲೇಬೇಕಾಗುತ್ತದೆ. ಈ ಬಾಳೆಂಬುದು ಒಂದು ರೀತಿಯಲ್ಲಿ ಒಂದು ನಿಲುಗಡೆ ಇರದ ಸಂಕಷ್ಟಗಳ ಹಾದಿಯೇ ಹೌದು. ಈ ಹಾದಿಯನ್ನು ಬಡವನಿರಲಿ, ಬಲ್ಲಿದನೇ ಇರಲಿ, ಜ್ಞಾನಿಯೇ ಇರಲಿ, ಅಜ್ಞಾನಿಯೇ ಇರಲಿ ಆತನು ಬಂದಿದ್ದನ್ನು ಅನುಭವಿಸಲೇಬೇಕು. ಇಂಥಹ ಸಂಕಷ್ಟಗಳು ಕೂಳಿಗೋ, ಕಾಳಗಕ್ಕೋ, ಊಳಿಗಕ್ಕೋ, ಗೋಳಿಗೋ ಹೀಗೆ ಯಾವುದಕ್ಕೇ ಇದ್ದರೂ ಅದನ್ನು ಅನುಭವಿಸಲೇಬೇಕು. 'ಇಲ್ಲಿ ಈಸಬೇಕು, ಇದ್ದು ಜಯಿಸಬೇಕು' ಎಂಬ ದಾಸವಾಣಿಯು ಬಹಳವೇ ಪ್ರಸ್ತುತ ಎಂದೆನಿಸುತ್ತದೆ. ಈ ಬಾಳಿನ ಗೋಳಿನಿಂದ ತಪ್ಪಿಸಿಕೊಂಡು

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಜೀವನ ಮಾಡುವವರೂ ಯಾರೂ ಇರುವುದಿಲ್ಲ. ಆನೆಯ ಕಷ್ಟ ಆನೆಗೆ, ಇರುವೆಯ ಕಷ್ಟ ಇರುವೆಗೆ ಎಂಬ ಗಾದೆಯಂತೆ ಅವರವರ ಬದುಕು, ಅವರವರ ಬವಣೆ ಅವರವರಿಗೇ ಹೆಚ್ಚಾಗಿರುತ್ತದೆ. ಹುಟ್ಟಿನಿಂದ ಲಾಗಾಯ್ತು ಅಂತ್ಯದ ವರೆವಿಗೂ ರಾಗ, ಭಾವ, ಹಠ, ಅಧಿಕಾರ, ಅಂತಸ್ತು, ಅಹಂ, ಸ್ವಾರ್ಥ, ಪರಹಿತ, ಸ್ವಂತ ಹೀಗೆ ಹಲವು ವಿಚಾರಗಳಲ್ಲಿ ಮನುಷ್ಯನಿಗೆ ಚಿಂತೆಯು ಬೆನ್ನು ಹತ್ತಿ ಆತನ ಬಾಳೆಂಬುದು ಗೋಳಾಗಿಯೇ ಇದೆ. ಇದರಿಂದ ಮುಕ್ತಿ ಹೊಂದುವುದೇ ಬಹು ದೊಡ್ಡ ವಿಚಾರ ಎಂದು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ.

ಬದುಕುವಾಗ ನಮ್ಮ ಆಗು ಹೋಗುಗಳಿಗೆ ನಮ್ಮ ಮನಸ್ಥಿತಿಯೇ ಕಾರಣವೇ ಹೊರತು ನಾವು ಬಾಳನ್ನು ದೂಷಿಸದೆ, ಹೆಚ್ಚು ಏರುಪೇರಿಲ್ಲದ, ತೃಪ್ತ, ಶಾಂತ ಮತ್ತು ನಿರ್ಲಿಪ್ತ ಜೀವನ ನಮ್ಮದಾದರೆ ನಮ್ಮ ಬದುಕು ಸುಂದರವಾಗಿಯೇ ಇರುತ್ತದೆ ಎಂಬುದೇ ಈ ಪದ್ಯದ ಮೂಲಾರ್ಥವಾಗಿರುತ್ತದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಆಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಗಿತ್ತು, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	**(1) ಮೆ॥ ಕೇಶವ ಆರ್** ಬಿನ್ ರಾಮಚಂದ್ರಪ್ಪ, **(2) ಶ್ರೀಮತಿ ಇಂದಿರಾ ಕೋಂ ಕೇಶವ ಆರ್, ಇವರಿಬ್ಬರ ವಿಳಾಸ:** ಮಂಡಿಬೆಲೆ ಬೆಂಗಳೂರು ಗ್ರಾಮಾಂತರ, ಸರ್ಕಾರಿ ಶಾಲೆ ಹತ್ತಿರ, ವಿಜಯಪುರ–562135. **ಮತ್ತೊಂದು ವಿಳಾಸ:** ಮೆ॥ ಕೇಶವ ಆರ್ ಬಿನ್ ರಾಮಚಂದ್ರಪ್ಪ, ಮಾಲೀಕರು, ಅರ್ಥ್ ಮೂವರ್ಸ್ (ಜೆಸಿಬಿ) ಮಂಡಿಬೆಲೆ ಗ್ರಾಮ, ಅಂಚೆ ವಿಜಯಪುರ–562135. **ಮತ್ತೊಂದು ವಿಳಾಸ:** ಶ್ರೀಮತಿ ಇಂದಿರಾ ಕೋಂ ಕೇಶವ ಆರ್, ಸುರದೇನುಪುರ, ಅರದೇಶನಹಳ್ಳಿ, ಬೆಂಗಳೂರು–562210.	**ಸ್ವತ್ತಿನ ವಿವರ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ಮುನಿಸಿಪಲ್ ಖಾತಾ ನಂ. 239/240/275/88/1, 240/276/89/1, ಜೊತೆಗೆ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮ, ಬಳ್ಳಾರಿ ಹೆದ್ದಾರಿ ಸುತ್ತಮುತ್ತಲ ಪ್ರದೇಶದಲ್ಲಿ ಒಟ್ಟು ವಿಸ್ತೀರ್ಣ 67 ಎಕರೆ 4.5 ಗುಂಟೆ ಜಾಗದಲ್ಲಿ ಮೆಸ್ಯುಯೇಜ್‌ಗಳು ಮತ್ತು ವಾಸಯೋಗ್ಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು ಮತ್ತು ಬೆಂಗಳೂರು ಉತ್ತರ ತಾಲ್ಲೂಕು ಜಿಲ್ಲೆಯ ಉಪ ಜಿಲ್ಲೆ ಬೆಂಗಳೂರಿನಲ್ಲಿ ನೋಂದಣಿಯಾಗಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ಬೆಂಗಳೂರು– ಬಳ್ಳಾರಿ ಹೆದ್ದಾರಿ ಮತ್ತು ಸರ್ವೆ ನಂ. 104/5–6ರ ಭೂಮಿ, ಪಶ್ಚಿಮಕ್ಕೆ : ಬೆಂಗಳೂರು– ಹಿಂದೂಪುರ ರೈಲ್ವೆ ಲೇನ್ ಮತ್ತು ಸರ್ವೆ ನಂ. 88 (ಭಾಗ) ದ ಉಳಿಕೆ ಭಾಗ, ಉತ್ತರಕ್ಕೆ : ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಗಾಗಿ ಸರ್ಕಾರವು ಸ್ವಾಧೀನಪಡಿಸಿಕೊಂಡಿರುವ ನಿವೇಶನ ನಂ. 98/1(ಪಿಟಿ), 101/1ಎ(ಪಿಟಿ) 101/2 (ಭಾಗ) ಹೊಂದಿರುವ ಉಳಿದ ಭೂಮಿಗಳು, ದಕ್ಷಿಣಕ್ಕೆ : ಕಾರ್ಟ್ ಟ್ರ್ಯಾಕ್‌ಗಳ ಸರ್ವೆ ನಂ. 92/2, 94/5 ಮತ್ತು 1056ಎ–7. **ಷೆಡ್ಯೂಲ್–ಬಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ವಿಸ್ತೀರ್ಣ 25.72 ಎಕರೆ, ಸರ್ವೆ ನಂ.90,97/1,97/2,97/3,92/1,93/1,93/3,93/2ಎ,93/2ಬಿ,93/4,93/5,95/196/1,96/ 2,94/2,94/3,94/1,94/4, ಮತ್ತು 95/2 ರ ಇಕ್ವಿಲೆಂಟ್ 1,04,108.71 ಚದರ ಮೀಟರ್‌ಗಳು, ಮತ್ತು ಮುಂದಿನ ಭಾಗ ಷೆಡ್ಯೂಲ್ ಎ ಆಸ್ತಿಯಾಗಿರುತ್ತದೆ. ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಕಮರ್ಷಿಯಲ್ ಬೌಂಡರಿ, ಪಶ್ಚಿಮಕ್ಕೆ : ಸಿವಿಕ್ ಸೌಲಭ್ಯ/ಪಾರ್ಕ್‌ಗಳು ಮತ್ತು ತೆರೆದ ಜಾಗಗಳು, ಉತ್ತರಕ್ಕೆ : ಕಮರ್ಷಿಯಲ್ ಬೌಂಡರಿ, ದಕ್ಷಿಣಕ್ಕೆ : ಗ್ರಾಮದ ರಸ್ತೆ. **ಷೆಡ್ಯೂಲ್–ಸಿ :** ವಾಸಯೋಗ್ಯ ಅಭಿವೃದ್ಧಿ ಭೂಮಿಯಲ್ಲಿ (ಷೆಡ್ಯೂಲ್ ಬಿ ಆಸ್ತಿಯಲ್ಲಿ ವಿವರಿಸಿದಂತೆ) 34.77 ಚದರ ಮೀಟರ್ (374 ಚದರ ಅಡಿ) ಅವಿಭಾಜಿತ ಭಾಗ, ಹಕ್ಕು ಶೀರ್ಷಿಕೆ, ಹಿತಾಸಕ್ತಿ ಮಾಲೀಕತ್ವವನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. **ಷೆಡ್ಯೂಲ್–ಡಿ :** ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ. RBT15F0004, ನೆಲಮಹಡಿಯನ್ನೊಳಗೊಂಡಂತೆ ಟವರ್ 15, ರೇನ್ ಟ್ರೀ ಬೌಲೆವಾರ್ಡ್ ಬಿಲ್ಟ್ ಷೆಡ್ಯೂಲ್ ಬಿ ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, ಅಂದಾಜು ವಿಸ್ತೀರ್ಣ 86.77 ಚದರ ಮೀಟರ್‌ಗಳು (934 ಚದರ ಅಡಿ), ಕಾರ್ಪೆಟ್ ಪ್ರದೇಶ ಮತ್ತು 122.63 ಚದರ ಮೀಟರ್‌ಗಳು (1320 ಚದರ ಅಡಿ) ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ ಮತ್ತು ಎರಡು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ. (One Tande) ಮತ್ತು ಬಿಬಿಎಂಪಿ ಖಾತಾ ನಂ. 239/240/275/88/1, 240/276/89/1/726/ಟಿ–1 ಹೊಂದಿರುವ ಆಸ್ತಿಯಾಗಿರುತ್ತದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.**	09.07.2025 ಎನ್‌ಪಿಎ ದಿನಾಂಕ 05.06.2025	Power Home BRE, Loan A/c No. PHR0561 04277943 Amount : Rs. 50,00,000/- ಒಟ್ಟು ಬಾಕಿ ಮೊತ್ತ ರೂ.38,58,670/– ದಿನಾಂಕ: 07.07.2025 ರಂದು ಇದ್ದಂತೆ
2	**(1) ಮೆ॥ ವೇಮಿ ರೆಡ್ಡಿ ಯಶೋಧರ್ ರೆಡ್ಡಿ** ಬಿನ್ ಮುರಳೀಧರ್ ರೆಡ್ಡಿ, **(2) ಮೆ॥ ವಿ ಮುರಳೀಧರ್ ರೆಡ್ಡಿ** ಬಿನ್ ಬಾಲಕೋಟ ರೆಡ್ಡಿ, **ಇವರಿಬ್ಬರ ವಿಳಾಸ:** ಫ್ಲಾಟ್ ನಂ.411, ಇಂಡಸ್ ಇನ್ನೋವಾ ಅಪಾರ್ಟ್‌ಮೆಂಟ್ಸ್, ಹೆಚ್‌ಪಿ ಕಚೇರಿಯ ಹಿಂಭಾಗ, ಮಹದೇವಪುರ, ಬೆಂಗಳೂರು–560048. **ಮತ್ತೊಂದು ವಿಳಾಸ: ಮೆ॥ ವೇಮಿ ರೆಡ್ಡಿ ಯಶೋಧರ್ ರೆಡ್ಡಿ** ಬಿನ್ ಮುರಳೀಧರ್ ರೆಡ್ಡಿ, ಫ್ಲಾಟ್ ನಂ.302, ಅನೀಶ್ ಅಬೋದ್ ಮಹೇಶ್ವರಿ ನಗರ, ಶಿವಗಿರಿ ಕಾಲೋನಿ ಮುಲಾಪೇಟ್ ನೆಲ್ಲೂರು ಆಂಧ್ರಪ್ರದೇಶ–524003. **ಮತ್ತೊಂದು ವಿಳಾಸ: ಮೆ॥ ವೇಮಿ ರೆಡ್ಡಿ ಯಶೋಧರ್ ರೆಡ್ಡಿ** ಬಿನ್ ಮುರಳೀಧರ್ ರೆಡ್ಡಿ ಮಾಲೀಕರು ಸ್ಮಾರ್ಟ್ ಹೋಮ್ ಸೆಲ್ಯೂಷನ್ಸ್, ಫ್ಲಾಟ್ ನಂ.404, ಇಂಡಸ್ ಇನ್ನೋವಾ ಅಪಾರ್ಟ್‌ಮೆಂಟ್ಸ್, ಹೆಚ್‌ಪಿ ಸಾಫ್ಟ್‌ವೇರ್ ಹಿಂಭಾಗ, ಬೆಂಗಳೂರು–560048. **ಮತ್ತೊಂದು ವಿಳಾಸ: ಮೆ॥ ವಿ ಮುರಳೀಧರ್ ರೆಡ್ಡಿ** ಬಿನ್ ಬಾಲಕೋಟ ರೆಡ್ಡಿ, ನಂ.24–1–511–2, ಫ್ಲಾಟ್ ನಂ.304, ಟುಲಿಪ್ ಅಪಾರ್ಟ್‌ಮೆಂಟ್ಸ್, ಜೆ004ಇ, ಬಂಗಲ ಲೇಔಟ್, ನೆಲ್ಲೂರು ಗ್ರಾಮಾಂತರ–524003.	**ಆಸ್ತಿಯ ವಿವರ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಮನೆಯ ನಂ.104, ನೆಲ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯನ್ನೊಳಗೊಂಡಿದ್ದು ಡಿಎಸ್‌ಆರ್ ಎಲೈಟ್ ಸರ್ವೆ ನಂ.52/2ರಲ್ಲಿ ನಿರ್ಮಿಸಲಾಗಿದ್ದು, ಮಹಾದೇವಪುರ ಗ್ರಾಮ, ಕೆಆರ್ ಪುರಂ ಹೋಬಳಿ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ 3503 ಚದರ ಅಡಿ ಅವಿಭಾಜಿತ ಭಾಗ ಮತ್ತು 4766 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ಚಾನಲ್‌ನ ಕಾಲುವೆ, ಪಶ್ಚಿಮಕ್ಕೆ: ಮಹದೇವಪುರ ರಸ್ತೆಯ ಮಧ್ಯೆ ಮೂಲ ಭೂಮಾಲೀಕರು ಅದೇ ಸರ್ವೆ ನಂ.ಆಸ್ತಿಯಲ್ಲಿನ 15 ಗುಂಟೆ ಭೂಮಿಯನ್ನು ಉಳಿಸಿಕೊಂಡಿದ್ದಾರೆ, ಉತ್ತರಕ್ಕೆ: 25 ಅಡಿ ರಸ್ತೆ ಮತ್ತು ಸರ್ವೆ ನಂ. 53ರ ಕೃಷಿ ಭೂಮಿಯ ಒಂದು ಭಾಗ, ದಕ್ಷಿಣಕ್ಕೆ: ನಾರಾಯಣಪ್ಪರವರ ಭೂಮಿ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.**	09.07.2025 ಎನ್‌ಪಿಎ ದಿನಾಂಕ 08.06.2025	Overdraft Against Property Loan A/c No. 920030041046924 Amount : Rs.2,14,00,000/- ಒಟ್ಟು ಬಾಕಿ ಮೊತ್ತ ರೂ. 1,32,34,525/– ದಿನಾಂಕ: 03.07.2025 ರಂದು ಇದ್ದಂತೆ
3	**(1) ಶ್ರೀ ತಿಬ್ಬೇಗೌಡ** ಬಿನ್ ಮಾದೇಗೌಡ, ವಿಳಾಸ: ನಂ.258, 6ನೇ ಕ್ರಾಸ್, 3ನೇ ಹಂತ, ಬಿಇಎಂಎಲ್ ಲೇಔಟ್, ರಾಜರಾಜೇಶ್ವರಿ ನಗರ ಬೆಂಗಳೂರು ದಕ್ಷಿಣ, ಬೆಂಗಳೂರು–560098 **(ಸಾಲಗಾರರು)**. **(2) ಶ್ರೀಮತಿ ಶಿಲ್ಪಾ ಗೌಡ** D/o ನಂಜಯ್ಯ ಅಮೃತೂರ್ ವಿಳಾಸ: ನಂ.258, ತಿಬ್ಬಾದೇವಿ ನಗರ, ವಿವೇಕಾನಂದ ಎದುರು, 6ನೇ ಕ್ರಾಸ್, ಜಿಆರ್‌ಟಿ ಹತ್ತಿರ, ಬಿಇಎಂಎಲ್ ಕಾಂಪ್ಲೆಕ್ಸ್ ಹತ್ತಿರ, ರಾಜರಾಜೇಶ್ವರಿ ನಗರ ಬೆಂಗಳೂರು, ಕರ್ನಾಟಕ–560098. **ಮತ್ತೊಂದು ವಿಳಾಸ: ಶ್ರೀಮತಿ ಶಿಲ್ಪಾ ಗೌಡ** D/o ನಂಜಯ್ಯ ಅಮೃತೂರು ವಿಳಾಸ: ನಂ.296, 1ನೇ ಕ್ರಾಸ್, 1ನೇ ಪೇಸ್, 5ನೇ ಹಂತ ಬಿಇಎಂಎಲ್ ಲೇಔಟ್ ರಾಜರಾಜೇಶ್ವರಿ ನಗರ, ಬೆಂಗಳೂರು–560098. **(ಸಹ–ಅರ್ಜಿದಾರರು)**.	**ಷೆಡ್ಯೂಲ್ ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ನಂ.339ಬಿ, ಈ ಆಸ್ತಿಯು ಪೇಸ್ 1, ಸೆಕ್ಟರ್ ಬಿ, ಐಡಿಲ್ ಹೋಮ್ಸ್ ಟೌನ್‌ಶಿಪ್, ಕೆಂಚನಹಳ್ಳಿ/ಹಲಗೆವೊಡೇರಹಳ್ಳಿಯಲ್ಲಿ ಐಡಿಯಲ್ ಹೋಮ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಲೇಔಟ್‌ನಲ್ಲಿ ರೂಪಿಸಲಾಗಿದ್ದು, ಪ್ರಸ್ತುತ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ, ಬಿಬಿಎಂಪಿ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 47.6 + 49/2 ಅಡಿ, ಉತ್ತರದಿಂದ ದಕ್ಷಿಣಕ್ಕೆ: 147 + 150/2 ಅಡಿ ಮತ್ತು ಒಟ್ಟು ವಿಸ್ತೀರ್ಣ 7165 ಚದತ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.340, ಪಶ್ಚಿಮಕ್ಕೆ: ನಿವೇಶನ ನಂ.339–ಎ, ಉತ್ತರಕ್ಕೆ: ನಿವೇಶನ ನಂ.17ನೇ ಕ್ರಾಸ್ ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.330–ಎ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.**	05.07.2025 ಎನ್‌ಪಿಎ ದಿನಾಂಕ 15.04.2025	Overdraft Loan A/c No. 923030013288166 Rs. 4,53,35,336/- ಒಟ್ಟು ಬಾಕಿ ಮೊತ್ತ ರೂ. 5,00,00,000/– ದಿನಾಂಕ: 03.07.2025 ರಂದು ಇದ್ದಂತೆ
4	**(1) ಶ್ರೀ ಗಿರೀಶ್ ಎಂಎನ್** ಬಿನ್ ನಿರ್ವಾಣ್ ಸ್ವಾಮಿ **(ಸಾಲಗಾರರು/ಅರ್ಜಿದಾರರು), (2) ಶ್ರೀಮತಿ ಗೀತಾ ಬಿ ಪಿ ಕೋಂ** ಗಿರೀಶ್ **(ಸಹ–ಅರ್ಜಿದಾರರು/ಜಾಮೀನುದಾರರು), ಇವರಿಬ್ಬರ ವಿಳಾಸ:** ನಂ.150, ಸಮೃದ್ಧಿ ಎನ್‌ಕ್ಲೇವ್, 3ನೇ ಮೇನ್, ಜೆಪಿ ನಗರ ಪೋಸ್ಟ್, ಬೆಂಗಳೂರು–560079. **ಮತ್ತೊಂದು ವಿಳಾಸ:** ನಂ.120, 6ನೇ ಎ ಕ್ರಾಸ್, 1ನೇ ಮುಖ್ಯ ರಸ್ತೆ, ಕೆಎಸ್ ಲೇಔಟ್ ಬೆಂಗಳೂರು–560078. **ಮತ್ತೊಂದು ವಿಳಾಸ:** ಮಾಲೀಕರು ಗಜಾನನ ಟ್ರೇಡರ್ಸ್, ನಂ.43/1, ಕುಡ್ಲು ಗೇಟ್, ಬೆಸ್ಕಾಂ ಕಚೇರಿಯ ಹಿಂಭಾಗ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560068.	**ಷೆಡ್ಯೂಲ್ ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸರ್ವೆ ನಂ.181, ಆಸ್ತಿ ನಂ.919, 18ನೇ ಕ್ರಾಸ್, 1ನೇ ಹಂತ, ಕುಮಾರಸ್ವಾಮಿ ಲೇಔಟ್, ಬೆಂಗಳೂರು–560078. ವಿಸ್ತೀರ್ಣ 685 ಚದರ ಅಡಿ ಜೊತೆಗೆ ಕಟ್ಟಡವನ್ನೊಳಗೊಂಡಿದೆ ಮತ್ತು ಅವುಗಳ ಮೇಲಿನ ರಚನೆಗಳು ನೆಲವಸ್ತುಗಳ ಫಿಟ್ಟಿಂಗ್‌ಗಳು ಮತ್ತು ಭೂಮಿಗೆ ಶಾಶ್ವತವಾಗಿ ಜೋಡಿಸಲಾದ ಸ್ಥಾವರ ಮತ್ತು ಯಂತ್ರಗಳು ಮತ್ತು ಭವಿಷ್ಯಗಳನ್ನೊಳಗೊಂಡಿವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಅದೇ ಆಸ್ತಿಯ ಭಾಗ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.**	02.07.2025 ಎನ್‌ಪಿಎ ದಿನಾಂಕ 18.06.2025	Power Home Vanilla BRE Loan A/c No. PHR056103057452 Amount : Rs. 96,84,708/- ಒಟ್ಟು ಬಾಕಿ ಮೊತ್ತ ರೂ. 83,78,069/– ದಿನಾಂಕ: 02.07.2025 ರಂದು ಇದ್ದಂತೆ
5	**(1) ಶ್ರೀಮತಿ ಗೀತಾ ಬಿ ಪಿ ಕೋಂ ಗಿರೀಶ್ (ಸಾಲಗಾರರು/ಅರ್ಜಿದಾರರು), (2) ಶ್ರೀ ಗಿರೀಶ್ ಎಂಎನ್** ಬಿನ್ ನಿರ್ಮಲ್ ಸ್ವಾಮಿ **(ಸಹ–ಅರ್ಜಿದಾರರು/ಜಾಮೀನುದಾರರು), ಇವರಿಬ್ಬರ ವಿಳಾಸ:** # 919, 18ನೇ ಕ್ರಾಸ್, 1ನೇ ಹಂತ, ಕುಮಾರಸ್ವಾಮಿ ಲೇಔಟ್, ಕಾಲಭೈರವೇಶ್ವರ ದೇವಸ್ಥಾನದ ಹತ್ತಿರ, ಬೆಂಗಳೂರು–560111. **ಮತ್ತೊಂದು ವಿಳಾಸ: ಶ್ರೀಮತಿ ಗೀತಾ ಬಿ ಪಿ** ಕೋಂ ಗಿರೀಶ್ ಮಾಲೀಕರು ಗಜಾನನ ಟ್ರೇಡರ್ಸ್, ನಂ.43/1, ಕುಡ್ಲು ಗೇಟ್, ಬೆಸ್ಕಾಂ ಕಚೇರಿ ಹಿಂಭಾಗ, ಹೊಸೂರು ಮುಖ್ಯ ರಸ್ತೆ, ಐಶ್ವರ್ಯ ಕ್ರಿಸ್ಟಲ್ ಲೇಔಟ್, ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು–560108. **ಮತ್ತೊಂದು ವಿಳಾಸ: ಶ್ರೀಮತಿ ಗೀತಾ ಬಿ ಪಿ ಕೋಂ ಗಿರೀಶ್,** ಮಾಲೀಕರು ಗಜಾನನ ಟ್ರೇಡರ್ಸ್, ನಂ.43/1, ಕುಡ್ಲು ಗೇಟ್, ಬೆಸ್ಕಾಂ ಕಚೇರಿ ಹಿಂಭಾಗ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560068.	**ಷೆಡ್ಯೂಲ್ ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮುನಿಸಿಪಲ್ ನಂ.919, ಪಿಐಡಿ ನಂ.55–293–919, 18ನೇ ಕ್ರಾಸ್ ರಸ್ತೆ, 1ನೇ ಹಂತ, ಕುಮಾರಸ್ವಾಮಿ ಲೇಔಟ್, ಬೆಂಗಳೂರು–560078. ವಿಸ್ತೀರ್ಣ 685 ಚದರ ಅಡಿ ಜೊತೆಗೆ ಕಟ್ಟಡವನ್ನೊಳಗೊಂಡಿದೆ ಮತ್ತು ಅವುಗಳ ಮೇಲಿನ ರಚನೆಗಳು ನೆಲವಸ್ತುಗಳ ಫಿಟ್ಟಿಂಗ್‌ಗಳು ಮತ್ತು ಭೂಮಿಗೆ ಶಾಶ್ವತವಾಗಿ ಜೋಡಿಸಲಾದ ಸ್ಥಾವರ ಮತ್ತು ಯಂತ್ರಗಳು ಮತ್ತು ಭವಿಷ್ಯಗಳನ್ನೊಳಗೊಂಡಿವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಅದೇ ಆಸ್ತಿಯ ಭಾಗ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.**	02.07.2025 ಎನ್‌ಪಿಎ ದಿನಾಂಕ 18.06.2025	Asset Power BRE Loan A/c No. LTR00090 8794677 Amount : Rs. 60,00,000/- ಒಟ್ಟು ಬಾಕಿ ಮೊತ್ತ ರೂ. 61,10,863/– ದಿನಾಂಕ: 02.07.2025 ರಂದು ಇದ್ದಂತೆ
6	**(1) M/s ARZOOO VENTURESS LLP ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಸೈಯದಾ ಸುಕ್ಕೈನ್ ಬಾನು,** 18 ಕ್ಯಾಸಲ್ ಸ್ಟ್ರೀಟ್, ಅಶೋಕನಗರ, ಬೆಂಗಳೂರು ನಗರ ಕರ್ನಾಟಕ, ರಿಚ್‌ಮಂಡ್ ಟೌನ್, ಬೆಂಗಳೂರು–560025. **(2) ಶ್ರೀ ಮುಮ್ತಾಜ್ ಅಲಿ** ಬಿನ್ ಮೊಹಮ್ಮದ್ ಅಲಿ, **(3) ಶ್ರೀಮತಿ ಸೈಯದಾ ಸುಕ್ಕೈನ್ ಬಾನು ಕೋಂ ಮುಮ್ತಾಜ್ ಅಲಿ, ಇವರಿಬ್ಬರ ವಿಳಾಸ:** ನಂ.15, 4ನೇ ಮಹಡಿ, Rthenius ಸ್ಟ್ರೀಟ್, ರಿಚ್‌ಮಂಡ್ ಟೌನ್, ಬೆಂಗಳೂರು ಉತ್ತರ, ಮ್ಯೂಸಿಯಮ್ ರಸ್ತೆ–560025. **(4) ಶ್ರೀ ಮೊಹ್ಸಿನ್ ಅಲಿ ಶಿರಾಜಿ** ಬಿನ್ ಶ್ರೀ ಅಗಾ ಅಬ್ಬಾಸ್ ಅಲಿ ಶಿರಾಜಿ, 7/3, ಎಜಿಎ ಅಬ್ದುಲ್ಲಾ ಸ್ಟ್ರೀಟ್, ಜಾನ್ಸನ್ ಮಾರುಕಟ್ಟೆ ಎದುರು, ರಿಚ್‌ಮಂಡ್ ಟೌನ್, ಬೆಂಗಳೂರು, ಕರ್ನಾಟಕ–560025.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಫ್ಲಾಟ್ ನಂ.ಎಸ್‌ಎಫ್–202, ಆಸ್ತಿಯ ಐಡಿ ನಂ.76–33–15/5, ಕಟ್ಟಡದ ಎರಡನೇ ಮಹಡಿಯಲ್ಲಿ 1490 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್‌ಅಪ್ ಪ್ರದೇಶ, ಜೊತೆಗೆ 298.50 ಚದರ ಅಡಿ ಯುಡಿಎಸ್, ಬಿಬಿಎಂಪಿ ಖಾತಾ ನಂ.15, ಹಳೆ ನಂ.15 & 15/1, ಆಸ್ತಿಯ ಐಡಿ ನಂ.76–33–1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 88 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 33.10 + 32.6/2 ಅಡಿ, ಒಟ್ಟು ವಿಸ್ತೀರ್ಣ 2890 ಚದರ ಅಡಿ, ಈ ಆಸ್ತಿಯು ರೆನಿಯಸ್ ಸ್ಟ್ರೀಟ್, ರಿಚ್‌ಮಂಡ್ ಟೌನ್, ಬೆಂಗಳೂರಿನಲ್ಲಿದೆ. ಸ್ಟಿಲ್ಟ್, ನೆಲ ಮತ್ತು ನಾಲ್ಕು ಮೇಲಿನ ಮಹಡಿಯನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.14, ಪಶ್ಚಿಮಕ್ಕೆ: ಫ್ಲಾಟ್ ನಂ.ಎಸ್‌ಎಫ್–201, ಉತ್ತರಕ್ಕೆ: ಆಸ್ತಿ ನಂ.14, ದಕ್ಷಿಣಕ್ಕೆ: ಆಸ್ತಿ ನಂ.16, **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್ 9986316545 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 11.05.2025	SBB OVERDRAFT Loan A/c No. 923030054569749 Amount : Rs. 50,00,000/- ಒಟ್ಟು ಬಾಕಿ ಮೊತ್ತ ರೂ. 50,80,474/– ದಿನಾಂಕ: 07.07.2025 ರಂದು ಇದ್ದಂತೆ
7	**(1) ಮೆ॥ ಆಶಿಯಾನಾ ಇಂಡಸ್ಟ್ರೀಸ್ ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಆಯೇಷಾ ಎಂ ಪನಾಲಿ ಮತ್ತು ಶ್ರೀ ಮುಸ್ತಾಕ್ ಮೊಹಮದ್ ಸಾಬ್ ಪನಾಲಿ,** ಡಿ.ನಂ. 1345B, ಕಣಬರ್ಗಿ ಕೈಗಾರಿಕಾ ಪ್ರದೇಶ, ಆಟೋ ನಗರ, ಬೆಳಗಾವಿ ಕರ್ನಾಟಕ–590016. **(2) ಶ್ರೀಮತಿ ಆಯೇಶಾ ಎಂ ಪನಾಲಿ D/o** ಶ್ರೀ ಮುಸ್ತಾಕ್ ಮೊಹಮದ್ ಸಾಬ್ ಪನಾಲಿ, **(3) ಶ್ರೀ ಮುಸ್ತಾಕ್ ಮೊಹಮದ್ ಸಾಬ್ ಪನಾಲಿ** ಬಿನ್ ಮೊಹಮದ್ ಸಾಬ್ ಹುಸೇನ್ ಸಾಬ್ ಪನಾಲಿ, **ಇವರಿಬ್ಬರ ವಿಳಾಸ:** ಎಲ್‌ಐಜಿ 4, ಅಶೋಕ್ ನಗರ, ಬೆಳಗಾವಿ, ಕರ್ನಾಟಕ–590001.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿ ಮತ್ತು ಕಟ್ಟಡ ಅಂದರೆ ಪ್ಲಾಟ್ ನಂ.1345/A, 1346/A & 1345/B, ಸರ್ವೆ ನಂ–39, KIADB ಇಂಡಸ್ಟ್ರಿಯಲ್ ಪ್ರದೇಶ, ಆಟೋ ನಗರ, ಕಣಬರ್ಗಿ, ಬೆಳಗಾಂ–590002, ಕರ್ನಾಟಕ. ಜೊತೆಗೆ ಕಟ್ಟಡದಲ್ಲಿ ಸಾಮಾನ್ಯ ಪ್ರದೇಶಗಳನ್ನೊಳಗೊಂಡಿದೆ, water closet, ಒಳಚರಂಡಿ, ಶೌಚಾಲಯಗಳು, ಫ್ಲಾಟ್/ಯುನಿಟ್/ಕಚೇರಿ ಆವರಣ ಅಥವಾ ಸಂಬಂಧಿಸಿದ ಎಲ್ಲಾ ನಾಗರೀಕ ಸೌಲಭ್ಯಗಳನ್ನೊಳಗೊಂಡಿದೆ, 8 ಆಸ್ತಿಯ ಆರ್.ಎಸ್.ನಂ.45/3ರಲ್ಲಿ ವಿಸ್ತೀರ್ಣ 492 ಚದರ ಮೀಟರ್‌ಗಳು. ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.1345/C, ಪಶ್ಚಿಮಕ್ಕೆ: ಪ್ಲಾಟ್ ನಂ.1349/B ಮತ್ತು 1346/C, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಭೂಮಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್ 9986316545 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 06.05.2025	SBB CASH CREDIT Loan A/c No. 921030043168452 & 921060057016942 Amount : Rs.2,81,00,000/- ಒಟ್ಟು ಬಾಕಿ ಮೊತ್ತ ರೂ. 3,15,57,635/– ದಿನಾಂಕ: 07.07.2025 ರಂದು ಇದ್ದಂತೆ
8	**(1) ಮೆ॥ ಸಂಗಯ್ಯ ರಾಮಯ್ಯ ಕಟ್ಟಂ ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ.ಅನಿಲ್ ಕಟ್ಟಂ ಮತ್ತು ಶ್ರೀಮತಿ ಆರತಿ ಕಟ್ಟಂ ಹೆಚ್.ನಂ.09,6,343, ಗಾಂಧಿ ಗುಂಜ್, ಬೀದರ್–585401**. ಕರ್ನಾಟಕ. **(2) ಶ್ರೀ.ಅನಿಲ್ ಮಾನಯ್ಯ ಕಟ್ಟಂ** ಬಿನ್ ಶ್ರೀ ಮಾನಯ್ಯ ಕಟ್ಟಂ, **(3) ಶ್ರೀಮತಿ ಆರತಿ, ಶ್ರೀ ಅನಿಲ್ ಮಾನಯ್ಯ ಕಟ್ಟಂ,** **ಇವರಿಬ್ಬರ ವಿಳಾಸ:** ನಂ.8–10–65, ಹಳೆ ಬಸ್ ನಿಲ್ದಾಣದ ಹತ್ತಿರ, ಹೊಸ ಹೌಸಿಂಗ್ ಕಾಲೋನಿ ಬೀದರ್, ಕರ್ನಾಟಕ–585401.	**ಆಸ್ತಿ ನಂ.1 : (1)** ಅಂಗಡಿ ಸಿಎಂಸಿ ನಂ. 9–6–380/1(0),9–6–516(ಎನ್), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 25 ಅಡಿ, ಇಕ್ವಿಲೆಂಟ್ ಒಟ್ಟು ಪ್ರದೇಶ 300 ಚದರ ಅಡಿ, ಒಂದು ಅಂಗಡಿಯನ್ನು ಆರ್‌ಸಿಸಿ ಛಾವಣಿಯಿಂದ ನಿರ್ಮಿಸಲಾಗಿದ್ದು, ಅದರ ವಿಸ್ತೀರ್ಣ 230 ಚದರ ಅಡಿ ಮತ್ತು ಸಿಎಂಸಿ ನಂ. 9–6–508 ಮತ್ತು 9–6–509(0) 9–6–640(ಎನ್) ಹೊಂದಿರುವ ಅಂಗಡಿಯ ಒಟ್ಟು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 25.6 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ : 25 ಅಡಿಗಳು, ಇಕ್ವಿಲೆಂಟ್ ಒಟ್ಟು ಪ್ರದೇಶ 640 ಚದರ ಅಡಿಗಳು, ಎರಡು ಅಂಗಡಿಗಳು ಆರ್‌ಸಿಸಿ ಛಾವಣಿಯನ್ನು ಹೊಂದಿದ್ದು, ಪ್ಲಿಂತ್ ಪ್ರದೇಶ 640 ಚದರ ಅಡಿ, ಜೊತೆಗೆ ಪ್ಲಾಟ್ ಫಾರಂ ಒಳಗೊಂಡಿರುವ ಆಸ್ತಿಯಾಗಿರುತ್ತದೆ. ಈ ಎಲ್ಲಾ ಆಸ್ತಿಯು ಮೋತಿ ಬಜಾರ್, ಛಿದ್ರಿ ರಸ್ತೆ, ಬೀದರ್‌ನಲ್ಲಿದೆ. **(2)** ಭೂಮಿಯ ಸರ್ವೆ ನಂ. 197/2, ವಿಸ್ತೀರ್ಣ 5 ಎಕರೆಗಳು 21 ಗುಂಟೆಗಳು, ಭೂಮಿಯ ಆರ್/ಎ 5.15 ಪೈಸೆ, ಈ ಆಸ್ತಿಯು ಮರ್ಖಲ್ ಗ್ರಾಮ, ಬೀದರ್ ತಾಲ್ಲೂಕು & ಜಿಲ್ಲೆಯಲ್ಲಿದೆ. **ಆಸ್ತಿ ನಂ.2 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಎರಡು ಅಂತಸ್ತುಗಳನ್ನೊಳಗೊಂಡಿದ್ದು, ಸ್ವತ್ತಿನ ಮುನಿಸಿಪಲ್ ನಂ. 9–7–17, ಪ್ರದೇಶದಿಂದ ಕೂಡಿರುವ ಪ್ಲಾಟ್‌ನಲ್ಲಿ ನಿರ್ಮಿಸಲಾದ ಕಟ್ಟಡಗಳ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 15–11" ಮತ್ತು ಉತ್ತರದಿಂದ ದಕ್ಷಿಣಕ್ಕೆ : 68'–9", ಇಕ್ವಿಲೆಂಟ್ 1093.81 ಚದರ ಅಡಿ, ಈ ಆಸ್ತಿಯು ಮೋತಿ ಬಜಾರ್, ಗಾಂಧಿ ಗಂಜ್, ಬೀದರ್‌ನಲ್ಲಿದೆ. ಜೊತೆಗೆ ಚಕ್ಕುಬಂದಿ : ಪೂರ್ವಕ್ಕೆ : ಸಾಮಾನ್ಯ ಗೋಡೆ ಮತ್ತು ನಂತರ ರಾಜಾರಾಮ್ ಗಣಪತ್‌ರಾವ್ ಅವರ ಗೋದಾಮು, ಪಶ್ಚಿಮಕ್ಕೆ : ಸಾಮಾನ್ಯ ಗೋಡೆ ಮತ್ತು ನಂತರದ ಸುಲ್ತಾನರ ಗೋದಾಮು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಲ್ಲಿಕಾರ್ಜುನ್ ಬಿನ್ ಸಂಗಪ್ಪ ಬಿರಾದಾರ್ ರವರ ಅಂಗಡಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್ 9986316545 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 31.03.2025	SBB OVERD RAFT Loan A/c No. 922030051955540 Amount : Rs. 1,47,00,000/- ಒಟ್ಟು ಬಾಕಿ ಮೊತ್ತ ರೂ. 1,38,90,999/– ದಿನಾಂಕ: 07.07.2025 ರಂದು ಇದ್ದಂತೆ
9	**(1) ಮೆ॥ ಹರಿಪ್ರಿಯಾ ಎಂಟರ್‌ಪ್ರೈಸಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ನಂದ ಕಿಶೋರ್ ಎಸ್.,** ಪ್ಲಾಟ್ ನಂ.51/52, ಕೈಗಾರಿಕಾ ಪ್ರದೇಶ, ಹೈದರಾಬಾದ್, ರಾಯಚೂರು–584101. **ಮತ್ತೊಂದು ವಿಳಾಸ: ಮೆ॥ ಹರಿಪ್ರಿಯಾ ಎಂಟರ್‌ಪ್ರೈಸಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ನಂದ ಕಿಶೋರ್ ಎಸ್,** **(3) ಶ್ರೀ ನಂದ ಕಿಶೋರ್ ಎಸ್** ಬಿನ್ ಶ್ರೀ ಸತ್ಯನಾರಾಯಣ ಎಸ್, **(4) ಶ್ರೀ ಸತ್ಯನಾರಾಯಣ ಎಸ್** ಬಿನ್ ಶ್ರೀ ವೆಂಕಟೇಶ್, **ಇವರೆಲ್ಲರ ವಿಳಾಸ:** ಮನೆ ನಂ.2–2–4/41, 1ನೇ ಮಹಡಿ, ಎಚ್‌ಆರ್‌ಬಿ ಲೇಔಟ್, ರಾಯಚೂರು–584101.	**ಆಸ್ತಿಯು ಶ್ರೀ ಸತ್ಯನಾರಾಯಣ ಎಸ್ ರವರ ಹೆಸರಿನಲ್ಲಿದೆ :** ರಿಜಿಸ್ಟರ್ ಇಎಂ ಕಮರ್ಷಿಯಲ್ ಆಸ್ತಿಯ ಎಂಪಿಎಲ್ ನಂ.9–13–28, ಪಿಐಡಿ ನಂ.23–1–4–170, ವಿಸ್ತೀರ್ಣ 2565 ಚದರ ಅಡಿ, ಈ ಆಸ್ತಿಯು ಗದ್ವಾಲ್ ರಸ್ತೆ, ಮಡ್ಡಿಪೇಟೆ, ರಾಯಚೂರಿನಲ್ಲಿದೆ. ಈ ಆಸ್ತಿಯು ಎಸ್ ಸತ್ಯನಾರಾಯಣರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪಶ್ಚಿಮಕ್ಕೆ: ವಿರೂಪಾಕ್ಷ ಸ್ವಾಮಿರವರ ಆಸ್ತಿ, ಉತ್ತರಕ್ಕೆ: ಗದ್ವಾಲ್ ರಸ್ತೆ, ದಕ್ಷಿಣಕ್ಕೆ: ಇಂಟರ್‌ನಲ್ ರಸ್ತೆ, ಪೂರ್ವಕ್ಕೆ: ಬಿ ರಂಗ್‌ರವರ ಮನೆ. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್, +91 9986043776 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 05.04.2025	Over Draft-AGPRO POWER (Working Capital) Loan A/c No. 92203000176951 Amount : Rs. 30,00,000/- ಒಟ್ಟು ಬಾಕಿ ಮೊತ್ತ ರೂ. 29,22,023/– (ದಿನಾಂಕ 19.05.2025 ರವರೆಗಿನ ಬಡ್ಡಿ ಸೇರಿದ್ದಂತೆ)
10	**(1) ಶ್ರೀ ಎನ್ ಮೋಹನ್ ಕುಮಾರ್** ಬಿನ್ ಶ್ರೀ ಸೂರ್ಯಕಾಂತ್, 402, ಗಂಗಾಧರ ಲೇಔಟ್, ನಾಗರಭಾವಿ ಮುಖ್ಯರಸ್ತೆ, ಗೋವಿಂದರಾಜ್ ನಗರ, ಕಾಮಧೇನು ಆಸ್ಪತ್ರೆ, ಬೆಂಗಳೂರು–560040. **ಮತ್ತೊಂದು ವಿಳಾಸ: AQS ಟೆಕ್ನಾಲಜೀಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ.ಎನ್.ಮೋಹನ್ ಕುಮಾರ್,** 147, ಇ–1ನೇ ಮಹಡಿ, 17ನೇ ಮುಖ್ಯ ರಸ್ತೆ, ವಿಜಯ ನಗರ, ಸರ್ವಿಸ್ ರಸ್ತೆ, ಬೆಂಗಳೂರು–560040. **ಶ್ರೀ ಎನ್ ಮೋಹನ್ ಕುಮಾರ್** ಬಿನ್ ಶ್ರೀ ಸೂರ್ಯಕಾಂತ್, **(2) ಶ್ರೀಮತಿ ಎನ್ ಸ್ವಪ್ನಾ,** ಕೋಂ ಶ್ರೀ ಎನ್ ಮೋಹನ್ ಕುಮಾರ್, ಇವರಿಬ್ಬರ ವಿಳಾಸ: 12–7–253/146, ಸಿಯಾತಲ್ ಎಬಿ ರಾಯಚೂರು, ಎನ್‌ಆರ್ ಸಿಯಾತಲಾಬ್, ಕರ್ನಾಟಕ–584102. **ಮತ್ತೊಂದು ವಿಳಾಸ:** ಪ್ಲಾಟ್ ನಂ.243, ಸರ್ವೆ ನಂ.343/ಎ 351 352/3 4 5 ಅಲ್ಲಮಪ್ರಭು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಚಂದ್ರಪ್ರಭ ರಸ್ತೆ, ರಾಯಚೂರು–560040.	**ಈ ಆಸ್ತಿಯು ಶ್ರೀ ಎನ್ ಮೋಹನ್ ಕುಮಾರ್ ರವರ ಹೆಸರಿನಲ್ಲಿದೆ : ಷೆಡ್ಯೂಲ್ ಆಸ್ತಿ:** ತೆರೆದ ಪ್ಲಾಟ್ ನಂ.243, ಕರೆಸ್ಪಾಂಡಿಂಗ್ ಮುನಿಸಿಪಲ್ ನಂ.12–6–700/243 (ಪಿಐಡಿ ನಂ.6586853022), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9 ಮೀಟರ್‌ಗಳು X ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು 108 ಚದರ ಮೀಟರ್‌ಗಳು. ಈ ಆಸ್ತಿಯು ರಾಯಚೂರಿನ ಅನುಮೋದಿತ ಲೇಔಟ್ ಎನ್.ಎ. ಭೂಮಿಯ ಸರ್ವೆ ನಂ.343/A, 351 & 352/3, 4, 5ರಲ್ಲಿದೆ ಮತ್ತು ಈ ಲೇಔಟ್‌ನ್ನು "ಅಲ್ಮಾ ಪ್ರಭು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಎಂದು ಕರೆಯಲಾಗುತ್ತದೆ, ಜೊತೆಗೆ ರಾಯಚೂರು ಸಿಎಂಸಿ ವ್ಯಾಪ್ತಿಯಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.242, ಪಶ್ಚಿಮಕ್ಕೆ: ಪ್ಲಾಟ್ ನಂ.244, ಉತ್ತರಕ್ಕೆ: ಪ್ಲಾಟ್ ನಂ.254, ದಕ್ಷಿಣಕ್ಕೆ: 09 ಮೀಟರ್ ಅಗಲದ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್, 9620703099 ರವರನ್ನು ಸಂಪರ್ಕಿಸಿ.**	10.07.2025 ಎನ್‌ಪಿಎ ದಿನಾಂಕ 30.06.2025	POWER HOME BRE Loan A/c No. PHR03420 9667455 Amount : Rs. 30,00,000/- ಒಟ್ಟು ಬಾಕಿ ಮೊತ್ತ ರೂ. 30,17,564/– ದಿನಾಂಕ: 10.07.2025 ರಂದು ಇದ್ದಂತೆ
11	**(1) ಮೆ॥ ವೆಂಕಟೇಶ್ವರ ಬಾರ್ ಅಂಡ್ ರೆಸ್ಟೋರೆಂಟ್,** ಕುಶಾಲನಗರ ಮಾರುಕಟ್ಟೆ ರಸ್ತೆ ಕುಶಾಲನಗರ, ಕೊಡಗು 571234. **(2) ಮೆ॥ ಗೋವಿಂದರಾಜ್,** ಬಿನ್ ದಾಸೇಗೌಡ, ಮಾಲೀಕರು, ವೆಂಕಟೇಶ್ವರ ಬಾರ್ ಮತ್ತು ರೆಸ್ಟೋರೆಂಟ್, #169/1, 3ನೇ ಬ್ಲಾಕ್ ಬಾಪೂಜಿ ಎಕ್ಸ್‌ಟೆನ್ಷನ್, ಸೋಮವಾರಪೇಟೆ ಕುಶಾಲ್ ನಗರ, ಕೊಡಗು–571234. **(3) ಶ್ರೀ ಹೆಚ್.ಜಿ.ಸುನೀಲ್** ಬಿನ್ ಗೋವಿಂದ, #159/1, 3ನೇ ಬ್ಲಾಕ್ ಬಾಪೂಜಿ ಎಕ್ಸ್‌ಟೆನ್ಷನ್, ಸೋಮವಾರಪೇಟೆ ಕುಶಾಲ್ ನಗರ, ಕೊಡಗು–571234.	**ಆಸ್ತಿಯ ವಿವರಣೆ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯು ಮಂಡಲ ಕುಶಾಲನಗರ ಹೋಬಳಿ, ಸೋಮವಾರಪೇಟೆ, ಕೊಡಗು ಜಿಲ್ಲೆ, ಕೊಡಗು–571234ರಲ್ಲಿದೆ, ಮತ್ತು ಚಕ್ಕುಬಂದಿ ಪೂರ್ವಕ್ಕೆ: ಮಾರುಕಟ್ಟೆ ರಸ್ತೆ, ಪಶ್ಚಿಮಕ್ಕೆ: ಕೃಷ್ಣ ಮತ್ತು ಚಂದ್ರ ಅವರಿಗೆ ಸೇರಿದ ಮನೆ, ಉತ್ತರಕ್ಕೆ: ರಶೀದ್ ರವರಿಗೆ ಸೇರಿದ ಮನೆ, ದಕ್ಷಿಣಕ್ಕೆ: ತಂಗಕಣಿ ರವರಿಗೆ ಸೇರಿದ ಆಸ್ತಿ. **ಯಾವುದೇ ಮಾಹಿತಿಗಾಗಿ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234 ರವರನ್ನು ಸಂಪರ್ಕಿಸಿ.**	09.07.2025 ಎನ್‌ಪಿಎ ದಿನಾಂಕ 17.04.2025	SBB OVER DRAFT Loan A/c No. 922060049934275 & 922030007700198 Amount Rs.49,00,000/- & Rs.25,00,000/- ಒಟ್ಟು ಬಾಕಿ ಮೊತ್ತ ರೂ. 41,59,820/– ದಿನಾಂಕ: 09.07.2025 ರಂದು ಇದ್ದಂತೆ
12	**(1) ಮೆ॥ ರಾಜಗುರು ಸ್ಟೀಲ್ ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ.ದಿನೇಶ್ ಕುಮಾರ್ ಸರನ್ ಮತ್ತು ಶ್ರೀಮತಿ ಭಗವತಿದೇವಿ** ಸಿಟಿಎಸ್ ನಂ.1335, ಹರಪನಹಳ್ಳಿ ಕಟ್ಟಡ, ಮೂರೂಸ್ವೀರಮಠ ರಸ್ತೆ ಹುಬ್ಬಳ್ಳಿ, ಧಾರವಾಡ–580029, ಹನುಮಾನ್ ದೇವಸ್ಥಾನದ ಹತ್ತಿರ. **(2) ಶ್ರೀ.ದಿನೇಶ್ ಕುಮಾರ್ ಸರನ್** ಬಿನ್ ಶ್ರೀ ಕಲುರಾಮಿ ಸರನ್ **(3) ಶ್ರೀಮತಿ ಭಗವತಿ ದೇವಿ** ಕೋಂ. ಶ್ರೀ ದಿನೇಶ್ ಕುಮಾರ್ **ಇವರಿಬ್ಬರ ವಿಳಾಸ:** ಆರ್ ಎಸ್ ನಂ.33/2ಜಿ, ಪಿಎಲ್ ನಂ.05, ಜಿಎಫ್01, ಕೆಆರ್ ಹೋಮ್ಸ್, ಸರಸ್ವತಿಪುರಂ, ದಾರವಾಡ, ಹುಬ್ಬಳ್ಳಿ, ಕರ್ನಾಟಕ–580030.	**ಷೆಡ್ಯೂಲ್–'ಎ':** ಕೇವಲ 11.50% ಅವಿಭಾಜಿತ ಪಾಲು, ಹಿತಾಸಕ್ತಿಯನ್ನು ಹೊಂದಿರುವ ಭೂಮಿ, ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ಅರ್.ಎಸ್. ನಂ.33/2ಜಿ, ಫ್ಲಾಟ್ ನಂ.05, ವಿಸ್ತೀರ್ಣ 02 ಗುಂಟೆ 14.50 ಅನ್ನಾಸ್, ಇದು ಕೇಶ್ವಾಪುರ ಗ್ರಾಮ, ಹುಬ್ಬಳ್ಳಿಯಲ್ಲಿದೆ, ಮತ್ತು ಇದರ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ. ಪಶ್ಚಿಮಕ್ಕೆ: ಆರ್.ಎಸ್. ಸಂಖ್ಯೆ 33/1. ಉತ್ತರಕ್ಕೆ: ಆರ್.ಎಸ್. ಸಂಖ್ಯೆ 33/2ಜಿ/4. ದಕ್ಷಿಣಕ್ಕೆ: ಆರ್.ಎಸ್. ಸಂಖ್ಯೆ 33/2ಜಿ/6. **ಷೆಡ್ಯೂಲ್–'ಬಿ':** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಅಪಾರ್ಟ್‌ಮೆಂಟ್ ಬ್ಲಾಕ್ ನಂ.01, ನೆಲಮಹಡಿಯಲ್ಲಿ 1050 ಚದರ ಅಡಿ ಸೂಪರ್ ಬಿಲ್ಟ್–ಅಪ್ ಪ್ರದೇಶವನ್ನು ಹೊಂದಿದೆ. ಎಲ್ಲಾ ಸೌಕರ್ಯಗಳೊಂದಿಗೆ ಮತ್ತು ನೆಲಹಾಸಿಗೆ ವಿಟ್ರಿಫೈಡ್ ಟೈಲ್ಸ್‌ಗಳನ್ನು ಬಳಸಲಾಗುತ್ತಿದೆ. ಮತ್ತು "ಕೆ.ಆರ್. ಹೋಮ್ಸ್" ನ ಅಪಾರ್ಟ್‌ಮೆಂಟ್ ಹೆಸರು ಮತ್ತು ಶೈಲಿ ಸರಸ್ವತಿಪುರಂ, ಕೇಶ್ವಾಪುರ ಗ್ರಾಮ ಹುಬ್ಬಳ್ಳಿಯಲ್ಲಿದೆ ಮತ್ತು ಫ್ಲಾಟ್‌ನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ. ಪಶ್ಚಿಮಕ್ಕೆ: ಮೆಟ್ಟಿಲು ಮತ್ತು ಪ್ಯಾಸೇಜ್. ಉತ್ತರಕ್ಕೆ: ಆರ್.ಎಸ್. ಸಂಖ್ಯೆ. 33/2ಜಿ/4. ದಕ್ಷಿಣಕ್ಕೆ: ಆರ್.ಎಸ್. ಸಂಖ್ಯೆ. 33/2ಜಿ/6, **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯಪ್ರಸಾದ್ ಮೊಬೈಲ್ ಸಂಖ್ಯೆ 9916566630 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 20.05.2025	SBB OVER DRAFT Loan A/c No. 922030022604211 Amount Rs. 10,01,000/- ಒಟ್ಟು ಬಾಕಿ ಮೊತ್ತ ರೂ. 9,35,173/– ದಿನಾಂಕ: 07.07.2025 ರಂದು ಇದ್ದಂತೆ
13	**(1) ಮೆ॥ ಶ್ರೀ ಗುರುಕೃಪಾ ಎಂಟರ್‌ಪ್ರೈಸಸ್** **(2) ಮೆ॥ ಲಲಿತಾ ವೀರಭದ್ರಪ್ಪ ನಾಲತ್ವಾಡ್** ಕೋಂ. ವೀರಭದ್ರಪ್ಪ **ಇವರಿಬ್ಬರ ವಿಳಾಸ:** 20 ಎಪಿಎಂಸಿ ಯಾರ್ಡ್ ತಾವರಗೆರಾ– 580031	**ಆಸ್ತಿಯ ವಿವರಣೆ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ವಸತಿ ಆಸ್ತಿಯ ಟಿಎಂಸಿ ಸಂಖ್ಯೆ 3/1–4080 3/2–4081 ಪಿಐಡಿ ಸಂಖ್ಯೆ 9517063422, 12ನೇ ವಾರ್ಡ್, ಮಡೇನೂರು ರಸ್ತೆ ಪ್ರದೇಶ ವಿಶ್ವೇಶ್ವರಯ್ಯ ಶಾಲೆಯ ಹತ್ತಿರ, ತಾವರಗೇರಾ, ಕೊಪ್ಪಳ 583279, ಜೊತೆಗೆ ಎಲ್ಲಾ ಕಟ್ಟಡಗಳು ಮತ್ತು ರಚನೆಗಳು, ಫಿಕ್ಚರ್‌ಗಳು ಮತ್ತು ಎಲ್ಲಾ ಸ್ಥಾವರ ಮತ್ತು ಯಂತ್ರೋಪಕರಣಗಳು ಭೂಮಿಗೆ ಜೋಡಿಸಲಾದ ಅಥವಾ ಶಾಶ್ವತವಾಗಿ ಜೋಡಿಸಲಾದ ಮತ್ತು ಪ್ರಸ್ತುತ ಮತ್ತು ಭವಿಷ್ಯಕ್ಕಾಗಿ ಭೂಮಿಗೆ ಜೋಡಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಶಾಲಾ ಮೈದಾನ, ಉತ್ತರಕ್ಕೆ: ಮಲ್ಲಜಪ್ಪ ಬಳೂಟಗಿ ರವರ ಮನೆ, ದಕ್ಷಿಣಕ್ಕೆ: ಪ್ಲಾಟ್ ಸಂಖ್ಯೆ 04. **ಯಾವುದೇ ಮಾಹಿತಿಗಾಗಿ ಪ್ರೇಮ್ ಕಲೆಕ್ಷನ್ ಮ್ಯಾನೇಜರ್, 8880041234 ರವರನ್ನು ಸಂಪರ್ಕಿಸಿ.**	09.07.2025 ಎನ್‌ಪಿಎ ದಿನಾಂಕ 26.05.2025	SBB OVER DRAFT 924030017579917 Loan A/c No. Amount Rs. 50,00,000/- ಒಟ್ಟು ಬಾಕಿ ಮೊತ್ತ ರೂ. 47,88,403/– ದಿನಾಂಕ: 09.07.2025 ರಂದು ಇದ್ದಂತೆ
14	**1. ಮೆ॥ ಮೋಕ್ಷಾ ಎಂಟರ್‌ಪ್ರೈಸಸ್** ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಕೆ ಪಿ ವೆಂಕಟೇಶ್ ಮತ್ತು ಜಾಮೀನುದಾರರು ಶ್ರೀ ಮಧು ಕೆ ಪಿ, ಹೊಸ ಬಸ್ ನಿಲ್ದಾಣ ಪಾವಗಡ ಎದುರು, ತುಮಕೂರು ಕರ್ನಾಟಕ–561202. **2. ಶ್ರೀ.ಕೆ.ಪಿ.ವೆಂಕಟೇಶ್** ಬಿನ್ ಶ್ರೀ.ಪ್ರಕಾಶ್ ಕೆ.ವಿ **3. ಶ್ರೀ ಮಧು ಕೆ ಪಿ** ಬಿನ್ ಶ್ರೀ ಕೆ ವಿ ಪ್ರಕಾಶ್ **ಇವರಿಬ್ಬರ ವಿಳಾಸ:** ಬ್ರಾಹ್ಮಣರ ಬೀದಿ, ಪಾವಗಡ ತಾಲ್ಲೂಕು ತುಮಕೂರು, ಕರ್ನಾಟಕ–561202.	**ಆಸ್ತಿಯ ವಿವರ: ಆಸ್ತಿ I:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಅಸೆಸ್‌ಮೆಂಟ್ ನಂ.1803/6/1/73ಎ, ಈ ಆಸ್ತಿಯು ಕಣಿವೆ ರಸ್ತೆ, ಪಾವಗಡ ಟೌನ್, ಪಾವಗಡ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 46 ಅಡಿ, ಒಟ್ಟು ವಿಸ್ತೀರ್ಣ 1380 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ.74, ಪಶ್ಚಿಮಕ್ಕೆ : ಅದೇ ಆಸ್ತಿಯ ಉಳಿದ ಭಾಗ, ಉತ್ತರಕ್ಕೆ: 30 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ: ನಿವೇಶನ ಸಂಖ್ಯೆ.4 ಮತ್ತು 5. **ಆಸ್ತಿ II:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಅಸೆಸ್‌ಮೆಂಟ್ ನಂ.1803/6/1/73, ಈ ಆಸ್ತಿಯು ಕಣಿವೆ ರಸ್ತೆ, ಪಾವಗಡ ಟೌನ್, ಪಾವಗಡ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 46 ಅಡಿ, ಒಟ್ಟು ವಿಸ್ತೀರ್ಣ 1380 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಕೆ.ಪಿ.ವೇಕಟೇಶ್ ರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ಉದ್ಯಾನವನ, ಉತ್ತರಕ್ಕೆ: 30 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ: ಸರ್ಕಾರಿ ಕಾಲೇಜು. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್ ಮೊಬೈಲ್ ಸಂಖ್ಯೆ 9986316545 ಅನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 31.03.2025	SBB OVER DRAFT Loan A/c No. 923030004103755 Amount Rs. 24,00,000/- ಒಟ್ಟು ಬಾಕಿ ಮೊತ್ತ ರೂ. 24,20,458/– ದಿನಾಂಕ: 07.07.2025 ರಂದು ಇದ್ದಂತೆ
15	**(1) ಮೆ॥ ಎಂ ಆರ್ ಸ್ಟೀಲ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ತಂಜೀಮ್ ನವಾಜ್ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಮಹಮ್ಮದ್ ಇಲಿಯಾಸ್,** ಅಸೆಸ್‌ಮೆಂಟ್ ನಂ.1532/1455/6156, ಮೆಕ್ಕಾ ರೈಸ್ ಮಿಲ್ ರಸ್ತೆ, ಎಂಆರ್‌ಎಂ ರಸ್ತೆ, ಸಿರಾ ಟೌನ್ ತುಮಕೂರು, ಮದಲೂರು, ತುಮಕೂರು–572137. **(2) ಶ್ರೀ ತಂಜೀಮ್ ನವಾಜ್** ಬಿನ್ ಶ್ರೀ ಮಹಮ್ಮದ್ ಇಲಿಯಾಸ್ **(3) ಶ್ರೀ ಮಹಮ್ಮದ್ ಇಲಿಯಾಸ್** ಬಿನ್ ಶ್ರೀ ಮೊಹಮ್ಮದ್ ಜಾಮರ್ ಸಾಬ್, **ಇವರಿಬ್ಬರ ವಿಳಾಸ:** ಕಚೇರಿ ಮೊಹಲ್ಲಾ ಮಸೀದಿ ಹತ್ತಿರ ಸೊಪ್ಪಿನ ಹಟ್ಟಿ, ಸಿರಾ ತುಮಕೂರು, ಕರ್ನಾಟಕ–572137.	**ಆಸ್ತಿಯ ವಿವರ:** ಎಲ್ಲಾ ಭಾಗ ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಅಸೆಸ್‌ಮೆಂಟ್ ನಂ.2331/2237/6505, ಈ ಆಸ್ತಿಯು ಮೊಹಲ್ಲಾ ಲೇಔಟ್, ಶೀರಾ ಟೌನ್, ಶೀರಾ ತಾಲ್ಲೂಕಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಒಟ್ಟು 20 ಅಡಿ, ಒಟ್ಟು ವಿಸ್ತೀರ್ಣ 1000 ಚದರ ಅಡಿ, ಜೊತೆಗೆ ನಿರ್ಮಿತ ಕಟ್ಟಡವನ್ನೊಳಗೊಂಡಿದೆ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸಮೆವುಲ್ಲಾರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಪ್ರಕಾಶ್ ಕಲೆಕ್ಷನ್ ಮ್ಯಾನೇಜರ್, 9986316545 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 27.05.2025	SBB OVER DRAFT Loan A/c No. 923030019336102 Amount Rs. 50,00,000/- ಒಟ್ಟು ಬಾಕಿ ಮೊತ್ತ ರೂ. 49,86,094/– ದಿನಾಂಕ: 07.07.2025 ರಂದು ಇದ್ದಂತೆ
16	**(1) ಶ್ರೀ ನವಾಜ್ ಖಾನ್** ಬಿನ್ ಶ್ರೀ ಬಾಷಾ C/o ಖಾನ್ ಸುಮಂಗಲಾ, **(2) ಶ್ರೀಮತಿ ಸಾನಿಯಾ ಅರ್ಜೂ D/o ಫಾಜಿಲ್ ಪಾಷ ಕೋಂ ನವಾಜ್ ಖಾನ್ C/o ಸುಮಂಗಲಾ, (ಸಾಲಗಾರರು)** **ಇವರಿಬ್ಬರ ವಿಳಾಸ:** 2ನೇ ಹಂತ, ಬೆಳ್ಳೂರು ರಸ್ತೆ, ವಿಜಯನಗರ, ಹಾಸನ, ಕರ್ನಾಟಕ–573201. **ಮತ್ತೊಂದು ವಿಳಾಸ:** ಪ್ರಾಥಮಿಕ ಶಾಲೆ ಹತ್ತಿರ, ಹನ್‌ಬಲ್, ಸಕಲೇಶಪುರ ತಾಲ್ಲೂಕು, ಹಾಸನ, ಕರ್ನಾಟಕ–573165. **(ಸಹ–ಅರ್ಜಿದಾರರು)**	**ಆಸ್ತಿಯ ವಿವರ: ಷೆಡ್ಯೂಲ್ II:** ಎಲ್ಲಾ ಭಾಗ ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.33–2–14–54E, ಹಳೆಯ ನಂ.494-995/A, ಅಸೆಸ್‌ಮೆಂಟ್ ನಂ.726, ಸರ್ವೆ ನಂ.61/1A1, ವಾರ್ಡ್ ನಂ.33, ತಣ್ಣೀರುಹುಲ್ಲ, ಚಿಕ್ಕಮಂಡಿಗಾನಹಳ್ಳಿ ಕ್ರಾಸ್ ರಸ್ತೆ, ಸುಭಾಶ್ ನಗರ, ಹಾಸನ ಟೌನ್, ಹಾಸನ ತಾಲ್ಲೂಕು, ಹಾಸನ–573201. 2849 ಚದರ ಅಡಿ ಬಿಲ್ಟ್‌ಅಪ್ ಪ್ರದೇಶ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ವಜೀರ್ ಅಹ್ಮದ್‌ರವರ ಮನೆ, ದಕ್ಷಿಣಕ್ಕೆ: ಅಬ್ದುಲ್ ಬಶೀರ್‌ರವರ ಮನೆ. **ಯಾವುದೇ ಮಾಹಿತಿಗಾಗಿ ಪ್ರೇಮ್ ಕಲೆಕ್ಷನ್ ಮ್ಯಾನೇಜರ್, 8880041234 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 06.06.2025	Home loan Loan A/c No. PHR007706874691 Amount Rs. 1,03,30,000/- ಒಟ್ಟು ಬಾಕಿ ಮೊತ್ತ ರೂ. 58,10,109/– ದಿನಾಂಕ: 07.07.2025 ರಂದು ಇದ್ದಂತೆ
17	**(1) ಹೀರಾ ಜಿಂಜರ್ ಟ್ರೇಡಿಂಗ್ ಕಂಪನಿ, ಆಜಾದ್ ರಸ್ತೆ, ಸಕಲೇಶಪುರ ಹಾಸನ–573134. ಇದನ್ನು ಪ್ರತಿನಿಧಿಸುವ ಮಾಲೀಕರು** **(2) ಶ್ರೀ ನವಾಜ್ ಖಾನ್** ಬಿನ್ ಬಾಷಾ ಖಾನ್, ಹನಬಲ್, ಹಾಸನ–573165. **ಮತ್ತೊಂದು ವಿಳಾಸ: (3) ಶ್ರೀ ನವಾಜ್ ಖಾನ್** ಬಿನ್ ಬಾಷಾ ಖಾನ್, C/o ಸುಮಂಗಲಾ, 2ನೇ ಹಂತ, ಬೇಲೂರು ರಸ್ತೆ, ಜಯನಗರ, ಹಾಸನ–573201 **(ಸಾಲಗಾರರು/ಅರ್ಜಿದಾರರು)**	**ಷೆಡ್ಯೂಲ್ ಆಸ್ತಿ:** ಆಸ್ತಿಯ ಮುನಿಸಿಪಲ್ ಅಸೆಸ್‌ಮೆಂಟ್ ನಂ.725, ಹಳೆ ನಂ.494–995/ಎ, ಪಿಐಡಿ ನಂ.33–2–14–54ಇ, ಈ ಆಸ್ತಿಯು ನಂ.54, ಚಿಕ್ಕಮಂಡಿಗನಹಳ್ಳಿ, ಹಾಸನ ಸಿಟಿ ಮುನಿಸಿಪಲ್ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ.33, ಹಾಸನದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 23.469647 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 11.277623 ಮೀಟರ್‌ಗಳು, ಒಟ್ಟು ವಿಸ್ತೀರ್ಣ 264.6818 ಚದರ ಮೀಟರ್‌ಗಳ, ಈ ಆಸ್ತಿಯು ಶ್ರೀ ನವಾಜ್ ಖಾನ್ ಬಿನ್ ಶ್ರೀ ಬಾಷಾ ಖಾನ್‌ರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ. **ನಿವೇಶನ ನಂ.23ರ ಉತ್ತರ ಭಾಗ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.23, ಈ ಆಸ್ತಿಯು ಇಟ್ಟಮಡು ಗ್ರಾಮ, ಖಾತಾ ನಂ.1, ಈ ಆಸ್ತಿಯು ಇಟ್ಟಮಡು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ವಾರ್ಡ್ ನಂ.55, ಬಿಬಿಎಂಪಿ ವ್ಯಾಪ್ತಿಯಲ್ಲಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 15 ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ನಿವೇಶನ, ಉತ್ತರಕ್ಕೆ: ವಜೀರ್ ಅಹಮದ್‌ರವರ ಮನೆ, ದಕ್ಷಿಣಕ್ಕೆ: ಅಬ್ದುಲ್ ಬಶೀರ್‌ರವರ ಮನೆ. **ಯಾವುದೇ ಮಾಹಿತಿಗಾಗಿ ಶ್ರೀ ನಂದೀಶ್, 9986043776 ರವರನ್ನು ಸಂಪರ್ಕಿಸಿ.**	04.07.2025 ಎನ್‌ಪಿಎ ದಿನಾಂಕ 06.06.2025	Overdraft Loan A/c No. 923030014417785 Amount Rs 76,00,000/- ಒಟ್ಟು ಬಾಕಿ ಮೊತ್ತ ರೂ. 57,28,638/– ದಿನಾಂಕ: 04.07.2025 ರಂದು ಇದ್ದಂತೆ
18	**(1) ಮೆ॥ ರೆಡ್ಡಿ ಟ್ರೇಡರ್ಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಪ್ರತೀಶ್ ರೆಡ್ಡಿ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ನಾಗರತ್ನಮ್ಮ,** ರಾಜಪೇಟೆ ರಸ್ತೆ, ಜಿ.ಕೆ.ಪುರಂ, ಕುಪ್ಪಂ ಮುಖ್ಯರಸ್ತೆ, ಕ್ಯಾಸಂಬಳ್ಳಿ ಹೋಬಳಿ, ಕೆಜಿಎಫ್ ಕೋಲಾರ, ಕರ್ನಾಟಕ, ಶ್ರೀನಿವಾಸಸಂದ್ರ, ಕೋಲಾರ–563121. **(2) ಶ್ರೀ.ಪ್ರತೀಶ್ ರೆಡ್ಡಿ** ಬಿನ್ ಶ್ರೀ ಕೃಷ್ಣ ರೆಡ್ಡಿ, **(3) ಶ್ರೀಮತಿ ನಾಗರತ್ನಮ್ಮ** ಕೋಂ ಶ್ರೀ.ಕೃಷ್ಣಾ ರೆಡ್ಡಿ, **ಇವರಿಬ್ಬರ ವಿಳಾಸ:** ಡಿ.ನಂ.26, ಸೋನೇಪಲ್ಲಿ ಗ್ರಾಮ, ಶ್ರೀನಿವಾಸಸಂದ್ರ, ಕೋಲಾರ, ಕರ್ನಾಟಕ–563121.	**ಆಸ್ತಿಯ ವಿವರ:** ಚಿತ್ತೂರು ನೋಂದಾಯಿತ ಜಿಲ್ಲೆ, ಕುಪ್ಪಮ್ ಉಪ–ನೋಂದಾಯಿತ ಜಿಲ್ಲೆ–ರಾಮಕುಪ್ಪಂ ಮಂಡಲಂ–ವಿಜಲಪುರ ಗ್ರಾಮ ಪಂಚಾಯತ್ ಪ್ರದೇಶ ನಂ.49, ವಿಜಲಪುರಂ ರೆವೆನ್ಯೂ ಗ್ರಾಮ ಖಾತೆ ವಿಸ್ತೀರ್ಣ Ac.0412½ ಸೆಂಟ್ಸ್ ಭೂಮಿ, ಸರ್ವೆ ನಂ.30/118. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಚೆಂಗಲ್‌ರಾಯಪ್ಪರವರ ಭೂಮಿ, ಉತ್ತರಕ್ಕೆ: ಬಾಷಾಸಾಬ್‌ರವರ ಭೂಮಿ, ದಕ್ಷಿಣಕ್ಕೆ: ಕಾಳಚಾರಿರವರ ಭೂಮಿಯ ವಿಸ್ತೀರ್ಣ Ac.0.41 ½ ಸೆಂಟ್ಸ್ ಭೂಮಿ **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 05.04.2025	SBB OVER DRAFT Loan A/c No. 924030001848878 Amount Rs 60,00,000/- ಒಟ್ಟು ಬಾಕಿ ಮೊತ್ತ ರೂ. 58,77,345/– ದಿನಾಂಕ: 07.07.2025 ರಂದು ಇದ್ದಂತೆ
19	**(1) ಮೆ॥ ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ.ಎನ್.ರಾಜಣ್ಣ** 0,280/20,280/21, ಯುವರಾಣಿ ಕಟ್ಟಡ, ಇಂದಿರಾ ಆಶ್ರಿಯಾ ಲೇಔಟ್, ಕೋಲಾರ ಮುಖ್ಯ ರಸ್ತೆ, ಬಂಗಾರಪೇಟೆ, ಕೋಲಾರ–563114. **(2) ಶ್ರೀ.ಎನ್.ರಾಜಣ್ಣ** ಬಿನ್ ಶ್ರೀ.ನಾರಾಯಣಪ್ಪ, ರಾಜಾ ಬಿಲ್ಡಿಂಗ್, 11ನೇ ಕ್ರಾಸ್, ಕಾರಂತಿಕಟ್ಟೆ, ಕೋಲಾರ, ಕರ್ನಾಟಕ–563101.	**ಸ್ವತ್ತಿನ ವಿವರ : ಆಸ್ತಿ ನಂ.1– ನಿವೇಶನ ನಂ. 18 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಿವೇಶನ ನಂ. 18, ಖಾತಾ ನಂ. 2073/1971/18, ಇ–ಖಾತಾ ನಂ. 151900703400621760, 72/1 ರಲ್ಲಿ ರೂಪುಗೊಂಡಿದ್ದು, ವಿಸ್ತೀರ್ಣ 17 ಗುಂಟೆಗಳು, ದಿನಾಂಕ 01.03.2013 ರಂದು ಕೋಲಾರ ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಆದೇಶ ಸಂಖ್ಯೆ ALN.SR(K) 42/2012-13 ರಂತೆ ಆಸ್ತಿಯನ್ನು ಪರಿವರ್ತಿಸಲಾಗಿದ್ದು, ಆಸ್ತಿಯು ಕದ್ರಿಪುರ ಗ್ರಾಮ, ಕೊಂಡರಾಜನಹಳ್ಳಿ ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 10.97280 ಮೀಟರ್‌ಗಳು, ಮತ್ತು ಉತ್ತರದಿಂದ ದಕ್ಷಿಣಕ್ಕೆ : 9.144 ಮೀಟರ್‌ಗಳು, ಒಟ್ಟು ವಿಸ್ತೀರ್ಣ 100.34 ಚದರ ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ : ಸ್ವಂತ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವಂತ ಆಸ್ತಿ, ದಕ್ಷಿಣಕ್ಕೆ : ಸ್ವಂತ ಆಸ್ತಿ. **ಆಸ್ತಿ ನಂ.2– ನಿವೇಶನ ನಂ. 19 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಿವೇಶನ ನಂ. 19, ಖಾತಾ ನಂ. 2074/1972/19, ಇ–ಖಾತಾ ನಂ. 151900703400621762, 72/1 ರಲ್ಲಿ ರೂಪುಗೊಂಡಿದ್ದು, ವಿಸ್ತೀರ್ಣ 17 ಗುಂಟೆಗಳು, ದಿನಾಂಕ 01.03.2013 ರಂದು ಕೋಲಾರ ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಆದೇಶ ಸಂಖ್ಯೆ ALN.SR(K) 42/2012-13 ರಂತೆ ಆಸ್ತಿಯನ್ನು ಪರಿವರ್ತಿಸಲಾಗಿದ್ದು, ಆಸ್ತಿಯು ಕದ್ರಿಪುರ ಗ್ರಾಮ, ಕೊಂಡರಾಜನಹಳ್ಳಿ ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 10.97280 ಮೀಟರ್‌ಗಳು, ಮತ್ತು ಉತ್ತರದಿಂದ ದಕ್ಷಿಣಕ್ಕೆ : 9.144 ಮೀಟರ್‌ಗಳು, ಒಟ್ಟು ವಿಸ್ತೀರ್ಣ 100.34 ಚದರ ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ : ಸ್ವಂತ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವಂತ ಆಸ್ತಿ, ದಕ್ಷಿಣಕ್ಕೆ : ಸ್ವಂತ ಆಸ್ತಿ. **ಆಸ್ತಿ ನಂ.3– ನಿವೇಶನ ನಂ. 20 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಿವೇಶನ ನಂ. 20, ಖಾತಾ ನಂ. 2075/1973/20, ಇ–ಖಾತಾ ನಂ. 151900703400621763, 72/1 ರಲ್ಲಿ ರೂಪುಗೊಂಡಿದ್ದು, ವಿಸ್ತೀರ್ಣ 17 ಗುಂಟೆಗಳು, ದಿನಾಂಕ 01.03.2013 ರಂದು ಕೋಲಾರ ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಆದೇಶ ಸಂಖ್ಯೆ ALN.SR(K) 42/2012-13 ರಂತೆ ಆಸ್ತಿಯನ್ನು ಪರಿವರ್ತಿಸಲಾಗಿದ್ದು, ಆಸ್ತಿಯು ಕದ್ರಿಪುರ ಗ್ರಾಮ, ಕೊಂಡರಾಜನಹಳ್ಳಿ ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 10.97280 ಮೀಟರ್‌ಗಳು, ಮತ್ತು ಉತ್ತರದಿಂದ ದಕ್ಷಿಣಕ್ಕೆ : 9.144 ಮೀಟರ್‌ಗಳು, ಒಟ್ಟು ವಿಸ್ತೀರ್ಣ 100.34 ಚದರ ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ : ಸ್ವಂತ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವಂತ ಆಸ್ತಿ, ದಕ್ಷಿಣಕ್ಕೆ : ಸ್ವಂತ ಆಸ್ತಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 29.04.2025	SBB OVER DRAFT, and Bank Guarantee Loan A/c No. 923030009163804 Amount Rs 94,00,000/- ಒಟ್ಟು ಬಾಕಿ ಮೊತ್ತ ರೂ. 93,18,624/– ದಿನಾಂಕ: 07.07.2025 ರಂದು ಇದ್ದಂತೆ
20	**(1) ಮೆ॥ ಪಿಜಿ ಎಂಟರ್‌ಪ್ರೈಸಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ.ಎಂ.ನಾಗರಾಜ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಗಾಯತ್ರಿ ಎಂ ಒ,** 2ನೇ ಮುಖ್ಯರಸ್ತೆ, ಎಪಿಎಂಸಿ ಯಾರ್ಡ್, ಬಟವಾಡಿ ತುಮಕೂರು, ಕರ್ನಾಟಕ, ಜಯನಗರ–ಟಿಎಂಆರ್–572102. **ಮತ್ತೊಂದು ವಿಳಾಸ:** ಖಾತಾ ನಂ.3858, ಶೆಟ್ಟಿಹಳ್ಳಿ ಸರ್ಕಲ್ ಜಯನಗರ ದಕ್ಷಿಣ ತುಮಕೂರು, ಕರ್ನಾಟಕ–572102. **(2) ಶ್ರೀ ಎಂ ನಾಗರಾಜ ಬಿನ್ ಶ್ರೀ ಮುನಿಸ್ವಾಮಪ್ಪ** **(3) ಶ್ರೀಮತಿ ಗಾಯತ್ರಿ ಎಂ ಕೋಂ ಶ್ರೀ ಎಂ ನಾಗರಾಜ** 16ನೇ ಕ್ರಾಸ್, ಸಿಟ್ ಎಕ್ಸ್‌ಟೆನ್ಷನ್, ತುಮಕೂರು, ಕರ್ನಾಟಕ–572103.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಖಾತಾ ನಂ.315/3662, ಪಿಐಡಿ ನಂ.62082, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 28 ಅಡಿ, ಒಟ್ಟು ವಿಸ್ತೀರ್ಣ 1400 ಚದರ ಅಡಿ, ಈ ಆಸ್ತಿಯು ಬಟವಾಡಿ ಲೇಔಟ್, ಉತ್ತರ ರೈಲ್ವೆ ಲೇನ್, ಬಟವಾಡಿ ಗ್ರಾಮ, ತುಮಕೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: 25 ಅಡಿ ರಸ್ತೆ, ಪಶ್ಚಿಮಕ್ಕೆ: ನಂದೀಶ್ ಲೇಔಟ್, ಉತ್ತರಕ್ಕೆ: ಶ್ರೀ ಕೆಂಪಯ್ಯರವರ ಮನೆ, ದಕ್ಷಿಣಕ್ಕೆ: ಶ್ರೀಮತಿ ಹೆಚ್ ಲಿಂಗಮ್ಮರವರ ಮನೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 28 ಅಡಿ, ಒಟ್ಟು ವಿಸ್ತೀರ್ಣ 1400 ಚದರ ಅಡಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 31.03.2025	SBB CASH CREDIT Loan A/c No. 921030030600716 Amount Rs. 30,00,000/- ಒಟ್ಟು ಬಾಕಿ ಮೊತ್ತ ರೂ. 29,74,424/– ದಿನಾಂಕ: 07.07.2025 ರಂದು ಇದ್ದಂತೆ
21	**(1) ಮೆ॥ ಸ್ಕಂದ ಮಾರ್ಕೆಟಿಂಗ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ. ಸುರೇಶ ಪಿ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಪುಟ್ಟೇಗೌಡ,** ವಿನೋಭಾ ರಸ್ತೆ, ಲಕ್ಷ್ಮಿ ಗೋಲ್ಡ್ ಪ್ಯಾಲೇಸ್ ಎದುರು, ನಂ. 1243, 1ಎ, 8ನೇ ಕ್ರಾಸ್, ದೇವರಾಜ್ ಮೊಹಲ್ಲಾ, ಮೈಸೂರು–570001. **(2) ಶ್ರೀ.ಸುರೇಶ ಪಿ** ಬಿನ್ ಶ್ರೀ.ಪುಟ್ಟೇಗೌಡ, ಹಳೆ ಎಂ ಸಿ ರಸ್ತೆ, ಕಲ್ಲಹಳ್ಳಿ, ಸುರಬಿ ಕಲ್ಯಾಣ ಮಂಟಪ್ಪ, ಮಂಡ್ಯ ಕರ್ನಾಟಕ–571401. **(3) ಶ್ರೀ ಪುಟ್ಟೇಗೌಡ** ಬಿನ್ ಶ್ರೀ ಬಂಡಿಗಾವ, 1700–1–2ನೇ ಕ್ರಾಸ್, ಕಲ್ಲಹಳ್ಳಿ, ಮಂಡ್ಯ, ಕೃಷ್ಣರಾಜಪೇಟೆ ಮಂಡ್ಯ, ಕರ್ನಾಟಕ–571401.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಇಂಡಸ್ಟ್ರಿಯಲ್ ಪ್ರದೇಶದ ನಂ.7–3–1–92 (ಹಳೆ ನಂ.2227), ಅಸೆಸ್‌ಮೆಂಟ್ ನಂ.ಡಿ2/2227/2227, ಈ ಆಸ್ತಿಯು ವಾರ್ಡ್ ನಂ.7, ಎಂ.ಸಿ.ರಸ್ತೆ, ಕಲ್ಲಹಳ್ಳಿ, ಮಂಡ್ಯದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: (21.03 + 19.81)/2 ಮತ್ತು ಉತ್ತರದಿಂದ ದಕ್ಷಿಣಕ್ಕೆ: (100.43 + 88.92)/2, ಒಟ್ಟು ವಿಸ್ತೀರ್ಣ 1922.74 ಚದರ ಮೀಟರ್‌ಗಳು. ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿಯ ನಂ.7–3–1–30, ಪಶ್ಚಿಮಕ್ಕೆ: ಆಸ್ತಿಯು ನಂ.7–3–1–94, ಉತ್ತರಕ್ಕೆ: ಆಸ್ತಿಯು ನಂ.7–3–1–94, ದಕ್ಷಿಣಕ್ಕೆ: 1ನೇ ಎಂ.ಸಿ.ರಸ್ತೆ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 13.04.2025	SBB OVER DRAFT, and Secured Term Loan Loan A/c No. 923030015032792 & 923060050708091 Amount Rs 57,50,000/- ಒಟ್ಟು ಬಾಕಿ ಮೊತ್ತ ರೂ. 52,26,966/– ದಿನಾಂಕ: 07.07.2025 ರಂದು ಇದ್ದಂತೆ
22	**(1) ಮೆ॥ ಸೂರ್ಯ ಬಾರ್ ಅಂಡ್ ರೆಸ್ಟೋರೆಂಟ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ಜಯಂತಿ,** ಆವರ್ತಿ ಗ್ರಾಮ, ಕೊಪ್ಪ ಪೋಸ್ಟ್ ಹಾರ್ನಹಳ್ಳಿ ಹೋಬಳಿ, ಪಿರಿಯಾಪಟ್ಟಣ, ಕೊಪ್ಪ, ಮೈಸೂರು–571104. **2. ಶ್ರೀಮತಿ ಜಯಂತಿ ಕೋಂ ಶ್ರೀ ಸೋಮಶೇಖರ್** ಕೊಪ್ಪ, ಹರಸನಹಳ್ಳಿ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಆವರ್ತಿ ಮೈಸೂರು, ಕರ್ನಾಟಕ–571104.	**ಆಸ್ತಿಯ ವಿವರ: ಷೆಡ್ಯೂಲ್ II:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.310, ಯೂನಿಕ್ ನಂ.152200622099020012, ಈ ಆಸ್ತಿಯು ಆವರ್ತಿ ಗ್ರಾಮ, ಹಾರನಹಳ್ಳಿ ಹೋಬಳಿ, ಪೆರಿಯಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 18.2 + 6 + 22.77/2 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 48.53 + 12.09 + 33.2/3 ಮೀಟರ್‌ಗಳು, ಒಟ್ಟು ವಿಸ್ತೀರ್ಣ 668.81 ಚದರ ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ಸರ್ವೆ ನಂ.14/5, ಪಶ್ಚಿಮಕ್ಕೆ: ಆಸ್ತಿಯ ಸರ್ವೆ ನಂ.13, ಉತ್ತರಕ್ಕೆ: ಆವರ್ತಿ ಕಣಗಲು ರಸ್ತೆ, ದಕ್ಷಿಣಕ್ಕೆ: ಬ್ಲಾಕ್ ನಂ.3ರ ಆಸ್ತಿ ಸರ್ವೆ ನಂ.14/6. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 04.04.2025	SBB OVER DRAFT, Loan A/c No. 923030010381183 & 923060050283354 Amount Rs 50,00,000/- ಒಟ್ಟು ಬಾಕಿ ಮೊತ್ತ ರೂ. 1,06,62,362/– ದಿನಾಂಕ: 07.07.2025 ರಂದು ಇದ್ದಂತೆ
23	**(1) ಮೆ॥ ಕೆಬಿಆರ್ ರೈಸ್ ಟ್ರೇಡರ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ.ಅರ್ಜುನ್ ಕೆ.ಆರ್.** ಬೆಸಗರಹಳ್ಳಿ ಅಂಚೆ ಕಚೇರಿ, ಕೆ.ನಂ.416ಎ ಮತ್ತು ಇ ಎಂಡಿಆರ್ ಎಂಡಿ 311 ಬೆಸಗರಹಳ್ಳಿ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಕರ್ನಾಟಕ, ಮಂಡ್ಯ–571419. **(2) ಶ್ರೀ.ಅರ್ಜುನ್ ಕೆಆರ್ ಬಿನ್ ಶ್ರೀ ಕೆಬಿ ರಾಮಕೃಷ್ಣ** ಕಾಲೇಜು ರಸ್ತೆ ಪೋಸ್ಟ್, ಬೆಸಗರಹಳ್ಳಿ ಮದ್ದೂರು ತಾಲ್ಲೂಕು, ಬೆಸಗರಹಳ್ಳಿ ಮಂಡ್ಯ, ಕರ್ನಾಟಕ–571419.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.412ಎ, ಆಸ್ತಿಯ ಐಡಿ ನಂ.152100203000601983, ಈ ಆಸ್ತಿಯು ಬೆಸಗರಹಳ್ಳಿ ಗ್ರಾಮ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 24.384 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.192 ಮೀಟರ್ ಚಕ್ಕುಬಂದಿ: ಪೂರ್ವಕ್ಕೆ: ಸ್ವಂತ ಆಸ್ತಿ, ಪಶ್ಚಿಮಕ್ಕೆ: ರಾಮ್‌ಪುರ ರಸ್ತೆ, ಉತ್ತರಕ್ಕೆ: ಸ್ವಂತ ಮಾರ್ಗ, ದಕ್ಷಿಣಕ್ಕೆ: ಸ್ವಂತ ಆಸ್ತಿ. **II.ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.290ಎ, ಆಸ್ತಿಯ ಐಡಿ ನಂ.152100203000603661, ಈ ಆಸ್ತಿಯು ಬೆಸಗರಹಳ್ಳಿ ಗ್ರಾಮ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 66.7512 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀಟರ್‌ಗಳು, ಒಟ್ಟು ವಿಸ್ತೀರ್ಣ 610.37 ಚದರ ಮೀಟರ್‌ಗಳು. ಚಕ್ಕುಬಂದಿ: ಪೂರ್ವಕ್ಕೆ: ಬಿ ಎಂ ಸುಧಾಕರ್‌ರವರ ಆಸ್ತಿ, ಪಶ್ಚಿಮಕ್ಕೆ: ಕಾಲೇಜ್ ರಸ್ತೆ, ಉತ್ತರಕ್ಕೆ: ಸುಧಾಕರ್ ಅವರ ವಾಗ್ಯೆರೆ, ದಕ್ಷಿಣಕ್ಕೆ: ಬಿ ಎಂ ಸುಧಾಕರ್‌ರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 31.03.2025	SBB OVER DRAFT, AND SBB SECURED DROP LINE OD Loan A/c No. 923030063194024 & 923030063194037 Amount Rs. 97,00,000/- ಒಟ್ಟು ಬಾಕಿ ಮೊತ್ತ ರೂ. 92,59,970/– ದಿನಾಂಕ: 07.07.2025 ರಂದು ಇದ್ದಂತೆ
24	**(1) ಮೆ॥ ಜಯಾ ಟ್ರೇಡರ್ಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ಅಶ್ವಿನಿ ಸಿ.ಎನ್,** ನಂ.29, 1ನೇ ವಿಭಾಗ, ಎಂ.ಜಿ.ರಸ್ತೆ, ಎಪಿಎಂಸಿ ಮಾರುಕಟ್ಟೆ, ಚಿಕ್ಕಬಳ್ಳಾಪುರ, ಬೆಂಗಳೂರು, ಕರ್ನಾಟಕ–562101. **(2) ಅಶ್ವಿನಿ ಸಿ ಡಿ** D/o ಎ. ನಾರಾಯಣಸ್ವಾಮಿ **(3) ಜಯಮ್ಮ ಕ್ರಿಶವಪ್ಪ** ಕೋಂ ಎ. ನಾರಾಯಣಸ್ವಾಮಿ, **ಇವರಿಬ್ಬರ ವಿಳಾಸ:** ವಾರ್ಡ್ ನಂ.05, ಉತ್ತನಲಪ್ಪನವರ್ ನಿಲಯ, ಯಲಹಂಕ ಸ್ಟ್ರೀಟ್, ಬೆಂಗಳೂರು ಗ್ರಾಮಾಂತರ ದೇವನಹಳ್ಳಿ, ಬೆಂಗಳೂರು–562110, ಕರ್ನಾಟಕ.	**ಷೆಡ್ಯೂಲ್ II (ಭದ್ರತಾ ಆಸ್ತಿಯ ವಿವರ) :** ಎಲ್ಲಾ ಭಾಗ ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಸರ್ವೆ ನಂ.345/1, ವಿಸ್ತೀರ್ಣ 0.02 ಗುಂಟೆಗಳು, ಈ ಆಸ್ತಿಯು ಶಿಡ್ಲಘಟ್ಟ ಬಳಿಗು ಗ್ರಾಮ, ಕಸಬಾ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ವೆಂಕಟೇಶ್ವರಪ್ಪರವರ ಆಸ್ತಿ & ರಸ್ತೆ, ಪಶ್ಚಿಮಕ್ಕೆ: ಶ್ರೀಮತಿ ರತ್ನಮ್ಮರವರ ಭೂಮಿ, ಉತ್ತರಕ್ಕೆ: ಇಂದ್ರಮ್ಮರವರ ಭೂಮಿ, ದಕ್ಷಿಣಕ್ಕೆ: ಶ್ರೀ ರತ್ನಮ್ಮರವರ ಭೂಮಿ. **ಯಾವುದೇ ಮಾಹಿತಿಗಾಗಿ ಸಂಜಯ್ ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.**	08.07.2025 ಎನ್‌ಪಿಎ ದಿನಾಂಕ 29.04.2025	SBB CASH CREDIT Loan A/c No. 921030035964345 Amount Rs. 37,80,000/- ಒಟ್ಟು ಬಾಕಿ ಮೊತ್ತ ರೂ. 38,41,764/– ದಿನಾಂಕ: 07.07.2025 ರಂದು ಇದ್ದಂತೆ

25	(1) ಮೆ॥ ಪ್ರೇರಣಾ ಇಂಧನ ಕೇಂದ್ರ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಕೆ ಜಿ ಚಂದ್ರಧರ, ಬೆಸಗರಹಳ್ಳಿ ಹತ್ತಿರ, 313, ನಾಗಮಂಗಲ ರಸ್ತೆ, ಮದ್ದೂರು–571428. (2) ಶ್ರೀ.ಕೆ.ಜಿ.ಚಂದ್ರಧರ ಬಿನ್ ಶ್ರೀ ಕೈಲಾಸಂ ಕೆಜಿ (3) ಶ್ರೀಮತಿ ನಂದಿನಿ ಕೆ ಜಿ D/o ಶ್ರೀ. ಕೈಲಾಸಂ ಕೆ.ಜಿ. ಇವರಿಬ್ಬರ ವಿಳಾಸ: ನಂ.1456, III ಕ್ರಾಸ್, ಜೈನ್ ಕಾಲೋನಿ, ಅಶೋಕ ನಗರ, ಅರ್ಚನಾ ಆಸ್ಪತ್ರೆ ಹತ್ತಿರ, ಮಂಡ್ಯ, ಕರ್ನಾಟಕ–571401.	ಷೆಡ್ಯೂಲ್ II (ಭದ್ರತಾ ಆಸ್ತಿಯ ವಿವರ) ಈ ಆಸ್ತಿಯು ಷೆಡ್ಯೂಲ್ V ರಲ್ಲಿ ಉಲ್ಲೇಖಿಸಲಾದ ಸ್ಥಿರಾಸ್ತಿಗಳ ಭಾಗವಾಗಿದೆ ಮತ್ತು ಈ ಆಸ್ತಿಯು ಕೊತ್ತನಹಳ್ಳಿ ಗ್ರಾಮ, ಹೊಸಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕದಲ್ಲಿದೆ. ಈ ಆಸ್ತಿಯ ಭೂಮಿಯ ಪ್ಲಾಟ್‌ನ ಒಟ್ಟು ವಿಸ್ತೀರ್ಣ 32,500 ಚದರ ಅಡಿ, ಪೂರ್ವದಿಂದ ಪಶ್ಚಿಮಕ್ಕೆ: 217 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 150 ಅಡಿ, ಚಕ್ಕುಬಂದಿ: ಪೂರ್ವಕ್ಕೆ: ನಳ/ಚಾನಲ್, ಪಶ್ಚಿಮಕ್ಕೆ: ಕೊಪ್ಪ–ಮದ್ದೂರು ರಸ್ತೆ, ಉತ್ತರಕ್ಕೆ: ಅದೇ ಆಸ್ತಿಯ ಉಳಿಕೆ ಭಾಗ, ದಕ್ಷಿಣಕ್ಕೆ: ರಾಮಕೃಷ್ಣರವರ ಸ್ವಂತ ಆಸ್ತಿ, ಎ. ಸಿದ್ದಪ್ಪರವರ ಮಗ. ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್, 9986316545 ಅವರನ್ನು ಸಂಪರ್ಕಿಸಿ.	08.07.2025 ಎನ್‌ಪಿಎ ದಿನಾಂಕ 19.05.2025	SBB OVER DRAFT, Loan A/c No. 920030063110087 Amount Rs. 50,00,000/- ಒಟ್ಟು ಬಾಕಿ ಮೊತ್ತ ರೂ. 1,37,14,468/– ದಿನಾಂಕ: 07.07.2025 ರಂದು ಇದ್ದಂತೆ
26	(1) RK Fuel Station, ಮಂಡ್ಯ ಮುಖ್ಯ ರಸ್ತೆ, ಕೆರಗೋಡು ಗ್ರಾಮ ಮಾಧವ ಶಾಲೆಯ ಹತ್ತಿರ, ಮಂಡ್ಯ 571401. (2) ಶ್ರೀಮತಿ ನಂದಿನಿ ಕೆ ಜಿ D/o ಡಿ ಜಿ ಕೈಲಾಸಂ ಇದನ್ನು ಪ್ರತಿನಿಧಿಸುವ ಮಾಲೀಕರು, RK Fuel Station (ಸಾಲಗಾರರು) (3) ಮತ್ತೊಂದು ವಿಳಾಸ: ಚಂದ್ರಧರ ಕೆ ಜಿ D/o ಡಿ ಜಿ ಕೈಲಸಂ, ಇವರಿಬ್ಬರ ವಿಳಾಸ: #1456, 3ನೇ ಕ್ರಾಸ್, ಅರ್ಚನಾ ಆಸ್ಪತ್ರೆಯ ಹತ್ತಿರ ಅಶೋಕ ನಗರ, ಮಂಡ್ಯ–571401 (ಸಹ–ಅರ್ಜಿದಾರರು)	ಷೆಡ್ಯೂಲ್ ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ನಂ.1079, 13ನೇ ಎ ಕ್ರಾಸ್, ರೂಪ ನಗರ, ದೀಪ ಶಾಲೆಯ ಹತ್ತಿರ, ಮರಟಿಕ್ಯಾತನಹಳ್ಳಿ ಬೋಗಾದಿ ಮುಖ್ಯ ರಸ್ತೆ 570026. ಜೊತೆಗೆ ಕಟ್ಟಡವನ್ನೊಳಗೊಂಡಿದೆ ಮತ್ತು ಅವುಗಳ ಮೇಲಿನ ರಚನೆಗಳು ನೆಲವಸ್ತುಗಳ ಫಿಟ್ಟಿಂಗ್‌ಗಳು ಮತ್ತು ಭೂಮಿಗೆ ಶಾಶ್ವತವಾಗಿ ಜೋಡಿಸಲಾದ ಸ್ಥಾವರ ಮತ್ತು ಯಂತ್ರಗಳು ಮತ್ತು ಭವಿಷ್ಯಗಳನ್ನೊಳಗೊಂಡಿವೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.1080, ಪಶ್ಚಿಮಕ್ಕೆ: ನಿವೇಶನ ನಂ.1078, ಉತ್ತರಕ್ಕೆ: 13ನೇ ಎ ಕ್ರಾಸ್ ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.1116. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, 8880041234ರವರನ್ನು ಸಂಪರ್ಕಿಸಿ.	08.07.2025 ಎನ್‌ಪಿಎ ದಿನಾಂಕ 06.04.2025	SBB Over Draft & Power Home Vanilla BRE Loan A/c No. 920030063113325 & PHR015105767639 Amount Rs. 1,12,00,000/- ಒಟ್ಟು ಬಾಕಿ ಮೊತ್ತ ರೂ. 1,11,02,990/– ದಿನಾಂಕ: 07.07.2025 ರಂದು ಇದ್ದಂತೆ
27	(1) ಶ್ರೀ ಶಿವಕುಮಾರ್ ಬಿನ್ ಕೆಂಪೇಗೌಡ #217 ಡೈರಿ ಸ್ಟ್ರೀಟ್ ಕೆ, ಶೆಟ್ಟಹಳ್ಳ ಹೋಬಳಿ ಟಿಎಂ, ಹೊಸೂರು, ಪೋಸ್ಟ್ ಅಲಗೋಡು ಮಂಡ್ಯ 571807 (ಸಾಲಗಾರರು/ಅರ್ಜಿದಾರರು) 2) ಶ್ರೀ ಕೆ ಎಸ್ ಕೆಂಪೇಗೌಡ ಬಿನ್ ಸಣ್ಣಯ್ಯ, ದುದ್ದ ಹೋಬಳಿ ಕಿರಗಂದೂರು ಮೈಸೂರು ರಸ್ತೆ, ಮಂಡ್ಯ 571403. (ಸಹ–ಅರ್ಜಿದಾರರು/ಜಾಮೀನುದಾರರು)	ಷೆಡ್ಯೂಲ್ ಆಸ್ತಿ: ಇಕ್ವಿಟೇಬಲ್ ಅಡಮಾನ ಆಸ್ತಿಯ ವಾಸಯೋಗ್ಯ ಮನೆಯ ಆಸ್ತಿಯ ಖಾತಾ/ಪಿಐಡಿ ನಂ.152100701500620277, ಜಿಪಿ ಅಸೆಸ್‌ಮೆಂಟ್ ನಂ.470, ವಿಸ್ತೀರ್ಣ 95.23 ಚದರ ಮೀಟರ್‌ಗಳು ಮತ್ತು ಕಟ್ಟಡವನ್ನೊಳಗೊಂಡಿದೆ. ಈ ಆಸ್ತಿಯು ಟಿಎಂ ಹೊಸೂರು ಗ್ರಾಮ, ಟಿಎಂ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ 571807ರಲ್ಲಿದೆ. ಈ ಆಸ್ತಿಯು ಶ್ರೀ ಶಿವಕುಮಾರ್ ಬಿನ್ ಕೆಂಪೇಗೌಡರವರ ಹೆಸರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.4968 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 7.62 ಮೀಟರ್‌ಗಳು, ಆರ್‌ಸಿಸಿ ಮನೆಯನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಾಮಚಂದ್ರರವರ ಭೂಮಿ, ಉತ್ತರಕ್ಕೆ: ಸ್ವಂತ ನಿವೇಶನ ಮತ್ತು ಬೋರೇಗೌಡರವರ ಭೂಮಿ, ದಕ್ಷಿಣಕ್ಕೆ: ರವೀಂದ್ರರವರ ಭೂಮಿ. ಯಾವುದೇ ಮಾಹಿತಿಗಾಗಿ ಶ್ರೀ ನಂದೀಶ್, 9986043776 ಅವರನ್ನು ಸಂಪರ್ಕಿಸಿ.	04.07.2025 ಎನ್‌ಪಿಎ ದಿನಾಂಕ 17.06.2025	Overdraft Loan A/c No. 921030023441845 Working Capital 921030023441858 Amount 1) Rs 14,00,000/- 2) Rs 26,000/- Amount 1) Rs 14,91,513/- 2) Rs 24,478/- ಒಟ್ಟು ಬಾಕಿ ಮೊತ್ತ ರೂ. 15,15,991/ ದಿನಾಂಕ: 24.06.2025 ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 04.08.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ರಾಜ್ಯದ ಪ್ರಮುಖ ನಗರಗಳಲ್ಲಿ ಸಂಚಾರ | ಬೇರು ಮಟ್ಟದ ಕಾರ್ಯಕ್ರಮ

ಮ್ಯೂಚುವಲ್ ಫಂಡ್ ಜಾಗೃತಿ ಬಸ್‌ಯಾತ್ರೆ

ಬೆಂಗಳೂರು: ಮ್ಯೂಚುವಲ್ ಫಂಡ್ ಕುರಿತು ಅರಿವು ಮೂಡಿಸಲು ರಾಜ್ಯದ ಐದು ನಗರಗಳಲ್ಲಿ ನಿವೇಶ್ ಬಸ್ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಕೆನರಾ ರೊಬೆಕೋ ಎಎಂಸಿಯ ಎಂಡಿ ಹಾಗೂ ಸಿಇಒ ರಜನೀಶ್ ನರೂಲಾ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಬಸ್ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ನರೂಲಾ, ಕೆನರಾ ಬ್ಯಾಂಕ್ ಪಾಲುದಾರಿಕೆಯ ಮ್ಯೂಚುವಲ್ ಫಂಡ್ ಕಂಪೆನಿ ಕೆನರಾ ರೊಬೆಕೋ ಅಸೆಟ್ ಮ್ಯಾನೇಜ್‌ಮೆಂಟ್ ವತಿಯಿಂದ ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರು, ಬೆಳಗಾವಿ, ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ 20 ದಿನಗಳ ಕಾಲ ಬಸ್ ಸಂಚರಿಸಿ ಹಲವು ಸ್ಥಳಗಳಲ್ಲಿ ಸ್ಥಳೀಯರನ್ನು ಸಂಪರ್ಕಿಸಿ ಮ್ಯೂಚುವಲ್ ಫಂಡ್ ಕುರಿತು ಅರಿವು ಮೂಡಿಸಲು ನೇರ ಸಂವಾದದ

ಮೂಲಕ ಹೂಡಿಕೆಗಳಿಂದಾಗುವ ಲಾಭಗಳ ಕುರಿತು ಗ್ರಾಹಕರಿಗೆ ಸೂಕ್ತ ಶಿಕ್ಷಣ ನೀಡಿ ಅರಿವು ಮೂಡಿಸಲಾಗುವುದು. ಒಂದು ಹೂಡಿಕೆ ಸಂಸ್ಥೆಯಾಗಿ ನಮ್ಮ ಜವಾಬ್ದಾರಿ ಇದೆ. ಈಗಾಗಲೇ ಕೇರಳ, ಪಂಜಾಬ್, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ನಿವೇಶ್ ಬಸ್ ಪ್ರವಾಸ ಮಾಡಲಾಗಿದೆ, ಅದರ ಮುಂದುವರೆದ ಭಾಗವಾಗಿ ನಾವು ಕರ್ನಾಟಕದಲ್ಲಿ ನಿವೇಶ್ ಯಾತ್ರೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಕೆನರಾ ರೊಬೆಕೋ ಎಎಂಸಿಯ ಸೇಲ್ಸ್ ಮತ್ತು ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥರಾದ ಗೌರವ್ ಗೋಯಲ್ ಮಾತನಾಡಿ ನಿವೇಶ್ ಬಸ್‌ಯಾತ್ರೆ ಬೇರು ಮಟ್ಟದಲ್ಲಿ ನಡೆಯುವ ಅಭಿಯಾನವಾಗಿದ್ದು, ಹೂಡಿಕೆದಾರರು ಎಲ್ಲಿದ್ದಾರೋ, ಅಲ್ಲೇ ಅವರನ್ನು ಭೇಟಿಯಾಗಿ ಸಂದೇಶವನ್ನು ನೀಡಲಿದೆ. ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಸರಳಗೊಳಿಸುವುದು, ಪ್ರಾಯೋಗಿಕ ಮಾರ್ಗದರ್ಶನ ನೀಡುವುದು ಮತ್ತು ಈ ಹೂಡಿಕೆಯ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸುವುದು ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಅನುದಾನದ ಕೊರತೆ, ರಾಜಕೀಯದ ಸುಳಿ, ಸಂಘಟನೆಗಳ ದೌರ್ಬಲ್ಯದಿಂದ ಮೂಲೆಗುಂಪು

ಗುಣಿಯಿಂದ ಮೇಲೇಳದ ಗುರುಭವನ

ಜಿಲ್ಲಾ ನೋಟ

ಮುನಿರಾಜು ಎಂ ಅರಿಕೆರೆ

ಚಿಕ್ಕಬಳ್ಳಾಪುರ: ನಗರ ಹೊರವಲಯ ಮಹಾವೀರ್ ಜೈನ್ ಆಸ್ಪತ್ರೆ ಸಮೀಪವಿರುವ ಬೃಹತ್ ಗುಣಿಯನ್ನು ಸಮತಟ್ಟು ಮಾಡಿ ನಿರ್ಮಿಸಲು ಹೊರಟಿರುವ ಜಿಲ್ಲಾ ಗುರುಭವನದ ಕಾಮಗಾರಿ 2021–22ರಿಂದ ಗುಣಿಯನ್ನು ಬಿಟ್ಟು ಮೇಲೇಳಲೇಯಿಲ್ಲ. ನಿರ್ಮಾಣಕ್ಕಾಗಿ ಇಟ್ಟಿದ್ದ ಎರಡೂವರೆ ಕೋಟಿ ಹಣ ಕರಗಿಸಿ ನೆಲಮಾಳಿಗೆಯಷ್ಟೇ ನಿರ್ಮಾಣ ಮಾಡಲಾಗಿದೆ. ಮೊದಲ ಮಹಡಿಯಲ್ಲಿ ಸಭಾಭವನ ನಿರ್ಮಾಣಕ್ಕೆ ಹಣಕಾಸಿನ ಮುಗ್ಗಟ್ಟು ಶುರುವಾಗಿ ಕಾಮಗಾರಿ ಸ್ಥಗಿತವಾಗಿದ್ದು ಕಬ್ಬಿಣ ಇಟ್ಟಲ್ಲೇ ತುಕ್ಕು ಹಿಡಿದಿದೆ.

ಏನಿದು ಗುರುಭವನದ ಕಥೆ

2020–21ರಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಿರ್ಮಿಸಲು ಹೊರಟಿರುವ ಜಿಲ್ಲಾ ಮಟ್ಟದ ಶಿಕ್ಷಕರ ಗುರುಭವನದ ಅಂದಾಜು ಮೊತ್ತ 5 ಕೋಟಿ. ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಡಾ. ಕೆ. ಸುಧಾಕರ್ 2021ರಲ್ಲಿ ನಗರ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿ ಪ್ರಧಾನಮಂತ್ರಿ ಖನಿಜ

ತುಕ್ಕುಹಿಡಿದಿರುವ ಕಬ್ಬಿಣ.

ಕಲ್ಯಾಣ ಯೋಜನೆಯಲ್ಲಿ ಗುರುಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ನಿರ್ಮಿತಿ ಕೇಂದ್ರಕ್ಕೆ ನಿರ್ಮಾಣದ ಜವಾಬ್ದಾರಿ ನೀಡಲಾಯಿತು. ಅಲ್ಲಿಂದ ಈವರೆಗೆ ಕೇವಲ ನೆಲಮಹಡಿಯ ಒಳಾವರಣ ಪೂರ್ಣಗೊಳಿಸಿ ಮೊದಲ ಮಹಡಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬೃಹತ್ ಸಭಾಂಗಣಕ್ಕೆ ಅರ್ಧಂಬರ್ಧ ಕಾಲಂಗಳನ್ನು ಹಾಕಿದ್ದಾರೆ. ಇಷ್ಟಕ್ಕೆ 2 ಕೋಟಿ 50 ಲಕ್ಷ ಖರ್ಚು ಮಾಡಲಾಗಿದೆ. ಉಳಿದ ಹಣ ಬಿಡುಗಡೆಯಾಗದ ಕಾರಣ ಕಾಮಗಾರಿ ಸ್ಥಗಿತವಾಗಿ 3 ವರ್ಷಗಳೇ ಕಳೆದಿವೆ. ಯಾರೊಬ್ಬರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳದ ಕಾರಣ ಗುರುಭವನದ ಕನಸು ಹಳ್ಳ ಹಿಡಿದಿರುವುದು ಶಿಕ್ಷಕ ವರ್ಗದ ಬೇಸರಕ್ಕೆ ಕಾರಣವಾಗಿದೆ.

ಅನುದಾನದ ಕಥೆಯ ವ್ಯಥೆ

ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತವಾದ ಗುರುಭವನ ಬೇಕೆಂಬ ಕೂಗಿಗೆ 6 ದಶಕಗಳ ಇತಿಹಾಸವಿದೆ. ನಗರದ ಡಿಡಿಪಿಐ ಕಛೇರಿ ಆವರಣದಲ್ಲಿ 2002–03ರಲ್ಲಿ ಗುರುಭವನ ನಿರ್ಮಿಸಲು ಪ್ರಾರಂಭಿಸಿದ ಕಸರತ್ತು, ಹೊರವಲಯದ ಜಡಲತಿಮ್ಮನಹಳ್ಳಿ ಸರ್ವೆ ನಂ.30ರಲ್ಲಿ 20 ಕುಂಟೆ ಜಾಗ ಮಂಜೂರು ಮಾಡಿಸಿಕೊಂಡು 2021ರಲ್ಲಿ ಕಾಮಗಾರಿ ಪ್ರಾರಂಭವಾಗುವ ತನಕ ಬಂದು ನಿಂತಿದೆ. ಅಂದಹಾಗೆ

ಮೊದಲಮಹಡಿಯ ಅಧ್ವಾನದ ಚಿತ್ರಗಳು.

ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸರಕಾರಿ ಶಿಕ್ಷಕರ ಸಂಖ್ಯೆ 8000, ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಶಾಲಾ ಶಿಕ್ಷಕರ ಸಂಖ್ಯೆ 7000 ಸೇರಿದರೆ ಒಟ್ಟು 15000 ಶಿಕ್ಷಕರಿದ್ದಾರೆ. ಈವರೆಗೆ ಸೆಪ್ಟೆಂಬರ್ 05ರ ಶಿಕ್ಷಕರ ದಿನಾಚರಣೆಯನ್ನು ಅವರಿವರ ಆಸರೆಯಲ್ಲಿ ಪರಾವಲಂಬಿಗಳಾಗಿಯೇ ಆಚರಿಸುತ್ತಾ ಬಂದಿದ್ದಾರೆ. ಎಣಿಸಿದಂತೆ ನಿಗದಿತ ಅವಧಿಯಲ್ಲಿ ಗುರುಭವನದ ಕಾಮಗಾರಿ ಮುಗಿದಿದ್ದರೆ 2025ರ ಶಿಕ್ಷಕರ ದಿನಾಚರಣೆಯನ್ನು ಸ್ವಂತ ಕಟ್ಟಡದಲ್ಲಿಯೇ ಆಚರಿಸಬಹುದಿತ್ತು. ಆದರೆ ಅನುದಾನದ ಕೊರತೆ, ಶಿಕ್ಷಕರ ಸಂಘದಲ್ಲಿನ ರಾಜಕೀಯ, ಜನಪ್ರತಿನಿಧಿಗಳ ಚದುರಂಗದಾಟ ಎಲ್ಲವೂ ಕೂಡಿ ಗುರುಭವನ ಗುಣಿಯಲ್ಲಿಯೇ ಇರುವಂತಾಗಿದೆ.

ಅಭಯ ಈಡೇರಿತೇ

2021ರಲ್ಲಿ ಸುಸಜ್ಜಿತ ಗುರುಭವನ ನಿರ್ಮಾಣಕ್ಕೆ ನೀಲನಕ್ಷೆ ತಯಾರಿಸಿ ಐದು ಕೋಟಿ ಅಂದಾಜಿಸಲಾಗಿತ್ತು. ಇದರಲ್ಲಿ ಜಿಲ್ಲಾ ಗಣಿ ನಿಧಿಯಿಂದ 2 ಕೋಟಿ, ಶಿಕ್ಷಕರ ಕಲ್ಯಾಣ ನಿಧಿಯಿಂದ 1 ಕೋಟಿ, ಉಳಿದ 2 ಕೋಟಿಯನ್ನು ಜನಪ್ರತಿನಿಧಿಗಳ ವಂತಿಗೆಯಿಂದ ಪಡೆಯಲು ಯೋಜಿಸಲಾಗಿತ್ತು. ಬದಲಾದ ರಾಜಕೀಯದಲ್ಲಿ ಅಂದಿನ ಸಚಿವ ಡಾ. ಕೆ.ಸುಧಾಕರ್ ನೀಡಿದ ಭರವಸೆಯನ್ನು ನೆಚ್ಚಿಕೊಂಡ ಶಿಕ್ಷಕವರ್ಗ ಇನ್ನೇನು ಗುರುಭವನದ ಕಾಮಗಾರಿ ಮುಗಿದೇ ಹೋಯಿತು ಎಂದು ಹಿರಿಹಿರಿ ಹಿಗ್ಗಿದ್ದರು. ಈ ಹಿಗ್ಗಿಗೆ 3 ವರ್ಷ ಕಳೆದಿದೆ ಆದರೆ ಜಿಲ್ಲಾ ಗಣಿ ನಿಧಿಯಿಂದ ಬಿಡುಗಡೆಯಾದ 2 ಕೋಟಿ ಮತ್ತು ಶಿಕ್ಷಕರ ಕಲ್ಯಾಣ ನಿಧಿಯಿಂದ 50ಲಕ್ಷ ಬಿಡುಗಡೆಯಾದಂತೆ ಖರ್ಚೂ ಆಗಿದೆ. ಗುರುಭವನ ಮಾತ್ರ ನಿಂತಲ್ಲೇ ನಿಂತು ಅಸ್ಥಿಪಂಜರದಂತೆ ಮೂಕ ವೇಧನೆ ಅನುಭವಿಸುತ್ತಿದೆ.

ಸದ್ಯ ಗುರುಭವನದ ಕಾಮಗಾರಿ ಪೂರ್ಣಗೊಳ್ಳಲು 2.50 ಲಕ್ಷ ಅನುದಾನದ ಅಗತ್ಯವಿದ್ದು, ಶಿಕ್ಷಕರ ಕಲ್ಯಾಣ ನಿಧಿಯಲ್ಲಿ 50 ಲಕ್ಷ ಮಾತ್ರವೇ ಉಳಿದಿದೆ. ಇಷ್ಟನ್ನು ಬಿಟ್ಟರೆ ನಯಾಪೈಸೆ ಶಿಕ್ಷಣ ಇಲಾಖೆ ಮತ್ತು ಶಿಕ್ಷಕರ ಸಂಘದ ಬಳಿಯಿಲ್ಲ.ಇಷ್ಟು ಬೃಹತ್ ಮೊತ್ತವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಸ್ಥಳೀಯ ಶಾಸಕ ಪ್ರದೀಪ್ ಈಶ್ವರ್ ಅಯ್ಯರ್ ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳೇ ಕೊಡಬೇಕಿದೆ.ಇದು ಸಾಧ್ಯವಾದಲ್ಲಿ ಮಾತ್ರ ಶಿಕ್ಷಕರ ದಿನಾಚರಣೆಯನ್ನು ಯಾರ ಹಂಗಿಲ್ಲದೇ ಸ್ವತಂತ್ರವಾಗಿ ನಡೆಸಲು ಅನುಕೂಲ ಆಗುವುದಲ್ಲದೆ, ಶಿಕ್ಷಕರಿಗೆ ಸಂಬಂಧಿಸಿದ ಶಿಬಿರ, ಸಂವಾದ, ಸಭೆ ಸಮಾರಂಭ ಸೇರಿ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಒಂದೇ ಸೂರಿನಲ್ಲಿ ನಡೆಸಲು ಅವಕಾಶವಾಗಲಿದೆ.

> **ಜಿಲ್ಲಾಕೇಂದ್ರದಲ್ಲಿ ಸುಸಜ್ಜಿತವಾದ ಗುರುಭವನ ಬೇಕೆಂಬುದು 6 ದಶಕಕ್ಕೂ ಮೀರಿದ ಶಿಕ್ಷಕರ ಕನಸಾಗಿದೆ.ಸಂಸದ ಸುಧಾಕರ್ ಅವರು ಸಚಿವರಾಗಿದ್ದಾಗ ಹೆದ್ದಾರಿ ಸಮೀಪ 20ಕುಂಟೆ ಜಾಗವನ್ನು ಗುರುಭವನಕ್ಕೆ ಒದಗಿಸಿದ್ದಾರೆ.ಇದರಲ್ಲಿಯೇ 5 ಕೋಟಿ ಅಂದಾಜು ವೆಚ್ಚದಲ್ಲಿ ಗುರುಭವನ ನಿರ್ಮಾಣ ಕಾಮಗಾರಿ ನಡೆದು ನೆಲಮಹಡಿ ಪೂರ್ಣಗೊಂಡಿದೆ.ಮೊದಲ ಮಹಡಿಯಲ್ಲಿ ಸಭಾಭವನ ಸೇರಿ ಉಳಿದ ಕಾಮಗಾರಿ ಪೂರ್ಣಗೊಳಿಸಲು 2ಕೋಟಿ ಅನುದಾನದ ಅಗತ್ಯವಿದ್ದು ಶಾಸಕರು, ಉಸ್ತುವಾರಿ ಸಚಿವರಿಗೆ ಮನವಿ ಮಾಡಲಾಗಿದೆ. ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ.ಇದಾದಲ್ಲಿ ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತವಾದ ಗುರು ಭವನ ನಿರ್ಮಾಣವಾಗಿ ದಶಕಗಳ ಕನಸು ನನಸಾಗಲಿದೆ.**
>
> **-ನಾರಾಯಣಸ್ವಾಮಿ,**
> ಅಧ್ಯಕ್ಷ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಗುರುದಕ್ಷಿಣೆ ಕೊಡುವರೆ

ಶಾಸಕ ಪ್ರದೀಪ್ ಈಶ್ವರ್ ನಾನು ನಂಬಿರುವ 2 ದೇಗುಲಗಳೆಂದರೆ ಒಂದು ಸರಕಾರಿ ಶಾಲೆಗಳು, ಮತ್ತೊಂದು ಸರಕಾರಿ ಆಸ್ಪತ್ರೆಗಳು ಎನ್ನುತ್ತಾರೆ. ಇದು ನಿಜವೇ ಆಗಿದ್ದಲ್ಲಿ ಕಳೆದ 3 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಗುರು ಭವನದ ಕಾಮಗಾರಿಗೆ ಮರುಚಾಲನೆ ನೀಡಬೇಕು.ಅದಕ್ಕೆ ಬೇಕಿರುವ ಅನುದಾನವನ್ನು ಕೂಡ ಒದಗಿಸಲು ಮುಂದಾಗಬೇಕು.ಆಗ ಮಾತ್ರವೇ ತಮ್ಮ ಮಾತಿಗೆ ಬೆಲೆಯಿರಲಿದೆ ಎನ್ನುವುದು ಶಿಕ್ಷಕ ವರ್ಗದ ಮಾತಾಗಿದೆ. ಡಾ.ಎಂ.ಸಿ.ಸುಧಾಕರ್ ಜಿಲ್ಲಾ ಉಸ್ತುವಾರಿ ಸಚಿವರಾದ ಮೇಲೆ ಜಿಲ್ಲೆಯಲ್ಲಿ ಸಾಕಷ್ಟು ಅಪೂರ್ಣವಾದ ಕೆಲಸಗಳು ಪೂರ್ಣಗೊಂಡಿವೆ. ಅವರು ಮನಸ್ಸು ಮಾಡಿದರೆ ಹಿಡಿದ ಕೆಲಸ ಮಾಡುವವರೆಗೆ ಬಿಡುವುದೇ ಇಲ್ಲ.ಹೀಗಾಗಿ ಕನ್ನಡ ಭವನದಂತೆ ಗುರುಭವನಕ್ಕೂ ಮುಕ್ತಿ ಕಾಣಿಸುವರೇ? ಕಾದು ನೋಡಬೇಕಿದೆ.

ಯಂಗ್ ಶೈನ್ ಇಂಡಿಯ

ವಿಶೇಷ

ಯಂಗ್ ಶೈನ್ ಇಂಡಿಯ

ಪ್ರತಿಯೊಂದು ಪಂದ್ಯದಲ್ಲೂ ತೋರಿಸಿದ ಸಾಂಘಿಕ ಹೋರಾಟ, ಕೊನೆಯ ಟೆಸ್ಟ್‌ನ ಕೊನೆಯ ದಿನವಾದ ಸೋಮವಾರ ಮಾಡಿದ ಪ್ರಯತ್ನದಿಂದಾಗಿ ಟೆಸ್ಟ್ ಸರಣಿಯನ್ನು 2–2 ಅಂತರದಲ್ಲಿ ಸಮಬಲ ಮಾಡಲು ಸಾಧ್ಯವಾಗಿದೆ. ಈ ಸರಣಿಯಲ್ಲಿ ಮಾಡಿರುವ ವೈಯಕ್ತಿಕ ದಾಖಲೆ, ಗಳಿಸಿಕೊಂಡ ಅನುಭವ ಮುಂದಿನ ದಿನಗಳಲ್ಲಿ ತನ್ನ ವಿರೋಧಿ ಪಡೆಯನ್ನು ಸಮರ್ಥವಾಗಿ ಎದುರಿಸಿ ಗೆಲ್ಲುವ ಹುಮ್ಮಸ್ಸನ್ನು ಗಳಿಸಿಕೊಟ್ಟಿರುವುದಂತೂ ನಿಜ.

ಶುಭಮನ್ ದಾಖಲೆ

93 ವರ್ಷಗಳಿಂದ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಭಾರತ ತಂಡವನ್ನು ಮುನ್ನಡೆಸಿದ ಐದನೇ ಅತ್ಯಂತ ಕಿರಿಯ ನಾಯಕ ಎಂಬ ದಾಖಲೆಯನ್ನು ಭಾರತ–ಇಂಗ್ಲೆಂಡ್ ಸರಣಿ ವೇಳೆ ಶುಭಮನ್ ಗಿಲ್ ಬರೆದಿದ್ದಾರೆ. ಮನ್ಸೂರ್ ಅಲಿಖಾನ್ ಪಟೌಡಿ, ತೆಂಡೂಲ್ಕರ್, ಕಪಿಲ್ ದೇವ್ ಹಾಗೂ ರವಿ ಶಾಸ್ತ್ರಿ ಅವರು ಶುಭಮನ್ ಗಿಲ್ ಅವರಿಗಿಂತ ಕಡಿಮೆ ವಯಸ್ಸಿನಲ್ಲಿ ಭಾರತ ಟೆಸ್ಟ್ ತಂಡವನ್ನು ಮುನ್ನಡೆಸಿದ್ದರು. ಶುಭಮನ್ ಗಿಲ್ ಇಂಗ್ಲೆಂಡ್ ವಿರುದ್ಧ ತಮ್ಮ 25 ವರ್ಷ ಮತ್ತು 285 ದಿನಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿದರು.

6000 ರನ್ ಮೈಲಿಗಲ್ಲು

ಟೆಸ್ಟ್ ಸರಣಿಯಲ್ಲಿ ಅತೀ ಹೆಚ್ಚು ರನ್ ಗಳಿಸಿದ ನಾಯಕರ ಪಟ್ಟಿಯಲ್ಲಿ ಬ್ರಾಡ್ಮನ್ ನಂತರದ ಸ್ಥಾನಕ್ಕೆ ಗಿಲ್ ಅರ್ಹರಾಗಿದ್ದರೆ.

ನರೇಂದ್ರ ಪಾರೆಕಟ್

ಎರಡು ತಿಂಗಳ ಹಿಂದಿನ ಮಾತು, ಇಂಗ್ಲೆಂಡ್ ವಿರುದ್ಧದ ಕ್ರಿಕೆಟ್ ಟೆಸ್ಟ್ ಸರಣಿಗಾಗಿ ಭಾರತ ತಂಡದ ಘೋಷಣೆ ಆಗಿತ್ತು. ಶುಭ್‌ಮನ್ ಗಿಲ್ ನಾಯಕತ್ವದ 15 ಆಟ ಗಾರರ ಹೆಸರು ಪ್ರಕಟವಾದಾಗ ಬಹಳಷ್ಟು ಕ್ರಿಕೆಟ್ ಪ್ರೇಮಿಗಳ ಮನಸ್ಸಿನಲ್ಲಿ ಹೀಗೊಂದು ಪ್ರಶ್ನೆ ಮತ್ತು ಆತಂಕವೂ ಮೂಡಿತ್ತು, 'ವಿರಾಟ್ ಕೊಹ್ಲಿ, ರೋಹಿತ್ ಶರ್ಮಾರಂತವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿರುವುದರಿಂದ ಈ ಯಂಗ್ ಇಂಡಿಯಾ ತಂಡ ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಒಂದು ಪಂದ್ಯವನ್ನಾದರೂ ಗೆಲ್ಲುವುದು ಕಷ್ಟದ ಮಾತು, ತಂಡವು ಎಲ್ಲಾ ಟೆಸ್ಟ್‌ಗಳಲ್ಲೂ ಸಂಪೂರ್ಣವಾಗಿ ನೆಲಕಚ್ಚಿ ವೈಟ್‌ವಾಶ್ ಮಾಡಿಸಿಕೊಂಡು ಬರುವುದು ಖಚಿತವೇನೋ..?'

> ## ಬುಮ್ರಾ, ಪಂತ್ ದಾಖಲೆ
> **ಜಸ್‌ಪ್ರೀತ್ ಬುಮ್ರಾ ಆ ಟೆಸ್ಟ್‌ನಲ್ಲಿ 5 ವಿಕೆಟ್ ಪಡೆಯುವ ಮೂಲಕ ವಿದೇಶ ನೆಲದಲ್ಲಿ ಅತ್ಯಧಿಕ ಬಾರಿ 5 ವಿಕೆಟ್ ಗೊಂಚಲು ಪಡೆದ ದಿಗ್ಗಜ ಆಟಗಾರ ಕಪಿಲ್‌ದೇವ್(12 ಬಾರಿ) ದಾಖಲೆ ಸರಿಗಟ್ಟಿದರು. ರಿಷಭ್ ಪಂತ್ ಮೊದಲ ಟೆಸ್ಟ್‌ನ 3ನೇ ದಿನದಾಟದಲ್ಲಿ ಕ್ಯಾಚ್ ಒಂದನ್ನು ಪಡೆಯುವ ಮೂಲಕ ಟೆಸ್ಟ್‌ನಲ್ಲಿ 150 ಕ್ಯಾಚ್ ಪಡೆದ 3ನೇ ಭಾರತೀಯ ವಿಕೆಟ್ ಕೀಪರ್ ಎನಿಸಿಕೊಂಡರು.**

ಭಾರತ ತಂಡದಲ್ಲಿ ರವೀಂದ್ರ ಜಡೇಜಾ, ಕೆ.ಎಲ್. ರಾಹುಲ್, ಜಸ್‌ಪ್ರೀತ್ ಬುಮ್ರಾ ಸೇರಿದಂತೆ ಕೆಲವು ಅನುಭವಿ ಆಟಗಾರರಿದ್ದರೂ, ಹೆಚ್ಚಿನ ಆಟಗಾರರು ಅನನುಭವಿಗಳು ಎಂಬ ಕಾರಣಕ್ಕೆ ಭಾರತ ತಂಡ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ 5–0 ಅಂತರದಲ್ಲಿ ಸೋಲುವ ಸಾಧ್ಯತೆಯೇ ಹೆಚ್ಚು ಎಂಬರ್ಥದಲ್ಲೇ ಹೆಚ್ಚಿನ ಕ್ರಿಕೆಟ್‌ಪ್ರೇಮಿಗಳು ಅಂದುಕೊಂಡಿದ್ದರು.

ಸಾಮಾನ್ಯವಾಗಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಎಂದರೆ ಅದು ಭಾರತದ ಕ್ರಿಕೆಟ್ ಮಟ್ಟಿಗೆ ನಿಜಕ್ಕೂ ಪ್ರತಿಷ್ಠೆಯ ಕಾದಾಟ, ಹಾಗಾಗಿ ಪ್ರತೀ ಸಲವೂ ಅಲ್ಲಿನ ಟೆಸ್ಟ್ ಸರಣಿಗೆ ಅನುಭವಿ ಆಟಗಾರರ ಪಡೆಯನ್ನೇ ಸಜ್ಜುಗೊಳಿಸಿ ಕಳುಹಿಸಿಕೊಡಲಾಗುತ್ತಿತ್ತು. ಆದರೆ ಈ ಸಲ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಆಯ್ಕೆ ಸಮಿತಿಯ ಯೋಚನೆಯು ದೂರದೃಷ್ಟಿಯದ್ದಾಗಿತ್ತು. ಈ ಸರಣಿಯ ಮೊದಲನೇ ಟೆಸ್ಟ್‌ನಲ್ಲಿ ಕಠಿಣ ಪರಿ ಶ್ರಮ ಹಾಕಿದ್ದರೂ ಇಂಗ್ಲೆಂಡ್ ತಂಡ 5 ವಿಕೆಟ್‌ಗಳಿಂದ ಜಯ ಗಳಿಸಿದರೂ ಯಂಗ್ ಇಂಡಿಯಾ ಆಟಗಾರರ ಮನೋಸ್ಥೈರ್ಯವೇನೂ ಕುಗ್ಗಲಿಲ್ಲ. 2ನೇ ಟೆಸ್ಟ್‌ನಲ್ಲಿ ಸಂಘಟಿತವಾಗಿ ಮೇಲೆದ್ದು, ಇಂಗ್ಲೆಂಡ್ ತಂಡವನ್ನು 336 ರನ್‌ಗಳಿಂದ ಮಣಿಸಿ, ಸರಣಿಯನ್ನು ಸಮ ಬಲಕ್ಕೆ ಕೊಂಡೊಯ್ದಿತು.

ಬಳಿಕ ನಡೆದ ಪೈಪೋಟಿಯ ಮೂರನೇ ಟೆಸ್ಟ್‌ನಲ್ಲಿ ಭಾರತದ ವಿರುದ್ಧ ಇಂಗ್ಲೆಂಡ್ ಕೇವಲ 22 ರನ್‌ಗಳಿಂದ ಗೆದ್ದು ಸರಣಿಯಲ್ಲಿ 2–1 ಅಂತರದಲ್ಲಿ ಮುನ್ನಡೆಯಿತು. ನಂತರ ನಡೆದ 4ನೇ ಟೆಸ್ಟ್ ಡ್ರಾದಲ್ಲಿ ಅಂತ್ಯವಾಯಿತು. ಕೊನೆಯ ಟೆಸ್ಟ್‌ನಲ್ಲಿ ಕೊನೆಯ ದಿನವಾದ ಸೋಮವಾರ ಪಂದ್ಯವನ್ನು ಹೇಗಾದರೂ ಗೆದ್ದು, ಸರಣಿಯನ್ನು 2–2 ಅಂತರದಿಂದ ಸಮಬಲ ಮಾಡಿಕೊಳ್ಳಬೇಕೆಂಬ ಯೋಚನೆಯಲ್ಲಿಯೇ ಯಂಗ್ ಮೈದಾನಕ್ಕಿಳಿಯಿತು. ಗೆಲುವಿಗಾಗಿ ಪ್ರಯತ್ನ ಪಟ್ಟು ಕೊನೆಗೂ 6 ರನ್‌ಗಳ ರೋಚಕ ಜಯವನ್ನು ಪಡೆದುಕೊಂಡು ಭಾರತದ ಕ್ರಿಕೆಟ್ ಪ್ರೇಮಿಗಳ ಅಪಾರ ಗೌರವಕ್ಕೆ ಪಾತ್ರವಾಯಿತು.

ದಾಖಲೆಗಳ ಮಹಾಪೂರ: ಈ ಟೆಸ್ಟ್ ಸರಣಿ ಯಂಗ್ ಇಂಡಿಯಕ್ಕೂ ಮರೆಯಲಸಾಧ್ಯ ಪ್ರವಾಸ. ತಂಡದ ಹೆಚ್ಚಿನ ಆಟಗಾರರು ಒಂದಲ್ಲ ಒಂದು ದಾಖಲೆಗೆ ಪಾತ್ರರಾಗಿರುವುದು ಕೂಡಾ ಪ್ರಶಂಸನೀಯ. ಸರಣಿಯಲ್ಲಿ 9 ಆಟಗಾರರಿಂದ 400+ ರನ್‌ಗಳ ಹೊಳೆ ಹರಿದದ್ದು, ಇಂಗ್ಲೆಂಡ್ ಮತ್ತು ಭಾರತ ನಡುವಣ ಆ್ಯಂಡರ್‌ಸನ್–ತೆಂಡೂಲ್ಕರ್ ಸರಣಿಯ ವಿಶೇಷತೆಯಾಗಿದ್ದು, ಟೆಸ್ಟ್ ಇತಿಹಾಸದಲ್ಲಿ ಇದೇ ಮೊದಲು. ಭಾರತದ ಐವರು, ಇಂಗ್ಲೆಂಡ್‌ನ ನಾಲ್ವರು ಈ ಸಾಧನೆಗೈದರು. ಭಾರತ ಪರ ಶುಭಮನ್ ಗಿಲ್, ಕೆ.ಎಲ್ ರಾಹುಲ್, ರವೀಂದ್ರ ಜಡೇಜಾ, ಯಶಸ್ವಿ ಜೈಸ್ವಾಲ್, ರಿಷಭ್ ಪಂತ್ 400ಕ್ಕಿಂತ ಹೆಚ್ಚು ರನ್ ಗಳಿಸಿದರೆ, ಇಂಗ್ಲೆಂಡ್‌ನ ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಡಕೆಟ್ ಹಾಗೂ ಜೇಮಿ ಸ್ಮಿತ್ ಈ ಮೈಲುಗಲ್ಲನ್ನು ಸರಣಿಯಲ್ಲಿ ತಲುಪಿದ್ದರು.

ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ಆಟಗಾರರು 5 ಶತಕ ಬಾರಿಸುವ ಮೂಲಕ ಜಂಟಿ ವಿಶ್ವದಾಖಲೆ ಬರೆದಿದ್ದಾರೆ. ಮೊದಲ ಇನ್ನಿಂಗ್ಸ್‌ನಲ್ಲಿ ಮೂವರು, 2ನೇ ಇನ್ನಿಂಗ್ಸ್‌ನಲ್ಲಿ ಇಬ್ಬರು ಶತಕ ಸಿಡಿಸಿದರು. ಪ್ರಥಮ ಇನ್ನಿಂಗ್ಸ್‌ನಲ್ಲಿ ಜೈಸ್ವಾಲ್ 101, ಗಿಲ್ 147, ಪಂತ್ 134 ರನ್ ಗಳಿಸಿದರೆ, 2ನೇ ಇನ್ನಿಂಗ್ಸ್‌ನಲ್ಲಿ ಕೆ.ಎಲ್. ರಾಹುಲ್ 137, ಪಂತ್ 118 ರನ್ ದಾಖಲಿಸಿದರು.

ಮುಖಾಮುಖಿ

ತೆಂಡೂಲ್ಕರ್–ಆ್ಯಂಡರ್ಸನ್ 14 ಟೆಸ್ಟ್‌ಗಳಲ್ಲಿ ಪರಸ್ಪರ ಮುಖಾಮುಖಿಯಾಗಿದ್ದಾರೆ. ಆ್ಯಂಡರ್‌ಸನ್‌ರವರು ತೆಂಡೂಲ್ಕರ್ ಅವರನ್ನು 9 ಬಾರಿ ಔಟ್ ಮಾಡಿದ್ದಾರೆ.

ಜೇಮ್ಸ್ ಆ್ಯಂಡರ್ಸನ್

ಇಂಗ್ಲೆಂಡ್‌ನ ಶ್ರೇಷ್ಠ ಮಾಜಿ ಬೌಲರ್ ಎಂದೆನಿಸಿಕೊಂಡವರು. 1982ರಲ್ಲಿ ಹುಟ್ಟಿದ ಅವರು ಕ್ರಿಕೆಟ್ ವಲಯದಲ್ಲಿ ಜಿಮ್ಮಿ ಎಂದೇ ಖ್ಯಾತರಾದವರು. ಎಡಗೈ ವೇಗದ ಬೌಲರ್ ಆಗಿದ್ದ ಅವರು, ಜಿಂಬಾಬ್ವೆ ವಿರುದ್ಧ 2003ರಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದವರು. ವಿಶ್ವ ಕ್ರಿಕೆಟ್‌ನ ಶ್ರೇಷ್ಠ ವೇಗದ ಬೌಲರ್ ಎಂದೆನಿಸಿ, ಒಟ್ಟು 188 ಟೆಸ್ಟ್ ಪಂದ್ಯಗಳನ್ನಾಡಿ 704 ವಿಕೆಟ್ ಪಡೆದಿದ್ದಾರೆ. ಏಕದಿನ ಮತ್ತು ಟಿ20 ತಂಡದಲ್ಲೂ ಮಿಂಚಿದವರು.

ಸಚಿನ್ ತೆಂಡೂಲ್ಕರ್

ಸಚಿನ್ ಭಾರತದ ಕ್ರಿಕೆಟ್ ದಿಗ್ಗಜ. ಮುಂಬೈಯಲ್ಲಿ 1973ರಲ್ಲಿ ಹುಟ್ಟಿ ಬೆಳೆದು, ಪಾಕಿಸ್ತಾನ ವಿರುದ್ಧ 16ನೇ ವಯಸ್ಸಿನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದವರು. 1989–2013ರ ಅವಧಿಯಲ್ಲಿ ಒಟ್ಟು 200 ಟೆಸ್ಟ್ ಪಂದ್ಯಗಳನ್ನಾಡಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ 53.79 ಸರಾಸರಿಯಲ್ಲಿ ಒಟ್ಟು 15921 ರನ್ ಕಲೆ ಹಾಕಿದ ತೆಂಡೂಲ್ಕರ್ ಏಕದಿನ ಮತ್ತು ಟಿ 20 ಪಂದ್ಯಗಳಲ್ಲೂ ಹಲವಾರು ಸಾಧನೆ ಮಾಡಿದ್ದಾರೆ.

ಇಸಿಬಿಗೆ ಭಾರೀ ಆದಾಯ

ಭಾರತ ಹಾಗೂ ಇಂಗ್ಲೆಂಡ್ ನಡುವಿನ 5 ಪಂದ್ಯಗಳ ಟೆಸ್ಟ್ ಸರಣಿಯಿಂದಾಗಿ ಇಂಗ್ಲೆಂಡ್ ಕ್ರಿಕೆಟ್ ಮಂಡಳಿಗೆ (ಇ.ಸಿ.ಬಿ) ಬೃಹತ್ ಆದಾಯದ ಗಳಿಸಿಕೊಂಡಿದೆ. ಅಂದಾಜಿನ ಪ್ರಕಾರ, ಟಿ.ವಿ ಹಾಗೂ ಡಿಜಿಟಲ್ ಪ್ರಸಾರ ಹಕ್ಕು ಮಾರಾಟ, ಪ್ರಾಯೋಜಕತ್ವ, ಟಿಕೆಟ್‌ಗಳ ಮಾರಾಟ, ಕ್ರೀಡಾಂಗಣಗಳ ಒಳಗೆ ಜಾಹೀರಾತು, ಆಹಾರ ಹಾಗೂ ಮದ್ಯ ಮಾರಾಟ ಎಲ್ಲಾ ಸೇರಿ ಇ.ಸಿ.ಬಿ.ಗೆ 600ರಿಂದ 800 ಕೋಟಿ ರು. ಆದಾಯ ಬಂದಿದೆ ಎಂದು ಅಂದಾಜಿಸಲಾಗಿದೆ. ಜೂನ್‌ನಲ್ಲಿ ಲಂಡನ್‌ನಲ್ಲಿ ಮುಕ್ತಾಯ ಕಂಡಿದ್ದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಭಾರತ ಇಲ್ಲದ ಕಾರಣ ಇಸಿಬಿಗೆ ಅಷ್ಟಾಗಿ ಆದಾಯ ಹರಿದು ಬಂದಿರಲಿಲ್ಲ.

> ## ಮತ್ತೆ ಕನ್ನಡಿಗರ ಕಲರವ
>
>
>
>
>
> **ಈ ಬಾರಿ ಇಂಗ್ಲೆಂಡ್ ಪ್ರವಾಸದಲ್ಲಿದ್ದ ಭಾರತ ತಂಡದಲ್ಲಿ ಕನ್ನಡಿಗರಾದ ಕೆ.ಎಲ್. ರಾಹುಲ್, ಕರುಣ್ ನಾಯರ್ ಹಾಗೂ ಪ್ರಸಿದ್ಧ್ ಕೃಷ್ಣ ಸಹ ಸ್ಥಾನ ಪಡೆದು ಸರಣಿಯಲ್ಲಿ ಆಡಿದ್ದಾರೆ. ಮೂವರು ಆಟಗಾರರಿಗೂ ಒಟ್ಟಿಗೆ ಕಣಕ್ಕಿಳಿಯುವ ಅವಕಾಶ ದೊರೆತು 23 ವರ್ಷಗಳ ಬಳಿಕ ಮತ್ತೊಮ್ಮೆ ಟೀಮ್ ಇಂಡಿಯ ಪರ ಟೆಸ್ಟ್ ಪಂದ್ಯ ವೊಂದರಲ್ಲಿ ಮೂವರು ಕನ್ನಡಿಗರು ಆಡಿದಂತಾದ ಹೆಗ್ಗಳಿಕೆಯೂ ಈ ಸರಣಿಯಲ್ಲಿ ದೊರೆತಿದೆ.**

ಸಮಾಚಾರ ಸಣ್ಣದಲ್ಲ

ಆಸೀಸ್ ಸರಣಿಗೆ ಹರ್ಮನ್ ನಾಯಕ

ದೆಹಲಿ: ಅನುಭವಿ ಆಟಗಾರ ಹರ್ಮನ್ ಪ್ರೀತ್ ಸಿಂಗ್ ಇದೇ 15ರಂದು ಆರಂಭವಾಗುವ ನಾಲ್ಕು ಪಂದ್ಯಗಳ ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತ

ಪುರುಷರ ಹಾಕಿ ತಂಡವನ್ನು ಮುನ್ನಡೆಸಲಿದ್ದಾರೆ. ಈ ಪ್ರವಾಸಕ್ಕೆ 24 ಆಟಗಾರರ ತಂಡವನ್ನು ಸೋಮವಾರ ಹಾಕಿ ಇಂಡಿಯಾ ಪ್ರಕಟಿಸಿದೆ. ಕರ್ನಾಟಕದ ಯುವ ಡಿಫೆಂಡರ್ ಪೂವಣ್ಣ ಸಿ.ಬಿ. ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತದ ಆತಿಥ್ಯದಲ್ಲಿ ಆಗಸ್ಟ್ 29ರಿಂದ ರಾಜ್‌ಗಿರ್‌ನಲ್ಲಿ ಏಷ್ಯಾಕಪ್ ಟೂರ್ನಿ ನಡೆಯಲಿದೆ. ಇದು ಮುಂದಿನ ವಿಶ್ವಕಪ್‌ಗೆ ಕ್ವಾಲಿಫೈಯರ್ ಕೂಡ ಆಗಿರುವುದರಿಂದ ತಂಡಕ್ಕೆ ಪೂರ್ವತಯಾರಿಯ ನಿಟ್ಟಿನಲ್ಲಿ ಈ ಪ್ರವಾಸ ಹೆಚ್ಚಿನ ಮಹತ್ವ ಪಡೆದಿದೆ. ಬಿಹಾರದಲ್ಲಿ ನಡೆಯಲಿರುವ ಏಷ್ಯಾಕಪ್‌ಗೆ ಮುಂಚಿತವಾಗಿ ತಂಡವು ಪರ್ತ್‌ಗೆ ತೆರಳುತ್ತಿದೆ. ಉತ್ತಮ ತರಬೇತಿ ಮತ್ತು ಅಭ್ಯಾಸ ಪಂದ್ಯಗಳ ಮೂಲಕ ತಂಡದ ಸಮತೋಲನ ಮತ್ತು ತಾಂತ್ರಿಕ ನಿರ್ವಹಣೆಯನ್ನು ಸುಧಾರಿಸುವತ್ತ ಗಮನ ಹರಿಸಲಾಗುವುದು ಎಂದು ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಹೇಳಿದ್ದಾರೆ. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕ್ಯಾಂಪಸ್‌ನಲ್ಲಿ ತರಬೇತಿ ಪಡೆಯುತ್ತಿರುವ ತಂಡವು ಶುಕ್ರವಾರ ಆಸ್ಟ್ರೇಲಿಯಾಕ್ಕೆ ತೆರಳಲಿದ್ದು, 4 ಪಂದ್ಯಗಳು ಪರ್ತ್‌ನಲ್ಲೇ ನಡೆಯಲಿವೆ.

ವಿಂಡೀಸ್ ವಿರುದ್ಧ ಪಾಕ್‌ಗೆ ಸರಣಿ ಜಯ

ಫ್ಲೋರಿಡಾ: ಇಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ 3ನೇ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡ ಜಯ ಸಾಧಿಸಿದೆ. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ಪರ ಸೈಮ್ ಅಯ್ಯೂಬ್ (66) ಹಾಗೂ ಸಾಹಿಬ್ ಝಾದ ಫರ್ಹಾನ್ (74) ಅರ್ಧಶತಕ ಬಾರಿಸಿ ಮಿಂಚಿದ್ದರು. ಇಬ್ಬರ ಅರ್ಧಶತಕಗಳ ನೆರವಿನೊಂದಿಗೆ ಪಾಕಿಸ್ತಾನ ತಂಡವು 20 ಓವರ್‌ಗಳಲ್ಲಿ 189 ರನ್ ಕಲೆಹಾಕಿತು. 190 ರನ್ ಗುರಿ ಪಡೆದ ವೆಸ್ಟ್ ಇಂಡೀಸ್ ತಂಡಕ್ಕೆ ಅಲಿಕ್ ಅಥನಾಝ್ ಹಾಗೂ ಜ್ಯುವೆಲ್ ಆ್ಯಂಡ್ರೂ ಉತ್ತಮ ಆರಂಭ ಒದಗಿಸಿದ್ದರು. ಮೊದಲ ವಿಕೆಟ್‌ಗೆ 44 ರನ್ ಪೇರಿಸಿದ ಬಳಿಕ ಜ್ಯುವೆಲ್ ಆ್ಯಂಡ್ರೂ (24) ಔಟಾದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಮುಂದುವರೆಸಿದ ಅಥನಾಝ್ 40 ಎಸೆತಗಳಲ್ಲಿ 60 ರನ್ ಬಾರಿಸಿದರು. ಶೆರ್ಫೇನ್ ರುದರ್‌ಫೋರ್ಡ್ 35 ಎಸೆತಗಳಲ್ಲಿ 51 ರನ್ ಗಳಿಸಿದರು. ಆದರೆ ಕೊನೆಯ ಹಂತದಲ್ಲಿ ಎಡವಿದ ವೆಸ್ಟ್ ಇಂಡೀಸ್ ತಂಡವು ಅಂತಿಮವಾಗಿ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 176 ರನ್ ಗಳಿಸಲಷ್ಟೇ ಶಕ್ತರಾದರು, ಈ ಮೂಲಕ ಪಾಕಿಸ್ತಾನವು 13 ರನ್‌ಗಳ ರೋಚಕ ಜಯ ಸಾಧಿಸಿತು. 3 ಪಂದ್ಯಗಳ ಸರಣಿಯನ್ನು ಪಾಕಿಸ್ತಾನ್ ತಂಡ 2-1 ಅಂತರದಿಂದ ಗೆದ್ದುಕೊಂಡಿದೆ.

ಕೊನೆಯ ಟೆಸ್ಟ್‌ನಲ್ಲಿ ಭಾರತಕ್ಕೆ 6 ರನ್ ರೋಚಕ ಗೆಲುವು | ಟೆಸ್ಟ್ ಸರಣಿ 2-2 ಸಮಬಲ

ಆಂಗ್ಲರ ಜಯ ಕಸಿದ ಭಾರತ

ಲಂಡನ್: ಇಲ್ಲಿನ ಕೆನ್ನಿಂಗ್ಟನ್ ಓವಲ್‌ನಲ್ಲಿ ನಡೆದ ಕೊನೆಯ ಟೆಸ್ಟ್ ಸೋಮವಾರ ರೋಚಕ ಅಂತ್ಯ ಕಂಡಿದೆ. ಮೊಹಮ್ಮದ್ ಸಿರಾಜ್ ಹಾಗೂ ಕನ್ನಡಿಗ ಪ್ರಸಿದ್ಧ್ ಕೃಷ್ಣ ಅವರ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಭಾರತವು 6 ರನ್‌ಗಳ ಜಯ ಸಾಧಿಸಿ, 5 ಪಂದ್ಯಗಳ ಟೆಸ್ಟ್ ಸರಣಿಯನ್ನು 2-2 ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು.

374 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡ, ಕೊನೆಯ ದಿನ ಗೆಲ್ಲಲು ಕೇವಲ 35 ರನ್ ಗಳಿಸಬೇಕಿತ್ತು, ಕೈಯಲ್ಲಿ ಇನ್ನೂ 4 ವಿಕೆಟ್ ಇದ್ದವು. ಆದರೆ ಭಾರತದ ವೇಗದ ಬೌಲರ್‌ಗಳಾದ ಮೊಹ ಮ್ಮದ್ ಸಿರಾಜ್ ಹಾಗೂ ಪ್ರಸಿದ್ಧ್ ಕೃಷ್ಣ ಅದಕ್ಕೆ ಅವಕಾಶ ಕೊಡದೇ ಭಾರತಕ್ಕೆ ಗೆಲುವನ್ನು ತಂದುಕೊಟ್ಟರು.

5ನೇ ದಿನ ಬ್ಯಾಟಿಂಗ್ ಆರಂಭಿಸಿದ ಇಂಗ್ಲೆಂಡ್, ಮೊದಲ ಓವರ್‌ನಲ್ಲೇ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಸತತ 2 ಬೌಂಡರಿ ಬಾರಿಸಿದರು, ಆಗ ಎಲ್ಲರೂ ಇಂಗ್ಲೆಂಡ್ ಸುಲಭವಾಗಿ ಗೆಲ್ಲಬಹುದು ಎಂದು ನಿರೀಕ್ಷಿಸಿದ್ದರು. ಆದರೆ ಮೊಹ್ಮಮದ್ ಸಿರಾಜ್ ನಂತರದ ಓವರ್‌ನಲ್ಲೇ ಸ್ಫೋಟಕ ಆಟಗಾರ ಜೇಮಿ ಸ್ಮಿತ್‌ರನ್ನು ಔಟ್ ಮಾಡುವ ಮೂಲಕ ಭಾರತಕ್ಕೆ ಗೆಲುವಿನ ಆಸೆ ಮೂಡಿಸಿದರು. 9 ರನ್ ಗಳಿಸಿದ್ದ ಓವರ್ಟನ್‌ರನ್ನು ಸಿರಾಜ್ ಎಲ್‌ಬಿಡಬ್ಲ್ಯೂ ಮಾಡುವ ಮೂಲಕ ಭಾರತದ ಗೆಲುವಿನ ಆಸೆಯನ್ನು ಮತ್ತಷ್ಟು ಹೆಚ್ಚಿಸಿದರು. ಕನ್ನಡಿಗ ಪ್ರಸಿದ್ಧ್ ಕೃಷ್ಣ 12 ಎಸೆತಗಳನ್ನಾಡಿದ್ದ ಜೋಶ್ ಟಂಗ್‌ರನ್ನು ಕ್ಲೀನ್ ಬೌಲ್ಡ್ ಮಾಡಿದರು, ಈ ಹಂತದಲ್ಲಿ ಭಾರತದ ಸುಲಭವಾಗಿ ಗೆಲ್ಲ ಬಹುದು ಎಂದು ನಿರೀಕ್ಷಿಸಲಾ ಗಿತ್ತು. ಏಕೆಂದರೆ ಕ್ರಿಸ್ ವೋಕ್ಸ್ ಎಡಗೈ ಗಾಯ ವಾಗಿರುವುದರಿಂದ ಬ್ಯಾಟಿಂಗ್‌ಗೆ ಬರುವ ಸಾಧ್ಯತೆ ಇಲ್ಲ ಎಂದೇ ಅಂದುಕೊಂಡಿದ್ದರೂ, ಅವರು ಮೈದಾನಕ್ಕೆ ಆಗಮಿಸಿ ಎಲ್ಲರ ನಿರೀಕ್ಷೆಯನ್ನು ಹುಸಿ ಮಾಡಿದರು. ವೋಕ್ಸ್ ಮೈದಾನಕ್ಕೆ ಆಗಮಿಸಿದಾಗ ಇಂಗ್ಲೆಂಡ್‌ಗೆ ಇನ್ನೂ 17 ರನ್‌ಗಳ ಅಗತ್ಯವಿತ್ತು. ಆದರೆ ಅಟ್ಕಿನ್ಸನ್ ಎಲ್ಲಾ ಎಸೆತಗಳನ್ನು ತಾವೇ ಎದುರಿಸಿ ವೋಕ್ಸ್ ಸ್ಟ್ರೈಕ್‌ಗೆ ಬರದಂತೆ ನೋಡಿಕೊಂಡರು. ಸಿರಾಜ್ ಬೌಲಿಂಗ್‌ನಲ್ಲಿ ಲಾಂಗ್‌ಆನ್ ಕಡೆ ಬಾರಿಸಿದರು, ಆದರೆ ಆಕಾಶ್ ದೀಪ್ ಕ್ಯಾಚ್ ಹಿಡಿಯುವ ಯತ್ನದಲ್ಲಿ ಸಿಕ್ಸರ್ ನೀಡಿದರು.

ಈ ಸಂದರ್ಭದಲ್ಲಿ ಇಂಗ್ಲೆಂಡ್ ತಂಡಕ್ಕೆ ಗೆಲ್ಲಲು 11 ರನ್ ಅಗತ್ಯವಿತ್ತು. ಕೊನೆಯ ಎಸೆತದಲ್ಲಿ ಅಟ್ಕಿನ್ಸನ್ ರನ್ ಬೀಸಿದಾಗ ಜುರೆಲ್ ರನ್‌ಔಟ್ ಮಾಡುವಲ್ಲಿ ವಿಫಲರಾದರು.

85ನೇ ಓವರ್‌ನಲ್ಲಿ ಅಟ್ಕಿನ್ಸನ್ 3 ರನ್ ಗಳಿಸಿ ಮತ್ತೆ ಸ್ಟ್ರೈಕ್ ಉಳಿಸಿ ಕೊಂಡರು, ಆದರೆ 86ನೇ ಓವರ್‌ನಲ್ಲಿ ಸಿರಾಜ್ 17 ರನ್ ಗಳಿಸಿದ್ದ ಅಟ್ಕಿನ್ಸನ್‌ರನ್ನು ಕ್ಲೀನ್ ಬೌಲ್ಡ್ ಮಾಡಿ ಭಾರತಕ್ಕೆ ರೋಚಕ ಜಯ ತಂದುಕೊಟ್ಟರು.

> ಟೆಸ್ಟ್ ಕ್ರಿಕೆಟ್ ನಿಜಕ್ಕೂ ರೋಮಾಂಚನಕಾರಿ.. ಎಂತಹ ಗೆಲುವು.. ಟೀಮ್ ಇಂಡಿಯಾ...
> **-ಸಚಿನ್ ತೆಂಡೂಲ್ಕರ್,** ಕ್ರಿಕೆಟ್ ದಿಗ್ಗಜ

> ನಾವು ಕೆಲವು ಪಂದ್ಯಗಳನ್ನು ಗೆಲ್ಲುತ್ತೇವೆ, ಕೆಲವು ಪಂದ್ಯಗಳಲ್ಲಿ ಸೋಲುತ್ತೇವೆ. ಆದರೆ ನಾವು ಎಂದಿಗೂ ಶರಣಾಗುವುದಿಲ್ಲ. ಚೆನ್ನಾಗಿ ಆಡಿದ್ದೀರಿ ಬಾಯ್ಸ್..!'
> **-ಗೌತಮ್ ಗಂಭೀರ್,** ತಂಡದ ಕೋಚ್

> ನಮ್ಮದು ಯುವ ತಂಡ, ಆದರೆ ನಮ್ಮನ್ನು ಯುವ ತಂಡವಾಗಿ ನಾವು ನೋಡಬಾರದು. ಗನ್ ಟೀಮ್ ರೀತಿ ನೀವು ನೋಡಬೇಕು ಎಂದು ಈ ಸರಣಿಗೂ ಮುನ್ನ ಗೌತಮ್ ಗಂಭೀರ್ ಹೇಳಿದ್ದರು. ನಮ್ಮದು ಗನ್ ತಂಡವೆಂದು ಸಾಮರ್ಥ್ಯವೆಂಬುದನ್ನು ನಾವು ಇಂದು ತೋರಿಸಿದ್ದೇವೆ
> **-ಶುಭಮನ್ ಗಿಲ್,** ತಂಡದ ನಾಯಕ

ಟೆಸ್ಟ್ ರ‍್ಯಾಂಕಿಂಗ್

ಟೀಮ್ ಇಂಡಿಯ ಜಿಗಿತ

ಇಂಗ್ಲೆಂಡ್ ವಿರುದ್ಧ ಐದನೇ ಟೆಸ್ಟ್ ಪಂದ್ಯವನ್ನು ಜಯಗಳಿಸುವ ಮೂಲಕ ಭಾರತವು ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕ ಪಟ್ಟಿಯಲ್ಲಿ 3ನೇ ಸ್ಥಾನಕ್ಕೆ ಜಿಗಿದಿದೆ. 5ನೇ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ 16 ಅಂಕ ಪಡೆದಿದ್ದರೆ ಇಂಗ್ಲೆಂಡ್ 26 ಅಂಕ ಪಡೆಯುವ ಮೂಲಕ ಮೂರನೇ ಸ್ಥಾನ ಪಡೆದಿತ್ತು. ಆದರೆ 5ನೇ ಟೆಸ್ಟ್ ಪಂದ್ಯವನ್ನು 6 ರನ್‌ಗಳಿಂದ ಜಯಗಳಿಸುವ ಮೂಲಕ ಭಾರತ 28 ಅಂಕ ಪಡೆದು ಮೂರನೇ ಸ್ಥಾನಕ್ಕೆ ಏರಿದರೆ, 26 ರನ್‌ನಲ್ಲೇ ಮುಂದುವರಿಯುತ್ತಿರುವ ಇಂಗ್ಲೆಂಡ್ ನಾಲ್ಕನೇ ಸ್ಥಾನಕ್ಕೆ ಜಾರಿದೆ. ಭಾರತ ಮತ್ತು ಇಂಗ್ಲೆಂಡ್ ತಲಾ 5 ಪಂದ್ಯವಾಡಿದ್ದು ಇತ್ತಂಡಗಳು 2 ಜಯ 2 ಸೋಲು, 1 ಪಂದ್ಯವನ್ನು ಡ್ರಾ ಮಾಡಿಕೊಂಡಿದೆ. ಲಾರ್ಡ್ಸ್ ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ 22 ರನ್‌ಗಳಿಂದ ಗೆದ್ದುಕೊಂಡಿತ್ತು, ಆದರೆ ಈ ಪಂದ್ಯ ದಲ್ಲಿ ನಿಧಾನಗತಿಯ ಬೌಲಿಂಗ್ ಮಾಡಿದ್ದಕ್ಕೆ 2 ಅಂಕ ಕಡಿತವಾಗಿದ್ದರಿಂದ ಇಂಗ್ಲೆಂಡ್ 26 ಅಂಕ ಪಡೆದಿದೆ.

ಬೌಲರ್‌ಗಳ ಮೇಲುಗೈ

ಮೊಹಮ್ಮದ್ ಸಿರಾಜ್ ಸೋಮವಾರ 3 ವಿಕೆಟ್ ಪಡೆದರೆ, ಪ್ರಸಿದ್ಧ್ ಕೃಷ್ಣ ಒಂದು ವಿಕೆಟ್ ಪಡೆದರು. ಭಾರತದ ಪರ ಅಂತಿಮ ಟೆಸ್ಟ್‌ನಲ್ಲಿ ಒಟ್ಟಾರೆ ಮೊಹಮ್ಮದ್ ಸಿರಾಜ್ 104 ರನ್ ನೀಡಿ 5 ವಿಕೆಟ್ ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ಸಿರಾಜ್‌ಗೆ ಸಾಥ್ ನೀಡಿದ ಪ್ರಸಿದ್ಧ್ ಕೃಷ್ಣ 126ಕ್ಕೆ 4 ವಿಕೆಟ್ ಪಡೆದರು, ಆಕಾಶ್ ದೀಪ್ 85ಕ್ಕೆ 1 ವಿಕೆಟ್ ಪಡೆದರು.

ಸಿರಾಜ್: ಪಂದ್ಯಶ್ರೇಷ್ಠ

ಇಂಗ್ಲೆಂಡ್‌ನ ಭರವಸೆಯ ಬ್ಯಾಟರ್ ಜೇಮೀ ಸ್ಮಿತ್ ಅವರನ್ನು 5ನೇ ದಿನದಾಟದ ಆರಂಭದಲ್ಲೇ ಪೆವಿಲಿನ್‌ಗೆ ಅಟ್ಟಿದ ಭಾರತದ ಬೌಲರ್ ಮೊಹಮ್ಮದ್ ಸಿರಾಜ್, ಅತಿಥೇಯರ ಮೇಲೆ ಒತ್ತಡ ಹೇರಿದರು. ಸ್ಮಿತ್ ಅವರ ಹಿಂದೆಯೇ ಜೇಮೀ ಓವರ್ಟನ್ ಅವರನ್ನೂ ಎಲ್‌ಬಿ ಬಲೆಗೆ ಸಿರಾಜ್ ಬೀಳಿಸಿದರು. ಅವರಿಗೆ ಸಾಥ್ ನೀಡಿದ ಪ್ರಸಿದ್ಧ ಕೃಷ್ಣ, ಜೋಶ್ ಟಂಗ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. 30.1 ಓವರ್ ಬೌಲಿಂಗ್ ಮಾಡಿದ ಸಿರಾಜ್, 104 ರನ್ ನೀಡಿ 5 ವಿಕೆಟ್ ಪಡೆದರು. ಇದು ಈ ಟೂರ್ನಿಯಲ್ಲಿ ಅವರಿಗೆ ಎರಡನೇ ಐದು ವಿಕೆಟ್ ಗೊಂಚಲು. ಮೊದಲ ಇನಿಂಗ್ಸ್‌ನಲ್ಲೂ ನಾಲ್ಕು ವಿಕೆಟ್ ಪಡೆದಿದ್ದ ಕಾರಣ, ಅರ್ಹವಾಗಿಯೇ ಅವರು 'ಪಂದ್ಯಶ್ರೇಷ್ಠ' ಪ್ರಶಸ್ತಿಗೆ

ಪುರಸ್ಕೃತರಾದರು. 5 ಪಂದ್ಯಗಳಲ್ಲಿ ಒಟ್ಟು 23 ವಿಕೆಟ್‌ಗಳನ್ನು ಉರುಳಿಸಿರುವ ಸಿರಾಜ್, ಪ್ರಸ್ತುತ ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದ್ದಾರೆ. ಇಂಗ್ಲೆಂಡ್‌ನಲ್ಲಿ ನಡೆದ ಸರಣಿಯಲ್ಲಿ ಭಾರತದ ಪರ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಖ್ಯಾತಿಗೂ ಭಾಜನರಾಗಿದ್ದಾರೆ.

ವೋಕ್ಸ್‌ಗೆ ಮೆಚ್ಚುಗೆ

ಇಂಗ್ಲೆಂಡ್ ತಂಡದ ವೇಗದ ಬೌಲರ್ ಕ್ರಿಸ್ ವೋಕ್ಸ್ ಸೋಮವಾರ ಓವಲ್ ಮೈದಾನದಲ್ಲಿ ಕಿಕ್ಕಿರಿದಿದ್ದ ಕ್ರಿಕೆಟ್ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರರಾದರು. ಗಾಯದ ಹೊರತಾಗಿಯೂ ಒಂದೇ ಕೈಯಲ್ಲಿ ಬ್ಯಾಟ್ ಮಾಡಲು ಕ್ರೀಸ್‌ಗೆ ಬಂದಿದ್ದರು. ಈ ಹಿನ್ನೆಲೆಯಲ್ಲಿ ಗ್ಯಾಲರಿಯಲ್ಲಿ ಕುಳಿತಿದ್ದ ಅಭಿಮಾನಿಗಳು ಇಂಗ್ಲೆಂಡ್ ವೇಗಿಗೆ ವಿಶೇಷ ಗೌರವವನ್ನು ಸಲ್ಲಿಸಿದರು. ಕ್ರಿಸ್ ವೋಕ್ಸ್ ಒಂದು ಕೈಯನ್ನು ಜೆರ್ಸಿ ಒಳಗಡೆ ನೇತು ಹಾಕಿಕೊಂಡಿದ್ದರು, ಆ ಹಿನ್ನೆಲೆಯಲ್ಲಿ ಅವರು ಒಂದೇ ಕೈಯಲ್ಲಿ ಬ್ಯಾಟ್ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು.

ಹರಿದ ರನ್‌ಹೊಳೆ

ಭಾರತ-ಇಂಗ್ಲೆಂಡ್ ಟೆಸ್ಟ್ ಟೂರ್ನಿಯಲ್ಲಿ ಎರಡೂ ತಂಡಗಳ 9 ಬ್ಯಾಟರ್‌ಗಳು 400ಕ್ಕಿಂತ ಹೆಚ್ಚು ರನ್ ಕಲೆಹಾಕಿದ್ದಾರೆ. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಸರಣಿಯೊಂದರಲ್ಲಿ ಇಷ್ಟು ಬ್ಯಾಟರ್‌ಗಳು ಈ ರೀತಿಯ ಸಾಧನೆ ಮಾಡಿರುವುದು ಇದೇ ಮೊದಲು. ಅದಷ್ಟೇ ಅಲ್ಲ. ಒಟ್ಟು 12 ಮಂದಿ 21 ಶತಕಗಳನ್ನು ಸಿಡಿಸಿದ್ದಾರೆ. ಇದರೊಂದಿಗೆ, 70 ವರ್ಷಗಳ ಹಿಂದಿನ ದಾಖಲೆಯನ್ನು ಆ್ಯಂಡರ್ಸನ್ ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಸರಿಗಟ್ಟಲಾಗಿದೆ. 1955ರಲ್ಲಿ ವೆಸ್ಟ್ ಇಂಡೀಸ್ ಹಾಗೂ ಆಸ್ಟ್ರೇಲಿಯಾ ನಡುವಣ ಸರಣಿಯಲ್ಲಿಯೂ ಇಷ್ಟೇ (21) ಶತಕಗಳು ದಾಖಲಾಗಿದ್ದವು. ಅದು ಈವರೆಗೆ ಸಾಧನೆಯಾಗಿತ್ತು. ಪ್ರಸ್ತುತ ಸರಣಿಯಲ್ಲಿ ಟೀಂ ಇಂಡಿಯಾ ನಾಯಕ ಶುಭ್‌ಮನ್ ಗಿಲ್ 4 ಶತಕ ಸಹಿತ 754 ರನ್ ಕಲೆಹಾಕಿದ್ದಾರೆ. ನಂತರದ ಸ್ಥಾನದಲ್ಲಿರುವ ಜೋ ರೂಟ್ (537 ರನ್) ಮೂರು ಸಲ ಮೂರಂಕಿ ಮೊತ್ತ ದಾಟಿದ್ದಾರೆ. ಕೆ.ಎಲ್. ರಾಹುಲ್, ಹ್ಯಾರಿ ಬ್ರೂಕ್, ರಿಷಭ್ ಪಂತ್, ಯಶಸ್ವಿ ಜೈಸ್ವಾಲ್ ತಲಾ ಎರಡು ಶತಕ ಸಿಡಿಸಿದ್ದಾರೆ. ರವೀಂದ್ರ ಜಡೇಜ, ಬೆನ್ ಡಕೆಟ್. ಜೆಮೀ ಸ್ಮಿತ್, ಓಲಿ ಪೋಪ್, ಬೆನ್ ಸ್ಟೋಕ್ಸ್ ಹಾಗೂ ವಾಷಿಂಗ್ಟನ್ ಸುಂದರ್ ಒಂದೊಂದು ಶತಕ ಬಾರಿಸಿದ್ದಾರೆ.

ಮತ್ತೆ ಮಳೆ ಹೊಯ್ಯುತ್ತಿದೆ ತೆರೆಯಲ್ಲಿ ಮಾನ್ಸೂನ್ ವೈಭವ

ಸ್ಯಾಂಡಲ್‌ವುಡ್‌ನಲ್ಲಿ ಮಳೆಯಲ್ಲಿಯೇ ಸಾಗುವ ಮಳೆಯ ಶೀರ್ಷಿಕೆಯನ್ನೇ ಹೊಂದಿರುವ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಈಗ ಆ ಸಾಲಿಗೆ ಮತ್ತೆ ಮಳೆ ಹೊಯ್ಯುತ್ತಿದೆ ಸಿನಿಮಾವೂ ಸೇರುತ್ತಿದೆ. ಎಲ್ಲ ನೆನಪಾಗುತ್ತಿದೆ ಎಂಬ ಅಡಿಬರಹವೂ ಈ ಚಿತ್ರಕ್ಕಿದೆ. ಮೂರು ದಶಕಗಳಿಂದ ಕನ್ನ ಚಿತ್ರರಂಗದಲ್ಲಿ ಸಹಾಯಕ ಕಲಾ ನಿರ್ದೇಶಕರಾಗಿರುವ ಗಂಗಾಧರ್, ಗವಿರಂಗನಾಥ ಸ್ವಾಮಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಪರಮ್ ಗುಬ್ಬಿ ನಿರ್ದೇಶನದಲ್ಲಿ ಸಿನಿಮಾ ಮೂಡಿಬರುತ್ತಿದೆ. ಅಪರೂಪದ ಪ್ರೇಮಕಥನಾ ಚಿತ್ರದಲ್ಲಿದ್ದು ಅದು ಎರಡು ಕಾಲಘಟ್ಟದಲ್ಲಿ ಸಾಗಲಿದೆ. ಎಂಬತ್ತರ ದಶಕದಲ್ಲಿ ಸಾಗುವ ಕಥೆ ಇಲ್ಲಿದ್ದು, ರೆಟ್ರೋ ಲುಕ್‌ನಲ್ಲಿ ಸಾಗಲಿದೆ. ಜಿ.ಲಿಖಿತ್ ಮತ್ತು ಜಯವರ್ಧನ್ ನಾಯಕರಾಗಿ ನಟಿಸುತ್ತಿದ್ದು, ಸುಲಕ್ಷಾ ಖೈರಾ ಹಾಗೂ ಭೂಮಿಕಾ ಗೌಡ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಚಂದ್ರಶೇಖರ ರೆಡ್ಡಿ, ಪ್ರಕಾಶ್ ಮೂರ್ತಿ, ಸ್ವರ್ಣಾ, ಶ್ರುತಿ, ದಿನ ಮಣಿ, ಕಾವ್ಯಾ ಮುಂತಾದವರು ತಾರಾಗಣದಲ್ಲಿದ್ದಾರೆ. ಶೃಂಗೇರಿ, ಹೊರನಾಡು, ಕೊಪ್ಪ, ಹರಿಹರಪುರ, ಆಗುಂಬೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದ್ದು, ಅಕ್ಟೋಬರ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ಯೋಜಿಸಲಾಗಿದೆ. ಛಾಯಾಗ್ರಹಣ ಶಾಂತಾರಾವ್ ಇಪಿಲಿ, ಸಂಕಲನ ಧನುಷ್ ವೀರ್, ಕಲೆ ಬಾಬು ಖಾನ್, ನೃತ್ಯ ನಂದ ಅವರದಾಗಿದೆ.

> ಮತ್ತೆ ಮಳೆ ಹೊಯ್ಯುತ್ತಿದೆ, ಸಾಹಿತಿ ಕೆ. ಸದಾಶಿವ ಅವರು ರಚಿಸಿರುವ ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಎಂಬತ್ತರದ ದಶಕಲ್ಲಿ ಸಾಗುವ ಕಥೆ ಇಲ್ಲಿದ್ದು, ನವಿರಾದ ಪ್ರೇಮಕಥೆ ಮನಸೆಳೆಯಲಿದೆ. ಸಿನಿಮಾದಲ್ಲಿ ಮಳೆಯು ಮಹತ್ವದ ಪಾತ್ರವನ್ನು ವಹಿಸಿದೆ. ಜತೆಗೆ ಅರ್ಥಪೂರ್ಣ ಸಂದೇಶವನ್ನು ಹೊತ್ತು ಬಂದಿದೆ.
> **-ಪರಮ್ ಗುಬ್ಬಿ,** ನಿರ್ದೇಶಕ

> ಅಪರೂಪದ ಪ್ರೇಮಕಥನಾ ಚಿತ್ರದಲ್ಲಿದ್ದು ಅದು ಎರಡು ಕಾಲಘಟ್ಟದಲ್ಲಿ ಸಾಗಲಿದೆ. ಎಂಬತ್ತರ ದಶಕದಲ್ಲಿ ಸಾಗುವ ಕಥೆ ಇಲ್ಲಿದ್ದು, ರೆಟ್ರೋ ಲುಕ್‌ನಲ್ಲಿ ಸಾಗಲಿದೆ.

ನೈಜ ಘಟನೆಯ ಪಾಲ್ಗುಣಿಯಲಿ ರೇಖಾಶ್ರೀ

ಮಂಡ್ಯದ ಹುಡುಗರ ಜತೆಗೆ ಚಂದನವನಕ್ಕೆ ಬಂದ ರೇಖಾಶ್ರೀ ಈಗ ಪಾಲ್ಗುಣಿಯಾಗಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಮಂಡ್ಯದ ಭಾಗದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದ್ದು, ರೇಖಾ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಮ್ಮ ಚಿತ್ರ, ಹಾಗೂ ಪಾತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

- **ಇದು ಮಹಿಳಾ ಪ್ರಧಾನ ಕಥೆಯೇ?**

ರೇಖಾ ಶ್ರೀ: ಹೌದು ಇಲ್ಲಿ ನಾಯಕಿಯ ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಪಾಲ್ಗುಣಿಯ ಬದುಕಿನ ಘಟನಾವಳಿಗಳ ಸುತ್ತಲೇ ಚಿತ್ರದ ಕಥೆ ಸಾಗುತ್ತದೆ. ಪಾಲ್ಗುಣಿ ಹಳ್ಳಿಯ ಹುಡುಗಿಯಾದರೂ ವಿದ್ಯಾವಂತೆ, ಜವಾಬ್ದಾರಿ ಅರಿತ ಬುದ್ಧಿವಂತೆ. ಅಂದುಕೊಂಡಂತೆ ಜೀವನ ಕಟ್ಟಿಕೊಳ್ಳಬೇಕು ಎಂಬ ಹಂಬಲ ಆಕೆಯಲ್ಲಿರುತ್ತದೆ. ಹೀಗಿರುವಾಗಲೇ ಆಕೆಯ ಬಾಳಲ್ಲಿ ಒಂದಷ್ಟು ತಿರುವುಗಳು ಎದುರಾಗುತ್ತವೆ. ಇದರಿಂದ ಪಾಲ್ಗುಣಿಗೆ ಯಾವೆಲ್ಲಾ ಸಮಸ್ಯೆಗಳು ಕಾಡುತ್ತವೆ ಎಂಬುದನ್ನು ಇಲ್ಲಿ ಎಮೋಷನಲ್ ಆಗಿ ಕಟ್ಟಿಕೊಡಲಾಗಿದೆ.

- **ಈ ಕಥೆಯನ್ನು ಒಪ್ಪಿಕೊಳ್ಳಲು ಕಾರಣ ?**

ರೇಖಾ ಶ್ರೀ: ಚಿತ್ರದಲ್ಲಿ ಗಟ್ಟಿ ಕಂಟೆಂಟ್ ಇತ್ತು, ಅದರಲ್ಲಿಯೂ ಇದು ನೈಜ ಘಟನೆಯಾಧಾರಿತ ಸಿನಿಮಾವಾಗಿದ್ದು, ಸಮಾಜದ ಕಣ್ತೆರೆಸುವ ಪ್ರಯತ್ನ ಮಾಡಲಾಗಿದೆ. ಅದಕ್ಕಾಗಿಯೇ ಚಿತ್ರದಲ್ಲಿ ನಟಿಸಲು ಸಮ್ಮತಿಸಿದೆ. ಚಿತ್ರದಲ್ಲಿ ಪೋಷಕರು ಮತ್ತು ಯುವ ಸಮೂಹಕ್ಕೆ ಒಳ್ಳೆಯ ಸಂದೇಶವೂ ಇದೆ. ಹಾಗಾಗಿ ಎಲ್ಲರೂ ಈ ಸಿನಿಮಾವನ್ನು ನೋಡಲೇಬೇಕು.

> ಮಂಡ್ಯದ ಹಳ್ಳಿಯಲ್ಲಿ ಜಾತ್ರೋತ್ಸವ ನಡೆಯುತ್ತಿತ್ತು, ಅಲ್ಲಿಯೇ ಕ್ಯಾಮೆರಾ ಇಟ್ಟು ಚಿತ್ರೀಕರಿಸಿದೆವು. ಅದು ಚಿತ್ರೀಕರಣ ಎಂಬದು ಚಿತ್ರತಂಡ ಬಿಟ್ಟರೆ ಯಾರಿಗೂ ತಿಳಿದಿರಲಿಲ್ಲ. ಹಾಗಾಗಿ ಜಾತ್ರೆಯ ಸನ್ನಿವೇಶ ನೈಜವಾಗಿ ಮೂಡಿಬಂದಿದೆ.

- **ಪಾಲ್ಗುಣಿ ಚಾಲೆಂಜಿಂಗ್ ಅನ್ನಿಸಿತೆ?**

ರೇಖಾ ಶ್ರೀ: ಗ್ರಾಮೀಣ ಸೊಗಡಿನ ಸಂಭಾಷಣೆ ಕೊಂಚ ಕಷ್ಟ ಎನಿಸಿತು. ಆದರೂ ಕಥೆಗೆ ತಕ್ಕಂತೆ ಹೊಂದಿಕೊಳ್ಳಲೇಬೇಕು ಎಂದುಕೊಂಡು ಮಂಡ್ಯ ಸೊಗಡಿನ ಭಾಷೆ ಕಲಿತೆ, ಅಲ್ಲಿನ ಸಂಸ್ಕೃತಿಯ ಬಗ್ಗೆ ಅರಿತೆ. ಇದರಿಂದ ಸಿನಿಮಾದಲ್ಲಿನ ನನ್ನ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಾಧ್ಯವಾಯಿತು. ನಮ್ಮ ಸಿನಿಮಾದಲ್ಲಿ ಮಂಡ್ಯದ ಹಳ್ಳಿಯೊಂದರ ಜನರು ನಟಿಸಿದ್ದಾರೆ. ಹಾಗಾಗಿ ಸಿನಿಮಾದ ಬಹುತೇಕ ಸನ್ನಿವೇಶಗಳು ನೈಜವಾಗಿ ಮೂಡಿಬಂದಿವೆ.

- **ಸಿನಿಮಾದ ಬಗ್ಗೆ ನಿಮ್ಮ ನಿರೀಕ್ಷೆ ಹೇಗಿದೆ?**

ರೇಖಾ ಶ್ರೀ: ನಮ್ಮ ಸಿನಿಮಾ ಪ್ರೇಕ್ಷಕರಿಗೆ ಹಿಡಿಸಲಿದೆ ಎಂಬ ನಂಬಿಕೆ ನನಗಿದೆ. ಸಿನಿಮಾದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆ. ಅದರ ಜತೆಗೆ ಒಳ್ಳೆಯ ಸಾಮಾಜಿಕ ಸಂದೇಶ ಇಲ್ಲಿದ್ದು, ಹಳ್ಳಿಗಾಡಿನ ಸುಂದರ ಸಂಸ್ಕೃತಿ ಪ್ರೇಕ್ಷಕರ ಮನಸೂರೆಗೊಳ್ಳಲಿದೆ.

> ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಬಾವಿಗೆ ಹಾರುವ ದೃಶ್ಯವಿತ್ತು. ಆ ಹಳ್ಳಿಯಲ್ಲಿ ಅಲ್ಲೊಂದು ದೊಡ್ಡ ಬಾವಿಯಿತ್ತು. ಅದಕ್ಕೆ ಕೈಕಟ್ಟಿಕೊಂಡು ಹಾರಬೇಕಿತ್ತು. ಚಿತ್ರತಂಡ ಮುಂಜಾಗ್ರತ ಕ್ರಮಕೈಗೊಂಡಿತ್ತು. ಹಾಗಾಗಿ ನಾನು ಧೈರ್ಯವಾಗಿ ಹಾರಿದೆ. ನನಗೆ ಈಜು ತಿಳಿದಿದ್ದರಿಂದ ಯಾವುದೇ ಸಮಸ್ಯೆಯಾಗಲಿಲ್ಲ.

ಕಮಲ್ ಶ್ರೀದೇವಿಯ ಟೀಸರ್

ಹಿರಿಯ ನಟ ಡಿಂಗ್ರಿ ನಾಗರಾಜು ಪುತ್ರ ರಾಜ್‌ವರ್ಧನ್ ಕನ್ನಡ ಚಿತ್ರರಂಗದಲ್ಲಿ ನಟನಾಗಿ ಗುರುತಿಸಿಕೊಂಡಿದ್ದು, ಹಲವು ಸಿನಿಮಾಗಳಲ್ಲಿಯೂ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ.

ಈಗ ನಟನೆಯ ಜತೆಗೆ ನಿರ್ಮಾಣಕ್ಕೂ ಮುಂದಾಗಿದ್ದಾರೆ. ತಮ್ಮದೇ ಬಾರ್ನ್‌ಸ್ವೆಲ್ಲೋ ನಿರ್ಮಾಣ ಸಂಸ್ಥೆ ಸ್ಥಾಪಿಸಿದ್ದು ಅದರ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದ್ದಾರೆ. ರಾಜ್‌ವರ್ಧನ್ ನಿರ್ಮಾಣದಲ್ಲಿ ಕಮಲ್ ಶ್ರೀದೇವಿ ಸಿನಿಮಾ ಮೂಡಿಬರುತ್ತಿದೆ. ಈ ಚಿತ್ರದ ಟೀಸರ್ ಕೂಡ ರಿಲೀಸ್ ಆಗಿದ್ದು ನಿರೀಕ್ಷೆ ಹೆಚ್ಚಿಸಿದೆ. ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಳ್ಳಲು ಬರುವವರು ಇಲ್ಲಿ ಎದುರಿಸುವ ಸಮಸ್ಯೆಗಳ ಸುತ್ತ ಚಿತ್ರದ ಸ್ಟೋರಿ ಸಾಗುತ್ತದೆ. ಅದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ

ಕಟ್ಟಿಕೊಡಲಾಗಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಇಲ್ಲಿ ನೈಜ ಕಥೆಗೆ ಒಂದಷ್ಟು ಕಾಲ್ಪನಿಕ ಅಂಶಗಳನ್ನು ಬೆರೆಸಲಾಗಿದೆ. ಕಮಲ್ ಮತ್ತು ಶ್ರೀದೇವಿಯ ಪಾತ್ರಗಳು ಇಲ್ಲಿ ಕೇಂದ್ರ ಬಿಂದುವಾಗಿವೆ. ಸಚಿನ್ ಚೆಲುವನಾರಾಯಣ್ ಸ್ವಾಮಿ ಹಾಗೂ ಸಂಗೀತಾ ಭಟ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿ ದ್ದಾರೆ. ಕಿಶೋರ್ ಪವರ್‌ಫುಲ್ ರೋಲ್ ನಿರ್ವ ಹಿಸಿದ್ದು, ರಮೇಶ್ ಇಂದಿರ ಇಲ್ಲಿಯೂ ಖಳ ನಾಗಿ ಅಬ್ಬರಿಸಿದ್ದಾರೆ. ವಿ.ಎ.ಸುನೀಲ್ ಕುಮಾರ್ ಚಿತ್ರ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ. ನಾಗೇಶ್ ವಿ.ಆಚಾರ್ಯ ಛಾಯಾಗ್ರಹಣ, ಕೀರ್ತನ್ ಸಂಗೀತ ನಿರ್ದೇಶನ, ಅರ್ಜುನ್ ರಾಜ್, ಟೈಗರ್ ಶಿವು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಸೆಪ್ಟೆಂಬರ್ 19ರಂದು ತೆರೆಯಲ್ಲಿ ಕಮಲ್ ಶ್ರೀದೇವಿ ದರ್ಶನವಾಗಲಿದೆ.

ಕನ್ನಡಕ್ಕೆ ಜೂ.ಎನ್‌ಟಿಆರ್

ತೆಲುಗಿನ ಸ್ಟಾರ್ ನಟ ಜೂ.ಎನ್ ಟಿ ಆರ್ ಕನ್ನಡ ಚಿತ್ರರಂಗಕ್ಕೂ ಎಂಟ್ರಿಕೊಡಲಿದ್ದಾರೆ ಎನ್ನುವ ಸುದ್ದಿ ಕೇಳಿಬರುತ್ತಿದೆ. ಹೌದು, ಇಡೀ ಭಾರತೀಯ ಚಿತ್ರರಂಗವನ್ನೇ ಭಾರತೀಯ ಚಿತ್ರರಂಗದತ್ತ ತಿರುಗಿ ನೋಡುವಂತೆ ಮಾಡಿದ ಕಾಂತಾರ ಚಿತ್ರದ ಯಶಸ್ಸಿನ ಬಳಿಕ ಕಾಂತಾರ ಚಾಪ್ಟರ್ 1 ಸಿದ್ಧವಾಗಿದ್ದು ಅಕ್ಟೋಬರ್ 2 ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಕಾಂತಾರ ಚಾಪ್ಟರ್ 1 ಪ್ಯಾನ್ ಇಂಡಿಯಾ ಸಿನಿಮಾವಾಗಿ ಬಿಡುಗಡೆಯಾಗಲಿದೆ. ಕಾಂತಾರ ಚಾಪ್ಟರ್ ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ. ಮುಂದೆ ಕಾಂತಾರ ಚಾಪ್ಟರ್ 2 ಸೆಟ್ಟೇರಲಿದ್ದು ಈ ಚಿತ್ರದಲ್ಲಿ ಜೂ.ಎನ್ ಟಿ ಆರ್ ಕೂಡ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ಜೂ.ಎನ್ ಟಿ ಆರ್ ಕುಂದಾಪುರಕ್ಕೂ ಭೇಟಿ ನೀಡಿದ್ದರು. ಕಾಂತಾರ ಶೂಟಿಂಗ್ ಸೆಟ್ ಗೂ ಭೇಟಿ ನೀಡಿದ್ದರು. ಹಾಗಾಗಿ ಮುಂದೆ ಕನ್ನಡದಲ್ಲಿಯೂ ನಟಿಸುವ ಇಚ್ಛೆ ವ್ಯಕ್ತಪಡಿಸಿದ್ದರು. ಹಾಗಾಗಿ ಮುಂದೆ ಕಾಂತಾರ 2 ನಲ್ಲಿ ನಟಿಸಿದ್ದಾರೆ ಎನ್ನಲಾಗುತ್ತಿದೆ. ಬಾಲಿವುಡ್ ಅಂಗಳಕ್ಕೂ ಕಾಲಿಟ್ಟಿರುವ ತಾರಕ್ ವಾರ್ 2 ನಲ್ಲಿ ಹೃತಿಕ್ ಜತೆಗೆ ನಟಿಸಿದ್ದಾರೆ. ಸದ್ಯ ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಡ್ರ್ಯಾಗನ್ ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ.